# ಸಾಶಿಮ ಸಮಗ್ರ ಕಾವ್ಯ

ಡಾ. ಸಾ.ಶಿ. ಮರುಳಯ್ಯ

## ಶಿವ

"ವಸ್ತುತಃ ಶಿವಮಯೇ ಹೃದಿಸ್ಫುಟಂ ಸರ್ವತಃ ಶಿವಮಯಂ ವಿರಾಜತೇ !"
ದಿಟಂ. ದೃಷ್ಟಿಯವೊಲಾಯ್ತದು ಸೃಷ್ಟಿ; ಚಿರಂ ಲಭ್ಯತೇ
ರಸಸಿದ್ಧಿ, ತೃಷಿತಾತ್ಮಕನವರತ ಅಮೃತಾಂಶು ಸುಮಧುರಂ !
ಸಚ್ಚಿದಾನಂದಂ ! ಓಂ ಸಚ್ಚಿದಾನಂದಂ ! ಶಿವಂ ! ಸತ್ಯಂ ! ಸುಂದರಂ !

## ಶ್ರೀ ಚರಣಕೆ ಮುಡಿಪು

ಜಡವಾಗಿ ಬಿದ್ದಿದ್ದೆನಾವುದೋ ಮೂಲೆಯಲಿ
ಮುಟ್ಟಿತ್ತು ಮುಟ್ಟಿತ್ತು ನಿಮ್ಮ ಪಾದ;
ಜಡವೆ ಚೇತನಗೊಂಡು ಹಾಡಲಿದೆ ಹಾಡೊಂದು
ಆಲಿಸಾಲಿಸು ಗುರುವೆ ನಾದ ಮೋದ !

ನೀನು ತಣಿವುದೆ ನನ್ನ ನಿತ್ಯ ಬಯಕೆ
ಕೃತ್ಯಕೃತ್ಯವಹುದಂದೆ ಸತ್ಯ ತಪಕೆ

ಹತ್ತಲಾರದೆ ಹಬ್ಬೆ ಪದಕುಸಿದು ಬೀಳುತಿರೆ
ಮೇಲೆತ್ತಿ ಮುಂಡಾಡಿ ಮುಂಬರಿವ ನೀಡಿದಿರಿ
ಮರೆಯಲಾಗದ ದಿನವ ಪುಣ್ಯೋದಯದ ಶುಭ ದಿನವ !
ಬಂದಿರ್‍ಯೆ ಬಂದಿರ್‍ಯೆ 'ಶುಭ'ವನ್ನೆ ಕೋರಿ.

ಶೋಭಿಸಿತು ನಿನ್ನ ನುಡಿ ಚುಕ್ಕಾಣಿಯಾಗಿ !
ನಾವೆ ನೂಗುತಲಿಹುದು ಆ ಕುರುಹಿಗಾಗಿ !

ಬಡವ ನಾಂ ಭಾಗ್ಯಂ ನೀಂ ಅಣುವು ನಾಂ ಘನವು ನೀಂ
ಏನನೀಯಲೊ ತಂದೆ ಈ ಬಾಳಿನಲ್ಲಿ ?
ಉಸಿರಿತ್ತ ದೇವಂಗೆ ಮುಡಿಗೊಡುವ ತೆರದಲ್ಲಿ
ಅಲ್ಪದರಿಕೆಯನಿಡುವೆ ನಿನ್ನಡಿಗಳಲ್ಲಿ

ಅರ್ತಿಯಿಂದರ್ಪಿಸಿದೆ ಇದು ಬಕುತಿ ಕಾಣ್ಕೆ
ಹರಸು ಹರಸೈ ಗುರುವೆ ಸಲುವವೊಲು ಪೂಣ್ಕೆ !

## ಒಲುಮೆ

ಒಲುಮೆ !
ಎದೆಯ ಬೃಂದಾನವದಿ ಪರಿದು ಪಾಡುವ
ಪರಮೆ!
ಮೆಚ್ಚುಗೆಯ ನಚ್ಚುಗೆಯ, ಕುಣಿದೆಚ್ಚುವಾ
ಚಿಲುಮೆ !
ಉಷೆಯ ಚುಂಬನದಿಂದೆ ಉದಯಾದ್ರಿಯರಳುವೊಲು
ಶಶಿ ನಿಶೆಯರಪ್ಪುಗೆಯ ಚೆಂಜೇನು ಸವಿಯುವೊಲು
ಮೃದು ಮಧುರ ಅವ್ಯಕ್ತ ಅಮೃತ ಸಿರಿ ಚೇತನಂ !
ಸ್ವರ್ಗ ಸಾಕ್ಷಾತ್ಕಾರಕಿದು ಧವಳ ಕೇತನಂ !

## ಇದೋ ! ಮೂಡಿತು ಕವನ !

ನವ ನೂತನ
ನವ ಚೇತನ
ನವ ಕಾವ್ಯವಿತಾನ
ರವಿ ಕಾಂಚನ
ಛವಿಯಂಚನ
ಕವಿಗಣ್ಣಿನ ಭುವನ.

ನವ ಭಾವನ
ಚೋದಿಸೆ ಮನ
ಇದೊ ಮೂಡಿತು ಕವನ !
ನುಡಿಯಲರಿನ
ಬಿಡಿ ಮುತ್ತಿನ
ನೂರಾಯಿತು ಚಲನ.

ಎದೆಗೊಳದಲಿ
ತಿಳಿ ನೀರಲಿ
ಪಡಿ ನೆಳಲಿನ ಭವನ
ಅಲೆಯೊಳು ಅಲೆ –
ಯಾಯಿತು, ಸಲೆ
ನಿಂದಿತು ಒಂದೆ ಚಣ.

ಬಿಗಿಯಿತು ಬಲೆ
ಸೂಕ್ಷ್ಮದ ಎಳೆ
ಛಂದದ ರೀತಿಯಲಿ
ಬಂಧನದಲಿ
ಬಿಡುಗಡೆಯಲಿ
ಸುಳಿದಾಡಿತು ನಿಮಿಷದಲಿ.

ಅಕ್ಕರೆಯಲಿ
ಬಿಕ್ಕುತ ನುಲಿ –
ದಾಡುತ ತೊದಲಿದೆನು.
ಅಮ್ಮನೆ ಎದೆ –
ಯಪ್ಪುತ ಸುಧೆ –
ಯೀಂಟುತ ಹಾಡಿದೆನು.

ಬಿಳಿ ಮುಗಿಲಿನ
ಕೆಳೆ, ತಿಳಿವಿನ
ಮಳೆಗರೆಯಿತು ಗಗನ.
ಹೊಳೆ ಹರಿಯಿತು
ಬೆಳೆ ಮೊಳೆಯಿತು
ತುಳುಕಿತು ಕವಿಯ ಮನ.

ಮೂಡಣ ತೆರೆ
ತೊಲಗಿತು, ತೊರೆ
ಹರಿಯಿತು ಅದೊ ! ಅರುಣ.
ಹೊನ್ನಿನ ಅಡಿ
ಯಿಕ್ಕುತ ಮಡಿ
ಮಾಡಿದನಾ ತರುಣ.

ಜುಳು ಜುಳು ಜಲ
ಕಲ ಕಲ ರವ
ಲಾಸ್ಯವ ಗೈದಿತದೊ !
ಬೆಳ್ಳಿಯ ಗೆರೆ
ನರ್ತಿಸುತಿರೆ
ಬಳ್ಳಿಯು ತೂಗಿತಿದೊ !

ಕೆಂದಳಿರಿನ
ಬೃಂದಾವನ
ಮಂದಾನಿಲ ಗಮನ
ಗಿರಿಕಾನನ –
ದೊಲು ಕೂಜನ
ಖಗ ಮಿಗಗಳ ಗಾನ.

ಕೋಗಿಲೆ ಕೊರ –
ಲಿಂಚರ ಹೊರ
ಹೊಮ್ಮಿತು ಮೋದದಲಿ
ಚೈತ್ರೋದಯ
ಮೈತ್ರೀಮಯ
ಧಾರುಣಿ ನಾದದಲಿ.

ಕವಿ ದುಂಬಿಯ
ಕಾವ್ಯಾಂಬೆಯ
ರಸಯಾನದ ಬೆಡಗು
ಭಾವದೆಲರು
ಭಾಷೆಯಲರು
ಕೈಗಣ್ಮಿತು ಕಡೆಗು.

## ‘ಅರುಣೋದಯಂ’

ನೋಡದೋ ಮೂಡಲಲಿ ಮಲೆಯ ನಡು ನೆತ್ತಿಯಲಿ

ಹೊನ್ನೀರು ಒಂದಾಗಿ ಹೊನಲಾಗಿ ಹರಿಯುತಿದೆ
ಬುವಿ, ಬಾನು, ಕಡಲುಗಳ ಮೊಗವ ಸಿಂಗರಿಸುತಿದೆ

ಮುದ್ದಿಸುವ ನಿದ್ದೆಯೊಳು ಕುಕಿಲಿಡುವ ಹಕ್ಕಿಯುಲಿ
ಮೂಡಿಬಹ ದಿನಮಣಿಗೆ ಮಂಗಳದ ವಾದ್ಯವೆನೆ

ಮಲ್ಲಿಕಾಲತೆಯೊಡನೆ ಮಾರುತನ ಚೆಲ್ಲಾಟ

ಹಸುರು ಹಾಸಿಗೆ ಮೇಲೆ ಹಿಮಮಣಿಯ ಚೆಲುನೋಟ

ದುಂಬಿ ಗುಂಗಾರವದಿ ಉಷೆಯ ಸಿರಿ ನೃತ್ಯವೆನೆ
ತಿರೆ ಸಗ್ಗಮಾಗಿಹುದು ! ಕವಿಗಿರವ ಮರೆಸಿಹುದು !

ಸೊಬಗಿನೌತಣವೂಡಿ, ಗಾನಗಂಗೆಯ ಹರಿಸಿ,
ಮೂಡುದೆಸೆಯಿಂದಿಳೆಗೆ ಜೇನುಮಳೆಯಂ ಸುರಿಸಿ

ಮುಂಬೆಳಗು ಮುಂಬರಿದು, ಹೊಂಬೆಳಗ ಹೊಗರೊಡೆದು

ಹೇಮರಸದಾ ಕುಂಭದೊಡಲೊಡೆದು ಹೊರಚೆಲ್ಲಿ
ತಣಿಸಿಹುದಿದೋ 'ಅರುಣೋದಯ'ದ ರೂಪದಲ್ಲಿ !

## ಹರಸಮ್ಮ

ನಿನ್ನ ಬಸುರಿನಿಂದಿಳೆಗಿಳೆದು ಬಂದು ನಾ
ನಿಂದಿಹೆನಿದೋ ತಾಯೆ ನಿನ್ನ ಮುಂದೆ;
ಬಾಳ ಹೋರಾಟಕ್ಕೆ ಅನುವಾಗಲಿಹೆನಮ್ಮ
ಸಿದ್ಧತೆಯ ನೀನೆನಗೆ ನೀಡಲೆಂದೆ;

ಕಂದನಂ ಕರುಣದಿಂ ಕಾಪಿಟ್ಟ ಓ ಮಾತೆ
ಕಳುಹಮ್ಮ ಹರಸಿ ನೀ ಹರುಷದಿಂದೆ;
ತೋಳ ತೊಟ್ಟಿಲೊಳೊಮ್ಮೆ ಎನ್ನ ತೂಗಮ್ಮ
ಜೋಗುಳವ ಪಾಡಮ್ಮ ಒಲವಿನಿಂದೆ ;

ಹಸಿದಿಹೆನು ಹಾಲೂಡು ಪವಡಿಪೆನು ಮಡಿಲೊಡ್ಡು
ಇರಲೆನಗೆ ಇಂಬುಗೊಡು ಒಡಲ ಗುಡಿಯಲ್ಲಿ !
'ಮನದಿಚ್ಛೆ ಸಿದ್ಧಿಸಲಿ' ಎಂದು ಓ ಸಿದ್ಧಾಂಬೆ !
ಹರಸಮ್ಮ ನಮಿಪೆ ನಿನ್ನಡಿಗಳಲ್ಲಿ.

## ತಾಯ ಹರಕೆ

ಹೋಗಿ ಬಾರೈ ಕಂದ ಕದನದಾ ಕಲಿಭೀಮ
ಬಾಳ ಹೋರಾಟಕ್ಕೆ ಯೋಧನಾಗಿ
ಜಯಸಿರಿಯ ಕರವಿಡಿದು ಹರುಷದಿಂದೊಡಗೂಡಿ
ಜ್ಞಾನಸಿಂಧುವನೇರು ಬುದ್ಧನಾಗಿ;

ಬಿರುನುಡಿಯ ಬಾಣಗಳ ಅಣಕ ದೂಹತ್ತಿಗಳ
ಘಾತಕ್ಕೆ ನಿನ್ನ ತನು ನೋಯದಿರಲಿ
ದರ್ಪ ದಾಕ್ಷಿಣ್ಯಕ್ಕೆ ಗರುವ ಗೌರವಗಳಿಗೆ
ಎಂದಿಗೂ ನಿನ್ನ ತಲೆ ಬಾಗದಿರಲಿ;

ರಣಕಾಳಿ ತುಳಿತಕ್ಕೆ ಮರುಳುಗಳ ಕುಣಿತಕ್ಕೆ
ಹೃದಯ ವೇದಿಕೆಯಿನಿತೂ ಅಳುಕದಿರಲಿ

ಬಾನಗಲ ಕಡಲಾಳ ಹಿಮಶಿಖರದೆತ್ತರಕು
ಬಿತ್ತರದ ಮನಸಿನಾ ಎಲ್ಲೆಯಿರಲಿ;

ಶಸ್ತ್ರ ಸಜ್ಜಿತನಾಗು; ನಡೆ, ಏರು ರಥವನ್ನು;
ಮಡಿಲ ಗರುಡಿಯ ವಿದ್ಯೆ ಸಾಕು ಇನ್ನು.
ನಿನ್ನ ಸಾರಥಿ ಬೇರೆ ನಿನ್ನ ಪಥವೇ ಬೇರೆ
ಮರೆಯದಿರು ಸೂತನನು ಇರಲಿ ಕಣ್ಣು !

## ಸಂದೇಶ

ಸಂದೇಶ ! ಸಂದೇಶ ! ಸಾಗುತಿಹದು.
ಮೇಘದೂತನ ಹೆಗಲನೇರಿರುವುದು

ವಿರಹಿ ಯಕ್ಷನ ಹೃದಯದಾಳದಿಂದ
ರಾಮಗಿರಿ ಪರ್ಣಕುಟಿಯೊಡಲಿನಿಂದ
ವಾಯುಮಾರ್ಗದೊಳಲೆದು ನೂಗುತಿಹುದು
ಒಲುಮೆಯಳಕಾಪುರಿಯ ಹಾದಿ ಹಿಡಿದು.

ನಗ ನದೀ ನಗರಿಗಳ ದಾಂಟಿ ದಾಂಟಿ
ಸರಸಿಗಳ ಸಲಿಲಗಳನೀಂಟಿಯೀಂಟಿ
ಕಳಿವೂವು ನೇರಿಳೆಯನಾಯ್ದು ತಿಂದು
ತುಂಗ ಶೃಂಗಂಗಳಲಿ ದಣಿವು ಕಳೆದು.

ನಿರ್ಜೀವಿ ನೀರದಕೆ ಜೀವವೆರೆದು
ಎದೆಯಳಲನೆಲ್ಲವನು ಧಾರೆಯೆರೆದು
ಬೆಳ್ಳಿ ಬೆಟ್ಟದ ಬೆಡಗಿ, ನೆಲದ ತಾವರೆಗೆಂದು
ಸಡಗರದ ಸಂದೇಶ ಸಾಗುತಿಹದು.

ಸಂದೇಶ ! ಸಂದೇಶ ! ಸಾಗುತಿಹುದು
ಮೇಘದೂತನ ಹೆಗಲನೇರಿರುವುದು

## ಒಂದು ಚಿತ್ರ !

'ಬೆಳ್ಳಿ' ಮೂಡುವ ತೆರದಿ
ಕಣ್ಣ ತೆರೆಯಿತು ಶಿಶುವು.
ನೀಲಿ ಸೀರೆಯ ಮುಸುಗು
ಮಸುಕು ಕಳೆಯಿತು ಭರದಿ;

ತೋಳ್ – ತುಡುಕುತಿರೆ
ದಿಟ್ಟಿ – ದಟ್ಟೈಸೆ
ಮನಂ – ಮೈದಡವೆ
ಕರಂ – ದಾರಿಗುಡೆ
ತುಟಿಯು ಎದೆಗೊತ್ತೆ

ಅಡಂಗಿತ್ತು ಶಿಶು ! ಅಡಂಗಿತ್ತು ಸವಿ !

ಅಕ್ಕರೆಯ ಹಾಲ ಬೆರೆದು !

## ಅಕ್ಕಮಹಾದೇವಿಗೆ

ಓ ತಾಯೆ ! ನಿನಗಿದೋ ಕನ್ನಡ ಕುಲಕೋಟಿ

ಕೊರಲೆತ್ತಿ ಕೂಗುತಿದೆ 'ಮತ್ತೊಮ್ಮೆ ಅವತರಿಸಿ
ಕನ್ನಡ ನುಡಿವಾಲ ವಚನ ರೂಪದಿ ಉಣಿಸಿ

ಆನಮನದೊಳಗಡಿರುವ ಮಲಿನತೆಯನುರೆ ಮೀಟಿ
ದಿವ್ಯ ಚೇತನವಿತ್ತು ಉದ್ಧರಿಸು ಬಾ' ಎನುತೆ.

ಹೇ ಶರಣೆ! ಶಿವಸತಿಯೆ ಸದ್ಭಕ್ತಿ ಸಂಜಾತೆ
ಮಾಯೆ ಮೋಹವ ಗೆಲಿದೆ ಪರಮ ಪೂಜಿತೆ ವನಿತೆ ;

ಮಹದೇವಿ, ಮಹತಾಯೆ, ಸರ್ವಜನ ಸಂಪ್ರೀತೆ
ಉಡುತಡಿಯ ಮಡಿಲಲ್ಲಿ ಆಡೊಮ್ಮೆ ನೀ ಬಂದು.

ಬಾಡುತಿಹ ನಾಡಿಂಗೆ ಬಲುಹುಗೊಡು ನೀನಿಂದೆ
ಅಕ್ಕರೆಯ ಸಕ್ಕರೆಯನೂಡು ಬಾ ಒಲವಿಂದೆ,

ಶರಣ ಶರಧಿಯ ರತ್ನ ! ನಿನ್ನ ದೀಪ್ತಿಯನಿಂದು

ತಿರೆಗೊರೆದು ಕನ್ನಡಿಗರೆದೆಗೊಳದೆ ಪ್ರತಿಬಿಂಬ
ಕಾಂಬಂತೆ ಕನಿಕರಿಸು ಬಾ, ಓ ಜಗದಂಬಾ !

## ನನ್ನ ಕಮಲೆ

ಇಳೆಯೊಳೆಲ್ಲ ಕಳೆಯ ಬೀರಿ
ಬಾಳಿನಲ್ಲಿ ಬೆಳಕ ತೋರಿ
ನನ್ನ ಬೆರಗು ಮಾಡಿ ನೀನು
ಎಲ್ಲಿ ಹೋಗಿಹೆ ?

ನನ್ನ ಜೊತೆಯೊಳಾಟವಾಡಿ
ಜೊನ್ನ ಜೇನು ನುಡಿಯನೂಡಿ
ಕಣ್ಣು ಮುಚ್ಚಿ ತೆರೆವ ಮುನ್ನ
ಮಾಯಾವಾಗಿಹೆ !

ಬಂಧು ಮಿತ್ರರೊಂದುಗೂಡಿ
ನನ್ನ–ನಿನ್ನ ಒಂದು ಮಾಡಿ
'ಚೆಂದದಿಂದ ಬಾಳಿರೆಂ'ದು
ಹರಸಲಿಲ್ಲವೆ?

ಮರೆತು ಚಿರದ ನಿದ್ದೆಗೈದೆ

ತಿರೆಯ ಬದುಕ ಹೊಲಸು ಗೈದೆ
ಮುಗಿಲ ನಡುವೆ ನಿಂತು ನೀನು
ನಗುವೆಯಲ್ಲವೆ?

ಬಾಳಬಾನ 'ಬೆಳ್ಳಿ' ಚುಕ್ಕಿ
ಮನದ ವನದ ತೇನೆ ಹಕ್ಕಿ
ನಿನ್ನ ಮುದ್ದು ಮೊಗವ ಜಗದಿ
ಮತ್ತೆ ಕಾಂಬೆನೆ ?

ನನ್ನ ಕಮಲೆ ನನ್ನ ತರಳೆ !
ನನ್ನ ನಲ್ಲೆ ಮಲ್ಲೆ ಅರಳೆ
ನಿನ್ನನುಳಿದು ಇನ್ನು ಮುಂದೆ
ಬದುಕಬಲ್ಲೆನೆ ?

## ಜೀವದೇವನೊಲುಮೆಗೆ

ಕಡಲಿನೆಡೆಗೆ ನದಿಗಳೆಷ್ಟೊ ಹರಿಯುವಂತೆ ಹರಿದಿದೆ
ತಾಯಿಯೆಡೆಗೆ ಜಿಗಿದ ಕರುವಿನಂತೆ ನಲಿದು ಜಿಗಿದಿದೆ

ಆತ್ಮ ನೌಕೆ ನಡೆದಿದೆ
ಜನುಮ ಕಡಲ ಹಾಯ್ದಿದೆ

ಅರ್ಥಕಾಮದಲೆಗಳೆದ್ದು ಬಡಿಯೆ ಸೀಳಿ ನಡೆದಿದೆ
ಎದ್ದು ಬಿದ್ದು ತೂಗಿ ತೊನೆದು, ತೀರದೆಡೆಗೆ ಓಡಿದೆ !

ಮೊದಲ ಬೇಟಕಾಗಿ ನಡೆವ ನವನವನವ ವಧುವಿನಂತೆ
ಪೂಗಳೆಡೆಗೆ ಸಾಗುತಿರುವ ಮೆಲುಮೆಲುಮೆಲು ಗಾಳಿಯಂತೆ

ಸುಳಿದು ಸುಳಿದು ಸಾರಿದೆ
ಪುಟಿದು ಪುಟಿದು ಹಾರಿದೆ

ತೊರೆದು ಮೊರೆದು ನಡೆದಿದೆ, ಹುಟ್ಟು ಹಾಕಿ ಸಾಗಿದೆ
ಸೊಗದ ಸರವು ಕರೆದಿದೆ, ದೇವನೆಡೆಗೆ ನಡೆದಿದೆ

ದಿನಪ ಪಡುವ ಮಡದಿಗೊಲಿದು ನಡೆಯುವಂತೆ ನಡೆದಿದೆ
ಇಂದು ಉದಿಸೆ ಶರಧಿಯುಬ್ಬಿ ಮೊರೆಯುವಂತೆ ಏರಿದೆ

ಜೀವ, ದೇವನೊಲುಮೆಗೆ
ನಿತ್ಯ ಸತ್ಯ ನಿಲಯಕೆ

ತಿರೆಯ ಸೆರೆಯ ಬಂಧದಿಂದ ಮುಕ್ತಿಯೆಡೆಗೆ ಸಾರಿದೆ
ಶಿವನ ದಿವ್ಯ ಪೀಠದಡಿಯ ಬೆಳಕಿನತ್ತ ಹಾರಿದೆ.

## ಬಿಜಯಗೈ

ಬಾ, ಇಂದು ತೆರೆದಿಹೆನು ಮಂದಿರದ ಬಾಗಿಲನು

ನಿನ್ನನಾಹ್ವಾನಿಸಲು ಕಾದು ಕುಳಿತು
ಎಂದಿನಿಂದಲೊ ತುಂಬಿದೀ ಮನೆಯ ಕತ್ತಲನು
ಹರಿಸೀತು ನಿನ್ನ ಬರವೆಂದು ತಿಳಿದು;

ಶಶಿಯಾಗಿ – ಶಶಿಯ ಕಳೆಯಾಗಿ – ಸೊಗದ ಸುಧೆಯಾಗಿ
ಬೆಳ್ಳ ಬೆಳಗಿ ಬಾ ಬೆಳಕೆ ಚೆಲುವಿನಿಂದ
ತುಂಬಿ ಬಾ ತನುವಿನಲಿ ತುಂಬು ಬಾ ಮನೆಯನ್ನು
ತುಂಬಿ ಬಾರೇ ನಿನ್ನದಿಂದಿನಿಂದ.

ಹಜ್ಜೆ ಹಜ್ಜೆಗು ಹೃದಯ ಪುಟವೆದ್ದು ಕುಣಿಯುವುದು
ನಡೆಯ ಮೋಡಿಗೆ ತಾನೆ ತಾನಗೈದು
ನವಿಲ ನರ್ತನದಂತೆ ಕಣ್ಗೆಡ್ಡ ತರಮಾಗೆ
ನಡೆಯಲ್ಲಿ ನಯವೆದ್ದು ತೋರುತಿಹುದು

ಬಿಜಯಗೈಯೌ ದೇವಿ ಎನ್ನೆದೆಯ ಅರಮನೆಗೆ
ಸರ್ವಮಂಗಳೆಯಾಗಿ, ಶರ್ವಾಣಿಯಾಗಿ;
ಕಾವ್ಯಲಲನೆಯ ತೆರದಿ ಲಲಿತ ಕೋಮಲೆಯಾಗಿ
ಗಾನಗೈಯುತ ಬಾರೆ ಬೀಣೆಯಾಗಿ

ಎಳೆವಿಸಿಲ ಮಳೆಯಂತೆ ಮಿಸುಪ ತಾರಗೆಯಂತೆ
ಬೆಳಗುತಿಹ ತನುವಿನೀ ಕಾಂತಿಯಲ್ಲಿ
ಮೀಯಿಸುವೆ ಓ, ನನ್ನ ಜಡದೇಹವನು ದೇವಿ
ಕಳೆಯುವೆನು ಬಹುದಿನದ ಶ್ರಾಂತಿಯನ್ನಿಲ್ಲಿ !

## ಕ...ನ...ಸು !

ಸ್ವಪ್ನದಾ ಸಗ್ಗದಲಿ ಕಲ್ಪನೆಯ ತಲ್ಪದಲಿ
ನಾನೊಬ್ಬನೇ ಮಲಗಿ ಚಿತ್ತ ಭಿತ್ತಿಯ ಮೇಲೆ
ಹೊಂಗೆರೆಯ ಭಂಗಿಯನು ಕಾಣುತ್ತಲಿರಲಿರಲು
ಆವುದೋ ಆರ್ತದನಿ ನಿಶೆಯ ಬಸುರಿಂದೆದ್ದು
ಎನ್ನೆದೆಯ ಕಿವಿಯೆಡೆಗೆ ಸಾರಿಬಂತು ;
ಆಲಿಸಲು ಅರಿವಾಯ್ತು ಹೆಂಗೊರಲ ದನಿಯೆಂದು
ಆತುರದಿ ಮೇಲೆದ್ದು ದನಿಯು ಬಂದತ್ತ ಕಡೆ
ಸಾರಿನೋಡಿದೆನಯ್ಯೋ ! ಮೊಗಕಂದಿ ಕಳೆಗುಂದಿ
ಮುಗಿಲೆಡೆಗೆ ಕೈ ನೀಡಿ ಗೋಳಿಡುವ ಮಾತೆಯನು.

'ಸಂತೈಸಿಕೋ ತಾಯೆ, ಶಾಂತಿವಡೆ ಮನದಲ್ಲಿ,
ದುಃಖವೇಕಿನಿತಮ್ಮ ? ಕೊರಗುತ್ತಲಿಹೆ ಏಕೆ ?
ಕೋಟಿನಲವತ್ತು ಜನ ಪುತ್ರರನು ಪಡೆದನೀ –
ನಿಂತು ಮರುಗಬಹುದೇ ?' ಎಂದು ಪ್ರಶ್ನಿಸಿದೆನು.

ಶೋಕದಲೆ ಉಸಿರಿದಳು 'ಎನ್ನಣುಗನೇ ನೀನು
ಕಾಣಲಾರೆಯ ಹೆತ್ತ ಕರುಳುರಿಯ ಬೇಗೆಯನು,
ಹತ್ತಾರು ಪುತ್ರರನು ಪೆತ್ತೊಡಲು ಬತ್ತುತಿದೆ
ಮತ್ತೆ ಕಾಂಬೆನೆ ಎಂಬ ಭೀತಿಯುದ್ಭವಿಸುತಿದೆ
ಇಂತಿಪ್ಪ ಎನಗಿನ್ನು ಶಾಂತಿಯುಂಟೇ ಹೇಳು ?
ಶಾಂತಿ ದೂತನೆ ಚಿರದ ನಿದ್ದೆಗೈದಿರುವಾಗ
ನನ್ನವರೆ ನನ್ನನ್ನು ತಿವಿತಿವಿದು ನಲಿವಾಗ
ಮಹಿಮರನು ಮಚ್ಚರದಿ ಮರ್ದಿಸುತ್ತಿರುವಾಗ
ತಮ್ಮಲ್ಲಿಯೇ ಕಾದಿ ಹೋರಿ ಮಡಿದವಳಿವಾಗ
ಹೃದಯ ವೇದಿಕೆಮೇಲೆ ಮಾರಿ ನರ್ತಿಸುವಾಗ
ಶಾಂತಿಯೇ ? ಅಯ್ಯೋ ! ಇನ್ನು ಶಾಂತಿಯುಂಟೇ ?
ಬಾ ಕಂದ ಉಸುರದಿರು ಅಳಲನ್ನು ಕಲಕದಿರು
ಶಾಂತಿಯೆಂಬುದು ಬರಿಯ ಭ್ರಾಂತಿ ಕಾಣಾ !
ಆದೊಡಂ ಇದೊ ಮಗುವೆ ಅನುದಿನದ ಮೊರೆಯಿಹುದು

'ತಂದೆಯೇ, ಮತ್ತೊಮ್ಮೆ ಪುಣ್ಯಪುರುಷನ ಪರಮ
ತೇಜಸ್ವಿಯನು ಮಹಾತ್ಮನನು ಕರುಣಿಸೆಂದು'

– ಇಂತೆಂದು ಉಸುರುತಲೆ ಮರೆಯಾದಳಾಕೆ
ಕನಸೆ ಅಲೆಅಲೆಯಾಗಿ ಅಪ್ಪಳಿಸಿ ಆವರಿಸಿ
ಜಗದಿರವ ಮರೆಯಿಸಿತು ಮಗುದೊಮ್ಮೆ ತೆರೆಯಿಸಿತು
ನನ್ನ ಭಾವವ ಭವ್ಯಮಂದಿರದ ಬಾಗಿಲನು.

## 'ಒಮ್ಮೆ ನಟ್ಟಿರುಳಿನಲಿ ...!'

ಮೂಡಣ ದಿಗಂತದಲಿ ಬಾನ ಬಯಲಂಚಿನಲಿ

ಹೊಂದೇರು ಮೂಡುತಿದೆ ! ಕಡಲರಸಿ ಹಡೆದಿತ್ತ
ಹೇಮ ಪುತ್ಥಳಿಯಂತೆ ಚಲಿಸುತಿದೆ ಬಾನತ್ತ

ಸ್ವಚ್ಛಂದಮಾನಂದ ದಿವ್ಯ ಸ್ವರೂಪದಲಿ
ಶಿಶುವಿನಾನಂದಕ್ಕೆ ಹಿಗ್ಗಿ ಬಹ ತಾಯಂತೆ

ಉಬ್ಬುಬ್ಬಿ ತಣಿಯುತಿದೆ ಕಡಲಲ್ಲಿ ಮೇಳದಲಿ
ಮುಗಿಲುಗಳು ಮೌನದಲಿ ನಿಂದಿಹವು ದೂರದಲಿ

ಒಡೆಯಗಾಹ್ವಾನವನು ಕೋರುತಿಹ ಭಟರಂತೆ ;
ಮೇಲುದಿನ ಮರೆಯಲ್ಲಿ ನಗುತಲಿವೆ ತಾರೆಗಳು

ಓರೆನೋಟವ ಬೀರಿ ನಾಣ್ಚಿ ಹಿಮ್ಮೆಟ್ಟುತಿವೆ
ನವನೂತನ ವಧುವಂತೆ ಮುದತುಂಬಿ ತಣಿಯುತಿವೆ ;

ಬನ, ಬಯಲು, ಗಿರಿ, ಬಾನು, ಕಾಡುಗಳು, ನಾಡುಗಳು

ಸುಧೆ ಕುಡಿದು ಸೊಕ್ಕೇರಿ ಮಲಗಿಹವು ಮೈಮರೆತು
ಶಾಂತಿಮಯ ಸೀಮೆಯಲಿ ಆನಂದ ಶೀಲವಾಂತು !

**ಕವಿ – ರೈತ**

"ಮುಂಜಾನೆಯಿಂದಲೂ ಒಬ್ಬನೇ ಹೊಲದಲ್ಲಿ
ಹಾಡುತ್ತ ಮಾಡುತಿಹುದೇನು ರೈತ ?"

"ತಾಯೆದೆಯ ಪತ್ರದಲಿ ಕುಳದ ಕಂಠಗಳಿಂದ
ಬರೆಯುತಿಹೆನಿಲ್ಲೊಂದು ಪ್ರಾಣಗೀತ!"

"ಆವರಾಯರ ಚರಿತೆ ? ರಾಮಾಯಣ ?"
"ಆಳರಸರ್... ಅಲ್ಲಲ್ಲ ನಿತ್ಯಪಾರಾಯಣ!"

"ಪಸರವಾಗಿಹುದೇನು 'ಆಕಾಶವಾಣಿ'ಯಲಿ ?"
"ನಿತ್ಯವೂ ಆಗುತಿದೆ ಸಕ 'ಉದರವಾಣಿ'ಯಲಿ!"

"ನನ್ನ ಕವನಕು ನಿನ್ನದಿನೆಂಬೆಯಾ?"
"ಕಾವ್ಯ ಸೃಷ್ಟಿಗೆ ಸ್ಫೂರ್ತಿ ನೀನರಿಯೆಯಾ ?"

"ರಸಋಷಿಯ ಕಾವ್ಯದೊಲು ಚೆಲುವಿರುವುದೇನು?"
"ಮನವರಳಿ ಮಲಗಿಹುದು ಕಾಣದೇನು?"

"ಮೆಚ್ಚನಿತ್ತಿಹರೇನೋ ಕಬ್ಬಮೋದಿ?"
"ನನಗೇತಕಾವ್ಯಸನ? ಬೇರಿಹುದು ಹಾದಿ!"

"ಶಾಸ್ತ್ರ ಮೀಮಾಂಸೆಗಳನೋದಿರುವೆಯೇನು?"
"ತಾಯ ಬಸಿರೊಳೆ ಕಲಿತೆ ಇಂದೋದೆ ಫಲವೇನು?"

"ಹಾಡಯ್ಯ ಸೊಗಸಾಗೆ ಪದಕವೊಂದೀವೆ"
("ಹಹಹಹ, ಮುಗ್ಧಕವಿ; ಮುದ್ದು ನುಡಿ; ಮುಂದೆ ನೀನರಿವೆ!")

"ಮೌನವೇತಕೆ ಮಾನ್ಯ ನಾಚಿಕೆಯೆ ನೇಹದೊಳು?
ಪ್ರಣಯಕಥೆಯಿರಬಹುದು! ಬಾ ಬಳಿಗೆ ಹೇಳು"

"ಬಾನಾಡಿಯಾಗದಿರು ಬರಿಯ ಭ್ರಮೆಯಲಿ ಕವಿಯೆ !
ನಾಡ ನಾಡಿಯದಿಂದು ಮಡಿಯುತಿದೆ ದೊರೆಯೆ !"

... (ಉಸಿರೇಕೋ ತಡೆಯುತಿದೆ !")
"ಅರಿತೆನರಿತೆನೊ ತಂದೆ ! ದೀಕ್ಷಿತನು ನಾನಿಂದೆ !
ನನ್ನಂತೆ ಮಣಿಯಲೋ ಜಗವು ನಿನ್ನಡಿ ಮುಂದೆ!"

## ತೆರೆಯೊಡನೆ ತೀರದಲಿ

ಅಡಿಗಡಿಗೆ ನಿರಿಗೆದರಿ ಕುಣಿಕುಣಿದು ಕುಪ್ಪಳಿಸಿ
ಎನ್ನಡಿಗೆ ಮುತ್ತಿಡುವ ಚೆಲುವೆ ನೀನಾರೆ !

ಮಾತು ಮುಗಿಯುವ ಮೊದಲೆ ನೊರೆಯ ನಗೆಯನು ಬೀರಿ
ಮರಳುತಿಹೆ ಏಕೆ ಓ ಬಾರೆ ನೀರೆ !

ಎತ್ತಣಿಂದೈತಂದೆ? ಆರಿಹರು ನಿನ್ನವರು ?
ಅರ ಬರವಿಗೆ ಭರದಿ ಮುನ್ನುಗ್ಗಿ ಬಂದೆ ?

ತೆರೆಯರಸಿ ನೀನೇನೆ? ಕಡಲಣುಗಿ ನೀನೇನೆ ?
ಉಸಿರದಲೆ ಪೋಗುತಿಹೆ ಏಕೆ ಬರಿದೆ ?

ನೇಸರಿನ ಮೊಗದೆಡೆಗೆ ಹನಿಮುತ್ತನೆರಚುತ್ತೆ
ಪೊಸತೊಂದು ಮಳೆವಿಲ್ಲ ಸೃಜಿಸುತಿರುವೆ !

ಬೆಡಗು ಬಿನ್ನಾಣದಿಂ ಹೊಂಗದಿರ ಜೊತೆಗೂಡಿ
ವದನ ಕಾಂತಿಯನಿತ್ತ ಬೀರುತಿರುವೆ !

ನೀನು ಮುಂಬರಿದು ಬರೆ ಎನ್ನೆದೆಯು ಹಾರುವುದು
ಅಪ್ಪಿ ಆಲಂಗಿಸುವ ಭ್ರಾಂತಿ ತಳೆದು !

ಭಾವರಸದೊರತೆ ತಾ ಒಡೆದು ಅಲೆ ಅಲೆಯಾಗಿ
ಹೊರಳುವುದು ಉರುಳುವುದು ನಿನ್ನ ಬೆರೆದು !

ನಿನ್ನ ಲೀಲೆಯೆ ಲೀಲೆ ಶಿವಲೀಲೆ ! ಶಿವಲಾಸ್ಯ !
ಮರೆವುದೆಂತೌ ದೇವಿ ಬಾಳಿನಲ್ಲಿ !

ತಿಂಗಳಿಗೆ ತನುವುಬ್ಬಿ ಚುಂಬನಕೆ ತುಟಿದೆರೆದು
ಮಿಂದೆದ್ದು ತಣಿಯುತಿಹೆ ಜೊನ್ನದಲ್ಲಿ !

ಸರಸದಿಂದ ಸೊಗಮೀವ ಓ ಸಗ್ಗದಪ್ಸರೆಯೆ !
ಆವ ಸಂದೇಶವನು ಹೊತ್ತು ತಂದೆ ?

ಬೇಸರದ ಬಾಳಿಂಗೆ ನಗೆಯು ಹಾಲ್ಗಡಲೆಂಬ
ಅಮೃತ ವಾಣಿಯನೊಮ್ಮೆ ಸಾರಲೆಂದೆ ?

ಚಣ ಚಣಕು ಕಡಲೊಡಲ ಗುಡಿಸುತಿಹ ಓ ತೆರೆಯೆ !
ನನ್ನ ಮನ ಮಲಿನತೆಯ ಗುಡಿಸೆ ಬಾ !

ಜಗದ ಜಂಜಾಟದಲಿ ಬಳಲಿರುವ ಮನಕೊಮ್ಮೆ
ಶಾಂತಿಯೌತಣವನ್ನು ಮಾಡುಣಿಸು ಬಾ

## ಅಣ್ಣ ಚನ್ನವೀರಪ್ಪನ ಓಲೆಯನ್ನೋದಿ...

'ಕನ್ನಡದ ಕಿಡಿಯೊಂದು ನಮ್ಮೂರಿನೊಡಲಿಂದ
ಚಿಮ್ಮಿ ಹಾರಿದೆ ಭುವನ ಕಾವ್ಯದ ವಿತಾನದಲಿ
ಚಿಜ್ಯೋತಿ ಪ್ರಜ್ವಲಿಸಿ ಬೆಳಗುತಿರೆ ಭೂಮದಲಿ
ಧನ್ಯೆ ನೀಂ ಧನ್ಯೆ ! ಓ ಕನ್ನಡತಿ, ಈ ಕಂದ

ನಿನ್ನ ಮಡಿಲಿನ ಶಿಶುವು ಕಣ್ಣೆವೆಯ ತೆರೆಯುತಿದೆ
ಸವಿ ಮುತ್ತನೊತ್ತೆ ತಾಂ ಚೇತನವ ಪಡೆಯದೇಂ !
ಎದೆವಾಲ ನುಡಿಯಲ್ಲಿ ಕುಡಿಕುಡಿದು ಪಾಡದೇಂ ?
ಮತ್ತೆ ಬೇಕಿನ್ನೇನು ನಿನ್ನ ಪೆರ್ಮೆಗೆ ಮಾತೆ ?'

ಎಂಬ ಮುತ್ತಿನ ಮಾತು ಸಾಲಿನಲಿ ಕೋದಿರಲು
ಮಮತೆ ಕನ್ನಡ ನುಡಿಯ ರೂವೆತ್ತು ನಿಂದಿರಲು
ನಾಲಗೆಯು ತೊದಲುತಿದೆ ಮೂಕವಾಗಿದೆ ಬಾಯಿ
ಲೇಖಣಿಯು ಚಲಿಸದಿದೆ ಅಕ್ಕರೆಯ ಭಾರದಲಿ
'ಜನನಿ ನಿನ್ನಯ ಸೇವೆ ಸತತ ಶಾಶ್ವತವಿಹುದು
ಅಣುವೊಳಗೆ ಅಣು ನಾನು – ಮಾಡಲೇನಹುದು?'

## ಯೋಧನ ಮಡದಿ

ಭೀಕರ ರಣದಲಿ ನೆತ್ತರು ಕಣದಲಿ
ಮಲಗಿಹ ನಲ್ಲನ ಬದಿಯಲ್ಲಿ
ಕುಳಿತಿಹಳಾರೊ ಕಂಬನಿ ಸುರಿಸುತ
ನೆತ್ತರುಗಂಗಳ ನೋಡಲ್ಲಿ;
ಇನಿಯನ ಶಿರವನು ತೊಡೆ ಮೇಲಿರಿಸಿ
ಕಂಬನಿಗರೆದಳು ಮುದ ಚಿಮ್ಮೆ
ರಕ್ತದ ಮುಖವನು ಸೆರಗಿಂದೊರೆಸುತ
ಸವಿ ಮುತ್ತಿಟ್ಟಳು ಎದೆಗೊಮ್ಮೆ
ಮುಕುಟುವನಿಟ್ಟಳು ಹರಿಗೆಯ ಕೊಟ್ಟಳು
ಕೈಯೋಲು ಖಡ್ಗವನಿರುಕಿದಳು ;
ಹಣತೆಯ ಹೊತ್ತಿಸಿ ಬದಿಯಲ್ಲಿಡುತಾ
ಪ್ರೇಮ ಜ್ಯೋತಿಯ ಬೆಳಗಿದಳು;
ನೆನೆದಳು ದಿನಗಳ ನೇಹದ ಮಣಿಗಳ
ಮರು ಮರುಗುತೆ ತಾ ಮನದಲ್ಲಿ
ಮೀಸೆಯ ತೀಡುತ ಮಾಲೆಯ ಹಾಕುತ
ಮುಗುಳ್ನಗೆ ನಕ್ಕಳು ಕಣ್ಣಿನಲಿ

'ಓ ರಣಧೀರಾ !
ಸಾಹಸಿ ಶೂರಾ !
ಸತ್ಯದ ಸೀಮೆಗೆ ತೆರಳಿದೆಯಾ ?
ನಿತ್ಯದ ಬೆಳಕಿನ ಮಂದಿರದಲ್ಲಿ
ತಾರಗೆಯಂದದಿಲಿ ಬೆಳಗಿದೆಯಾ?
ಆದೊಡೆ ನಲ್ಲ
ಆಲಿಸು ಸೊಲ್ಲ
ಮರೆಯದಿರೆನ್ನನು ಅನವರತ
ಅರಿಗಳ ರಕುತದಿ ತರ್ಪಣವೀಯುವೆ
ಶಾಂತಿಯು ಲಭಿಸಲಿ ಮನಕೆನುತ !'

## ಕೆಳದಿ – ಮಡದಿ

ಬೆಳೆದ ಹೊಲದ ಬಯಲಿನಲ್ಲಿ
ಹಚ್ಚ ಹಸುರ ಹಾಸಿನಲ್ಲಿ
ಬಿಸಿಲ ಹಸುಳೆ ಆಡುತ್ತಿತ್ತು
ಕಣ್ಣ ಪಕಳೆ ತೆರೆಯುತ್ತಿತ್ತು
ಅತ್ತ ಇತ್ತ ನೋಡಲೆಲ್ಲಿ
ಗರಿಕೆ–ದೋಣಿ, ಎಲೆಗಳಲ್ಲಿ
ಹೂವು–ಹೊನ್ನ ಬಟ್ಟಲಲ್ಲಿ
ಬಿಳಿಯ ಮುತ್ತು ಮುತ್ತೆ ಚೆಲ್ಲಿ

ದೀಪಮಾಲೆ ಬೆಳೆಯಿತು
ಮಿನುಗಿ ಮಿನುಗಿ ಮೆರೆಯಿತು

ಅದೋ 'ದೋ, ಅಲ್ಲಿ ಮುಂದೆ
ಹೊಂಗೆ ಮರದ ನೆರಳ ಹಿಂದೆ
ಬರುತಲಿಹಳು ಚೆಲುವೆ ನೀರೆ
ನವಿಲ ಬಣ್ಣವವಳ ಸೀರೆ
ಚಿಕ್ಕೆ ಬಾನ ರವಕೆ ತೊಟ್ಟು
ಎಳೆಯ ಶಶಿಯ ತಿಲಕವಿಟ್ಟು
'ಬೆಳ್ಳಿ' ಬೆಳಕಿನೋಲೆಯಿಟ್ಟು
ಮಿಂಚಿನಂಚು ಬಳೆಯ ತೊಟ್ಟು

ಬೆಡಗಿ ಅಡಿಯನಿಕ್ಕುತಾ
ಗಾಳಿಯಲ್ಲಿ ತೇಲುತಾ

ಕಂಡು ನಾಚಿ ನಡೆಯುತವಳು
ನೆರಿಗೆಗಳನು ತೀಡುತಿಹಳು
'ಬೆದರುಗಣ್ಣ ಬೆಡಗಿ ನಿಲ್ಲೆ'
ಎಂದು ನಾನು ಕೂಗಲಲ್ಲೆ
ಮೊಗದ ಸೆರಗನೋರೆಮಾಡಿ
ನಿಂದಳಲ್ಲಿ ನೋಟ ನೀಡಿ
ಮುಗಿದ ಕಮಲವರಳುವಂತೆ

ಮುಗುಳು ನಗೆಯ ಬೀರುತವಳು
ಕಣ್ಣ ಸನ್ನೆಯಿಂದ ನನ್ನ

ಕೂಗಿ ಕರೆದಳು
ಕರೆಯ ಕೊಟ್ಟಳು

ಎನ್ನರನ್ನೆ ಎಲವೊ ಕನ್ನೆ
'ದೇನಿದೇನು ಕಣ್ಣ ಸನ್ನೆ
ಕಂಡರಾರದೇನರೆಂಬೆ
(ಲಜ್ಜೆಗೆಟ್ಟ ಹೆಣ್ಣು–ಬೊಂಬೆ)
ಎಂದು ಹಳಿಯೆ, ಹಿಗ್ಗಿನಿಂದ
ಹರಿಣಿಯೊಂದೆ ನೆಗೆತದಿಂದ
ಹಾರಿ ಹೆಗಲಮೇಲೆ ಜೋತು
ಬಿಗಿದು ಮುತ್ತನಿಟ್ಟು ಓತು

ನನ್ನ ಸುತ್ತಿ ಕುಣಿದಳು
ಹಿಡಿದು ಕೈಯ್ಯನೆಳೆದಳು.

ಹೋದೆ ಹೋದೆ ಅವಳ ಹಿಂದೆ
ನೋಡಲಿಲ್ಲ ಹಿಂದು ಮುಂದೆ
ಕಡಲಿನಾಚೆ ಕನಸಿನಾಚೆ
ದೂರದಾ ದಿಗಂತದಾಚೆ
ಯಾರೂ ಅರಿಯದೊಂದು ತಾಣ–
ಕೊಯ್ದಳೆನ್ನ ಕೆಳದಿ ಕಣಾ
ಮೌನ ಮೌನ ಮಾತೆ ಮೌನ
ನಿಂತೆವಲ್ಲಿ ಒಂದು ಚಣ.

'ಮುಂದೆ ಕಣಿವೆ' ಎನ್ನುತಳಿವಳು
ಕಿವಿಗೆ ತುಟಿಯ ತಂದಳು.

ಅಲ್ಲಿ ಬನಬನಂಗಳಲ್ಲಿ
ತರಿದು ತರಿದು ಹೂವ ಚೆಲ್ಲಿ
ನೃತ್ಯರಾಣಿ ನಾಟ್ಯಗೈಯೆ
ತನ್ನ ಮರೆಸಿ ಭೂಮಕೊಯ್ಯೆ
ಬನದ ರಾಣಿ ಬೆಚ್ಚಿದಂತೆ
ನಿಂದ ಮರಗಳುಸುರದಿರೆ
'ಏಳು, ನಡೆ' ಎಂದಳಾಕೆ
'ಎತ್ತ? ಎಂದು? ಏಕೆ?' ಎಂದೆ

ಇಲ್ಲ ಆಡಲಿಲ್ಲ ಮಾತ
ಸುಮ್ಮನತ್ತ ಸೆಳೆದಳು

ಕನಸ ಕೆಳದಿ ಕಡಲಿನಲ್ಲಿ
ಪುಟ್ಟದೊಂದು ದೋಣಿಯಲ್ಲಿ
ನನ್ನನಿರಸಿ ಮುತ್ತನಿಕ್ಕಿ
ಸಾಗಿಸಿದಳು ಹುಟ್ಟು ಹಾಕಿ.
ಅವಳ ಮೇಲೆ ಬಿದ್ದು ನಲಿದೆ
ಬಾಚೆ ತಬ್ಬಿ ಎದೆಗೆ ಬಿಗಿದೆ
ಕೊರಳಿಗೊಲಿದು ತಾಳಿಕಟ್ಟಿ
ಮಡದಿಗೊಡೆಯನಾಗಿಬಿಟ್ಟೆ

ಅಂದೆ ಮಾನ್ಯನಾದೆನು
ಜಗದೊಳೊಬ್ಬನಾದೆನು

ಅವಳ ಕದಪು ಹೂವ ಕಂಪು
ಕಣ್ಣಕಾಂತಿ ಮನಕೆ ಶಾಂತಿ.
ತೊಂಡೆಹಣ್ಣ ತುಟಿಯ ಜೇನ
ಹೀರಿ ಹೀರಿ ಗಾನಗೈದೆ
ಭೃಂಗದಂತೆ ಭಂಗಿ ತಾಳಿ
ಚಿಟ್ಟೆಯಂತೆ ಚೆಲುವನಾಳಿ

ಅವಳ ಸುಗ್ಗಿ ಸಿರಿಯ ಮೊಗದಿ
ನನ್ನ ಮೊಗನದ್ದಿದೆ
ಅವಳ ನಗೆಯ ಹೊನಲಿನಲ್ಲಿ
ನನ್ನ ದೋಣ ಹರಿಸಿದೆ.

**ಮರೆಯದಿರು.....!**

ಮರುಗುತಿಹೆ ಏಕಯ್ಯ ಕೊರಗಿ ಕೃಶನಾಗುತಿಹೆ
ಆಸೆ ಅಸ್ಥಿಯ ರೂಪು ತಾಳಿತೇನು?
ಬಾನ 'ಬೆಳ್ಳಿ'ಯ ಹಿಡಿಯೆ ತುಡುಕಿ ಹಾರಿದ ಹಕ್ಕಿ
ರೆಕ್ಕೆಗಳು ಸೋತು ತಾನಿಳೆಗಿಳಿಯಿತೇನು?
ಕೆನ್ನೀರ ತುಳುಕಿಸುವ ಸಂಜೆವೆಣ್ಣಿಗೆ ಭ್ರಮಿಸಿ
ಅಪ್ಪೆ ಕಾಳ್ಗತ್ತಲೆಯು ಕವಿಯಿತೇನು?
ಕಡಲ ಕುಣತಕೆ ಮೆಚ್ಚಿ ಮೋಹದಿಂ ಮುನ್ನುಗ್ಗಿ
ಅಪ್ಪಳಿಸಿ ಮೇಲ್ವಾಯ್ದು ತೋಯ್ದಿತೇನು?
ಏಕಾಗಿ ಮರಗುತಿಹೆ? ಇಚ್ಛೆ ಏನಿಹುದಲ್ಲಿ?
ಆವ ಹಾಲ್ಗಡಲಿಂಗೆ ಹಾತೊರೆಯುವೆ ?
ಎಲ್ಲ ಮರುವಿಷವಾಗಿ ನಶ್ವರದ ನೊರೆಯಾಗಿ
ನಶಿಸುವುದು ಓ ಗೆಳೆಯ! ಏಕೊರಲುವೆ?
ಬಾಳ ಬಾನ್ ಬಯಲನ್ನು ವೀಕ್ಷಿಸುವ ನಿನಗೊಮ್ಮೆ
ಮೇಲೆದ್ದು ಕಂಡಿತೇ ಧೂಮಕೇತು !
ನಿಂತೆಡೆಯೆ ನಿಂತಲ್ಲಿ ಕರ್ತವ್ಯ ಚ್ಯುತನಾಗೆ
ಮೈಮನಕೆ ಮರವೀಯ ಅದುವೆ ಹೇತು !
ನೋಡದೋ ಕಾಣಲಿದೆ ನಿನ್ನ ಗುರಿ ಬಹುದೂರ
ಮುಟ್ಟಲೇಳಸೋ ಧೀರ ಕಡೆಯತನಕ
ಇಂದು ಬಿಸಿಲಿನ ಬೇಗೆ ನಾಳೆ ಕೌಮುದಿ ತಂಪು
ಮರೆಯದಿರು ನೆಮ್ಮಿ ನಡೆ ಇರುವ ತನಕ !

## ನಾನೂ – ನೀನೂ

ನಾನೂ ತೆಳ್ಳಗೆ ನೀನೂ ತೆಳ್ಳಗೆ
ತನುರುಚಿ ಮರೆದಿದೆ ಬೆಳ್ಳಗೆ
ಕೂಡಿರೆ ಒಂದಿರೆ ಮೂಡುವುದೇನೆ
ಚಂದ್ರಿಕೆ ತನುವಿನ ಮೊಲ್ಲನನೆ ?

**ಒಂದು ರಾತ್ರಿ !**

"ಕಾಲೇಜಿನನುಭವದ ಕತೆಯೊಂದ ಹೇಳುವಿರಾ ?"
ಎಂದು ಕೇಳಿದಳಾಕೆ ಒಂದು ರಾತ್ರಿ !
"ದೀಪವಾರಿಸಿ ತುಂಟಿ ಬಳಿಗೆ ಬಾ ಹೇಳುವೆನು"
ಎಂದು ಮಂಚಕೆ ಸೆಳೆದೆ ನಾನೆಂಥ ತಂತ್ರಿ !

ಮಣದೆನಿದೊ ಮಹಾಕವಿಯೆ

ಮಣಿದೆನಿದೊ ಮಹಾಕವಿಯೆ ನಿನ್ನೀ ಮಹತ್ಕೃತಿಗೆ
ಓ ಮೇರುಕೃತಿಗೇ ; ನನ್ನತನ ನೀಗಿತ್ತು;
ನಾನು ನೀನಾಗಿದ್ದೆ ಆವೇಶ ಮೈವೆತ್ತು ;

ಪದಪದಕು ಒಂದೊಂದು ಪದವಿಯೇರಿದೆ ಕಡೆಗೆ
ಸಂದೆಯವು ಸಮೆಸಮೆದು ಶೂನ್ಯವಾಯಿತು ಕವಿಯೆ ?

ರಾವಣನು ರಕ್ಕಸನೆ ? ಮಂಥರೆಯು ಬೆಂತರಮೆ ?
ವಾಲಿಯಳಿದಾಮಾರ್ಗ ?ರಾಮನಿಗೆ ಉಚಿತಮೆ ?

ಆರು ಬರುವವರಿಲ್ಲಿ ಓ ! ಸೌಮಿತ್ರಿಸತಿಯೆ ?
ಅಕೋ ! ಇವಳಾರು ಕೈಕೆ ! ಮೌನವೇತಕೆ ತಾಯಿ ?
ಮಣಿವನಾರಿಗೆ ರಾಮ ಅಹ ! ಶಿಲಾತಪಸ್ವಿನಿ !

ಒಂದೇ, ಎರಡೇ, ಸಾಕು ನೂರಾರು ಪುಟಿಯುವುವು.
ನಿನ್ನ ಸೃಷ್ಟಿಯೋ ಮೇಣು ಅದು ನಿನ್ನ ಸೃಷ್ಟಿಸಿತೊ ?

ಧನ್ಯನೈ ರಸಋಷಿಯೆ ! ತಪ ಸಿದ್ಧಿಸಿಹುದಿದೋ
ಕನ್ನಡಮ್ಮನ ಶಿರದ ಸೀಮಂತ ಮಾಣಿಕವು !

## ನಲ್ನುಡಿ

ವರ್ಧಿಸುಗೆ....
ಜನ್ಮ ಜನ್ಮಾಂತರಕು
ವರ್ಧಿಸುಗೆ.....
ನನ್ನ – ನಿನ್ನೀ ಒಲವು; ಪ್ರೇಮವಾರ್ಧಿ
ಆವ ಜನುಮದ ಬಂಧು ?
ನಾನರಿಯೆ !
ಬಂಧುವೋ – ಮೇಣ್
ಬಂಧನವೋ – ಓ ಗೆಳೆಯ
ಬಂಧಿಸಿಹೆ ನಿನ್ನೆದೆಯ ಹೊನ್ನ ಶೃಂಖಲೆಯಲ್ಲಿ
ಆದೊಡಂ ಎಚ್ಚರಿಕೆ !
ಇರಲಿ, ನಲ್ನುಡಿಯೊಳಕ್ಕರಿಕೆ –
"Be slow in making friends,
And slower still in loosing them"
(ತಳುವಿರಲಿ ನೇಹಿಗರ ಆಯ್ಕೆಯಲ್ಲಿ)
ತಳುವು ಮಿಗೆ ಕೈಗೊಳಲಿ ಅವರನುಳಿವಲ್ಲಿ

## ಇಂದು ದೀಪಾವಳಿಯು..........

ಪಶ್ಚಿಮದ ದಿಗ್ವನಿತೆ ಓಕುಳಿಯ ರಂಗೆರಚಿ
ಬೇಟಕದೊ ಕಾದಿಹಳು ನೋಡು ದೇವಿ !
ಹಸುಳೆ ಚಂದಿರನಹಹ ! ಮೂಡುತಿಹನೊಲವಿಂದೆ
ತಿರೆಯು ತುಂಬುತಲಿರಲು ಬೆಳಕು ತೀವಿ.

ಹತ್ತಿದವು ಹಣತೆಗಳು ಚುಕ್ಕೆ ಕಾವಣಕಟ್ಟಿ
ನಿಶೆಯ ಕೊರಳಿಗೆ ದೀಪ–ಮಾಲೆ ಹಾಕಿ;
ಹತ್ತುತಿವೆ ಹಲಕೆಲವು ಬತ್ತಲಿವೆ ಕೆಲಕೆಲವು
ಏನು ಸೋಜಿಗ ದೇವಿ ! ಮಿನುಗಿ ಮಿನುಗಿ.

ಇಂದು ದೀಪಾವಳಿಯು, ಶುಭದಿವಸವೆಂದವರು
ಮಂದಿರವ ಸಿಂಗಾರಗೈಯುತಿಹರು.
ಹಣ್ಣು ಹೂ ಎಳೆನೀರು ಪನ್ನೀರುಗಳನಿಟ್ಟು
ಮಲ್ಲಿಗೆಯ ಮಳೆಯನ್ನೆ ಸುರಿಸುತಿಹರು.

ನವಿಲ ಮಂಚಕೆ ನಲ್ಲೆ ! ಬೆಳದಿಂಗಳೆರೆದಿಹರು
ಸುತ್ತಲೂ ಮಾಲೆಗಳ ಕೋಟೆ ಕಟ್ಟಿ;
ಆವುದೋ ಸಗ್ಗಸಿರಿ ಸಾಕಾರಗೊಂಡಿಹುದು
ಬೆಸಸದಿರು ಏನೆಂದು ಬೆನ್ನು ತಟ್ಟಿ.

ಕೃಷ್ಣ–ರಾಧೆಯರಿತ್ತ ಗಿರಿಜೆ–ಹರರೆಮಗಿತ್ತ
ದಿವ್ಯ ದೀಕ್ಷೆಯನಿಂದೆ ನಾವು ಪಡೆದು;
ಎತ್ತೋಣು ಬಾ ಗೆಳತಿ ಒಲವಿನಾರತಿಯನ್ನು
ಭಕ್ತಿರಸ ತೈಲವನು ಎರೆದು ಎರೆದು.

ಮನದ ಸಿಂಗಾರದಾಕೆ ಶೃಂಗಾರ ಸುಂದರಿಯೆ
ಮೇಲೇಳು, ಬಾ, ಒಸಗೆ ಸಾಕು ಇನ್ನು,
ಕೋಟಿ ದೀಪದ ನಡುವೆ ನಮ್ಮ ದೀವಿಗೆಯಿರಿಸಿ
ಹಾಡೋಣ ಅನುರಾಗ ರಾಗವನ್ನು.

## ಚೆಲುವಿನ ಚಿಟ್ಟೆಗೆ

ಹೂವು ಹೂವಿನ ಎದೆಯ ಕಿರು ಬಾಗಿಲೆಡೆಯಲ್ಲಿ
ತಿರಿತಿರಿದು ನಲಿದುಂಬ ಹೇ ಭಿಕ್ಷುಕ !
ಹಾರುತಾಡುತ ಅರಲ ಗೊರಲ ಬಳಿ ಕುಣಿಯುತ್ತ
ಬಿಂಕದಿಂ ಬಾಯ್ದೆರೆವ ರಸ ಭಕ್ಷಕ !
ಹಿಗ್ಗುತಿಹೆ ಏಕೆಲವೊ ನಿನ್ನ ರೂಪಿಗೆ ನೀನೆ
ದೇಹವಣುವೆಂಬುದನು ನೀನರಿಯೆಯಾ?
ಚೆಲು ಗುಲಾಬಿಯ ಎಸಳೆ ರೆಂಕೆಯಾಗಿಹುದೆಂದು
ಮೈಗೆ ಮೆರಗಿತ್ತವರ ಮರೆತಿರುವೆಯಾ ?
ಏನೋ ನಿನ್ನಾವಸ್ಥೆ ಮುಟ್ಟಲಿಕೆ ಹೇಸಿಗೆಯು
ಬಕಬಕನೆ ತಿಂದಲೆದ ಹೇ ಕುರೂಪಿ ;
ಮಾಸಗಳವರೆವಿಗುಂ ಕೋಶದೊಳಗಡಗಿದ್ದು
ರೆಕ್ಕೆಗೆದರುತ ಬಂದೆ ನೀ ಸುರೂಪಿ !
ಕಳೆದ ದಿನಗಳ ಮರೆದು ಚಣದ ಬಾಳಿಗೆ ಮೆರೆದು
ನಿನ್ನ ನೀನಿಳೆಯೊಗೆ ಕಾಣದಾದೆ ;
ಸೊಬಗ ಸೋಗನು ಹಾಕಿ ಬಳುಕುತಳುಕುತ ನಡೆದು
ಹೂವುಗಳ ಮನಸೆಳೆದೆ ಎಲವೊ ಬಂದೆ;
ಪುಷ್ಪಗಳ ಪ್ರಣಯಕ್ಕೆ ನೆರವುಗಾರನೊ ನೀನು
ಛೀ ಪಾಪಿ ? ಸುಳಿಯದಿರು ಬಹು ನಾಚಿಕೆ.
ಕುಸುಮಕೇಸರವಿತ್ತ ರೇಣುಗಳ ಹೊತ್ತು ನೀಂ

ಹೊರೆಯಾದೆ ಮಲ್ಲಿಗೆಗೆ ತೊಲಗಾಚೆಗೆ
ನೋಡು ನೇಹಿತಿ ದುಂಬಿ ಹಾಡಿ ನಲಿಸುವಳಾಕೆ
ಎದೆಗದವ ತೆರೆದಿಹುದು ಹೂ ಅವಳಿಗಾಗಿ ;
ಗಾನ ಸುಧೆಯನು ಇತ್ತು ಪ್ರೇಮ ಮಧುವನು ಹೊತ್ತು
ಒಲವಿನಿಂ ಹೂದುಟಿಗೆ ಮುತ್ತಿಡುವಳಾಕಿ ;
ಲಜ್ಜೆಯಿಲ್ಲವೆ ನಿನಗೆ ಕಜ್ಜವಿದು ಒಳಿತೇನೊ ?
ತಿರಿಯುವುದು ಹಿರಿತನವೆ ನೀನೆ ಹೇಳಾ ?
ತಿರಿತಂದು ಒಬ್ಬನನು ಕರೆದುಂಬ ಅರಿವಿಲ್ಲ
ಹೇ ಸ್ವಾರ್ಥಿ ! ನಂಬದಿರು ಹೇಯ ಬಾಳ.
ನೋಡದೋ ಸಾವಲ್ಲಿ ಸನ್ನಿಹಿತವಾಗುತಿದೆ
ಭೀಕರಾಕೃತಿಯಿಂದ ಬಾಯಿದೆರೆದು !
ನಿನ್ನ ಮೈ ಮೀಸೆಗಳು ಅಲ್ಲಿ ಕಸಿವಿಸಿಯಾಗಿ
ನಶಿಸುವುವು ಓ ಮರುಳೆ 'ನಿನ್ನ' ತೊರೆದು !
ನೀನು ನಿನ್ನವನಲ್ಲ ನಿನ್ನದದು ನಿನಗಿಲ್ಲ
ನಗ್ನನಾಗುವೆ ಅಲ್ಲಿ ಇರವ ಮರೆದು !
ಅಂಜಿ ನಡೆ ಅದಕಾಗಿ ಆ ದಿನದ ಕರೆಗಾಗಿ
ಗೊಣಗದಿರು ಕಳೆದುದನು ನೆನೆದು ನೆನೆದು.

**'ಬೆಳ್ಳಿ'**

ನೀಲಾಕಾಶದ ಚೆಲು ಲತೆ ಹೊದರೊಳು
ಮಲ್ಲಿಗೆಯರಳೊಂದರಳಿಹುದು
ಕಿರಣದ ದಳಗಳ ಕಾಂತಿಯನಿಳೆಯೆಡೆ
ಬೀರುತ ಕಂಪನು ತಳೆದಿಹುದು.
ವಜ್ರದ ತೆರದಲಿ ಪ್ರಜ್ವಲಿಸುತ್ತಿದೆ
ದಿನಕರ ಮುಕುಟದ ಮಣಿಯಂತೆ !
ಮಿರ ಮಿರ ಮಿರುಗುತ ಕಂಗೊಳಿಸುತ್ತಿದೆ
ಹಿಮಗಿರಿ ಶಿಖರದ ಸೊಡರಂತೆ !
ಶೇಷನ ನೊಸಲಿನ ರತ್ನವೊ ಕಾಣೆನು
ನಾರಿಯ ನಾಸಾ ಕುಟ್ಮಲವೊ
ಯಾವುದೊ ಏನೋ ಬಣ್ಣನೆ ಮೀರಿದೆ
ನೋಡಿದೊಡೆದೆಯೊಳದೇನೊಲವೊ !
ಜಗದುಸಿರಡಗಿಹ ಮೋನದ ಸಮಯದಿ
ಒಂದೇ ಬಾನೊಳು ಮಿನುಗುತಿದೆ
ಸಾಸಿರಕಿಂತಲು ಸಾಕೊಂದೆನ್ನುವ
ಹಿರಿಮೆಯ ನೀತಿಯ ಸಾರುತಿದೆ.

## ಅನ್ನದಾತನಿಗೆ

ನೆಲದ ಹೊಲಸ ಹಸನು ಮಾಡಿ
ಹುಲುಸು ಬೆಳೆಯ ಹಸುರು ನೀಡಿ
ಹುಲುಸು ಬೆಳೆಯ ಹಸುರು ನೀಡಿ
ಮಣ್ಣಿನಲ್ಲಿ ಹೊನ್ನು ಬೆಳೆವ
ಮಂತ್ರವಾದಿಯೇ!

ಸುಗ್ಗಿ ಸಗ್ಗವನ್ನು ತರುವ
ನುಗ್ಗಿ ಸೂರೆಗೈದು ಮೆರೆವ
ಮಾಗಿ ಹೊದಿಕೆಯನ್ನು ತೆಗೆವ
ಮರ್ಮಯೋಗಿಯೇ !

ಕಾಡನೆಲ್ಲ ನಾಡುಗೈವ
ಸುರರ ನೆಲೆಯ ಬೀಡುಗೈವ
ತಿರೆಯ ಬದುಕ ಸೊಗಸುಗೈವ
ಸರ್ವಶಕ್ತನೇ !

ತಾಯ ಬಸಿರೊಳೊಗೆದು ತಂದು
ನಾಯಿ ಜನರ ನಡುವೆ ನಿಂದು
ತಾಯಿ–ನಾಡ ಸೇವೆ ಸಲಿಪ
ದೇಶಭಕ್ತನೇ !

ಏಕೆ ಇನಿತು ಮರುಗುತಿರುವೆ ?
ಅನ್ನಕಾಗಿ ಕೊರಗುತಿರುವೆ
ನಿನ್ನ ಅನ್ನ ನಿನಗೆ ಇಲ್ಲ
ಅಯ್ಯೊ ದೇವನೇ !

ಅನ್ನಕಾಗಿ ಬನ್ನ ಬಂತೆ
ಅರಿವೆಗಾಗಿ ಕೊರತೆ ಇನಿತೆ
ಲೋಕಕನ್ನವೀವ ನೀನು
ಭಾಗ್ಯಹೀನನೇ ?

ಪಟ್ಟ ಶ್ರಮವು ವ್ಯರ್ಥವಾಯ್ತೆ ?
ಬಸಿದ ರಕ್ತ ಹಿಂಗಿ ಹೋಯ್ತೆ ?
ನಿನ್ನ ಬಂಧು  ಬಳಗದವರೆ
ವಿಷವನ್ನಿಟ್ಟರೇ ?

ನಿನ್ನ ನೆತ್ತರನ್ನು ಕುಡಿದು
ನಿನ್ನ ಜೀವ – ಹೆಣವಗೈದು
ತಮ್ಮ ಮನೆಯ ಮೇಲೆ ಹೊನ್ನು
ಕಲಶವಿಟ್ಟರೇ ?

ಅಯ್ಯೊ ದೇವ ಮಿತ್ರನೇ !
ಅಯ್ಯೋ ಭೂಮಿ ಪುತ್ರನೇ !
ಜಗದ ಅನ್ನದಾತನೇ !
ನಿನಗೆ ನಮಿಪೆನು .

ಭಾನು ಮೂಡಿ ಬರುವುದೆಂದು ?
ಬಾಳಿನಲ್ಲಿ ಬೆಳಕು ಎಂದು ?
ನಿನ್ನ ಏಳ್ಗೆ ಎಂದೋ ತಂದೆ ?
ನೋಡಲಾಪೆನು.

**ಕರುಳ ಕೂಗು**

ಮುಗಿಲ ದೇವಿಯ ಪುಣ್ಯ ಗರ್ಭದಿಂದೊಗೆತಂದ
ಹೂ ಮಿಂಚಿನೊಲು ಕಂದಾ ಉದಯಿಸಿದೆ ನೀನು ;
ಮಾಯವಾದೆಯದೇಕೋ ? ಮುಗಿಲನೈದಿದೆಯೇಕೊ ?
ಕರುಳ ಹಿಂಡಿದೆಯಲ್ತೆ ಪಾಪಿ ನಾನು.

ಮುಗಿದ ಮಲ್ಲಿಗೆ ಮೊಗ್ಗೆ ಅರಳಿ ಪರಿಮಳವನ್ನು
ಇಳೆಯ ತಾಯಿಗೆ ಇತ್ತು ಕಳಕಳಿಪ ಮುನ್ನ
ದುರುಳನಾವನೊ ತರಿದು ಹರಿದೆಸೆಯುವಂತೆ
ನಿನ್ನ ತರಿದನೆ ಮೃತ್ಯು ಓ ಎನ್ನ ರನ್ನಾ !

ತಳಿತ ಮಾವಿನ ಮರದಹೊನ್ನೆ ಗುಡಿನೊಳುಲಿವ
ಮರಿಗಿಳಿಯ ಕೊರಲನ್ನು ಮುರಿದು ಬಿಸುಟವರಾರೊ ?
ಓ ಎನ್ನ ಎದೆಹಕ್ಕಿ ಹಾರಿದೆಯ ಅಂಬರಕೆ
ಕಾದಿಹುದು ಎದೆಹಾಲು ಕುಡಿದುಲಿಯೆ ಬಾರೊ.

ಬಾಳ ಬಟ್ಟಲದಲ್ಲಿ ಪ್ರೇಮಸುಧೆಯನು ಹೀರಿ
ನೋವು ನಲಿವುಗಳನ್ನು ಸವಿದು ನೋಡದೆ ಮಗುವೆ
ಜಗದ ಚೆಲುವಿಗೆ ಒಲಿವನಿತ್ತ ತನುವನು ಬಿಸುಟು
ನಿನ್ನ ತಾಯಿಯ ತೊರೆದು ಪೋಪುದಿದು ತರವೆ ?

ತೊಟ್ಟಿಲದೊ ತೂಗುತಿದೆ ಕರೆಯುತಿವೆ ಬೊಂಬೆಗಳು
ಒಡನಾಡಿ ಎಲ್ಲೆಂದು ಕೇಳುತಿವೆ ಬೇಡುತಿವೆ
ನಿನ್ನ ಸೋದರಿ ಚಂದ್ರ ಹಂಬಲಿಸಿ ಹರಸುವಳು
ಸಂತಯಿಸು ಏಳಯ್ಯ, ಏಕಿನಿತು ಮರವೆ ?

ಹಾ ಎನ್ನ ಮಾಣಿಕವೆ ! ಮಲಗಿರುವೆ ಮಮರೂಪಿ
ಸಹಿಸಲಾರೆನೊ ಮಗನೆ ನೋಡೀ ಮುಸಲಧಾರೆ !
ನಿನ್ನ ಕರ್ತವ್ಯವನು ನಾವು ಮಾಡುವುದೆಂತು ?
ಹಿಡಿ ಮಣ್ಣ ಮುಡಿಗೆರೆದು ಹುಡಿಗೈಯ್ಯಲಾರೆ.

ಗಗನದೆಲೆಗಳ ನಡುವೆ ನಿಂತು ನೀ ಕೈವೀಸು
ಇದೊ ಬಹೆವು ನಾವುಗಳು ಇಂದಲ್ಲದೊಂದುದಿನ
ನಿನ್ನ ಹಾದಿಯ ಹಿಡಿದು; ಎತ್ತಿ ಮುತ್ತಿಡುವೆನೊ
ಕಂದಾ ! ಸಂತೆ ಹಾದಿಯಿದು ಅಂತ್ಯವೇ ಮರಣ !

## ಓ ಕಾವ್ಯಲಲನೆ !

ಮುಂಜಾವು ಮಂಜಿನಲಿ ನಡುಕದಿಂ ಗದಗದಿಸಿ
ಹೊನ್ನ ಬಟ್ಟೆಯ ಹೊದೆದು ಮಲೆಯ ಮೇಲ್ದುದಿಯಲ್ಲಿ
ಕೆಂದೂಳಿಯಲಿ ಮಿಂದು ಮಂದಹಾಸವ ಬೀರಿ
ಪಶ್ಚಿಮಾಂಬುಧಿಗಿಳಿವ ಶರಸಂಧ್ಯೆಯಲ್ಲಿ ;
ರವಿಶಶಿಗಳುದಯದಲಿ ನೀನು ಮುಡುವೆಯೆಂದು,
ಎದೆಯಲರ ಬಾನೆಡೆಗೆ ತೆರೆದು ನಿಂದು,
ಪೂವಾಗಿ ಪೊನಲಾಗಿ – ಮೇಣ್ ಅರಸಂಚೆಯಾಗಿ

ಕೊಳಕೆ ಬಂಡುಣಿಯಾಗಿ ಬರುವೆಯೆಂದು
ಕೋಗಿಲೆಯ ಕೊರಲಿನಿಂ ಮಮರದ ತಳಿರಿನಿಂ
ಗಾನರೂಪದಿ ಎದೆಗೆ ಸುಧೆಯೆರೆವೆಯೆಂದು,
ಝರಿಯಂತೆ ಜಿನಿಜಿನಿದು ಚಿಲುಮೆಯೊಲು ಪುಟಿಪುಟಿದು
ದೇವಗಂಗೆಯ ತೆರದಿ ಇಳಿಗಿಳಿವೆಯೆಂದು ;
ಬಹುದಿನದ ಬಯಕೆ ತಾಂ ಬಾನಾಡಿಯಾಗಿರಲು
ಇಂದು ಫಲಿಸೀತೆಂದು ಕನಲುತಿದ್ದೆ;
ಬಂದ ನೀಂ ಓ ಚೆಲುವೆ ರತಿಪತಿಯ ಕಣೆಯಾಗಿ
ಮೊಗದ ಮೇಲುದುವೆತ್ತಿ ಮುತ್ತನಿತ್ತೆ !
ನಿನ್ನ ತೋಳ್ಸೆರೆಯಲ್ಲಿ ಮೈ ಮರೆದು ಹಾಡಿದೆನು
ಎದೆಯು ತಾಂ ಮಿದುವಾಗಿ ಮಿಡುಕುತಿರಲು.

ಹಾಡೆ ಅಲರಾಗಿಹುದು ತಿಂಗಳಿನ ಮಳೆಯಂತೆ
ದುರಸಾರದಿರಿನ್ನು ಯಾವಾಗಲು.
ನಿನ್ನ ಚುಂಬನದಿಂದ ವ್ಯಾಧ ರಸಋಷಿಯಾದ
ಕುರುಬ ಕವಿವರನಾದ, ಜಸವ ಪಡೆದ
ವ್ಯಾಸ ಪೂರ್ಣತೆವಡೆದ ಪೂರ್ಣಿಮೆಯ ಇಂದುವೊಲು
ಆಂಗ್ಲಕವಿ ಕಣ್ಮುಚ್ಚಿ ಕುರುಡನಾದ.

ಏನು ನಿನ್ನಯ ಲೀಲೆ ! ಜಗವೆ ಲೀಲಾರಂಗ
ಕವಿಯೆದೆಯು ನರ್ತನದ ನಾಟ್ಯಶಾಲೆ
ನಿನ್ನ ಮೋಡಿಗೆ ಮೋಹ ಮುಗ್ಧರಾಗದರೊಳರೆ
ಗಾರುಡಿಗನಂಗನೆಯೆ, ಓ ಕಾವ್ಯಲಲನೆ
ಬ್ರಹ್ಮಚಾರಿಗು ಭ್ರಮೆಯ ಹುಟ್ಟಿಸುವ ಮೋಹಿನಿಯೆ !
ಅಚಲಳಾಗೆದೆಯಲ್ಲಿ ಕನಸಿನಲ್ಲು,
ಯುಗಯುಗಾಂತರದಿಂದ ಚಲಿಸುತಿಹ ಚೇತನವೆ
ಧಮನಿಯಲಿ ಧುಮುಧುಮಿಸಿ ಹರಿದು ನಿಲ್ಲು !

## ನನ್ನ ಕರೆದುಕೊ ತಂದೆ ನಿನ್ನ ಮನೆಗೆ

ಬೆಳಕಿನ್ನು ಹರಿದಿಲ್ಲ; ಒದ್ದೆಗಣ್ಣಾರಿಲ್ಲ
ಆಗಲೆ ಕೇಳುತಿದೆ ಗೊಣಗು ಗುಲ್ಲು ;
ಮಳೆ ಬಿದ್ದ ಇರುಳಿನಲಿ ಬೋರಿಡುವ ಕಪ್ಪೆವೊಲು
ಒಟಗುಡುವುದೆಲ್ಲೆಲ್ಲು ಒಡಕು ಸೊಲ್ಲು.

ಶರಣೆಂಬರಿದಿರಿನಲಿ ಶಪಿಸುವರು ಮರೆಯಲ್ಲಿ
ಅವರಿಗಾವುದು ಗಹನ ಧಾತ್ರಿಯಲಿ
ಬಾಯ್ಗೆ ಬಂದುದೆ ಮಾತು, ಬಳುಗುವರು ತೆಗಳುವರು
ಕೇಳಲಾರೆನು ಅಬ್ಬಾ ! ಈ ಕಿವಿಗಳಲ್ಲಿ

'ನಮ್ಮವರು ನನ್ನವರೆ' ಎಂದುತುಳ ಪ್ರೀತಿಯಲಿ
ಆದರಿಸೆ ಮುಗಿದಿತ್ತು ಘಾತಿಯಲ್ಲಿ;
ಸುಮವೆಂದು ಎದೆಗೊತ್ತೆ ಶೂಲವಾಯಿತೊ ತಂದೆ
ಹಾಲು ಹಾಲಾಹಲವೇ ಬಾಳಿನಲ್ಲಿ ?

'ಸಾಕು ಮಾಡೈ ತಂದೆ ಲೋಕದಾಟವನಿನ್ನು'

ಎಂಬ ಶರಣದ ನುಡಿಯೆ ನನ್ನ ಕನಸು.
ಬೇಸರದ ಬಾಳಾಯ್ತು, ಬದಕು ಬಂಧನವಾಯ್ತು
ಶೂನ್ಯಕಾಸರೆಯಾಯ್ತು ತುಂಬು ಮನಸು.

ಸಂಕೋಲೆ ಸಾಕಾಯ್ತು ಕನಿಕರಿಸು ಓ ತಂದೆ
ಕಿಂಕರನ ಕರೆದುಕೊ ನಿನ್ ಬಳಿಗೆ.
ಕುಸುಮ ದಲಿಸುವ ಮುನ್ನ ತನುವು ತೊರೆಯುವ ಮುನ್ನ
ನನ್ನ ಕರೆದುಕೊ ತಂದೆ ನಿನ್ನ ಮನೆಗೆ.

**ತೃಷೆ !**

ಆವ ಹೇತುವೋ ಆವ ಬಯಕೆಯೊ ತೃಷಯೆ ಅಡಗದಿತ್ತು
ಉಷಾ ಸಂಧ್ಯೆಯಲಿ ನಿಶಾದಿಶೆಗಳಲಿ ತೊಳಲಿ ಬಳೆಯುತಿತ್ತು
ಮರಮರವ ಸುತ್ತಿ ತನಿವಣ್ಣನೆತ್ತಿ ತರಿತರಿದು ತಿನ್ನುತಿತ್ತು
ಇಂಗದಿಂಗದಿದೊ ಭಂಗವಡಸಿ ಮನ ಕಾರಿ ಕೂಗುತ್ತಿತ್ತು

ಬಾಯ್ದೆರೆದು ನಿಂದೆ ಜಾತಕನ ತೆರದಿ ಮುಂಗಾರು ಹನಿಯ ಬಯಸಿ
ಧಾರೆಯಾಗಿ ಧರೆಗಿಳಿವ ನೀರನೆಲ್ಲವನು ಪೀರ್ದೆ ಸೆಣಸಿ
ತೇನೆಯಾಗಿ ತೆರೆತೆರೆಯ ತೊರೆ ಬೆಳ್ದಿಂಗಳನ್ನು ಕುಡಿದೆ
ದೂರದಂಚಿನಾ ಬಿಸಿಲುಗುದುರೆಯನು ಭ್ರಮಿಸಿ ಹಿಡಿದುಹೋದೆ

ಎಳೆಯ ಕರು ತಾಯ ಮೊಲೆಯನುಂಬುವೆಡೆ ಇಣುಕಿ ಅತ್ತ ಜಿಗಿದೆ.
ಚಪಚಪನೆ ಹೀರ ಕಟವಾಯ ಜೊಲ್ಲ ಸವರುತ್ತ ಮುಂದೆ ನೆಗೆದೆ.
ಹಸುಳೆ ಮಡಲಿನಲಿ ಅಮೃಪಾನಗೈವುದನು ಕಂಡೆ ಕಂಡೆ
ಬೇಡಿ ಬೇಡಿ ಅದರೊಡನೆ ಕಾದಿ ಬಾಯ್ಗೂಡಿ ಪಾಲುಗೊಂಡೆ

ದುಂಬಿ ಬಂಬಲಲಿ ಅಂಬೆಗಾಲಿಡುತ ಜೇನುಗೊಡದಿ ತೊಯ್ದೆ
ತುಂಬೆಯನು ತಬ್ಬಿ ಚುಂಬನವನಿತ್ತು ಮರಿದುಂಬಿಯಾಗಿ ಸುಳಿದೆ
ಫಲಭಾರದಿಂದ ನೆಲದೆಡೆಗೆ ಜೋತ ಮಾಮರದ ಕರದ ಮೇಲೆ
ಅರಗಿಣಿಯು ಮುಟ್ಟೈ ತನಿವಣ್ಣು ಬಿರಿಯೆ ಚಾಚಿದೆನು ರಸಿಕ ರಸನೆ

ಅಯ್ಯೋ ತಣಿಯದಿದೆ ತಣಿಯದಿಹುದು ಎಂದಳಲಿ ಮುಳಿದೆ ಹಲುಬಿ
ಯುಗವೆರಡು ಹತ್ತು ಮೇಲೆರಡು ಕಳೆದ ಮೇಲಾರೊ ಸನಿಹಕ್ಕೈದಿ
'ಚೆಲುವೆಯೊಲವಿನಲಿ ಅರುಣದುಟಿಗಳಲಿ ಬಾಳ ಸಾರವಿಹುದು !'
ಎಂದೊಡನೆ ತುಟಿಗೆ ತುಟಿಯೊತ್ತಿ ಸವಿದೆ ನೀಗಿತ್ತು, ದಣಿವು ಇನಿತು !

ಮನೆಯುಳಿದು ಹೊರಗೆ ಅಲೆದಾಡಲೆಂದು ಬಹು ದೂರ ದೂರ ಹೋದೆ !
ಕಾದಿದ್ದಳಲ್ಲಿ ಬೇರೊಬ್ಬ ರಮಣಿ ಕಂಡೊಡನೆ ನಿಲ್ಲದಾದೆ !
'ಬಾರಯ್ಯ ಕವಿಯ ನಾನೆಲ್ಲ ಸವಿಯು ; ತನುವೆಲ್ಲ ಸವಿಯು,
ನೀನಿನಿತು ಸವಿದು ನೋಡು !'
ಎಂದಾಕೆ ಕರೆಯೆ ರಸದೂಟವಾಯ್ತು ! ಮನ ಶುದ್ಧಿಯಾಯ್ತು !
ತನು ವೃದ್ಧಿಯಾಯ್ತು ನೋಡು !@

ಅಧಿಕಾರ ಬೇಡ, ಸುರಿಹೊನ್ನು ಬೇಡ ಬೇಡೆನಗೆ ಆವ ಪದವಿ !
ನೇಹಿಗರು ಬೇಡ, ಬೇಹಿಗರು ಬೇಡ, ಸುರನಾರಿಯುಟ್ಟು ಅಡವಿ !
ಅರಮನೆಯು ಬೇಡ, ಗುರುಮನೆಯು ಬೇಡ, ಕೈವಲ್ಯ ಬೇಡ ಕಡೆಗೆ !
ಅವಳಿದ್ದರಾಯ್ತು ಒಲವೊಂದೆ ಸಾಕು ಚೆಲುವುಣಿಸೆ ಮುಕ್ತಿ ನನಗೆ !

## ತಾಂಡವ

ವ್ಯೋಮಕೇಶಾಧೀಶನಾವೇಶದಚ್ಚರಿಯ ನರ್ತನಂ ನಡೆಯುತಿದೆ ಧೀಂಕಿಟ್ಟು
ವಿಶ್ವದೀರಂಗದಲಿ; ಅಪಸ್ಮಾರತೆಯ ಮೆಟ್ಟಿ, ವ್ಯಾಘ್ರದೊವಲುಡೆಯುಟ್ಟು,
ಪ್ರಳಯಾಗ್ನಿ–ಗಂಗೆ, ಎಳವೆರೆ–ನಾಗ, ಸ್ತ್ರೀ–ಪುರುಷ ತಾನಾಗಿ, ಮಾಲಾರುಂಡವಂ
ಧರಿಸಿ ನರ್ತಿಸುವಂ ಮರ್ಧಿಸುವಂ, ವರ್ಧಿಸುವಂ ಶಿವಂ ! ರುದ್ರಂ ! ತಾಂಡವಂ !

# ಕೆಂಗನ ಕಲ್ಲು

ರಾಗಿಣಿ ಪ್ರಕಟಣೆ
(೧೯೬೨)
(೧೯೬೨ ನೆಯ ಸಾಲಿನ ಮೈಸೂರು ರಾಜ್ಯಸರ್ಕಾರದಿಂದ ಪ್ರಶಸ್ತಿ ಪಡೆದ ಗ್ರಂಥ)

## ಮುನ್ನುಡಿ

ಶ್ರೀ ಸಾ.ಶಿ.ಮರುಳಯ್ಯ ಎಂ.ಎ., ಅವರು ಶಿವಮೊಗ್ಗ ಸಹ್ಯಾದ್ರಿ ಕಾಲೇಜಿನಲ್ಲಿ ಕನ್ನಡದ ಅಧ್ಯಾಪಕರು. ಅವರನ್ನು ಈ ಮೊದಲು ಕಂಡಿದ್ದೆ. ಅವರ 'ಶಿವ–ತಾಂಡವ' ನೋಡಿದ್ದೆ. ಸದ್ಯದ ಸಂಗ್ರಹದಲ್ಲೂ, 'ಕರೆ' ಎಂಬ ಪದ್ಯದಲ್ಲಿ ಅವರು 'ಪಾಂಚಜನ್ಯ' 'ರುದ್ರತಾಂಡವ' ನೆನೆಸಿಕಳ್ಳುತ್ತಾರೆ. 'ಹಂಬಲ' ಮಾತ್ರ ಬೇರೆಯಾಗಿದೆ.

'ಬಿತ್ತರದ ಬಾನಿನಲಿ ಬತ್ತಲೆಯ ಬಯಲಿನಲಿ
ನಂದನೋದ್ಯಾನವನೆ ಬೆಳೆಯ ಮನವಿಲ್ಲ'

ಹೀಗೆಂದರೂ,
'ಮಳೆಬಿಲ್ಲಿನಟ್ಟಣೆಯ ಮೆಟ್ಟಿ ನಾ ನಿಲಬೇಕು
ನೀಲಿ ದೂರಕು ಒಮ್ಮೆ ನುಗ್ಗಿ ಬರಬೇಕು'

ಎಂದು ಸ್ಫುಟವಾಗಿ ಹೇಳಿದ್ದಾರೆ.

'ಜನ್ಮ ಜನ್ಮಾಂತರದ ಹೊನ್ನ ಬಸುರಿನ ಹಸುಳೆ
ಏನೇನು ತೊದಲಾಡಿಸೀತೋ – ಯಾರು ಬಲ್ಲರು ?

ಈ ಸಂಗ್ರಹದಲ್ಲಿ ಹದಿನಾಲ್ಕು ಬಿಡಿ ಪದ್ಯ ಮತ್ತು ಒಂದು ನೀಳ್ಗವನ ಇವೆ. 'ಕೆಂಗನ ಕಲ್ಲು' – ನೀಳ್ಗವನವು ಸಂಗ್ರಹದ ಅರ್ಧಭಾಗ ವ್ಯಾಪಿಸಿದೆ. ಸಂಗ್ರಹಕ್ಕೆ ಅದೇ ಹೆಸರು. ಹದಿನಾಲ್ಕರಲ್ಲೆ ಸಾಕಷ್ಟು 'ಚೌ–ಚೌ' ಇದೆ. ಮೂರು 'ಸುನೀತ', ಎರಡು ಅನುವಾದ ಇದರಲ್ಲಿವೆ. 'ಔಪಾಸನೆ'ಯ ಶೈಥಿಲ್ಯ ನೋಡಿದರೆ, 'ಬನ್ನಿ ಓ ಗೆಳತಿಯರೆ' ಇದೇ ಬೇಕು ಎನಿಸುವದು. ಶ್ರೀ ಮರುಳಯ್ಯನವರ ಕೆಚ್ಚು–ವಿಡಂಬನದ ಧಾರೆ ಉಳಿದ ಐದು ಕವನಗಳಲ್ಲಿದೆ. 'ಮಕಾಸಿನ್' ಎಂಬ 'ನವ್ಯ'ದಲ್ಲಿ ಅವರ ಬೆಡಗು, ವಕ್ರೋಕ್ತಿ ವಿದೂಷಣೆ, ಸಾಂಕೇತಿಕ ಪ್ರತಿಮೆ, ಗೂಡಾರದ ಗೂಢಾರ್ಥ – ಎಲ್ಲಾ ಗೊಂಚಲುಗೊಂಡು ಬಂದು, ಅದರ ಕಲಮ್ ಬೇರೆ ಎಂದು ಎದ್ದು ಕಾಣುವುದು.

ಹಸಿದ ನಾಗರಕ್ಕೆ ಹಾಲನೆರೆದು ಅದು ವಿಷ ಕಾರಿದಾಗ 'ಕಲ್ಲ ನಾಗರ'ಕ್ಕೆ ಹಾಲಿನುಪಚಾರವು ಅಹಿತ ಪರಿಣಾಮಿಯಲ್ಲ, ಎಂದು ಪುನವಿಮರ್ಶೆ ಮಾಡುವ ಕಾಲಕ್ಕೆ ನಾವು ಬಂದಿದ್ದೇವೆ. ನಾಯಿಗಳನ್ನು ಕುರಿತು 'ಭೂತ–ದಯೆ' ಸರಿಯೆ? ನಗರಸಭೆಯ ಅಧ್ಯಕ್ಷ ಎಂಥ ನಿರಕ್ಷರಕುಕ್ಷಿಯಾರೂ, 'ಅಹಿಂಸೋ ಪರಮೋ ಧರ್ಮಃ', 'ಪರೋಪಕಾರಾಯ ಪುಣ್ಯಾಯ' ಎಂಥ ಮುದ್ರಣ ದೋಷಗಳಂತೆ ಕಾಣುವ ವಕ್ರೋಕ್ತಿಯು ಯಾವ ಹೃದಯಕ್ಕೆ ಮುಟ್ಟಬೇಕೋ ? ತಿಳಿಯುವುದು ಕಷ್ಟ. ಪುಟ ಮೂವತ್ತೆರಡರಲ್ಲಿ

ಮಾತ್ರ ಸಂಪೃಕ್ತಾಂ' ಎಂಬುದು 'ಸಂಸೃಷ್ಟಂ' ಎಂದಿರಬೇಕು ಎಂದು ತೋರುವದು. ಆ ಮುದ್ರಾರಾಕ್ಷಸ ಏನೇ ಇರಲಿ ಹಾಲಾಹವನವಧರಿಸಿ 'ಓಂಕಾರಮಯನಾಗುವ ಝೇಂಕಾರ' ಹೊಣೆ ಯವ ಕವಿಶೀಲಕ್ಕೂ ಸ್ವಲ್ಪ ಭಾರ.

ಶ್ರೀ ಮರುಳಯ್ಯನವರ 'ಕನ್ನಡದ ಕಹಳೆ' ಬಿರುಸಿನ ವಾದ್ಯ. 'ಒಡೆದ ಕಿಂದರಿಯೊಂದ ನರಳುತಿತ್ತು!', 'ಹೆಗ್ಗಣ' 'ಜಿಗಣೆ' 'ಮಹಿಷ' ನಿರ್ನಾಮ ಮಾಡುವ ಯಾವ 'ತೇಜಸ್ವಿ' ಕಿಂದರಿಜೋಗಿ ಮುಂದೆ ಬರುವನೋ/ ಕವಿಯ ಈ ಪ್ರಗಾಥವು ಜೋರಾಗಿದೆ.

'ಮಕಾಸಿನ್' ಕೃತಿಗೆ ನವ್ಯ ವಿಮರ್ಶಕರೇ ಯಾವ ಜಾತಕ ಬರೆಯುವರೋ ? – ಅಲ್ಲಿಯವರೆಗೆ 'ಡೆನ್ಮಾರ್ಕದರ್ಶನಿಗೆ ನಿಜರಾಹು' ಆದವರ ಗತಿ ಏನಾಗುವುದೋ? ಏನಾದರೂ 'ರಾಹು' ನೆರಳು, 'ಅರ್ಕ' ತೇಜಸ್ಸು. ಈ ಗ್ರಹಣಬಿಟ್ಟು ಹೋಗಲಿ ಎಂದು ನಾವೆಲ್ಲ ಪ್ರಾರ್ಥಿಸೋಣ.

'ಕೆಂಗನ ಕಲ್ಲು' – ಅಭಿನವ ಕೃತಿ. ಸುಮಾರು ಆರೂವರೆ ನೂರು ಸಾಲುಗಳಲ್ಲಿ ಹಬ್ಬಿದೆ. 'ಶರದ' 'ಹಿಮವಂತ' – 'ಶಿಶಿರ' ಎಂದು ಮೂರು ಭಾಗಗಳಿವೆ. ಮಹಿಷೂರ ಒಡೆಯರ ಕಾಲಕ್ಕೆ 'ಧಾತು–ಈಶ್ವರ' ಸಂವತ್ಸರಗಳಲ್ಲಿ 'ಮಾರಿ'ಯಾಗಿ ಬಂದ ಬರಗಾಲಕ್ಕೆ ಸಂಭವಿಸಿತೆಂಬುವ ಘಟನೆಯೊಂದನ್ನು ಆಧಾರ ಮಾಡಿಒಂಡ 'ಆಖ್ಯಾನ' ಇದು. 'ಬಹುಧಾನ್ಯ' ಆಮೇಲೆ ಬಂದಿತು 'ವ್ಯಥೆಯ ಕಥೆ' ಸುಳ್ಳಾದೀತೇ? 'ಕೆಂಗವ್ವ, ಕೆಂಗಜ್ಜ, ಮೂರ್ತಿರಾಯ, ರಾಮಣ್ಣ, ಮಲ್ಲಿ' – ಇವರ ಅದ್ಭುತ–ಭಯಾನಕ–ಭೀಭತ್ಸ–ಕರುಣಕತೆ' ಕವಿ ಚಮತ್ಕಾರವಾಗಿ ಹೆಣೆದಿದ್ದಾರೆ.

ದುರ್ಯೋಧನನ ದುಷ್ಟಬುದ್ಧಿಯ 'ಮರುಳು'ಗಳು ಬರಿ ನೆರಳು. 'ಕೆಂಗನ ಕಲ್ಲಿನ' ಕತೆಯಲ್ಲಿ ಯಾವುದೋ ಗುಣಾಢ್ಯ ಭೂತ ಕತೆಯನ್ನೇ ವರ್ತಮಾನ ಎಂಬಂತೆ ವಿವರಿಸುತ್ತಿರುವದೋ ಎಂಬ ಭಯ ಚಕಿತತೆ ಉಂಟಾಗುವಂತೆ ಸಾವಧಾನವಾಗಿ ಹೇಳಲು ಕವಿಗೆ ಏಳು ವರ್ಷ ಹಿಡಿದರೆ ತಪ್ಪಲ್ಲ; ಪಟ್ಟುಹಿಡಿದಿದ್ದಾರೆ.

'ಮರುಳ ನಾನಾದರೂ ಮುರಳಾಗೆ ಮನಿಸಿಂಗೆ'

ಕವಿ ಸ್ಮೃತಿಗೆಡದೆ, " 'ಕೆಂಗಜ್ಜ ನೆಂದೊರಲೆ', 'ಮಲ್ಲಿ ಬಾರೆ' ನ್ನುವುದು ತುರುಗಾವರಿಂದಿಗೂ ಕೇಳ್ತರಿಲ್ಲಿ"

ಎನ್ನುವ ಕವಿಸಮಯಾಂತವಾಗಿ ಕತೆ ಮುಗಿಸಿದ್ದಾರೆ.

'ಮದಲಿಂಗನ ಕಣಿವೆ' ಹಳೆಯದಾಯ್ತು. 'ಗೌಡರ ಮಲ್ಲಿ'ಯೂ ಹಳೆಯವಳೇ! ಶ್ರೀ ಮರುಳಯ್ಯನವರ 'ಕೆಂಗನ ಮಲ್ಲಿ'ಯ ಕರುಣ ಕತೆ ರಸಿಕರ ಚರ್ವಣೆಗೆ ಅನ್ನವಾದೀತು – ಎಂದು ನಾನು ಆಶಿಸಿದ್ದೇನೆ. 'ಹಿಮವಂತ' ಎಂದು ರೂಢಿಸುವುದಕ್ಕಿಂತ 'ಹೇಮಂತ' ಸರಿಹೋಗದೇ? ಇಂಥ 'ಮಶಕ'ಗಳನ್ನು ಹೊಡೆದು ಹಾರಿಸಿ ಕತೆ ಹೊಸ ಆವೃತ್ತಿಗಳನ್ನು ಕಾಣಲಿ.

ಬಡತನವೊ ಒಡೆತನವೊ
ನುಡಿಯು ನೂರಾಗಿರಲಿ
ಒಂದಾಗಿ ಬನ್ನಿರೈ 'ಗುಡಿ' ಎತ್ತಲೆಂದು !
ಎಂಬ ಕರೆ ಸೋದರ ಕವಿಗಳಿಗೂ ಸ್ವಾಗತ ನೀಡಲಿ.

"ತೇಜಸ್ವಿನಾವಧೀತಮಸ್ತು
ಮಾ ವಿದ್ವಷಾವಹೈ" – ಈ 'ಸಂಜ್ಞಾನ'
ಇಂದಿನ ಲೋಕಕ್ಕೆ ಬೇಕು. ಕವಿಯ ಧ್ವನಿ ಅದು !
–ದ.ರಾ.ಬೇಂದ್ರೆ
ಸಾಧನಕೇರಿ, ಧಾರವಾಡ

## ಹಂಬಲ

ಬಿತ್ತರದ ಬಾನಿನಲಿ ಬತ್ತಲೆಯ ಬಯಲಿನಲಿ
ನಂದನೋದ್ಯಾನವನೆ ಬೆಳೆಯೆ ಮನವಿಲ್ಲ
ಪೂರ್ಣಿಮೆಯ ಚಂದಿರನ ಕನ್ನಡಿಯ ಭಿತ್ತಿಯಲಿ
ಹೆಸರನ್ನು ಕೆತ್ತುವಾ ಬಯಕೆಯೆನಗಿಲ್ಲ

ಬರಿದು ಬರಿದಾಗಿರುವ ಎಲುವಿನಾ ಪಂಜರಕೆ
ಹಾಡಹಕ್ಕಿಯದೂಡೆ ಎನಗಿಚ್ಛೆಯಿಲ್ಲ
ಕರಿದೆರೆಯ ಮಿಳಿರಿಸುವ ಕಿಂಕಿಣಿಯ ಸಂಕುಳದ
ಚಿಕ್ಕೆ-ಚದುರಂಗವಿಡೆ ಹಂಬಲಿಕೆಯಿಲ್ಲ

ಹಚ್ಚಹಸುರಿನ ಪಚ್ಚೆ ಹುಚ್ಚೆದ್ದು ಹರಿಬೇಕು
ಹೂ ಅರಳೆ ಅದರೊಡನೆ ನಾನು ನಗಬೇಕು
ಹಕ್ಕಿಗೊರಲಿನ ಗಾನ ತಾನತ್ತರಂಗಿಣಿಯು
ತದನಿತಂದನಿತಾನ ಎದೆದುಂಬಬೇಕು

ಬಿಮ್ಮನಿಹ ಬೆಟ್ಟದೊಲು ಸುಮ್ಮನೂ ಇರಬೇಕು
ಒಡನೆ ಜಲಪಾತದೊಲು ಧುಮ್ಮಿಕ್ಕಬೇಕು
ಹೊಳೆಯಾಗಿ ಹರಿಹರಿದು ಕೊಳವಾಗಿ ನಿಲಬೇಕು
ತೆರೆಯ ಉಯ್ಯಾಲೆಯಲಿ ತೂಗಾಡಬೇಕು

ಎಲರಾಗಿ ಸುಳಿಸುಳಿದು ಪರಿಮಳವ ಕಳಬೇಕು
ದುಂಬಿ ಬಂಬಲಿನಲ್ಲಿ ನಾ ಸೇರಬೇಕು
ಜಲಧಿ ಎದೆಯಾಳಕ್ಕು ಮುಳುಗಿ ಹುಡುಕಲೀಬೇಕು
ತಾವರೆಯ ತೇರಿನಲಿ ರಸಯಾನಬೇಕು

ಅರುಣ ಕಿರಣಗಳೆಳೆಯ ಉಡುಗೆಯನು ತೊಡಬೇಕು
ಮುದದ ಮುಗಿಲಾಗಿ ನಾ ತೇಲಿ ಬರಬೇಕು
ಮಳೆಬಿಲ್ಲಿನಟ್ಟಣೆಯ ಮೆಟ್ಟಿ ನಾ ನಿಲಬೇಕು
ನೀಲಿದೂರಕು ಒಮ್ಮೆ ನುಗ್ಗಿ ಬರಬೇಕು

ಏಕೊ ಏನೋ ಕಾಣೆ ! ಯಾವ ರಾಗಕೊ ಕಾಣೆ
ಮರುಳು ಮನ ತುಡಿಯುತಿದೆ ಸಂತವಿಡಬೇಕು
ಜನ್ಮಜನ್ಮಾಂತರದ ಹೊನ್ನ ಬಸುರಿನ ಹಸುಳೆ
ಮೊದಲ ತೊದಲಿನ ಗಾನ ಹಾಡಲೇಬೇಕು !

## ಕನ್ನಡದ ಕಹಳೆ

### ೧

“ಏಳು ಕನ್ನಡ ವೀರ, ಏಳು,
ಎದ್ದೇಳು –

ಸುಪ್ರಭಾತವ ಸಮಯದರುಣದೋಕುಳಿಯಲ್ಲಿ
ಮಟಿದು ಮೇಲೇಳು !
ಸಪ್ತಸಾಗರದೆದೆಯ ಕುದಿಕುದಿಯ ತಾಂಡವದಿ
ಮೊರೆದು ಮೇಲೇಳು !
ಮುಗಿಲ ಮರೆ ಮಿಂಚಾಗಿ
ಸಿಡಿಲ ಮರಿ ನೀನಾಗಿ
ಸಿಡಿದು ನೀ ಹೊರಬೀಳು !
ತಡಿತುಂಬಿ ತೇಂಕುತಿಹ ತೊರೆಯೆರೆಯ ತೆಮರಾಗಿ
ಮೂಡಿ ಮೇಲೇಳು !
ಏಳು ಕನ್ನಡ ವೀರ, ಏಳು
ಎದ್ದೇಳು !"

೨

ಮೇಲುದುರ್ಗದ ತುದಿಯ ಕೋಡು ಬಂಡೆಯ ಮೇಲೆ
ನಿಂದಿಹನು ಬಡಜೋಗಿ ಕಿಂದರಿಯ ಪಿಡಿದು,
ಗ್ರೀಕು ಮಲೆಯಲಿ ನಿಂದ ಬಾರ್ಡನಂತೆ !
ಕಿಂದರಿಯು ಒಡೆದಿಹುದು.
ಅವನ ಬಾಳೊಡೆದಂತೆ !
ಸವಿಗನಸು ಕೆಟ್ಟಂತೆ !!
ಬೆಳ್ಮುಗಿಲೆ ರೂಹಾಗಿ ಮೂಡಿಹುದೊ ಎಂಬಂತೆ
ತೋಳೆರಡು ಯಾತದಂತತ್ತಿತ್ತ ತೊನೆಯುತಿವೆ
ಜಗಕೆ ಆಶೀರ್ವಾದಗೆಯ್ಯುವಂತೆ !
ಭವಿತವದ ಬಾಳನ್ನು ಬಿತ್ತರಿಸಿ ಪೇಳುವನೊ
ಸತ್ತ ದಿನಗಳ ಮತ್ತೆ ನೆನಸಿಕೊಡಲೆಳಸುವನೊ
ಯಾವುದನು ನಾ ಕಾಣೆ !
ಕಿವಿಗೊಟ್ಟು ಕೇಳು,
ಮಧುರ ಮಂಜುಳ ವಾಣಿ ಸುಧೆಯಾಗಿ ಹರಿಯುತಿದೆ
ಕೇಳಿ ತಣಿ
ಮತ್ತೆ ಮಣಿ !

೩

ಬಾರೆನ್ನ ಸೋದರನೆ,
ಸತ್ತ ಶತಮಾನಗಳ ಇತಿಹಾಸ ಹೊತ್ತಗೆಯ
ತೆರೆದು ನೀ ನೋಡಿಹೆಯಾ ?
ಹೌದೇನು? ಇಂದೊಮ್ಮೆ ನೋಡಲ್ಲಿ
ಏನ ಕಾಣುವೆ ಅಲ್ಲಿ ?
ಮಡಿದು ಮಣ್ಣಾಗಿರುವ ಮನ್ನೆಯರ
ಮಕುಟಗಳೆ !
ಕೆಡೆದೊಡೆದು ಹುಡಿಯಾದ ರತ್ನಸಿಂಹಾಸನವೆ ?
ಶಿಥಿಲ ಕೋಟೆಗಳಿಂದ  ಸಂರಕ್ಷಿಸಲ್ಪಟ್ಟ ಸೌಧಂಗಳಸ್ಥಿಗಳೆ ?
ಬಿರುನೆಲದ ಬರಿಗನಸು !
ಮುರಿಬಿದ್ದ ಭಾವಣಿಯ ಮರಣ ಚೀತ್ಕಾರ !
ಗಿಡಗೆಂಟೆ ಕಂಠಗಳ ಚಿಲಿ ಹಲ್ಲ ಶಿಳೂ ನಗೆ
ಕಾಗೆ ಗೂಗೆಯ ಗೂಡು,
ನರಿ ನಾಯಿ ಹಂದಿಗಳ ಅಟಿಕದ

ನೆಲೆವೀಡು !!

೪

ಏಕೆ ಕನ್ನಡ ವೀರ,
ನೆನೆಯಲಾರೆಯ ನೆರೆಯ ಕಿತ್ತೂರ
ಕೇಸರಿಯ ?
ಗಂಡುಮೆಟ್ಟಿನ ಭೂಮಿ !
ಅಂದು !!
ಇಂದು ?
ಆಗಿಹುದು ರುದ್ರಭೂಮಿ !!!
ಎತ್ತ ನೋಡಿದಡತ್ತ ಹೊತ್ತ ಹೆಣಗಳ ಸಿದಿಕೆ
ಒಡೆದು ಚೂರಾಗಿರುವ ತಲೆಗೊಳ್ಳಿ ಮಡಕೆ.
ಚಿಂದಿಯಾ ಹೊದಿಕೆ !
ಗಂಡುಗಳ ಬಿಸಿರಕ್ತ
ಉಂಡ ಆ ನಾಡು
ತಾನಾಗಿ ಚೀರುತಿದೆ
ಹೆಣದ ಗೂಡು !
ಬೇರೊಂದು ಪುಟವ ತೆರೆ

೫

ಏನದಚ್ಚರಿ ಗೆಳೆಯ !
ಕಾಣುತಿಹೆ ಏನು ?
ಹೊನ್ನಿನಂಗಾರದಲಿ ಸಿಂಗರದ ಪೂವಲಿಯೆ ?
ಕನಸುಣಿಯ ಮುದವಡೆದ ಮಧುಮಾಸದೊಸಗೆಗಳೆ ?
ಹಾಡು, ನುಡಿ, ಕೇಳೋಣ,
ನಡೆ ಮುಂದೆ, ನೋಡೋಣ !
ಹೊಸ ಹಾಡು ! – ಕವಿ ಹಳಬ !!"

೬

"ಹೇಮಕೂಟದ ಮೇಲೆ ಕನ್ನಡ ಬಾವುಟ !
ಮಣಿಯದಕೆ ತಲೆಬಾಗಿ, ನಟ್ಟಿರಲಿ ಶಾಶ್ವತ !!
ಬಾಳ್ ವಿಜಯನಗರ !
ವಿಜಯನಗರಂ ಬಾಳ್ಗೆ !
ಆದಿಕೊ ಜಯ ಜಯ ಘೋಷ !
ವಿಜಯನಗರದ ಶುಭದ ವೈಜಯಂತಿಯ ಕಾಣು !
ದಿಕ್ತಟದಿ ಪಟಪಟಿಸಿ ಹಾರುತಿದೆ ತಾನು !
ಎದ್ದು ಬಾ ನನ್ನೊಡನೆ, ಆಯಾಸವೇ ನಿನಗೆ ?
ಹೆಜ್ಜ ಇಡು ಮುಂದಕ್ಕೆ ರಾಯರೊಡ್ಡೋಲಗಕೆ
ಕೇಳು ಕಿನ್ನರ ಗಾನ, ಹಾಡು ಕವಿಗಳ ಕಬ್ಬ
ನಾಟ್ಯದೌತಣವಿರಲು ಕಣ್ಣಿಗದು ಹಬ್ಬ
ವೇದ ಮಂತ್ರದ ಘೋಷ ಪುಟಿಯುತಿದೆ
ದೇಗುಲದಿ–
ದ್ವಾರದಲೆ ನಿಂದೊಮ್ಮೆ ನಮಿಸು
ಬಾಗಿ !

ಕತ್ತೆತ್ತಿ ಕಾಣಲ್ಲಿ ಅದೊ ಋಷ್ಯಮೂಕ
ರಸಋುಷಿಗಳಾಗಾರ ಕರುನಾಡ ನಾಕ
ತುಂಗಭದ್ರೆಯ ತಡಿಯ ಪುಳಿನದೊಡ್ಡನು ಹಾದು
ಧುಮ್ಮಿಕ್ಕು ತೀರ್ಥದಲಿ ಪರಮ ಪಾವನನಾದೆ !
ತಡಿಯೆಡೆಯ ತರುಗುಲ್ಮ ತಣ್ಣೆಳಲ ತಂಪಿನಲಿ
ತಂಗಿ ನೀ ಹಾಡೊಮ್ಮೆ ಮಂಗಳದ ಹಾಡು !
“ಪಂಪೆ !
ಸೊಂಪಿನಾ ಸಿರಿಯೂರು ಈ ನಾಡು ಪಂಪೆ !
ಸಂಪಗೆಯ ಸೌರಭವ ಸೂಸುತಿಹ ಪಂಪೆ !!
ಪಂಪಾಂಬಿಕಾ ದೇವಿ ಶ್ರೀ ವಿರೂಪಾಕ್ಷರು
ನಲಿನಲಿದು ಒಲವೆರೆದು ಪೋಷಿಸಿದ
ಪಂಪೆ !
ನಮೋ ವಿರೂಪಾಕ್ಷ, ನಮೋ ವಿರೂಪಾಕ್ಷ
ನಮೋ ಮಾಹಾಮಾತೆ ಪಂಪಾಂಬಿಕಾ
ನಮೋ ಮಹಾಮಾತೆ ಪಂಪಾಂಬಿಕಾ “

೭

“ಸಾಕು ನಿಲ್ಲಿಸು ಗಮಕಿ,
ಇವನ ಹಾಡಲ್ಲಿಲ್ಲ ಮೆಲೊಡಿ !
ಪಂಪೆ !
ಸೊಂಪಿನಾಗರ ಪಂಪೆ !
ಸಂಪಗೆಯ ಪಂಪೆ !!
ಗೂಬೆಗಳ ಬಾವಲಿಯ ಬಳಗಗಳ
ಮುದಿಹದ್ದಿನೌತಣದ ಮೀಸಲಿನ ಕೊಂಪೆ !

ಮತ್ತೊಂದು ಸಂಪುಟ –

೮

ಚಿತ್ರದುರ್ಗ ಕೋಟೆ ಕೊತ್ತಲಿನ ಇತಿಹಾಸ
ಬಿಚ್ಚುಗತಿಯ ಭರಮ,
ವೀರಮದಕರಿ ಹನುಮ
ಒಮ್ಮೆ ನೆನೆದರೆ ಸಾಕು ಕೆಚ್ಚೆದೆಯ
ಕಲಿಗಳನು
ಎದೆ ಮತ್ತೆ ತುಂಬುವುದು,
ಹುಚ್ಚು ಮನ ಕುಣಿಯುವುದು,
ತೋಳು ಒನಕೆಯನೆತ್ತಿ ಓಬವೆಯ
ನೆನೆಯುವುದು !
ಅಯ್ಯೋ..... ಹೋಯಿತೇ.....

ಸರ್ವವೂ ಶೂನ್ಯದಲ್ಲಿ ಬಟ್ಟ ಬಯಲಾಯಿತೇ .....
ಓ ಎನ್ನ ತಾಯ್ನೆಲವೆ
ನನ್ನೆದೆಯೆ ಸವಿಯೊಲವೆ
ನಿನಗೆ ಕಡೆನೀರೆರೆಯೆ, ನೀನೆನ್ನನುಳಿಸಿದೆಯಾ ?
ಸತ್ತ ಯೋಗಿಗಳೆಲ್ಲ ಸಗ್ಗವನು ಸೇರಿದರು
ನಾಡು ನುಡಿಗಳಿಗಾಗಿ ದುಡಿದಮರರಾಗಿಹರು
ನನಗಿದೇ ದೌರ್ಭಾಗ್ಯ
ನನಗಿಲ್ಲವಾ ಭಾಗ್ಯ
ಬದುಕಿಸಿದ ಯಮನದೊರೆ
ಬೇಸತ್ತು ಬಲಿಗೆ !

೯

ಓ ಷಂಡ ಯವನ,
ನಿನ್ನ ದಬ್ಬಾಳಿಕೆಗೆ ಕೊನೆಯಿಲ್ಲದಾಯ್ತೆ ?
ಕನ್ನಡಿಗನೆದೆಗೊಳದ ಕೆನ್ನೀರು ನಿನಗಿಂದು
ಅನಿತು ಸವಿಯಾಯ್ತೆ ?
ಕವಡು ನುಡಿ ಕಪಟದಲಿ ಕಟುಕತನದೊಟ್ಟಿಲಲಿ,
ಕರುನಾಡ ಶಿಶುವಿಂಗೆ, ಮರಣ–ಜೋಗುಳ ಹಾಡಿ,
ವಂಚಿಸಿದ ನಿನಗಿಂದು ಕಾದಿಹುದು ದುರ್ಗತಿ !
ಪತನ ಪದವಿಯನಿತ್ತೆ ಬಿದನೂರು ರಾಜ್ಯಕ್ಕೆ
ಕಿತ್ತೂರ ಕೆಡೆಗಿಡಿಸಿ ಕೇಸುರಿಗೆ ಬಲಿಗೊಟ್ಟೆ
ಕಿತ್ತೂರ ಕೆಳದಿಗಳು ಮುಕ್ಕಿಹೋದವು ಮಣ್ಣು !
ನಿನ್ನ ಸೋದರನವರನು !
ಯಾರಾದರೇನು ?
ತಿಂದು ತೇಗಿದ ನಮ್ಮ ದೇಗುಲದ ದೇವತೆಯ
ಬೇಲೂರು–ಹಾಳೂರು !
ದೋರಸಮುದ್ರವದಾಯ್ತು, ಹಳೆಯಬೀಡು !
ಪಾಳು ಗೂಡು !!
ನಿನ್ನ ಸಿರ ಸಿಡಿದೊಡೆದು ಹುಡಿಯಾಗಿ ಸುರಿಯುವುದು
ನಿಮ್ಮೆಲ್ಲರೈಸಿರಿಯು ಮಸಣಿಸುದು ಮುರಿದು
ಮೂಡುವನು ಮೂಡುವನು ಮತ್ತೊಬ್ಬ ಕನ್ನಡಮ್ಮನ ಕಂದ.
ಮೆಟ್ಟಿ ಮುರಿವನು ನಿಮ್ಮ ವಂಚಕರ ವೃಂದ.
ನಿನ್ನೆಲುಬಿನೊಟ್ಟಿಲಿಗೆ
ಬಿಸಿ ರಕ್ತವನೆ ಬಸಿದು
ಕಟ್ಟುವನು ಕನ್ನಡ ನವ್ಯ ಸಾಮ್ರಾಜ್ಯ !
ಸಿರಿಗುಡಿಯ ಸಿಂಗರಿಸಿ ತಾನಾಗಿ
ಮೂಡುವನು ರ‍್ತರವಿ ತೇಜ !!

೧೦

ಏಳಿ ಕನ್ನಡನಾಡ ತರುಣ ತೇಜಸ್ವಿಗಳೇ,
ನಿಮ್ಮತನ ಕುಸಿಯುತಿದೆ
ನಿಮ್ಮ ನೆಲ ಬಿರಿಯುತಿದೆ
ನಿಮ್ಮೂರಿನಾಗಸದಿ ಮೂಡಲಿದೆ
ರಣಹೇತು ಧೂಮಕೇತು !
ನೀವು ಕಟ್ಟಿದ ನಾಡು ಆಗುವುದು ನಿಮಗಂದು ನರಕ ಬೀಡು !

ಏಳಿ,
ಸಿದ್ಧರಾಗಿರಿ ಬಂತು ರಾತ್ರಿ ರಣಕೇಳಿ !
ಪರರ ದಬ್ಬಾಳಿಕೆಗೆ
ದೈತ್ಯತೆಯ ನರ್ತನಕೆ
ನಿಮ್ಮೆದೆಯು ನೆಗ್ಗೀತು !
ನಿಮ್ಮ ಮತಿ ಸತ್ತೀತು !
ನೀವಳಿದು, ನೀವುಳಿದು, ನಾಡ ಬದುಕಾಗಿಸಿರಿ !
ಇದೊ ಇಂದೆ ಊದಿಬಿಡಿ ಕನ್ನಡ ಕಹಳೆ
'ತುತ್ತುತೂ ತೂ' ಎಂದು
"ಜಯತು ಕನ್ನಡನಾಡು, ಜಯತು ಕನ್ನಡ ನಾಡು
ಜಯ ಜಯತು , ಜಯ ಜಯತು ಜಯತು ಮಂಗಲ ಬೀಡು !
ಎಂದಿಂದೆ ಊದಿಬಿಡಿ !

೧೧

ನಿಮ್ಮೆದೆಯ ಮಂದಿರದ
ತಳಪಾಯವನು ಕೊರೆಯೆ ಹಳೆಯ ಹೆಗ್ಗಳಗಳವೆ !
ಹೆಸರ ಕೆಸರಲಿ ಕೆಲವು ಜಿಗಣೆಗಳು ಸುಳಿಯಲಿವೆ !
ಒದೆದಟ್ಟಿ, ತುಳಿದಟ್ಟಿ, ಉಗುಳಿಬಿಡಿ ಥೂ ! ಥೂ !!
ನುಡಿಯ ಸಿಡಿಮದ್ದೊಡೆಯೆ ಆಗುವುದು ಮೈ ಚೂರು !!!
ಅರಮನೆಯ ಅರಸರನು ಅರಸಿ ಅಂತಃಪುರವ
ನುಂಗಿ ನೊಣೆವುದು ಮಹಿಷ
ಕಡೆಗದಕೆ ಆಗುವುದು ಕೆರೆಜೊಂಡೆ ಬಿಸಜ !

೧೨

ಎಚ್ಚರೆಚ್ಚರು ಕವಿಯೆ !
ಕನ್ನಡದ ಕಡುಗಲಿಯೆ !!
ಉದ್ಯಾವನದಲ್ಲಿ ನಗೆ ಮುಗುಳ ಕೇಳಿಯಲಿ,
ಸುಗ್ಗಿ ಮೊಗ್ಗೆಯ ನಲಿಸಿ ತಳಿರ ಕಚಗುಳಿಯಿಟ್ಟು,
ಚಿಟ್ಟೆ ಚೆಲುವಿನ ಚಿಕ್ಕ ಪಕ್ಕಗಳ ಮೇಲೇರಿ,
ದುಂಬಿ ಬಂಬಲಿನಲ್ಲಿ ಗುಂಗುಂ ಗುಂಗಾನ ಹಾಡಿ,
ಎಳೆವಿಸಿಲ ಬಳಿಬಳಿದು ಮೆರಗನಿತ್ತುದು ಸಾಕು.
ಹರಿವ ನೀರಿನ ಕೂಡೆ ಚದುರಂಗ ಸಾಕು !
ಹಾಡು ಕನ್ನಡ ಪ್ರೀತ,
ಹಾಡು ಬಾಳಿನ ಗೀತ
ತುಂಬಿಸುತೆ ನವನೂತ್ನ ಚೇತನವನೆದೆಯಲ್ಲಿ
ಕನ್ನಡಮ್ಮನ ಕನಸು ನನಸಾಗುವಲ್ಲಿ !

೧೩

ಏಳಿ,
ನನ್ನೆದೆಯರುಣ ತರುಣ ತೇಜಸ್ವಿಗಳೆ
ಏಳಿ, ಎದ್ದೇಳಿ,
ಮತ್ತೊಮ್ಮೆ ಊದಿಬಿಡಿ ಕನ್ನಡದ ಕಹಳೆ
ಜಯತು ಕನ್ನಡ ನಾಡು, ಜಯತು ಕನ್ನಡನಾಡು
ಜಯಜಯತು, ಜಯಜಯತು

ಜಯತು ಕನ್ನಡ ನಾಡು !
ಜಯತು ಮಂಗಲ ಬೀಡು !
ಜೈ ಕನ್ನಡಾಂಬೆ ! ಜೈ ಕನ್ನಡಾಂಬೆ ! ! ಜೈ ಕನ್ನಡಾಂಬೆ !!

೧೪

ಹಾಡು ಅಲೆ ಅಲೆಯಾಗಿ ತೇಲುತ್ತಿತ್ತು !
ಮೇಲುದುರ್ಗದ ಕಣಿವೆ ಕೊರಗುತ್ತಿತ್ತು !
ಒಡೆದ ಕಿಂದರಿಯೊಂದೆ ನರಳುತಿತ್ತು !

## ಮಕಾಸಿನ್

ಮಕಾಸಿನ್ !
(ಅಖಿಸ್ಟೊಡಾನ್ ಪಿಸ್ಸಿವೊರಸ್)
ಕ್ಷಮಿಸಿ,
ಮಕಾಸಿನ್, ಒಂದು ಜಾತಿಯ ಹಾವು
ನೀರು ಹಾವು ;
ಆದರೆ .....
'ವಿಷಮೊಳ್ಳಗುಳ್ಳೊಡಮದೊಳ್ಳೆಯೆ
ಕಾಳಿಯನಾಗನಾಗದು'
ಎಂಬ ನುಡಿ ಮಾತ್ರ ಇದಕೆ ಸಲ್ಲ,
ಏಕೆ ? ? ? ?
ಇದರ ಮೈಯಿ ಮನ ಬೇವು, ಬಾಯ್ದೆರೆಯು ಬೆಲ್ಲ !
ತತ್ತಿ ಹಾಕುವುದಲ್ಲ, ತುತ್ತ ತಿನ್ನುವುದಲ್ಲ ;
ಮರಿ ಹಾಕಿ ಪೊರೆಯುವುದು
ಎದೆಯ ಹಾಲಾಹಲವ ಧಾರೆಯೆರೆದು,
ಸುರಾಸುರ ಮಥನ ಸಂಜಾತ ವಿಷಕಿಂತ ಮಿಗಿಲು
ಇದರ ಉಸಿರು !
'ದೃಷ್ಟಿವಿಷಾಹಿ' ಎಂದರೂ ತಪ್ಪಲ್ಲ
ಬೆಣ್ಣೆ ಚಾಣಾಕ್ಯನಿಂ ಪರ್ವತೇಶ್ವರ
ಕೊಂಡ ಕೆಂಡದಾ ಚೆಂಡು ! ..... ಹೌದು !!
ಕದ್ದೊಯ್ದ ಮಾಲಿಲ್ಲ
ಕೊಯ್ದ ಮೋಟೂ ಇಲ್ಲ ! ..... ..... ಹೌದು !!
ಕದ್ದೊಯ್ದ ಮಾಲಿಲ್ಲ
ಕೊಯ್ದ ಮೋಟೂ ಇಲ್ಲ ! ..... ಇವಳು
Macavity : The Myster, Cat……......!!
ಕಪ್ಪು ಫಲಕಗಳಷ್ಟೆ ಇವಳ ತಲೆ Hat,
ಬಹುದೊಡ್ಡ ಕ್ರಮಬದ್ಧ ಕಪ್ಪಾದ ಫಲಕಗಳು !
ಆದರೇನಂತೆ ?
ಇವಳು ಶ್ವೇತಮುಖಿ (ಕಾಟನ್‌ಮೌತ್)
ಯಾರಿಗೋ ಶೂರ್ಪನಖಿ (ಡರೋಮತ್)
ಇವಳ ಗೆಳೆತನವೆಲ್ಲ ನೇಟ್ರಿಕ್ಸ್‌ನೊಡನೆ
(ನೇಟ್ರಿಕ್ಸ್ ವಿಷರಹಿತ ಸರೀಸೃಪ)
ಅದಕೇನೋ ಶಾಪ
ಪಾಪ ..... ಅಯ್ಯೋ ಪಾಪ..... .....! ಅಗಮಮ್ಮಾನ್ !!!
ಕೆಸ್ಸಾಂಡ್ರಳೊಬ್ಬಳು ಪೇಳೆ ಶಕ್ತೆ ತಾನ್ !
ಮೃತ್ಯು ಮಾಧುರ್ಯದಾ ಬಹು ದಿನದ ಬಾಂಧವ್ಯ

ಕನ್ಫೂಷಿಯಸ್ ಬೋಧೆ. 'ತತ್ತ್ವಮಸಿ' ದಿವ್ಯ
ಎಲ್ಲ ಚೌ ಚೌ ಚೆಂದ, ವಿಪರೀದಂದ
ಇದು ನವೋನವ್ಯ !

ಮಕಾಸಿನ್,
ಉದ್ದ ನಾಲ್ಕಡಿ, ಗಿಡ್ಡಿ
ಇರುವೆಡೆಯೊ ಮಡ್ಡಿ;
ತನ್ನ ಒಡನಾಡಿಗಳೆ – ಕಪ್ಪೆ ಮೀನ್ ನಳ್ಳಿಗಳೆ –
ಇವಳ ಆಹಾರ !
ಇಂದಿಗೂ ತಪ್ಪದಿದೆ ಅವರ ಹಾಹಾಕಾರ !!'

ಮಕಾಸಿನ್,
'ಸೀರುಡುಕೆ' ಹೆಣ್ಣು !
ಕಾಪರ್‌ಹೆಡ್ ಅಥವಾ ತಾಮ್ರಚೂಡ ಸರ್ಪ
ಮೇಣ್ ರಕ್ತಗೆಂಪಿನ ಫಣಿಗೆ
ಮರುಳಾಗಿ ಹೊರಳುತಿರುವಳು ಎಂದೂ
ತಿಂದು ಕೆಮ್ಮಣ್ಣು !

ಉತ್ತರ ಅಮೆರಿಕೆಯ ದಕ್ಷಿಣದ ವಲಯ
ಮಕಾಸಿನಿನ ತೌರಾಲಯ
ಅಂದವನದಾವನೋ ಮಂಕು ವಿಜ್ಞಾನಿ
ಅವಳು ಎಲ್ಲೆಂದರಲ್ಲಿ ಮೆರೆವಿಚ್ಛೆರಾಣಿ !

ನೋಡಿ,
ಎಂದೋ ಒಮ್ಮೆ ಭಾರತಕು ಆಗಮಿಸಿ
ವ್ಯಾಸದೋಜೆಯಲೆಲ್ಲ ಪರಿಪರಿದು ಓಸರಿಸಿ
ಶಕುನಿಹುತ್ತವ ಸೇರಿ ಉಸಿರಿಟ್ಟಳೀ ಉರಗನರಸಿ !

ಏಳು ಮೆಟ್ಟಿನ ಪಟ್ಟೆ ಪಟ್ಟೆ ಬಣ್ಣದ ಬಾಲ
ಸಿಳ್ಳುಗರು ಕರಪಂಜ ಕುಡಿಮೀಸೆ ನೀಲ

ಕಾಳಮೇಘದ ರೂಪಿ ಮಹಿಷೂರ ಹುಲಿ ಕೂಡ
ಇವಳ ಬಲೆಯಲಿ ಸಿಕ್ಕಿ ಬಲಿಯಾಯ್ತು ನೋಡ !

ನಡೆಯ ಕಲಿಸಲು ಹೋಗಿ ತಾನೆಡವಿ ಬಿದ್ದಂತೆ
ಜಗವ ತಿದ್ದಲು ಪರಿದು ಮನಘಾಸಿಗೊಂಡು
ಗೋಲ್ಗೊಥದಿ ವ್ಯಥೆಗೊಂಡು ಅತ್ತನಾ ನಜರಾಯ
ನೋಡಿ ನಕ್ಕಳು ಮತ್ತೆ ಕೇಗಿದಳು ಕಿಡಿಗೊಂಡು !

ಓ ಮಕಾಸಿನ್,
ನೇಹಿಗನ ರೂಪಿನಲಿ
ಸನಿಹಕೈದುವ ಮಕಾಸಿನ್,
ಖ್ವಾಜಾ ಮುಸಲ್ಮಾನ
ಪಡೆದ ಪಾಕಿಸ್ತಾನ

ಕೋಲುತಾತನ ಎದೆಗೆ ಗುಂಡಿಟ್ಟು ಸಾಯಿಸಿದೆ !
ಡೆನ್ಮಾರ್ಕದರ್ಕನಿಗೆ ನಿಜರಾಹು ನೀನಾದೆ !

ಏನು ನಿನ್ನಯ ಲೀಲೆ ! ನವ ಲೀಲೆ ನವ ಲಾಸ್ಯ
ನಿನ್ನ ಕಂಡಾಗೆಲ್ಲ ಮತಿಯೆಲ್ಲ ನಶ್ಯ !

## ಔಪಾಸನೆ

ಸುಮ ಸುಂದರ ತರು ಲತೆಗಳ ಬೃಂದವನ ಲೀಲೆ
ಸುಪ್ರಬೋಧಚಂದ್ರೋದಯ ರಾಗಾರುಣ ಜಾಲೆ
ಗಿರಿ ಸಿರಿ ಬನ ಸಂಚಾರಿಣಿ ತುಂಗಾಜಲ ನೀಲೆ
ದಲ ದಲ ದಲ ಮೆದ ಹಾಸಲಿ ಗಾನ ಸುಪ್ತ ಲೋಲೆ

ಮಲೆನಾಡಿನ ಕೋಗಿಲೆಯೆ
ಬಯಲು ನಾಡ ಮಲ್ಲಿಗೆಯೆ
ವಂಗ ವಿಷಯ ಭೃಂಗವೇ
ಧವಳ ಗಿರಿಯ ಶೃಂಗವೇ
ಕಾವೇರೀ ಗೋದಾವರಿ ಗಂಗೆ ಯಮುನೆ ಸಿಂಧುವೆ ॥೧॥

ಶತ ಶತ ಶತಮಾನಗಳ ಗುಪ್ತಗಾಮಿ ಚೇತನವೆ
ಋತು ಋತುವಿಗು ಹೂವಾಗಿ ಫಲವಾಗುವ ತನಿರಸವೆ
ಚಿಲಿಮಿಲಿಯೆಂದಾಮೋದದಿ ನಲಿದುಲಿವಾ ಕೂಜನವೆ
ಮಧುತರ ಮಂದಾನಿಲ ಸೌಗಂಧದ ಸಿರಿ ಪರಿಮಳವೆ !

ನಸು ಹಸುರಿನ ಹಿಮಮಣಿಯೆ
ಎಳವಿಸಿಲಿನ ಮೇಲುದವೆ
ಬಿರಿದ ಮುಗುಳ ಬಿಂಕವೇ
ತೆರೆದ ಸೋಗೆ ನರ್ತನವೆ
ನಿರ್ಭರ ನಿರ್ಝರಣಿಯ ಜಲಪಾತದ ಗಿರಿಗರ್ಜನೆಯೆ ॥೨॥

ನಡು ನಿಶೆಯೊಳು ನರ್ತಿಸುವಾ ಜ್ವಲಿಸುವ ನವ ತಾರಗೆಯೆ
ಕಾರ್ಮೋಡವೆ ಕಣ್ ತೆರೆಯಿತೊ ಸೆಳೆಮಿಂಚಿನ ಸಂಚಳವೆ
ತಿರೆ ಕಣ್ಣನೆ ತಣಿಯುತಲಿರೆ ತಂಗದಿರನ ಚುಂಬಿನಿಯೆ
ಮುಗಿಲು ಮಲೆ ಕಾನನ ಅಲೆ ಸಾಗರೋಲ್ಲಾಸಿಯೆ !

ಮನದ ಬಯಕೆ ಧೇನುವೆ
ಮಿಡಿದ ವೀಣಾ ಕ್ವಣಿತವೆ
ಸ್ವರ್ಣ ಕುಂಚ ವರ್ಣವೆ
ಶಿಲ್ಪ ಕಲ್ಪ ತಲ್ಲವೆ
ಗಗನ ಗಂಗೆ ನವ ತರಂಗೆ ಶಿವಶೃಂಗತ್ರಾಸಿಯೆ ॥೩॥

ಅಣು ಅಣುವಲಿ ಜಲ ಕಣದಲಿ ಘನತರ ಸ್ವರೂಪಿಯೆ
ದಿಗ್ದಿಗಂತದಾಳದಲ್ಲಿ ತುಂಬಿ ಮೊರೆವ ತುಂಬಿಯೆ
ಕವಿ ಕಲಾವಿದಂತರಂಗದಾನಂದದ ಸ್ಫೂರ್ತಿಯೆ
ರವಿಗೆ ತೇಜ, ಶಶಿಗೆ ಕಾಂತಿ, ವಾಯುವೇಗಧಾತೆಯೆ! ॥೪॥

ಓಂ ನಮೋ ಅನ್ನಪೂರ್ಣೇ ಸ್ವಸಂಪೂರ್ಣೇ ಕಾರಿಣೀ
ಓಂ ನಮೋ ರಸೋಲ್ಲಾಸ ರಾಗಪೂರ್ಣ ರಾಗಿಣೀ
ಓಂ ನಮೋ, ಶಾಂತಿ ತುಷ್ಟಿ ದಯಾರೂಪ ಧಾರಿಣಿ

ಓಂ, ನಮೋ ಶಾಂತಿ,
ನಮೋ ಶಾಂತಿ,
ನಮೋ ಕ್ಷಾಂತ ರೂಪಿಣೀ ॥೫॥

## ಭುವಿ ಕಂಡ 'ಬಾಪು' !

ನೇಸರಳಿದುದು ಅತ್ತ ಮೂಗಿಲೂರ ಮಸಣದಲ್ಲಿ
ಉರಿಯನಾಲಗೆ ಹೊರಳಿ ಮರಳಿಯಾವರಿಸಿತ್ತು
ಶತಕೋಟಿಕರನೊಡಲ ಚಿತೆಯ ಕಿಚ್ಚೆಳೆದಿತ್ತು
ಕಡಲದೇಕೋ ಬೆಚ್ಚಿ ಮಲಗಿತ್ತು ಮೌನದಲಿ !

ನಿದ್ರೆ ಮುದ್ರಿತ ಭೂಮಿ ಕಾಲ್ದೆಸೆಯಲೀಕ್ಷಿಸಿತು
ಎದೆಯೊಡೆದು ಕಣ್ಮುಚ್ಚಿ ಕೆನ್ನೀರ ಕಡಲಿನಲಿ
ಕೆಡದ ವಿಶ್ವಾತ್ಮನನು, ಬಿರ್ಲಾನ ಭವನದಲಿ !
ಆಕಳಿಸಿ, ಚಡಬಡಿಸಿ, ಬೆಳಕನರಸಿತು ; ಸೋತು

ಮತ್ತೆ ಒರಲಿತು ಇಂತು ಓ ಬಾಪು ! ಓ ತಂದೆ !
ಮಾನವೀಯತೆ ಕಲಿಸಿ ಸತ್ಯತೆಯ ನಿಲ್ಲಿಸಿದೆ
ಕೈದುವಲ್ಲದ ಕದನಕಾದಿಪುರುಷನೆ ಆದೆ
ಅದು ಆದೆ ಇದು ಆದೆ ಏನೆಲ್ಲವಾದೆ !

ನಾ ಕರೆವ ಮುನ್ನವೆ ನೀ ಕಾಣೆಯಾದೆ !
ನಾನರಿವ ಮುನ್ನವೇ ನೀನಮರನಾದೆ !!

## ಕವಿ ಪ್ರತಿಭೆಗೆ

ಅಹಹ ! ಅರುಣೋದಯದ ಸ್ವರ್ಣವರ್ಣಾರ್ಣವದಿ
ಮಿಂದೆದ್ದು ಮಡಿಯಟ್ಟು ಮುಡಿ ಚಾಚಿ ಮುಂಬರಿವ
ಬಾನ್ ಬಯಲು ಬನ ಕಡಲು ಬೆಟ್ಟಗಳ ಚುಂಬಿಸುವ
ಸುಪ್ತ ಸುಮಕೋಟಿಗಳನೆಚ್ಚರಿಸಿ ಬೆಚ್ಚರದಿ
ಬೆಚ್ಚಿಸುವ ಮಧುಪಗಳ ಓಂಕಾರ ಝೇಂಕಾರ
ಕೋಗಿಲೆಯ ಕೂಜನದ ಎಳೆದಳಿರಲಂಕಾರ
ನಳಿನಳಿಸೆ ನಲಿನಲಿವ ಹಕ್ಕಿಯುಲಿ ಬಾಜನಾ
ಸುಜ್ಞಾನ ವಿಜ್ಞಾನ ಎಲ್ಲೆಡೆಯು ಗುಂಗಾನ
ಆಡದಾನಂದದಲಿ ಅಂತರಂಗವ ತೀವಿ
ಕೆದರು ಸೋಗೆಯ ಕೂಡೆ ಜಾಗರಾಡುವ ದೇವಿ !
ತುಂಬು ಜೌವನೆಯಂತೆ ತುಂಬಿ ಬಹ ತೊರೆಯಂತೆ
ತೇಂಕಾಡಿ ಚೆನ್ನಗಿನ ತೆರೆ ನಿರಿಯ ಚಿಮ್ಮಿಸುತೆ
ಪಡುವಣದಿ ನಡನಡುಗಿ ನೊರೆನವಿರ ಮುದಿಗೂನಿ
ನೀನಾಗಿ ಮತ್ತೆ ಬಹೆ 'ನವನವೋನ್ಮೇಷಿನೀ!'

## ಇದೋ ಬಂತು ಯುಗಾದಿ

ಇದೋ ಬಂತು ಯುಗಾದಿ !

ಯಾರಿಗಾವುದೊ ಗಾದಿ ಬೇವು–ಬೆಲ್ಲ !!

ಸತ್ತ ದಿನಗಳ ಕಡೆಗೆ ಮತ್ತೆ ನೋಡದಿರೆಂದು
ಒತ್ತೊತ್ತಿ ಸಾರಿ ತೋರಿ ಹೊಸದೊಂದು ಹಾದಿ !
ಇದೋ ಬಂತು ಯುಗಾದಿ !
ತಾನಾಗಿ ತತ್ತ್ವಬೋಧಿ !!

'ಅಡಿಯ ಮುಂದಿದೆ ಸ್ವರ್ಗ, ಅಡಿಯ ಹಿಂದಿಡೆ ನರಕ '
ಇದನರಿತು ಮುಂದೆ ನಡೆ, ಅಡಿ ಕೀಳು ಕಿತ್ತಡಿಯುವ ನೀನಾಗು !
ಬಿತ್ತರದ ಎತ್ತರದ ಶೈಲ ಶಿಖರದ ಮೇಲೆ ಹತ್ತಿ ನಿಲ್ಲು !!

ಮುಂದೆ ನಡೆ, ನಡೆ ಮುಂದೆ, ನೀ ನುಗ್ಗು ಮುಂದೆ
ನಾ ಬರುವೆ ಹಿಂದೆ !
ತಿರುಗಿ ನೀ ನೋಡದಿರು,
ನನಗಾಗಿ ಕಾಯದಿರು.
ನಡೆ ಮುಂದೆ ಮುಂದೆ,
ನಾ ಬರುವೆ ಹಿಂದೆ !

ಇದೋ ಬಂತು ಯುಗಾದಿ !
ತಾನಾಗಿ ತತ್ತ್ವಬೋಧಿ !!
ಟ್ರಾಯ್ ನಗರದಂಚನು ಮೆಟ್ಟಿ ವೀರ ಸವಿದನು ಬೆಲ್ಲ.
ಲಯಡೇಮಿಯಳ ಬಾಯ್ಗಿತ್ತು ಬೇವು !
ಥೇ ! ಇದೆಂಥ ಸಾವು ?

ಇಟ್ಟ ಹೆಜ್ಜೆಯ ಕಿತ್ತು ಹಿಂದೆಗೆದು
ಅದ್ದಿದನೋ ಕೊಳುಗಳದ ಕೆನ್ನೆತ್ತರಾಳದಲಿ
'ಪಾತಾಳ ಬಿಲಕ್ಕೆ ಬಾಗಿಲ್,
ಘೋರಾಂಧಕಾರಕ್ಕೆ ಮಾಡಿದ ಕೂಪಂ !'
ಅಯ್ಯೋ ಪಾಪ !

ತಿಂದಿದ್ದ ಬೆಲ್ಲ ಬೇವಾಗಿ ವಾಂತಿಯಾಯಿತು
ಕಡೆಗೆ ಕುರುಭೂಮಿಯಲ್ಲಿ !
ಯಾರಿಗಾವುದೊ ಗಾದಿ !
ಬೇವು–ಬೆಲ್ಲ !!

ಇದೋ ಬಂತು ಯುಗಾದಿ !
ಮಣಿಪುರದ ಕಣಿವೆ ಕಂದರಗಳಲಿ,
ಕೋಟೆ ಕೊತ್ತಲ ಸುತ್ತ ವೇಢೆಯದರಣ್ಯದಲಿ,
ರಾಜನಂದಿನಿಯ ಮಂದಿರೋದ್ಯಾನದಲಿ.

'ಬೆಳಗಾದುದಾ ದಿನಂ, ಪುಲಕಿತ ಕುತೂಹಲದ
ಶುಭದಿನಂ, ಇನಿಯನೈತರುವ ಅವದಿಯ ದಿನಂ.
ಷಣ್ಮಾಸದ ನಿರೀಕ್ಷಣಂ ಫಲಿಸುವಾ ದಿನಂ.
ಚಿತ್ರಾಂಗದೆಯ ಜೀವನೋದ್ವಿಗ್ನ ಜಿಹ್ವೆಯಲಿ
ಬೇವು ಬೆಲ್ಲದ ದಿನಂ; ಬೆಳಗಾದುದಾ ದಿನಂ !'

ಅಲ್ಲಲ್ಲು,

ಅಂತಲ್ತು ಇವಳ ಬಾಳ ಯುಗಾದಿ !
ಶತಯೋಜನವ ದಾಂಟಿ ಬಂದಿತ್ತು; ಅದು ಹೃದಯ ವೇದಿ !
ಅಶೋಕವನದಾಶೋಕ ಸ್ರೋತದಲಿ ಧುಮ್ಮಿಕ್ಕಿ,
ಕಂಗೊಳಿಸಿತಂಜುಳಿಯ ಮಧ್ಯದಲಿ,
'ಘನ ಮುದ್ರಿಕಾ' ರೂಪದಲಿ !
ಬೆರಸಿರ್ದನಂಜನಾಸುತನದರಲ್ಲಿ – ಬೇವು ! – ಬೆಲ್ಲ !!

"ಅಮೃತಂ ವಿಷಸಂಪೃಕ್ತಾಂ
ತ್ವಯಾ ವಾನರ ಭಾಷಿತಮ್
ಯಚ್ಚ ನಾನ್ಯಮನಾ ರಾಮೋ
ಯತ್ರ ಶೋಕ ಪರಾಯಣಃ "

ಸೀತೆ ಸೀರೆಯ ಸೆರಗಿನಿಂದೊಗೆದ ಚೂಡಾಮಣಿಯು
ಮರಳಿ ಕೊಟ್ಟಿತ್ತು ರಾಮನಿಗೆ ಬೇವು – ಬೆಲ್ಲ !!

ಇದೋ ಬಂದು ಯುಗಾದಿ !
ಯಾರಿಗಾವುದೋ ಗಾದಿ ಬೇವು–ಬೆಲ್ಲ !!

ಸದ್ದುಗದ್ದಲದಲ್ಲಿ ಹೊರಬಿದ್ದ
ಗಡ್ಡದಣುಗಿಯರ, ಮಾಟಗಾರ್ತಿಯರ

`Fair is Foul and Foul is Fair
However through the Fog and Filthy Air'

ನುಡಿದ ನುಡಿ ದಿಕ್ಕು ದಿಕ್ಕಿನ ಗರ್ಬಗಹ್ವರಗಳಲ್ಲಿ
ಮೊಳಗಿ ಮಾರ್ನುಡಿಸಿತ್ತು ಇಂತು –

`So Foul and Fair a day I have not seen '
ನಿರ್ದಯನು ಸದೆದು ಸಾಯಿಸಿದ ಸಾಮಂತ–ಅಲ್ಲಲ್ಲ–ಸಾಮ್ರಾಟ,
ಬೆಲ್ಲವನೆ ಮೆದ್ದನೋ,
ಬೇವನ್ನೆ ಕದ್ದನೋ
ನಾ ಬೇರೆ ಕಾಣೆ !
ಕಂಡು ನುಡಿಸಿರಿ ನಿಮ್ಮ ಕನ್ನಡಿಯ ಮುಂದೆ !!

ಕಿಳ್ತನದ ಕಿಬ್ಬಿನಲಿ ನಿನ್ನ ಜಾಗರ ಬೇಡ,
ಹುಳಿಮಾವಿನೋಲಗದಿ ನಿನ್ನ ಕೂಜನ ಬೇಡ,
ಎದೆಯ ಮಡು ತುಂಬಿರಲಿ,
ತಲೆಯ ಜಟೆ ಬಿಚ್ಚಿರಲಿ,
ಕಾಲ ಕಡಗದೆ ಝುಣರು ಝುಣರೆಂಬ ನಾದದಲಿ
ಢಂ ಢಮರು ಢಂ ಢಮರು ! ಢಮರುಗಧ್ವಾನದಲಿ
ಧೀಂಕಿಟಿತ ! ಧೀಂಕಿಟಿತ ! ಧಿತ್ತೋಂಗ ಧಿಥೈಯ್ಯ
ಕುಣಿದು ಬಿಡು !
ಅಂಡಲೆವ ಕ್ರಿಮಿಕೀಟ ಕಿಲ್ಬಿಷಗಳಳಿಯಲಿ !
ನಡ ನಡನೆ ನಡುಗುತ್ತೆ ಒಡೆಯಲೀ ಬ್ರಹ್ಮಾಂಡ !
ನಾಟ್ಯ ರುದ್ರನು ನೀನು !
ನಟರಾಜ ನೀನು !
ಅಪಸ್ಮಾರತೆಯ ಮೆಟ್ಟಿ ತುಳಿ, ಪುಡಿಗೈದು ಹುಡಿಯಾಗಲಿ,
ಹಾಲು ಹಾಲಾಹಲವಧರಿಸಿ ಶಿವರುದ್ರ ನೀನಾಗು

ಓಂಕಾರ ಮಯನಾಗು,
ಝೇಂಕಾರದೊಲವಾಗು,
ಇಂತು ಸಾರುತೆ ಬಂತು !

ಇದೊ ಬಂತು ಯುಗಾದಿ !
ತಾನೊಂದು ತತ್ತ್ವ ಬೋಧಿ !!

ನಿನ್ನದೀ ನಲವಾಡು ನಮ್ಮ ಪಾಡು
(ಖಲೀಲ ಗಿಬ್ರಾನರ ಕೃತಿಯನ್ನು ಆಧರಿಸಿ)

ಬುವಿ ಬಾನ ತುಂಬಿರುವ ಓ ಸರ್ವವ್ಯಾಪಿಯೆ
ನಿನ್ನ ನಾಮಾಮೃತವು ಪಾವನದ ಸರಸಿ
ವಿಶ್ವದಣು ಘನದಂತೆ ಸಿದ್ಧಿ ಸೊಗವೈತರಲಿ
ನಮ್ಮ ನಡೆ ನುಡಿಯಲ್ಲಿ ಮಡಿಯ ಕಲಿಸಿ

ದಿನದ ದಾಹವ ತವಿಸೆ ದಯೆದೋರು ಓ ಧೇನು
ನಿನ್ನೆದೆಯ ಸೊದೆಯನ್ನು ಅನವರತವಾಗಿ !
ನಿನ್ನ ಕರುಣಾಗಂಗೆ ನಮ್ಮ ಮನ ಮಲಿನತೆಯ
ತೊಳೆದು ಶುದ್ಧವಗೈಯೆ ಬರಲಿ ಸಾಗಿ

ಕಗ್ಗತ್ತಲೊಡಲಿನಲಿ ಪರಿವ ಹರಿಗೋಲಿಂಗೆ
ಚುಕ್ಕಾಣಿ ನೀನಾಗಿ ದಾರಿ ತೋರು ;
ಸರ್ವಶಕ್ತಿಯು ನೀನೆ ಯತ್ನ ಸಿದ್ಧಿಯು ನೀನೆ
ವಿಶ್ವಗಾಯಕ ಹಾಡಿ ಅರಿವ ಬೀರು

ನಮ್ಮೆದೆಯ ಸುಮವರಳಿ ಕ್ಷಮೆಯ ಸೌರಭ ಸೂಸಿ
ನಿನ್ನಡಿಗೆ ಮುಡಿಸಲಿಕೆ ತೆರವು ನೀಡು ;
ನಿನ್ನದೇ ಈ ರಾಜ್ಯ ನಿನ್ನದೇ ಈ ಭೋಜ್ಯ,
ನಿನ್ನದೀ ನಲವಾಡು ನಮ್ಮ ಪಾಡು !

**ಕೂಗು ಕೋಗಿಲೆ**

ಕೂಗು ಕೋಗಿಲೆ ಕುಜದ ಕೊನೆಯು ಕೊನರುವ ತನಕ

ಕ್ಕವೋ ! 'ಕ್ಕವೋ ! ಚಿಕ್ಕವೋ ! ಎಂದೊರಲಿ
ಎಚ್ಚರಿಸು ಮಲಗಿಹಳು ನೆಲದಾಯಿ ಸುಪ್ತಿಯಲಿ

ಯುಗವೊಂದರಾಲಸ್ಯ ನೀಗಿ ರಚಿಸಲಿ ನಾಕ !
ಒಕ್ಕೊರಲಿನೊರತೆಯಲಿ ಮಿಂದೇಳಲಾ ನಾರಿ

ಮತ್ತಿನಲಿ ತಲೆದೂಗಿ ಕಣ್ದೆರೆದು ಬೆಳಗಿನಲಿ
ನಗೆ ಮೊಳೆದು ಧಗೆಯಳಿದು ರಾಜಿಸಲು ತರುರಾಜಿ

ಕವಿಯೆದೆಯಡಲಗಿದ್ದ ಗುಪ್ತ ಚೇತನ ನಿಮಿರಿ

ನಿಕ್ಕುಳಿಸಿ ತರಿಯಲೌ ನವ ವಸಂತದ ನನೆಯುತ

ಚೆಂದಳಿರ ಚೆಲುವಿನಲಿ ತಂಬೆಲರು ಸುಳಿದಾಡಿ
ಅಳಿಬಳಗವೆಲ್ಲೆಲ್ಲು ಧಾಳಿಗೈಯಲಿ ಕೂಡಿ

ಬರಲಿ ಒಮ್ಮಿಂದೊಮ್ಮೆ ಮೃಣ್ಮಯಕು ಹೊಸ ಹರೆಯ !
ಏನೆಂಬೆ ? ನಾನೊಮ್ಮೆ ನಿನ್ನ ಜೊತೆ ಕೂಗಲೇ?
ಎನಿತಾದರೂ ಕವಿಯು ಮನುಜನೆಲೆ ಕೋಗಿಲೇ !

## ಗಣೇಶ ಸ್ತವ

ಬಂದ ವಿಘ್ನೇಶ್ವರನು
ಎಂದಿನಂತೆಯೇ ಬಂದ ;
ದಿನವೆರಡು ತಂಗಿದ್ದು
ತಾಯೊಡನೆ ಹೋದ,
ಬಂದ.....! – ಹೋದವ !!

ಕೆರೆಯೆರೆಯ ಮಣ್ಣು
ಅಂಗಡಿಯದುರು ಬಣ್ಣ,
ಕೂಡೆ ಮೂಡಿತದೊಂದು ಮೃಣ್ಮಯದ ಮೂರ್ತಿ !
ಜಸವಡೆದು ಮೆರೆದಿತ್ತು ಚಿನ್ಮಯದ ಕೀರ್ತಿ !!
ಅದು ಭೂತಿ ! ಇದು ತಾನ್ ವಿಭೂತಿ !!!

ಹರಿಕಥೆ !
ಎಲ್ಲದೂ ಕಟ್ಟುಕಥೆ !!
ಬೋಧನೆಯು ಸೋರುವುದು 'ಹುರುಳಿಲ್ಲವೀ ಬಾಳು'
ಬಾಯಿ ಬೋನವನುಳಿಯೆ ಸೇರುವುದು ಹುರುಳಿ ಬೀಳು !

ಹೆತ್ತವಳ ಹೆಸರಿಲ್ಲ,
ಸತ್ತವನ ಸುಳಿವಿಲ್ಲ
ಏರಿ ದಂಡೆಯ ಮಣ್ಣು ಸೇರಿತೋ ನೀರಸೆರೆ !
ಬಂದ ಭಾಗ್ಯವದೇನೋ ! ಸಂದ ಪುಣ್ಯವದೆನೋ !

ಎರಡು ದಿನದಾಟಕ್ಕೆ ಯಂತ್ರ ಸಜ್ಜಿಕೆ ಏನು !
ಮಂತ್ರ ಘೋಷಣೆ ಏನು !!
ಸ್ಪೂಟ್ನಿಕ್ ಸಾಹಸ !!!

ಅವನೋ,
ಬಹು ಮನೆಗಳನ್ನುಂಡ ದೊಡ್ಡ ಹೊಟ್ಟೆಯ ಬೆನಕ !
ಉಂಡು ದೊಡ್ಡವನಾದ,
ಕೊಟ್ಟವನು ಕಾಣದಲೆ ಸತ್ತೇ ಹೋದ !

ಮಣ್ಣಿಂಗೆ ಮತಿಯಿಲ್ಲ
ಬಣ್ಣಕ್ಕೆ ಮುಖವಿಲ್ಲ
ಅರಿಯದಾಚರಿಸಿದೊಡೆ ಏನೇನು ಇಲ್ಲ !

‘ಕೆರೆಯ ನೀರನು ಕೆರೆಗೆ ಚೆಲ್ಲಿ
ವರವ ಪಡೆದವರಂತೆ ಕಾಣಿರೊ’
‘ಹೋಗಪ್ಪಾ, ದಾಸಯ್ಯ, ಮುಂದೆ ಹೋಗು’
‘ಇಕ್ಕಲಾರದ ಕೈಯಿ ಎಂಜಲು .....!’
‘ಎಲಾ, ಗೂಟನಾಮದ ದಾಸ ! .....!
ನಾಲಗೆಯು ಹರಿದೀತು, ಎಚ್ಚರಿಕೆ, ನಡೆ ನಿಲ್ಲದೆಲ್ಲೆಲ್ಲು !
(ಪೂಜೆಯೇ ಮುಗಿದಿಲ್ಲ ಆಗಲೇ ಗುಲ್ಲು)
ದೂರದಲಿ ಕೇಳಿಸಿತು ಬೇರೊಂದು ಸೊಲ್ಲು –
‘ಕಲ್ಲು ನಾಗರ ಕಂಡರೆ ಹಾಲನೆರೆಯೆಂಬರಯ್ಯ
ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ’

ಗೂಟನಾಮದ ದಾಸ ಮನೆ ಮನೆಯನಲೆದ
ಏಕನಾದವ ಮಿಡಿದು ಹಾಡುತ್ತಲಿದ್ದ –
‘ನಗೆಯು ಬರುತಿದೆ ನನಗೆ, ನಗೆಯು ಬರುತಿದೆ.....!’

## ಬನ್ನಿ ಓ ಗೆಳತಿಯರೆ

ಬನ್ನಿ ಓ ಗೆಳತಿಯರೆ
ಆಡೋಣ ಬನ್ನಿ
ನಿತ್ಯ ಬಾಳಿನ ರಾಗ ಹಾಡೋಣ ಬನ್ನಿ ॥

ವೀಣೆಯಿಂಚರದಂತೆ
ಕಣಿಯಾಗಿ ಬನ್ನಿ
ಕಿಂಕಿಣಿಯ ಝಣ ಝಣಕೆ
ಕಣವಾಗಿ ಬನ್ನಿ
ಬೆಳಗಿನೊಲು ಬೆಳಬೆಳಗಿ ಹೊಳೆ ಹರಿದು ಬನ್ನಿ
ಚಿಲುಮೆಯೊಲು ಪುಟಿ ಪುಟಿದು ನರ್ತಿಸುವ ಬನ್ನಿ
ಬನ್ನಿ ! ಓ. .....   ॥೧॥

ದಿವ್ಯ ದೀಪಾವಳಿಗೆ ದೀಪ ಮಾಲೆಯ ಹಾಕಿ
ರಂಗದಲ್ಲಿಯ ಕಲೆಯ ನವರಂಗ ರಚಿಸಿ
ಮಾಗಿ ಯೋಗಿಯ ರುದ್ರ ತಾಂಡವವ ನಡೆಸಿ
ಶತಶೃಂಗ ಶಿಖರಲಿಲಿ ಶಿವವಾಗೆ ಬನ್ನಿ
ಬನ್ನಿ ಓ......   ॥೨॥

ಹಿಗ್ಗಿ ಹಿರಿ ಹಿರಿ ಹಿಗ್ಗಿ ಅದೊ ಬಂತು ಸುಗ್ಗಿ
ಮಾಗಿ ಮಡಿದಾ ದಿನವೆ ಮೂಡಿಸುತ ಮೊಗ್ಗಿ
ಹೊಸ ಹರೆಯವೊಸರುತಿಹ ತರುರಾಜಿ ಬಳ್ಳಿಯಲಿ
ಕುಕಿಲಿಡುವ ಹಕ್ಕಿಯುಲಿ ಕರೆಯುತಿದೆ ಬನ್ನಿ
ಬನ್ನಿ ಓ......   ॥೩॥

## ನಿವೇದನ ಗೀತೆ

**(ಪೂಜ್ಯ ಬಾಪೂಜಿಯವರ ಪ್ರಾರ್ಥನಾ ಗೀತೆಯ ಕನ್ನಡ ರೂಪ)**

ನನ್ನ ಬಾಳನಿದೋ ನೀನು ಒಪ್ಪಿಸಿಕೋ ಓ ಪ್ರಭುವೆ
ಮಡಿಯಾದ ಮುಡಿಪೆಂದು ನಿನ್ನಡಿಯೊಳು
ಬದುಕಿನೊಳು ಬೆರೆಗೊಂಡ ಗಳಿಗೆ ಗಳಿಗೆಯು ಕೂಡ
ಹೊನಲುವರಿಯಲಿ ನಿನ್ನ ದಿವ್ಯ ಧ್ಯಾನದೊಳು

ಕರಗಳನು ಅರ್ಪಿಸುವೆ ಕರುಣೆಯಿಂ ಸ್ವೀಕರಿಸು
ನಿನ್ನೊಲವಿನೆಲುವಿನಲಿ ಬೆರೆದು ಬರಲೆಂದು
ಪಾದಗಳು ಬಾಗಿಣವು ಪಾದ ಪಂಕೇಜದಲಿ
ಅನುವುಗೊಡು ಅನುಪಮನೆ ಸಾಗಿ ಬರಲೆಂದು

ಉಸಿರಿನಲಿ ಪಸರಿಸುವ ರಸನೆಯೀ ರಸವಾಣಿ
ನಿನ್ನ ನಾಮಾಮೃತವ ಸವಿಯಲಿದೆ ದೊರೆಯೆ
ಅದುರುತಿಹ ಅಧರಗಳು ಅನವರತ ಪಲುಕಿನಲಿ
ನಿನ್ನ ಸಂದೇಶವನೆ ಸಾರುತಿರಲೆನುವೆ

ಹೊನ್ನು ಒಡವೆಗಳೆಲ್ಲ ನಿನ್ನ ಮಡಿಲೊಳಗಿರಲಿ
ಬಿಡಬೇಡ ಏನೊಂದು ನನ್ನದೆಂಬುದನು
ಎನ್ನೆದೆಯ ಭಾವಗಳ ಬಗೆ ಬಗೆಯ ಬುದ್ಧಿಗಳ
ಆಯ್ದಿರಿಸಿಕೋ ತಂದೆ ಶಕ್ತಿಗಳನು

ಸಿರಿ ಮೊಗದ ಸೊಬಗಿನಲಿ ಕಲೆಯಲೀ ಚಿತ್ರಣವು
ರುಂದ್ರ ಮಾನಸದಲ್ಲಿ ತೇಲುತಿರಲಿ !
ಎನ್ನೆದೆಯ ಮಂದಿರದ ಸಿಂಗರದ ವೇದಿಕೆಯು
ನಿನ್ನ ಸಿಂಹಾಸನವೆ ಆಗಿ ನಿಲಲಿ !

ಅಮಲದೊಲವನೆ ತೆಗೆದು ಮೊಗೆ ಮೊಗೆದು ಸುರಿಯುವೆನು
ಪ್ರೇಮ ಭಂಡಾರವನೆ ಸೂರೆಗೊಡುತೆ
ನಿನಗಾಗಿ ನಾನುಲಿವೆ, ನಿನಗಾಗಿ ನಾ ಕರೆವೆ
ಇದಿಕೊ ಈ ಮಲ್ಲಿಗೆಯ ಮುಡಿಯೆ ಬಾ ಎನುತೆ

**ನಗರ ಬೀದಿಗಳಲ್ಲಿ ನಾಯಿ ಬೇಟೆ !**

ವೈಶಾಖದುರಿಬಿಸಿಲು –
ನೆಲ ಬಯಸಿತ್ತು ತಂಪಾದ ನೆರಳು !
ಅದೂ ಕಾದ ಕೆಂಡದ ರವಿಯ
ದುಂಡುಗಾವಲಿಯ ಕೆಳಗೆ !!

ಬೀರು ಬೇಗೆ
ಬರಿಯ ಧಗೆ
ರಣ ರಣಕದಾ ಅಣಕ !
ಗಾಳಿಗೋ ಅತಿ ಉಬ್ಬಸ ;
ದೆಸೆಯ ಬಸುರಿನೊಳೆಲ್ಲೊ
ಅಡಗಿತ್ತದರ ರಭಸ !
ಮುಗಿಲೊಂದು ಬೀರಿತ್ತು ಮಂದಹಾಸ !!
ನಗರರಾಯನ ಬೊಜ್ಜು ಬೆಮರಿನೊರತೆ !
ಬೆಮೆ ತರುವ ಬಿಮ್ಮೆನುವ ನೀರವತೆ

ಶಬ್ದ ಹೃದಯದ ಯಂತ್ರ ಮಿಡಿತವಿಲ್ಲ
ಜೀವವೇ ಇಲ್ಲ !
ಆಗ.....
ನಗರ ವೀಥಿಗಳಲ್ಲಿ ನಾಯಿ ಬೇಂಟೆ !
ಮೌನವನು ಸೀಳಿ ಸಿಡಿಯಿತು ಅಲ್ಲೆ
ಅಬ್ಬರದ ಬೊಬ್ಬೆ;
ಹೊಡೆಯಿರಿ, ಬಡಿಯಿರಿ, ಸಾಯಿಸಿರಿ ಇಲ್ಲೆ
ಪಾಪಿ ನಾಯ್ಗಳು ಹೆಚ್ಚಿ ನಗರ ಹೊಲಸು,
ಮದ್ದಿಕ್ಕಿ ಮುರಿಬೇಕು ಕುನ್ನಿವೆರಸು !
(ಶಾಂತಂ ಪಾಪಂ .....! ..... 'ಅಹಿಂಸೋ ಪರಮೋಧಮಃ !')

ಹೊಡೆದಾಯ್ತು, ಬಡಿದಾಯ್ತು
ಬೀದಿ ನಾಯ್ಗಳ ಭೌತದೇಹ
ಅಂತಿಮ ಯಾತ್ರೆಗೈದುದೂ ಆಯ್ತು !
ಆದರೇನಾಯ್ತು ? ? ? ? ?
ಅಯ್ಯೋ ! ..... ಹದಿನಾರು ಮಕ್ಕಳ ತಂದೆ
ನಗರ ಸಭೆಯಧ್ಯಕ್ಷ ಕಣ್ಣೀರು ಕರೆದ
ತನ್ನ ಮಕ್ಕಳ ಕಸವ ತಿನ್ನಲೊಂದೂ ನಾಯಿ
ಬೀದಿಯೊಳಗಿಲ್ಲೆಂದು !
'ಪರೋಪಕಾರಾಯ ಪುಣ್ಯಾಯ
ಪಾಪಾಯ ಪರ ಪೀಡನಂ'
ಇಲ್ಲ..... ಅವನು ಓದಿಯೇ ಇಲ್ಲ..... !
ಅಂತೂ ..... ! .....
'ತಾಯಿಗಿಂತ ಬಂಧುವಿಲ್ಲ
ನಾಯಿಗಿಂತ ಮಿತ್ರರಿಲ್ಲ' ಎಂದೆನಿಸಿರಬೇಕು !
ಕೌನ್ಸಿಲರ್ – ಅಲ್ಲ –
ನಗರದ ನಾಯ–ಕರುಗಳಿಗೆ !!

ಧರ್ಮಪುತ್ರನ ಬೇಹು, ಶ್ರೀಮತಿ ಶ್ವಾನಮಣಿ
ಅಮರ ಲೋಕದ ಯಾತ್ರೆಗೈದವಳಿಂದೂ ಲೈಕ !
ಅಬ್ಬಾ ಏನಿದೀ ಲೋಕ.....?
ಫ್ಯಾನಿರಾಬಿನಳಿಗೆ ನೆರೆವಿತ್ತ ಬಂಧುವಿಗೆ
ಮಾನವನಿತ್ತ ಬಹುಮಾನ –
'I stoned him away ..... .....!!'
ಸಾಕೆ.....?
ಏಳದಿಹುದೇ ಪ್ರಶ್ನೆ !
ಬೇಕಾದಡಿಂದೆ ಬೆಸಗೊಳಿ ಹೋಗಿ ವಾಲ್ಟ್‌ಡಿಸ್ನೆ !

ಸಕಲ ಶಾಸ್ತ್ರವನೋದಿ ತಿಳಿಯಲಾರದೆ ಹೋಯ್ತೆ?
'ಶ್ರೂಯತಾಂ ಧರ್ಮ ಸರ್ವಸ್ವಂ ಶ್ರುತ್ವಾ
ಚೈವವಾಧಾರ್ಯತಾಮ್ !
ಆತ್ಮನಃ ಪ್ರತಿಕೂಲಾನಿ ಪರೇಷಾಂ
ನ ಸಮಾಚರೇತ್ !!

ಬುದ್ಧ ಪುಟ್ಟಿದ ನಾಡು !
ಬಸವನೊಸಗೆಯ ಬೀಡು !!
ಬರಿಯ ತತ್ತ್ವದ ಗೂಡು, ಎಲ್ಲ ಸುಡುಗಾಡು !!

ಹೆಜ್ಜೆ ಹೆಜ್ಜೆಗು ನೀತಿ, ಗಾಹೆ, ತತ್ತ್ವ !
ಸತ್ತುದೆಂದೋ ಕಾಣೆ ಅದರ ಮಹತ್ವ !!

'ಖಮ್ಮಾಮಿ ಸವ್ವ ಜೀವಾಣಂ ಸವ್ವೇ
ಜೀವಾ ಖಮಂತು ಮೇ
ಮೇತ್ರೀ ಮೇ ಸವ್ವ ಭೂದೇಸು
ವೇರಂ ಮಜ್ಝಣ ಕೇಣಚಿ !!'
ನುಡಿ ಬೇರೆ ನಡೆ ಬೇರೆ,
ಗೋಮುಖವ್ಯಾಘ್ರಗಳು .....
ಮನವೋ ಹರಿದ ಸೂತ್ರದ ಗಾಳಿಪಟ !
ಪಾಪ.....!

ಯಾವುದೋ ತಾಯಿ–ನಾಯಿ,
ಮ್ಯುನಿಸಿಪಾಲಿಟಿಯಿತ್ತ ಮದ್ದು ತಿಂದು
ಕೊರಗುತ್ತಲಿತ್ತಲ್ಲಿ ಗಲ್ಲಿಯಲ್ಲಿ –

ಮುಗಿದ ಕಣ್, ತೆರೆದ ಬಾಯ್
ಕಟವಾಯಿನೊಳು ಸುರಿವ ಲೋಳೆ
ಇರಿದ ನಾಲಗೆ ನೆಲದ ಮಣ್ಣ ನೆಕ್ಕುತಲಿತ್ತು
ಬಡಬಡಿಪ ಕಾಲ ತಾಳದ ಕೂಡೆ

ಹೊಟ್ಟೆ ತಿದಿವೊತ್ತೆ, ಬಹ ಕುಯ್.....ಕುಯ್.....ಕುಯ್.....
ಎಂಬ ಕೊರಗು ಗಾನ !
ನನ್ನೆದೆಯ ನುಡಿಯಿಸಿತು ಮಿಡಿದು ವೀಣ !
'ಜೀವ ದೇವನ ಕೊಡುಗೆ
ನರನೇನು ನಾಯೇನು ?
ಆತ್ಮವಿದ್ದೊಡೆ ನುಡಿಸು, ಸೇವೆ ಸಲಿಸು !'

'ಹೈಡ್ರೊ–ಫೋಬಿಯ'ವಗಿದ
'ಓಲ್ಡ್ ಯೆಲ್ಲರ್' ಅಂತೆ
ಕಣ್ಣು ಕಿಡಿ ಸೂಸಿತ್ತು
ಮನ ಮಾತ್ರ ಗುಂಡುಂಡು ಸುಮ್ಮನಿತ್ತು !

ನೆಪೋಲಿಯನ್ ಸಾಹಸವು ಬರಲಿಲ್ಲ ನನಗೆ
ಚೆರಿಗೆ ನೀರನು ಚೆಲ್ಲಿ ಮುಖದೊಳೆದು
ಬಾಯ್ಗೆ ನೀರೆರೆದೆ,
ತಣ್ಣಗಾಯಿತು ದೇಹ !
ಪಂಜರವ ತೊರೆದು ಹಾರಿತು ಜೀವ !!

'ಆಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾಽ ಮೃತಂಗಮಯ
ಓಂ ಶಾಂತಿಃ ಶಾಂತಿಃ ಶಾಂತಿಃ

## ಕರೆ

ಏಳಿ ಎಚ್ಚರಗೊಳ್ಳಿ ಕೆಚ್ಚೆದೆಯ ಕಲಿಗಳೇ
ನೆತ್ತರೋಕುಳಿಯಲ್ಲಿ ನಾಟ್ಯವಾಡೆ
ತಾಯೆದೆಯ ರಂಗದಲಿ ಬಾಳ ನೆತ್ತವನಾಡಿ
ಹಗೆಯ ತಲೆ ನೆಗ್ಗೊತ್ತಿ ಮೆಟ್ಟಲಿಂದೇ

ಎತ್ತಿ ಹಿಡಿ ಹೊಸ ಕಹಳೆ ಒತ್ತೊತ್ತಿ ಊದಿಬಿಡಿ
ನಾಡ ನಾಡಿಯನೆಲ್ಲ ಮಿಡಿಯುವಂತೆ
ನೂತ್ನ ಚೇತನ ವಹ್ನಿ ಪ್ರಜ್ವಲಿಸಿ ಪಸರಿಸಲಿ
ಸತ್ತ ಮನ ಮೈವೊದರಿ ಸಿಡಿಯುವಂತೆ

ಸೇನೆ ಸಾಗರವಿರಲಿ ನೀನಗಸ್ತ್ಯನೆ ಆಗು
ಆಪೋಷಣಂಗೆಯ್ಯೆ ಚುಳಕದಲ್ಲೆ !
ತೂಗು ಪರಶುವನಿಂದೆ ಹೆರರ ದಬ್ಬಾಳಿಕೆಗೆ
ಏಣಿಗೇಣ್ಬಾಸಿರಂ ಉರುಳಲಿಲ್ಲೆ !

ಏಳಿ ಭಾರತೆಯಂದ ಚೆಂದದಾ ಕಂದಗಳೆ
ಕೊಳಲನುಳಿದೂದಿರೈ ಪಾಂಚಜನ್ಯ
ರಾಸಕ್ರೀಡೆಯು ಸಾಕು, ರುದ್ರ ತಾಂಡವ ಬೇಕು
ಕುಣಿಯಿರೋ ರುದ್ರರೆ ಮರೆತು ಮೆಯ್ಯ !

ಹಿಮವಂತನುನ್ನತಿಯ ತುಂಗ ಶೃಂಗದ ಮಕುಟ
ಸಿಡಿದೊಡೆದು ಹುಡಿಗೊಂಬ ಕಾಲವಿಂದು
ಬಡತನವೊ, ಒಡೆತನವೊ, ನುಡಿಯು ನೂರಾಗಿರಲಿ
ಒಂದಾಗಿ ಬನ್ನಿರೈ ಗುಡಿಯೆತ್ತಲೆಂದು !

## ಕೆಂಗನ ಕಲ್ಲು

ಪ್ರಥಮ ಸಂಪುಟ
(ಶರದ)

ಮೂಡು ಮಲೆಯಲಿ ಹುಟ್ಟಿ ಬಡಗ ಬಯಲಲಿ ಹರಿದು
ಪಡುಗಡಲಿನೆಡೆಗೆ ನದಿ ನಡೆಯುತಿತ್ತು
ನಿರ್ಮಳೋದಕದಂತೆ ನಿಬ್ಬರದ ಗತಿಯಂತೆ
ಬಿದ್ದೆದ್ದು ಕತೆ ಮುಂದೆ ಸಾಗುತಿತ್ತು

೧೯೫೮ ಜನವರಿ ೧೮, ೨೯ ಮತ್ತು ೨೦ನೆಯ ದಿನಾಂಕಗಳಲ್ಲಿ, ಬಳ್ಳಾರಿಯಲ್ಲಿ ನಡೆದ ನಲವತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ ಈ ಕಥನ ಕವನದ ಕೆಲವು ಭಾಗಗಳನ್ನು ಓದಲಾಗಿತ್ತು.

## ಕೆಂಗನ ಕಲ್ಲು
## (ಶರದ)

'ನಮೋss ಜಗತ್ಕರ್ತೋ೯sss....... ಓಂ
ನಮೋss ಜಗತ್ಕರ್ತೋ೯sss.......' ಎಂದು
ದಿನದ ವಂದನೆ ಸಲಿಸಿ ಜಗವನೆಚ್ಚರಗೊಳಿಸಿ
ಧನ್ಯತೆಯ ಪಡೆದಿತ್ತು ಕೋಳಿಯೊಂದು

ಅಚ್ಚಗಾಯಿತು ! ಸ್ವಚ್ಛ ಚಂದನ್ನೆ ಚೆಂಬೆಳಗು
ಮೂಡುವೆಣ್ಣಿನ ಹಣೆಯ ಸಿಂಗರಿಸಿತು
ತಾಯಿ ತುಪ್ಪುಳ ಹಕ್ಕಿ ಕನಸಿನೊಳಗುಲಿವಂತೆ
ಕಣ್ಮಲರ್ ಮುಗಿದು ತಾ 'ಕೂ' ಎಂದಿತು

ಯಾವ ಶಾಪವೊ ಕಾಣೆ ಏನು ತಾಪವೊ ಕಾಣೆ
ದೇವಿಹಳ್ಳಿಗೆ ಮಾತ್ರ ಎಚ್ಚರಿಲ್ಲ
ಕುಳಿರು ಮಾಗಿಯ ನಸುಕು ಮುಸುಕು ತೆರೆಯಲಿಕಂಜಿ
ವನವು ಮೈಮುದುಡಿತ್ತು ಹೇಳಸಲ್ಲ

ಮುಂಜಾವು ಮೇಲೆದ್ದು ಮನೆ ಮುಂದ ಮುದಗೊಳಿಸಿ
ಚಂದಬಂಗಾರವನು ಬರೆವರಿಲ್ಲ
ಮೊಗದೊಳೆದು ಹಣೆಗಿಟ್ಟು ಮುಂದಲೆಯ ನೇರಿಸುವ
ಅಂದದಾ ಮುತ್ತೈದೆ ಕಾಣುತಿಲ್ಲ

ನೊಗ ಹಗ್ಗ ಪಟಗಣ್ಣಿ ನೇಗಿಲುಗಳೆತ್ತಿಕ್ಕಿ
ಎತ್ತುಗಳ ತೂರಿಸುವ ಗೌಡನಿಲ್ಲ
ಬೀಸುಗಲ್ಲಿನ ಮುಂದೆ ತಾಂಬೂಲವನು ಸವಿವ
ಅಂಗನೆಯರಾ ಹಾಡು ಕೇಳುತಿಲ್ಲ

ಸುತ್ತು ತೆಂಗಿನ ತೋಟ ಕೆದರು ಸೋಗೆಯ ನೋಟ
ನಾಟ್ಯದೈಸಿರಿಯಿಲ್ಲ ಅಂದದೇಕೋ
ಬನಶಂಕರೀತಾಯಿ ರಣಭಯಂಕರಿಯಾಗೆ
ಹೇಳಲೇನಿದೆ ಸಾಕು; ಬಿಕೋ ಬಿಕೋ !

ದೇವಿಹಳ್ಳಿಗೆ ಅರ್ಧ ಹರಿದಾರಿ ದೂರದಲಿ
ಬಿಳಿಯ ಕಲ್ಲಿನ ಬೆಟ್ಟವಿರುವುದುಂಟು
ಅದರೆದೆಯ ಬದಿಯಲ್ಲೆ ತರು ತಮಾಲದ ತೋಪು
ಪಾಸರೆಯೊಳೊಸರುತಿಹ ಚಿಲುಮೆಯುಂಟು

ಝುರಿಯೊಂದು ಹರಿಯುವುದು, ನಿರಿಗೆ ನಿರಿಗೆಗಳುಡೆಯ
ಬನರಾಣಿ ಬಲು ಬಯಸಿ ಉಟ್ಟಳಂತೆ !
ತಿಲಕವಿಡೆ ತೆತ್ತಿಸಿದ ಕನ್ನಡಿಯವೋಲಲ್ಲಿ
ತಡೆದು ನಿಂತಿದೆ ಮಡುವು ಮಂಜೊಳಂತೆ

ಮಬ್ಬಂತು ಮುಸುಕಿರಲು ತಿರೆಯೆಲ್ಲ ಸತ್ತಿರಲು
ಚೇತನವೆ ಹಾಡಿತೋ ಚಮರಗೀತೆ !
ಆದರೂ ಎಚ್ಚರಿದೆ ಸಿದ್ಧಸಿಂಗರ ಬೀಡು

ಹಣತೆಯುರಿಯುತಲಿಹುದು ಚಿಕ್ಕೆಯಂತೆ !

ಏನದಚ್ಚರಿ ಗಾನ ! ಹೃದಯ ಸಮ್ಮೋಹನಾ !
ಅಲ್ಲಲ್ಲವದು ಹೆಣ್ಣಿನಾಕ್ರಂದನ !
ಯಾರೋ ಕಾಣೆ ಪಾಪ ಪತಿತೆ ಬಾಗಿಹಳಿಲ್ಲಿ
ಹಡೆದಾಕೆ ಹುಡಿಯಾದ ತಾಣದಲ್ಲಿ

"ಕೋಟಿ ಜೀವಿಗಳಿಂಗೆ ಉಸಿರಾಗಿ ಉಣಿಸಾಗಿ
ಸಕಲ ಚೇತನಗಳಿಗೆ ಸ್ಫೂರ್ತಿಯಾಗಿ
ಋತು ಋತುಗಳಾರಕ್ಕು ಬಣ್ಣ ಬಣ್ಣಂಬಡೆದು
ನಿತ್ಯ ನೂತನ ದೇಹಧಾರಿಯಾಗಿ.

ಸಂಚರಿಪ ಹೇ ಶಕ್ತಿ ಹೇ ಶಾಂತ ಮೂರುತಿಯೆ
ಜನನಿಯಾತ್ಮಕೆ ನೀಡು ಶಾಂತಿಯನ್ನು
ಕೊಟ್ಟವನೆ ಕೊಂಡವನೆ ಸರ್ವಶಕ್ತನೆ ತಂದೆ
ನೀಗು ನೀಗೈ ಮನದ ಶ್ರಾಂತಿಯನ್ನು"

ತರುಣಿಯೋರ್ವಳು ಇಂತು ತರಣಿ ಸುಳಿಯದ ಮುನ್ನ
ಶುದ್ಧ ಶ್ರದ್ಧಾಂಜಲಿಯನಿಟ್ಟಳಲ್ಲಿ
ಬಾಳ ಸಂತೆಯ ಮುಗಿಸಿ ಬರದ ಹಾದಿಯ ಹಿಡಿದ
ಎದೆಯಾಣ್ಮನೂ ಬೆರೆದ ತಾಣದಲ್ಲಿ

ಮುಂದಲೆಯ ಮುಡಿಸಿಹಳು ಕಲ್ಲುಗೋರಿಯ ತಳಕೆ
ತನ್ನ ತಾನೇ ಇಲ್ಲಗೈದಳಂತೆ!
ಹಣತೆಯುರಿಯುತ್ತಲಿತ್ತು ಮಂಜಿನ್ನು ಮಲಗಿತ್ತು
ಅಮಲೇರಿ ಬಿದ್ದಿರುವ ಕುಡುಕನಂತೆ !

ನಿಂತ ಹೊಂಗೆಯ ಮರಗಳಡಿಯಲ್ಲಿ ಮಲಗಿಹವು
ನೂರಾರು ಗೋರಿಗಳು ಶಾಂತಿವಡೆದು ;
ಹಚ್ಚನೆಯ ಹಸುರ ಬಲು ಸಜ್ಜಾದ ಸಜ್ಜೆಯಲಿ
ಮಂಜುಮಣಿ ಬರಿಗನಸು ಕಾಣುತಿಹುದು

ಅಡವಿ ಮೌನವ ಸೀಳಿ ಸಿಡಿದೆದ್ದಿತಶನಿರವ
ಮೊರಡಿ ಕೋಡುಗಳೊಡೆದು ಕೆಡೆಯುವಂತೆ
ಗೋರಿಗಳು ಬಾಯ್ದೆರೆದು ಚಿಮ್ಮಿದುವು ಬೆಂಕಿಗಳು
ಮೂಸೆಯಿಂ ಹೊರ ಬರುವ ಲೋಹರಸದಂತೆ

ಫಡ ಫಡಾಸ್ಫೋಟನವೊ ಬಾನೊಡೆದು ಹುಡಿಯಾಯ್ತೊ
ಮಿಂಚುಗೊಂಚಲ ಸಿಡಿತ ಸುಗ್ಗಿ ಸೂರೆ
ಕತ್ತೆತ್ತಿ ನೋಡಿದಳು ತರುಣಿ ಕಣ್ ಮುಚ್ಚಿದಳು
ಚೀರಿದಳು 'ಓ ಅಮ್ಮ ಬೇಗ ಬಾರೆ'

'ಹ ಹ್ಹ ಹ್ಹ ಹ್ಹ ಹ್ಹ ಹ್ಹ ಹ್ಹಾ ಅಮ್ಮ ಬರಬೇಕಂತೆ !
ಓಹ್ಹೊ ಹ್ಹೊ ಹ್ಹೋ ಅವಳನರಸಲುಬಹುದೆ ?
ಇವ ಗಂಡನಿಗೆದೆಯನುಣಿಸ ಹೋಗಿಹಳೇನೊ !
ಪಾಪ, ಏಯ್ ಹೆಣ್ಣೇ ನಾ ಬೇಡವೇ?'

‘ಮುಚ್ಚು ಬಾಯ್ ಪಾತಕಿಯೆ ನಾಲಗೆಯು ಹರಿದೀತು
ಬೆಂತರವು ಬಲ್ಲುದೇ ಹದಿಬದೆಯ ಧರ್ಮ !
ಕಾಮಿನಿಗೆ ಕಾತರಿಸಿ ಮುಡಿದು ಮರುಳಾದೆಯೇನ್?
ಥೂ ! ಅನಿಷ್ಟವೆ ಸಮೆಸು ನಿನ್ನ ಕರ್ಮ !’

‘ಹ ಹ್ಹ ಹ್ಹಾ ನಿಂಗಣ್ಣ .. ಇದು ನಿನ್ ಕರ್ಮ !
ಹಿ ಹ್ಹಿ ಹ್ಹೀ ರಂಗಕ್ಕ ನಾನಂತೆ ಮರುಳು !
ಧರ್ಮ... ಹೊ ಹ್ಹೊ ಹ್ಹೋ ... ಕರ್ಮ ಹಿ ಹ್ಹಿ ಹ್ಹೀ
ಮನುಜ ಓಹ್ಹೋ .... ಮರುಳು ಹಿ ಹ್ಹೀ, ಎಲ್ಲ  ನೆರಳು !

ಸಿಂಗಣ್ಣ ಕಾಳಕ್ಕ ಕಾಟಣ್ಣ ನೀಲಕ್ಕ
ರುದ್ರಣ್ಣ ಭದ್ರವ್ವ ಚೆಂದೊಳ್ಳೆ ಚೆನ್ನೀ
ಎಲ್ಲರೂ ಬನ್ನಿರೇ ಹೊಸ ಸುದ್ದಿ ಕೇಳಿರೇ
ಮನುಜ ಲೋಕದ ಒಳಗೆ ಕೇಳ ಬನ್ನಿ !

ಬರಮಾರಿಗುಣಿಸಾದ ನಾವಂತೆ ಮರುಳುಗಳು
ಇವಳು ಸಾಧ್ವೀಮಣಿಯು ಬಾಳು ಚೊಕ್ಕ !
ಹುಟ್ಟಿದೆರಡೇ ದಿನಕೆ ಹಡೆದಾಕೆಯನು ತಿಂದು
ತಂದೆಗಿತ್ತಳು ಚರಿಗೆ, ಮಹದೇವಿಯಕ್ಕ !

ಗಂಡನನು ಹುಡಿಗಟ್ಟಿ ರಂಡೆ ಬಾಳನು ನಡೆಸಿ
ಮೂರು ಮನೆಗಳ ದೀಪ ನಂದಿಸಿದಳು
ಎಲ್ಲವನು ತವೆ ತಿಂದು ಪೆಣದಿನಿಯು ತಾನಾಗಿ
ನಮಗೆ ದೆವ್ವಗಳೆಂದು ನುಡಿಯುತಿಹಳು

ಏಳಿರೇ ಗೆಳತಿಯರೆ ಓ ನನ್ನ ಗೆಣೆಯರೇ
ನಿಮಗಾತ್ಮವಿದ್ದಲ್ಲಿ ಅಭಿಮಾನವಿದ್ದಲ್ಲಿ
ಮನುಜ ಕೀಟದ ನಡೆಯ ನುಡಿಯ ತಿದ್ದಲು ಇಂದೆ
ನಾಂದಿ ಹಾಡಲೇಬೇಕು ಜೊತೆಯೊಳಿಲ್ಲಿ

ರಣಗಹಳೆ ಮೊರೆ ಕೇಳಿ ಭಟರೆದ್ದು ಪರಿವಂತೆ
ಕರೆಗೇಳಿದೊಡನೆದ್ದು ಕುಳಿತುವೆಲ್ಲ
ತಂತಮ್ಮ ಗೋರಿಗಳೆ ನಾಟ್ಯವೇದಿಕೆಯಾಗೆ
ಕುಣಿದುವಮಮಾ ಎದ್ದು ಕಿರಿದು ಹಲ್ಲ

ಕರದಿ ಮೈಗೂದಲಿನ ಕೆದರಿದಾ ಟಗರುತಲೆ
ಉದ್ದುದ್ದವಿದ್ದೆರಡು ದಪ್ಪ ದಾಡೆ
ಹೆಣ್ಣಿಗೂ ಮೀಸೆಗಳು ಹರುಮುರುಕು ಗಡ್ಡಗಳು
ಕಣ್ಣುಗಳೊ ಅಬ್ಬಬ್ಬ ಕೆಂಡದುಂಡೆ !

ಒಂದು ಕೊಳ್ಳಿಯನೆತ್ತಿ ಅವಳ ಮೇಲೆಸೆಯಿತ್ತು
ಒಂದು ಕವೆಗೋಲಿನಲಿ ತಿವಿಯುತಿತ್ತು
ಬೇರೊಂದು ಜಡೆಯೆಳೆದು ಗರಗರನೆ ತಿರುಗಿಸಿತು
ಬಗುಣಿ ಬಗ್ಗಡವನ್ನು ಮೇಲುಗುಳಿತು

ಒಂದಲ್ಲ ಎರಡಲ್ಲ ಹೆಣ್ಣಲ್ಲ ಗಂಡಲ್ಲ
ಎಣಿಸುವೊಡೆ ಲೆಕ್ಕಕ್ಕೆ ಸಂಖ್ಯೆಯಿಲ್ಲ !

ಮಲ್ಲಿಗೆಯ, ಮೂದಲಿಸಿ ತೂರಿದುವು ಒಣಧೂಳು
ಮುತ್ತ ಮುದಿ ಒಗರು ಎಳೆ ಬಾಲರೆಲ್ಲ !

ಕಂಗೆಟ್ಟಛಾತರಳೆ ನೆರೆಗಾಗಿ ಚೀರಿದಳು
ತರುರಾಜಿ ಗಿರಿ ಬಂಡೆ ಗೋಳಿಟ್ಟುವು
'ನನ್ನ ಎದೆಯಾಣ್ಮನೇ, ಓ ನನ್ನ ಸ್ವಾಮಿಯೇ,
ಹಡೆದವಳೆ, ಕಾಯಿ ಬಾ ನಿಮ್ಮವಳನು

ಕೂಗು ಕೇಳಿತೊ ಏನೊ ಕರೆಯು ಸೆಳೆಯಿತೊ ಏನೊ
ಆರ್ಭಟಿಸುತ್ಯೆತಂದಳಾ ದೆವ್ವಿಣ್ಣಿ !
ಆ ಹ್ಹ ಹಾ ! ತಡೆಯಿರ್ರೆ ಇದೊ ಬಂದೆ ನಾನಿಂದೆ
ಪೀಡೆ ಬೇಡಿರೆ, ಅವಳೆ ನನ್ನ ಕಣ್ಣಾಣ್ಣಿ !

ದಡಿದೆವ್ವನಬ್ಬರಕೆ ಸ್ತಬ್ಧವಾದುವು ಎಲ್ಲ
ಇದ್ದಲ್ಲೆ ಹುಡುಗಿದವು ಉಸಿರದಂತೆ
ಹಿಡಿದ ಕೊಳ್ಳಿಯ ಮುರಿದು ಗಂಟಲೊಳು ಗಿಡಿಯುತ್ತ
ಗೊಣಗಿದುವು ಏನೇನೊ ಶಪಿಸುವಂತೆ !

ಬಂದ ತಾಯ್ ದೆವ್ವ ತಾಂ ಕಂದನನು ಬಳಿದಪ್ಪಿ
ಮೈ ತುಂಬ ಹಾಕಿತ್ತೈ ಮುತ್ತಮುದ್ರೆ !
'ಮುದ್ದಿನರಗಿಣ್ಣಿ ನಿನ್ನ ಮುದ್ದಾಡೆ ಮನೆಗೈದೆ ;
ನೀನಿಲ್ಲಿಗೈತಂದೆ ಎಕೆ ಭದ್ರೆ ?

ನಿನ್ನ ಗಂಡನ ನೋಡು ನಿನಗಾಗಿ ಮರುಗುವನು
ದಿನವು ಒಂದಿಲ್ಲೊಂದು ಕತೆಯ ಹೇಳಿ
ಮಲಗು ಮಡಿಲಲಿ ಕಂದ ನನ್ನೆದೆಯ ಮಕರಂದ
ಏನ ಬೇಡಲು ಬಂದೆ ಹೇಳು, ತೊಳಲಿ ?'

ಕಣ್ಣೀರ ತೀರ್ಥದಲಿ ತಾಯ ತೊಡೆಗಳ ಕರ್ಚಿ
'ಅಮ್ಮ ... ಅಮ್ಮಾ ನಾನು ' ... ಎಂದಳಾಕೆ
(ಅಳಲಿನಾವರಣದಲಿ ಮಾತು ಸೋಲುವುದಲ್ತೆ
ಮೌನವೇ ಮಹತೆಂದು ಹೇಳಬೇಕೆ ?)

ಸಂತೈಸಿಕೋ ಕಂದ ತಡೆ ನಿನ್ನ ಅಳಲನ್ನು
ಮಿತ್ತು ಸುಳಿಯದೆ ಹೇಳು ಬಾಳಿನಲ್ಲಿ ?
ಎಂದಾದರೊಂದು ದಿನ ಅಗಲುವಿಕೆ ನಿಶ್ಚಯವು
ಆರು ಶಾಶ್ವತವಮ್ಮನು ಧಾತ್ರಿಯಲ್ಲಿ ?

ಬಂದೆಯೇತಕೆ ಮಗುವೆ ಈ ಘೋರ ವಿಪಿನದಲಿ
ಮೂಡಣರೆ ಬೆಳಗದೀ ಪೊಳ್ತಿನಲ್ಲಿ
ಅಪ್ಪ ಮುನಿದರೆ ನಿನ್ನ ಮನೆ ಹೊರಗೆ ತಳ್ಳಿದರೆ
ಏನೆಂದು ಗಜರಿದರು ರೇಗಿನಲ್ಲಿ ?"

'ಬಿಡುತೆ'ನ್ನು ಕೆಂಗವ್ವ ಮನಿಸರಿಯನಪ್ಪಯ್ಯ
ಮನೆ ಹೊರಗೆ ತಳ್ಳುವುದೆ ? ನಾನವನ ಬೆಳಕು !
ಮನ ನಿನ್ನ ನೆನೆನೆನೆದು ನನ್ನ ಸ್ವಾಮಿಯ ಕರೆದು
ಬರಿದೆ ಹಲುಬಿತದೇಕೋ ಕಳೆದ ಇರುಳು !

ಅಪ್ಪನೆದೆಯೊಳಗೇನೊ ಕೊರಗು ಮುಗಿದಿಲ್ಲವ್ವ
ಕೊರೆಯುತಿದೆ ಕೀಟದೊಲು, ಹುಚ್ಚು ನಾಯಿ !
ನನಗಾಗಿ ಮರುಗುವನು ಏನೇನೊ ನೆನೆಯುವನು
ಸಂತವಿಡಲೇನುಂಟು ಹೇಳು ತಾಯಿ ?

ನಿಮ್ಮ ನೆನಪಿ ಗುಡ್ಡೆ, ಈ ಸಮಾಧಿಗೆ ಇಂದು
ವಂದಿಸುತೆ ಎಡೆಯಿತ್ತು ಹೋಗಲೆಂದು
ಬಂದೆನಿಲ್ಲಿಗೆ ತಾಯೆ ನಿನ್ನ ಮಡಿಲೊಳು ಮಲಗಿ
ನನ್ನಿನಿಯನಿನಿವಾತ ಕೇಳಲೆಂದು

ಆದೊಡೇನಿದು ದೆವ್ವ ಪ್ರೇತಗಳ ಕಿರಿಚಾಟ !
ನಾನಾರ ತಿಂದೆನೌ ಹಡೆದವಳನು ?
ಕೆಂಗಪ್ಪನಿಹನಲ್ತೆ ? ಹಡೆದವಳು ನೀನಲ್ತೆ ?
ಆವ ಮನೆಗಳ ದೀಪ ನಂದಿಸಿದೆನು ?

ಮೋನದಾಳಿದೇಯೇಕೆ ಮಾತಾಡು ಕೆಂಗವ್ವ
ಏನೊಂದು ತಿಳಿಯದಿದೆ ಬುದ್ಧಿ ಶೂನ್ಯ
ಆರ ಬೆಳೆದೋಂಟದಲಿ ವಿಷವಲ್ಲಿ ನಾನಾಗಿ
ಬೆಳೆದೆನೌ ಪೇಳೆನಗೆ, ನಿನ್ನ ನುಡಿ ಮಾನ್ಯ

ಕೆಂಗಿ ಏನನೊ ನೆನೆದು ಉಸಿರ ತೋಳಿಗೆ ತಂದು
ಅಪ್ಪಿದಳು ಎದೆಗೊಮ್ಮೆ ಬಿಗುಹಿನಲ್ಲಿ
ಅಂದು ಕೆಯ್ಯೆಡೆಯಾಗಿ ಅವಳಪ್ಪನಿತ್ತವೊಲು
ಮಲಗಿದಳು ಮಗುವಾಗಿ ಮಡಲಿನಲ್ಲಿ

'ಮಗಳೆ ಮಲ್ಲಿಗೆ ಬಾರ ಕಥೆಯೊಂದ ಹೇಳುವೆನು
ಯುಗ ಮೂರು ದಶಕಗಳ ಹಿಂದಿನೊಂದು !
ಅಂದು ನೀನಾಗಿದ್ದೆ ಮೊಲೆಯುಂಬ ಎಳೆ ಹಸುಳೆ
ಮಾಡಲಿಗಿತ್ತರು ನಿನ್ನ ಜೀವ ನೊಂದು !

ನಿನ್ನ ಹುಟ್ಟಿನ ಗುಟ್ಟು ರಟ್ಟಾಗದಿರಲೆಂದು
ಹುದುಗಿಸಿದೆವಿಬ್ಬರೂ ಇಂದು ತನಕ
ಎಂತೊ ಸಲಹುವ ಪುಣ್ಯ ನಮ್ಮದಾಯಿತು ತಾಯಿ
ಬೇಸರಿಲ್ಲದೆ ಕೇಳು, ಇರಲಿ ಮರುಕ

ಹಡೆದವಳು ನಾನಲ್ಲ ತಂದೆ ಕೆಂಗರು ಅಲ್ಲ
ಪೊರೆದ ಮಾತ್ರರು ನಾವು ನಿನ್ನ ಬೆಳಸಿ !
ಬರದ ಬಿರುಗಾಳಿಯಲಿ ತೂರು ಹಾರಿದರಮ್ಮ
ನಿನ್ನ ತಾಯ್ತಂದೆಗಳು ಬಾಳ ತವಿಸಿ !

ಬೆಚ್ಚದಿರು ಬೆದರದಿರು ಕಣ್ಣರಳ ತೊಯ್ಸದಿರು
ಸನಿಹದಲಿ ಕುಳಿತು ನೀ ಕೇಳು ಕಂದ
ಬಾಳ ಬೃಂದಾವನದಿ ಬನ್ನ ಬೇಲಿಯ ಬೆಳೆಸಿ
ಮುಗುಳ ಮುಳ್ಳಾಗಿಸಿದ ಬೀದಿ ಅಂದ

* * * * *

ನೆರೆದ ಭೂತಗಳೆಲ್ಲ ಮೈಯೆಲ್ಲ ಕಿವಿಯಾಗಿ
ಮುಂದೆ ಸರಿದುವು ಕೇಳೆ ವ್ಯಥೆಯ ಕಥೆಯ !
ತಮ್ಮೆಲ್ಲರಾ ಬಾಳೆ ಭವ್ಯ ಕಾವ್ಯವದಾಗೆ
ಮತ್ತೆ ಕೇಳಲು ಚೆಂದ ವಾಸ್ತವತೆಯ

ಮೂಡು ಮಲೆಯಲಿ ಹುಟ್ಟಿ ಬಡಗ ಬಯಲಲಿ ಹರಿದು
ಪಡುಗಲಿನೆಡೆಗೆ ನದಿ ನಡೆಯುತಿತ್ತು
ನಿರ್ಮಳೋದಕದಂತೆ ನಿಬ್ಬರದ ಗತಿಯಂತೆ
ಬಿದ್ದೆದ್ದು ಕತೆ ಮುಂದೆ ಸಾಗುತ್ತಿತ್ತು

## ಕೆಂಗನ ಕಲ್ಲು

**ದ್ವಿತೀಯ ಸಂಪುಟ**
**(ಹಿಮವಂತ)**

ಹಗಲೆಲ್ಲ ಬಿಸಿಲ ಧಗೆ ಇರುಳೆಲ್ಲ ಅರಿಲ ನಗೆ
ತುಣುಕು ಮುಗಿಲಿನ ಸುಳಿವು ತೋರದಯ್ಯೋ
ಧಗ ಧಗಿಸಿ ದಟ್ಟಯಿಸಿ ದಗ್ಧವಾಗಿರೆ ಭೂಮಿ
ಮುಗ್ಧಪಶುಗಳ ಬಲಿಯು ಮುಗಿಯಲಿಲ್ಲೋ !

## ಕೆಂಗನ ಕಲ್ಲು

**(ಹಿಮವಂತ)**

ಧಾತು ಸಂವತ್ಸರವು ಧುಮ್ಮಿಕ್ಕಿ ಧಾತ್ರಿಯಲಿ
ಧೀಂಕಿಟ್ಟು ನರ್ತಿಸಿತು ರುದ್ರನಂತೆ !
ಧಿಗ್ಗ ಧಿಮಿ ಧಿಮಿ ಕುಣಿತ ದಿಕ್ತಟವನಟ್ಟುತಿರೆ
ನಗ್ನವಾಯಿತು ಭೂಮಿ ಮಸಣದಂತೆ

ಯುಗವಳಿದು ಯುಗ ಹುಟ್ಟಿ ಆಷಾಢ ತೆರಳಿದರು
ಹನಿಮಳೆಯ ಸುಳಿವಿಲ್ಲ ನೋಡಲೆಲ್ಲು ;
ಈಶ್ವರದ ಭೀಷಣತೆ ಘಾಸಿಗೊಳಿಸಿತು ಜಗವ
ಕುಡಿನೀರಿನೆಡೆಯಿಲ್ಲ ಹುಡುಕಲೆಲ್ಲು

ಕೆರೆ ಕಟ್ಟೆ ಕೊಳ ಬಾವಿ ಬತ್ತಿ ಬಾಯಾರಿಸಲು
ಅಂಗಣದಿ ಒಣಹೆಂಟೆ ಬಿರುಕು ಬಿರುಕು
ಬುವಿ ಬೆಸಲೆಯಾದಂತೆ ಬರ ಉಸಿರು ಬಿಟ್ಟಂತೆ
ಭರದೊಳೆದ್ದುದು ಧೂಳು ಸುಟ್ಟುರೆಯೊಳು

ತರುಗುಲ್ಮ ಲತೆಗಳಲಿ ಹಸುರೆಂಬ ಹೆಸರಿಲ್ಲ
ಭೀಕರಸ್ಥಿಗಳಾಗಿ ನಿಂದವಲ್ಲಿ
ಭೂದೇವಿ ಮುಗಿಲೆರೆಯನೆಡೆಗೆ ಕರವೆತ್ತಿದೊಲು
ತಲೆದೆಗೆದ ತೆಂಗುಗಳು ತೋರ್ದವಲ್ಲಿ

ಬೋಳುಮರ ಭೂತದೊಲು ನಿಂದಿರಲು ಅಡಿಯಲ್ಲಿ
ಒಣ ಎದೆಗಳದೊ ಸುತ್ತ ರಾಶಿ ರಾಶಿ
ನೊರನೊರನೆ ತುಳಿತುಳಿದು ಅಲೆದಲೆದು ಸುತ್ತಿದರು
ತಲೆಹುಳುಕ ನಾಯಿಯೊಲು ಮೂಸಿ ಮೂಸಿ

ಬರಮಾರಿ ಬೇಸತ್ತು ಬಿಸಿಲ ಕಾಯಿಸೆ ಕುಳಿತು
ಕೇಶರಾಶಿಯ ಕೆದರಿ ಹರಹಿದಂತೆ
ತೂರಿಬಹ ಕೆಂದೂಳು ಒಣ ತರಗು ತೋರಿದುವು
ಇಪ್ಪೆ ತೋಪಿನ ಬಯಲ ಬಂಡೆ ಮುಂದೆ

ದಟ್ಟಕಾನನ ಕೆಟ್ಟ ತಟ್ಟಿಗೆಯ ತೆರನಾಗಿ
ಕಟಕಟನೆ ಕಿಡಿದು ನೆಲಕುರುಳುತಿತ್ತು
ಸುಟ್ಟುರೆಯ ಸುಳಿಯಲ್ಲಿ ತರಗೆಲೆಗಳಂತಾಗಿ
ಗರಗರನೆ ತಿರುಗಿ ಜನ ಸಾಯುತಿತ್ತು

ಹೊಟ್ಟೆರಾಯನ ಕಾಟ ಬೆಟ್ಟದಷ್ಟಾಗುತಿರೆ
ಕಂಗೆಟ್ಟು ತರಗೆಲೆಯ ತಿಂದರಾಗ
ಬೆಲ್ಲವತ್ತದ ಬುರುಡೆ ಹುಡಿಗೈದು ಮುಕ್ಕಿದರು
ನೆಕ್ಕಿದರು ಮೈಬೆಮರ ಸೋಲುವನಕ

ಕತ್ತಾಳೆ ಗೆಜ್ಜೆಗಳು ಆವಲಿಯ ಮುದಿದಂಟು
ಕಂದ ಮೂಲಗಳೊಂದೂ ಉಳಿಯಲಿಲ್ಲ
ಕೆರೆಯ ಕೊಚ್ಚೆಯೊಳಲ್ಲಿ ಸುಳಿವ ಸೀಗಡಮೀನು
ವಟಗುಡುವ ಕಪ್ಪೆಯೂ ಸಿಕ್ಕುತಿಲ್ಲ

ಹುಣುಸೆ ಬಿತ್ತಗಳಾಯ್ದು ಹುರುದಿ ತಿಂದರು ಎಲ್ಲ
ಅಂಬಲಿಯ ಹೊಯ್ಸಿದರು ಮಕ್ಕಳಿಂಗೆ
ಈಚಲಿನ ಮರಗಳಾ ತಲೆಯನಿಬ್ಬಗಿ ಮಾಡಿ
ಗಿಣ್ಣು ತಿಂದರು ಕಿತ್ತು ಹಸಿವು ನುಂಗೆ

ಹುಳು ತಿಂದ ಮರದಿಂದ ಸುರಿವ ಬಿಳಿ ಸರಿಹಿಟ್ಟ
ಕೊಚ್ಚೆ ನೀರೊಳು ಕದಡಿ ಕುದಿಸಿ ಕುದಿಸಿ
ಕುಡಿದರಾಹಾ ಸಾಕೆ ಬೆಂದೆದೆಯ ಕುದುಗುದಿಗೆ
ತಂಪೆರೆವೆ ತಿನಿಸಿದುವೆ ಒಡಲ ತಣಿಸೆ

ಹೊಲದ ಬಯಲೊಳಗೆಲ್ಲೊ ಅಡಕಿ ಶೇಖರಿಸಿಟ್ಟ
ಇರುವೆಗೂಡಿನ ಕಣಜ ಸೂರೆಯಾಯ್ತು,
ನುಣ್ಣನೆಯ ಕೆಮ್ಮಣ್ಣು ಹಸಿಯ ಹಿಟ್ಟೊಳು ಬೆರಸಿ
ಮುದ್ದೆಗೈದದ ಕಿತ್ತು ತಿಂದುದಾಯ್ತು

ಏನು ತಿಂದೊಡಮೇನು ಉದರ ತಣಿಯಲು ಬಹುದೆ
ಮಣ್ಣು ಮರ ತಿಂದು ಜನ ಬಾಳಲಳವೆ !
ಅನ್ನದಾಹಾಕಾರ ಮೊಳಗಿ ಮೊರೆಯಿಡಲೆಲ್ಲಿ
ಭೂಮಿತಾಯಿಯೆ ಬಂಜೆಯಾದ ಮೇಲೆ !

ಹಗೆಲೆಲ್ಲ ಬಿಸಿಲ ಧಗೆ ಇರುಳೆಲ್ಲ ಅರಿಲ ನಗೆ

ತುಣುಕು ಮುಗಿಲಿನ ಸುಳಿವು ತೋರದಯ್ಯೋ
ಧಗ ಧಗಿಸಿ ದಟ್ಟಯಿಸಿ ದಗ್ಧವಾಗಿರೆ ಭೂಮಿ
ಮುಗ್ಧ ಪಶುಗಳ ಬಲಿಯು ಮುಗಿಯಲಿಲ್ಲೊ

ಉರಿಯಿಲ್ಲದಗ್ನಿಯಲಿ ಬೆಂದು ಬೆಂಡಾಗುತಿರೆ
ಬಿಸಿಲು–ಕುದುರೆಯ ನಾಟ್ಯ ಸುತ್ತ ಮುತ್ತ
ರಣ ರಣಾ ರಣ ರಣಾ ತಿಗುರಿ ರಿಂಗಣ ಕುಣಿತ
ಕಾಣ ಬಂದುದು ನೀರ ಬೆಮೆಯ ತರುತ

ಬಿತ್ತರದ ಬಾನು ಬರಿ ಬತ್ತಲೆಯ ಬಯಲಾಗೆ
ಸತ್ತವರ ಮೊತ್ತವದು ಸತ್ತುದಿಲ್ಲ
ಕತ್ತಲಿನ ಕಡಲಿನಲಿ ರಕ್ತ ಭೂವಲಯದಲಿ
ನಕ್ತಚರರಾಗಿ ಜನ ಸುಳಿದರೆಲ್ಲ

ಊರು ಊರುಗಳಲ್ಲಿ ಕೇರಿ ಕೇರಿಗಳಲ್ಲಿ
ಅಗಳೇರಿ ಹಾದಿಯಲಿ ತಿಪ್ಪೆಯಲ್ಲಿ
ಎತ್ತ ನೋಡಿದೊಡತ್ತ ಸತ್ತ ಹೆಣಗಳ ಬಣಬೆ
ಹೊತ್ತು ಹೂಳುವರಿಲ್ಲ ಸುಡುವರಿಲ್ಲ

ಮಡದಿ ಮಗು ಮನೆಮಾರು ನೂರಾರು ಹರಿಹಂಚು
ದೆಸೆ ದೆಸೆಗೆ ಮತಿಗೆಟ್ಟು ನಡೆದುವೆಲ್ಲೊ
ದನಕರುಗಳಾರವೋ ಕಟ್ಟುವರೆ ಕಾಯುವರೆ !
ಹುಲ್ಲು ನೀರಿಲ್ಲದಲೆ ಮಡಿದುವೆಲ್ಲೊ

ಬರಬಿಸಿಲ ಬೇಗೆಯಲಿ ಬೆಂದ ಹೆಣಗಳು ಸೀದು
ಸೀಕುರಿಗಳಾಗಿ ಒಣ ತೊಗಟೆಯಾಗಿ
ಗೂಡುಗಂಗಳ ತೆರೆದು ಹಲ್ಲ ಚಿಲಿ ಚಿಲಿ ಬಿಟ್ಟು
ಚೀರಿದುವು ಹಸಿದ ಬೆಂತರಗಳಾಗಿ

ಹಸಿ ಹೆಣದ ಒಟ್ಟಲಿನ ತುಳಿಯಲದೊ ರಣಹದ್ದು
ಸಂತೆ ಸೇರಿವೆ ತಿನಿಸುಕೊಳ್ಳಲೆಂದು !
'ಕೊರ ಕೊರಾ ಕೊಟ್ ಕೊಟ್' ಎಂದೇನೋ ಹಾಡುತಿವೆ
ನಲಿದು ನರ್ತನಗೈದು ಖಂಡ ತಿಂದು

ಕಾಗೆಗಳು ಪಾಲ್ಗೊಳ್ಳಲು ಪಟ್ಟಪಾಡಿನಿತಲ್ಲ
ರೆಕ್ಕೆಗಳ ಹೊಡೆತಕ್ಕೆ ಮಡಿದುವೆನಿತೊ
ಧೀರ ರಣ–ಹದ್ದುಗಳು ಗೆದ್ದು ಮದದಲಿ ಮೆರೆಯೆ
ಕದ್ದು ತಿಂದುವು ಮುದ್ದೆ ಮಜ್ಜೆ ಮಾಂಸ !

ಆವುದೊ ಹೋರಾಟ ಏನೇನೋ ಕಚ್ಚಾಟ
ಆವ ರಾಜ್ಯದ ಪದವಿ ಗಳಿಸಲೆಂದೊ !
ಹೆಣಕೊ ಮೇಣ್ ಹೆಣ್ಣಿಗೋ ಮೆದು ನೆಣದ ಪಾಲಿಗೊ !
ಕಳಿತ ಬಂಬಲುಗರುಳ ಮೆದ್ದಲೆಂದೊ !

ಚೀರಾಟ ಬೋರಾಟ ರೆಕ್ಕೆಗಳ ಬಡಿದಾಟ
ಪಟ ಪಟಿಸಿ ಸಾಗಿತ್ತು ರಂಗದಲ್ಲಿ
(ತುತ್ತು ಕೂಳೂಣಲಿಕ್ಕೆ ಕಿತ್ತಾಡಿದವರೆನಿತೊ

ಹದ್ದಿಗಿಂ ಮಿಗಿಲಾಗಿ ಬಾಳಿನಲ್ಲಿ)

ಅದೊ ಅಲ್ಲೆ ಕುಳಿಯಲ್ಲಿ ಎರಡು ಒಂದೆಡೆ ಸೇರಿ
ನಡೆಸಲಿವೆ ಮೋದದಲಿ ಪ್ರಣಯಕೇಳಿ !
ಒಂದೆ ತುಂಡನು ಎರಡು ಕಚ್ಚಿ ಮುಂಡಾಡುತಿವೆ
ಕೊಕ್ಕು ಕೊಕ್ಕೊಳು ಬೆರಸಿ ರೆಕ್ಕೆಗಳಚಿ

ಸವಿಯು ಬಲು ಸವಿಯೆಂದು ಬತ್ತುಬಾಡಲು ತಿಂದು
ಬಕ ಬಕನೆ ಓಕರಿಸಿ ಕಕ್ಕಿತೊಂದು ನರಮಾಂಸ
ನರರಕ್ತ ಬಯಸಿದರು ದೊರೆತೀತೆ
ಮೆಲು ಮೆಲನೆ ತಿನ್ನೆಂದು ಕುಕ್ಕಿತೊಂದು

ಮೋರೆ ಮುಗಿಲೆಡೆ ನೀಡಿ ಮೂತಿ ಸೊಟ್ಟಗೆ ಮಾಡಿ
ಓಡುತಿದ್ದಿತದೊಂದು ಖಂಡ ತಿಂದು
ಹೊಟ್ಟೆಯಾತುರದಿಂದ ಬಿರುಸಿನಲಿ ತಲೆ ಕುಟುಕಿ
ದೂರ ಸಾರುತಲಿತ್ತು ಚಂಚು ನೊಂದು

ಬಾಂದಳದ ಬಯಲಿನಲಿ ಕಪ್ಪು ಕಾವಣ ಕಟ್ಟಿ
ಚಲಿಸುತಿವೆ ಹದ್ದುಗಳು ಮೇಲೆ ಕೆಳಗೆ
ಕರಿನೆಳಲ ತಂಪಿನಲಿ ಸರ್ಪಕಾವಲಿನಲ್ಲಿ
ಸುಪ್ತವಾಗಿವೆ ಮುಕ್ತ ಜೀವಜಂತು !

ಅಲ್ಲೆ ಬಳಿಯಲಿ ನಾಯಿ ನೆರೆದಿಹವು ನೇಮದಲಿ
ಎಲುವುಗಳ ಕಟಕಟನೆ ಕಡಿಯುತಿಹವು
ಒಂದರೊಡನಿನ್ನೊಂದು ಗುಡುಗುಟ್ಟಿ ಮುಳಿದಿಹವು
ಕೆಂಗಣ್ಣ ಕೇಸುರಿಯ ಸುರಿಸುತಿಹವು

(ಗತಜೀವಿ ಆನವನ ಅಡಬಳಕೆ ಚಡಬಡಿಪ
ಶುನಕಗಳ ಸೇಡಿಂದು ತೀರ್ದುದಲ್ಲ !
ನರರು ನಾಯ್ಗಳ ಕೊಣದು ಕುನ್ನಿಗಳ ಹರಿಹರಿದು
ಹಸಿವು ತಣಿಸಿದ ದಿನವು ಇರ್ದುದುಂಟು)

ಉಳ್ಳಾಕಿ ಉಲಿದುಲಿದು ಗುಳ್ಳೆನರಿ ದರದರನೆ
ಎಳೆದೊಯ್ದಿತಲೊಂದು ಮುತ್ತ ಹೆಣನ
ಡುಬ್ಬು ಹೊಟ್ಟೆಯ ಮೇಲೆ ಡಬಡಬಿಸಿ ಹೊಡೆಹೊಯ್ದು
ತಿಂದುವುಗಿಬಗಿ ಮಾಡಿ ಮೂಳೆ ಜಘನ

ಅತ್ತಲದೊ ರಣಹದ್ದಿನೊಡನೆ ಹೋರಾಡುತಿದೆ
ಜೀವ – ಹೆಣ ಬರಿದೆ ಕೈ ಬೀಸಿ ಬೀಸಿ !
ರಪ ರಪನೆ ಬಡಿ ಬಡಿದು ನೆತ್ತರೀಂಟುತಲಿಹುದು
ಮಾರು ಮೂತಿಯ ಹದ್ದು ಮುಂದೆ ಚಾಚಿ !

ಗಬ್ಬ ತುಂಬಿದ ಹಸುವು ಈನು–ಬೇನೆಯ ತಡೆಯ –
ಲಾರದೆಯೆ ಸೊರ ಸೊರಗಿ ಸತ್ತು ಬಿತ್ತು
ನಿಡಿದು ನಾಲಗೆಯನ್ನು ಕಟವಾಯಿನೊಳು ಕಚ್ಚಿ
ಅರೆಹೊರಗೆ ಬಂದ ಕರು ಅಂತೆ ಇತ್ತು !

ಬತ್ತಿ ಬಾಡಿದ ಮೊಲೆಯು ನಡುವಿನೆಡೆ ನೇತಿರಲು
ಕಂದನದ ಕಚ್ಚಿಹನು ಹಾಲು ಹಿಣಿಯೆ
ತೋಳ ತೆಕ್ಕೆಗೆ ಸಿಲುಕಿ ಕರುಳ ಕುಡಿ ಕನಲುತಿರೆ
ಉಸಿರುಗಳೆದಳು ಅಯ್ಯೋ ಕಾಲ ಮುನಿಯೆ !

ಕರೆಯಲಾರದು ಕೈಯಿ, ಕೂಗಲಾರದು ಬಾಯಿ
ಕಣ್ಣ ಪಿಳಿ ಪಿಳಿ ಬಿಟ್ಟು ರೋದಿಸುತಲಿ
ಹಡೆದವರ ಅರಸುತ್ತ ಶಿಶುವು ಸೇರಿತು ಸಗ್ಗ
ಸಾಕು ಸಾಕೋ ಶಿವನೆ ನಿಗ್ಗ ಕಗ್ಗ !

ಮಾತು ಮುಗಿದಿರಲಿಲ್ಲ ಕತೆಯು ಮುಡಿದಿರಲಿಲ್ಲ
ಕೇಳಿಸಿತು ರೋದನವು ಸನಿಹದಿಂದೆ
ಚಂದಿರನ ಮಂದಿರಕೆ ಚೆಂಡಾಡಿ ಬರಹೋದ
ಹಸುಳೆಗನಸಿನ ಮುದ್ರೆಯೊಡೆಯುವಂತೆ !

ಯಾವುದೋ ತಾಯ್ ದೆವ್ವ ಎದೆಗೆ ಕಂದನ ತಬ್ಬಿ
ಬಿಕ್ಕಿ ಬಿಕ್ಕಳುತಿತ್ತು ಒಂದೆ ಸಮನೆ !
ಕೆಂಗಿ ದೆವ್ವವು ತೋರ ಬೆರಳು ಮಾಡಿತು ಅತ್ತ
'ಅವಳೆ ಆ ತಾಯವ್ವ !' ಎಂದಿತೊಡನೆ

'ಇಂದಿಗೂ ಮಗಿದಿಲ್ಲ ಅವಳ ಗೋಳಿನ ಗೀತೆ
ಕಡೆಯೆಂದಿಗೋ ಕಾಣೆ ಶಿವನೆ ಬಲ್ಲ !
ಅವಳ ತೋಳೆಡೆ ಕೂಸು ತೊಡೆಯುಳಿದು ನಡೆಯದೌ
ಮಡಿದರೂ ಕರುಳಿನಾ ಮಮತೆಯಳಿದಿಲ್ಲ !

ತುಂಬು ಹರೆಯದ ತರುಣಿ ಮರದ ಕೊಂಬೆಗೆ ಅಂತು –
ಕೊಂಡಲ್ಲೆ ಅಸುಗಳೆದು ನಿಂದಳೆಂದೊ
ಸೆಟೆದು ನಿಂದಿಹ ದೇಹ ಗೆದ್ದಲನ ಗೂಡಾಯ್ತು
ಕೆನ್ನೆ ಕಣ್ ಜಘನ ಎದೆ ತೂತು ತೂತೊ !

ಅದೊ ಅವಳೆ ಬಂಡೆಯಡೆ ಶೂನ್ಯವನೆ ನಿಟ್ಟಿಸುತೆ
ಎಂದಿನಂತೆಯೆ ನಿಂದಿರುವಳವಳೆ ನಾರಿ
ಮೋನದಾ ರಾಗದಲಿ ಮನದನ್ನದನು ನುತಿಸಿ
ಕಾಯುತಿರುವಳು ಹಾದಿ ಮುಗುದೆ ಗೌರಿ !'

'ಇವಳಾರು ಕೆಂಗವ್ವ ಮುಡಿಗೆದರಿ ಕುಳಿತಿಹಳು
ಕೈಯೊಳೆಂಥದೊ ಬೊಂಬೆಯಿರುವುದಲ್ತೆ !
ಮೋರೆ ಮೈ ಸಿಳ್ಳುಗುರೊ ! ಬಿರಿದುಗ್ರ ದಾಡೆಗಳೊ !
ತೋರುವಳು ರಣಚಂಡಿ ಕಾಳಿಯಂತೆ !'

'ಓಹೋ ! ಇವಳೇ ! ಇವಳ ಕಥೆ ಬಲುದೂರ, ಮಲ್ಲು
ಹೇಳುವೊಡೆ ನಾಲಗೆಯದೇಳದೇಕೊ ?
ಇವಳು ಬೀರನ ಮಡದಿ ಹೆಸರು ಮಾರವ್ವ
ಕೈಯ ಬೊಂಬೆಯದಲ್ಲ ಹೇಳಬೇಕೊ ?"

'ಪೇಳೆ ಅಂಜಿಕೆಯೇನು ?' 'ಪೇಳುವೊಡೆ ಹಿತವಲ್ಲ'
'ಕೇಳಿದಿನಿತೂ ಕತೆಯು ಹಿತವಾಯ್ತೆ ತಾಯಿ ?'

'ಆಡೊಡಾಲಿಸು ; ತನ್ನ ಕಂದನನೆ ತಿಂದವಳು
ಹಸಿವಿನಬ್ಬರಕಾದಳಾ ತಾಯಿ ನಾಯಿ !

ತಿರಿತಂದ ಹಿಡಿಕೂಳ ತಿಂದ ಕಂದನ ಕೊಂಡು
ಮರೆಯೊಳೆಲ್ಲೋ ಈಕೆ ಕೊಂದಳಂತೆ !
ಹಸುಳೆ ಬಸಿರನು ಕಿಸಿದು ಕರುಳ ಸೇರುತಲಿದ್ದ
ಅನ್ನವನು ಬಳಿಬಳಿದು ತಿಂದಳಂತೆ !'

'ಸಾಕು ನಿಲ್ಲಿಸು ತಾಯೆ ' 'ಮನಸಿಗಲಸಿಕೆಯಾಯ್ತೆ ?'
'ಇಲ್ಲವ್ವ ಮತಿಗೇಕೋ ಮೂರ್ಛೆ ಬಂತು !
ನಾನಾಗೆ ಎಂದೆನಲು ಇನಿತು ಪೀಠಿಕೆ ಬೇಕೆ ?
ನನ್ನ ಬಾಳ್ಗತೆಗಾಯ್ತೆ ಬರವೆ ಹೇತು ?'

'ಅಹುದಹುದು ಮಲ್ಲಿಗೆಯ ನನ್ನೆದೆಯ ನಂದನವೆ
ಧಾತು ಈಶ್ವರ ಬರದ ಇತಿಹಾಸವು !
ಇಂದಿನನುಕೂಲಗಳು ಅಂದೆಲ್ಲಿ ಬರಬೇಕು
ಮೌಢ್ಯ ಮನೆ ಮಾಡಿರಲು, ಇಲ್ಲ ಅರಿವು

ಇದೆ ಬಿಳಿಯ ಕಲ್‌ಗುಡ್ಡ ಕಾಡುಸಿದ್ಧರ ಬೆಟ್ಟ
ಮಹಿಮವಂತರ ಬೀಡು ಪುಣ್ಯತಾಣ
ಅಂದಿಗೂ ನೀರುಕ್ಕಿ ಚಿಲಚಿಲನೆ ಹರಿಯಿತ್ತು
ನೆಳಲಿಗಾಸರೆಯಾಗೆ ಗುಹೆಯಂಗಣ !

ಮಹಿಷೂರ ಒಡೆಯರುಗಳಲ್ಲೊಂದು ತೆರೆಸಿದರು
ಜೀವವುಳಿಸಲಿಕಾಗಿ ಗಂಜಿಕೇಂದ್ರ !
ಸುತ್ತ ಹಳ್ಳಿಯ ಜನತೆ ಸುತ್ತುಗಟ್ಟಿತು ಇಲ್ಲಿ
ಸಾಗರವೇ ಆಯ್ತು ಘನ ರುಂದ್ರ ಸಾಂದ್ರ !!

ಹಿಟ್ಟು ಸಾಲದೆ ಬರಲು ಬೂದಿ ಹೊಯ್ದರು ಭಟರು
ಮುದ್ದೆಗೈದದ ತಿಂದು ಬದುಕಲುಂಟೆ ?
ಒರಗಿದರು ಅಲ್ಲಲ್ಲೆ ಬಂಡೆಗಳ ಬದಿಯಲ್ಲಿ
ಸುರುಟಿಕೊಂಡರು ಬೆಂದ ತರಗಿನಂತೆ !

ಊರು ಕಟ್ಟಾಳುಗಳು ಎತ್ತಿ ಹೆಣಗಳ ಹೊತ್ತು
ತಂದಿಲ್ಲಿ ಅಗೆದಗೆದು ಮರೆಗೈದರು
ಅಂತರಂಗದ ಆಸೆ ಹಸಿಯಿದ್ದ ಕಾರಣದೆ
ಬೆಂತರಗಳಾಗಿಹರು, ನೋಡು ಇವರು !

ಇರಲಿ, ಆ ಕಥೆ ಬೇಡ, ನಿನ್ನ ಜನನಜ ಕಥೆಯ
ಪೇಳುವೆನು ಕೇಳವ್ವ ಮಗಳೆ ಮಲ್ಲು
ನಮ್ಮ ಕುಲದವಳಲ್ಲ ನೀನು ಬ್ರಹ್ಮರ ಕುವರಿ
ಮಡದಿ ರಾಮಣ್ಣನಿಗೆ, ಇರಲಿ ನಿಲ್ಲು !

"ಅಂದದಚ್ಚರಿ ! ಜನವು ತೊರೆಯಾಗಿ ಹರಿದಿತ್ತು
ಊರಾಚೆ ನಿಂತಿರುವ ಒಂಟಿ ಮನೆಗೆ !
ಶ್ಯಾನುಭೋಗರ ಮನೆಯು ದೇವದೂತನ ನೆಲೆಯು
ಅದುವೆಂದು ಅರಿವಾಯ್ತು ಕಟ್ಟಕಡೆಗೆ !

ಮೂರ್ತಿರಾಯರು ಕಂಡು ಸೂರೆಗೊಟ್ಟರು ಎಲ್ಲ
ತಮ್ಮ ಬಾವಿಯ ನೀರುಗಸಿಯ ಸಹಿತ !
ಕಾಳಿಲ್ಲ ಕೂಳಿಲ್ಲ ಕುಡಿಯಲಿಕೆ ನೀರಿಲ್ಲ
ಬೆಸಲೆಯಾದಳು ಪತ್ನಿ ಬನ್ನಬಡುತ !

ದಿನವೆರಡು ಕಳೆದಿರಲು ಮುಗಿಸಿದಳು ಬಾಳುವೆಯ
ಹೆಣ್ಣು ಬಮ್ಮಟೆಯೊಂದ ಕೈಯೊಳಿತ್ತು!
ಎದೆಯ ಬೆಂಕಿಯ ತಣಿಸೆ ಕಾಷ್ಠದಗ್ನಿಯ ಮಾಡಿ
ಉರಿಯ ಸೆರಗೊಳು ಮರೆಯಗೈದುದೆಂತು !

ತಾಯಿ ಕಾಣದ ಶಿಶುವು ಬಾಯಿ ಬಾಯ್ ಬಿಡುತಿರಲು
ಎತ್ತಿ ತಂದರು ನಿನ್ನ ನಮ್ಮ ಬಳಿಗೆ
'ನನ್ನ ನೆಚ್ಚಿನ ಕೆಂಗ–ಕೆಂಗಿಯರಿರಾ ಕೊಳ್ಳಿ
ಇಂದಿನಿಂ ನೀವಿದಕೆ ತಾಯಿ ತಂದೆ !

ಇಂದಿನೀ ಬರಗಾಲ ನಾಳೆ ಸುಗ್ಗಿಯಕಾಲ
ಅದನುಣ್ಣುವಾ ಸೈಘು ನಿಮ್ಮಗಿರಲಿ
ಮಕ್ಕಳಿಲ್ಲದ ನಿಮಗೆ ಇವಳೆ ಸತ್ಪುತ್ರಿಯೈ
ತಬ್ಬಲಿಗೆ ತಾಯ್ತಂದೆ ನೀವಾಗಿರಿ !

ಮುನಿಯದಿರಿ, ಮುರಿಯದಿರಿ, ನಮ್ಮ ಕರುಳಿನ ಬಳ್ಳಿ
ನಿಮ್ಮ ನೆಲದೊಳು ಬಳಿದು ಮಘ ಮಘಿಸಲಿ !
ನಿಮಗಿನ್ನು ಶುಭಮಕ್ಕೆ ಧರೆಗೆ ಮಂಗಳಮಕ್ಕೆ
ಸತ್ಯಕ್ಕೆ ಗೆಲಮಕ್ಕೆ ! ಶಾಂತಿ ನಿಲಲಿ !

*****

ಹರಕೆ ಕೈಗೂಡಿತೋ ಆಶಯವೆ ಫಲವಾಯ್ತೊ
ಅವರತ್ತ ಕಾಲ್ತೆಗೆಯೆ ಮುಸುಕಿ ಮೋಡ
ಬಿರುಗಾಳಿ ಬೆಂಬತ್ತಿ ಬಾನನಂಡಲೆಯಿತ್ತು
ಕಾಲೂರಿತಿಳೆಗಂದೆ ಮಳೆಯು ನೋಡ !

ಹೊಳೆ ಹರಿದು ಧಗೆಯಳಿದು ಬೆಂದ ನಲೆ ನೀರುಂಡು
ಹಸುರಿನಾನಂದದಲಿ ಪುಳಕಗೊಂಡು
ಹಕ್ಕಿಯಿಂಚರ ಗಾನ ಪರಿವ ಪೊನಲಿನ ತಾನ
ಚೆಲುವಿನಾ ಚಿಲುಮೆಯೀ ಧರಣಿ ಗಹನ !

ಬಹುಧಾನ್ಯ ವತ್ಸರದಿ ಎಲ್ಲೆಲ್ಲು ಬಹು ಧಾನ್ಯ !
ತಿಂದುಣುವ ದನವಿಲ್ಲ, ಇಲ್ಲ ಮನುಜ !
ಹೊಲಮಾಳ ಊರುಗಳು, ಮೊರಡಿ ಮಲೆಯಾದುವೈ
ತಿಪ್ಪೆ ತೋಪುಗಳೆಲ್ಲ ದಿನಸಿ ಕಣಜ !

ಅನಿತರೊಳಗಲ್ಲೆದ್ದ ಬೊಬ್ಬೆಯಬ್ಬರಿಸಿತ್ತು
ರಾಮಣ್ಣದೆವ್ವನೊಡೆ ಬೀಸಿ ಬಂದು !
'ಏಳಿರೇಳಿರಿ ಎಲ್ಲ ಗೋರಿಗುಹೆ ಸೇರಿಕೊಳಿ
ಕೆಂಗಜ್ಜ ಮಲ್ಲಿಗೆಯನರಸಿಕೊಂಡು

ಇದೊ ಇಲ್ಲೆ ಬರುತಿಹನು ಊರ ನಾಲ್ವರ ಕೂಡಿ
ಸಾಕು ನಿಲ್ಲಿಸಿ ನಿಮ್ಮ ವಿಷಯಗೋಷ್ಠಿ !'
ಎಂದು ನುಡಿದಾ ದೆವ್ವ ಮಲ್ಲಿಗೆಯ ಮುದ್ರಿಸಿತು
'ಮನದನ್ನೆ ನಾಳೆ ಬಾ ಪಡೆವ ಭೆಟ್ಟಿ'

'ಬಂದಿಹೆನು ಎದೆಯನ್ನ ಇಂದೆ ಬಾ ನಗೆಯಾಡು'
'ಕಾಲ ಮೀರಿದುದಿಂದು ನಾಳೆ ಬಾರೆ'
'ಇಲ್ಲಿಲ್ಲ ಓ ಒಲವೆ, ನಿನ್ನನುಳಿದರಗಳಿಗೆಯೂ
ನಾನಿಲ್ಲಿ ನಿಲಲಾರೆ ಹಿಂದೆ ಬರುವೆ'

ಮರ ಮರಳಿ ನುಡಿಯುತಲೆ ತರಳೆ ತೋಳುಗಳೆತ್ತಿ
ತಬ್ಬಿದ್ದಳಾರವೋ ತೊಡೆಗಳನ್ನು
ಗಂಡ ರಾಮಂಗೆತ್ತು ಕಣ್ತೆರೆಯೆ ಕಂಡಳಹ
ತುಂಬುಗಂಬನಿ ಕಣ್ಣ ಕೆಂಗನನ್ನು !

'ನನ್ನ ಕಣ್ಣಿನ ಬೆಳಕೆ ನನ್ನ ಜೀವನದುಸಿರೆ
ಇಲ್ಲಿಗೇತಕೆ ಬಂದ ನಸುಕಿನಲ್ಲಿ ?
ಅಮ್ಮ ನೆನೆದಳೆ ನಿನ್ನ ? ಏನೆಂದು ಹೇಳಿದಳು ?
ವರ್ಷದೆಡೆ ಬೇಡಿದಳೆ ಕನಸಿನಲ್ಲಿ ?'

'ಅವಳಿಗೇತಕೆ ಕೂಳು ಧೂಳು ಧೂಳಾದಳಿಗೆ
ಕರುಳು ಕೂಗಿದುದಪ್ಪ ಕಳೆದ ಇರುಳು
ಅಮ್ಮ ಬಂದಳು ಇಂದೆ ಎನ್ನ ಬಾಳ್ಗತೆಯನ್ನು
ಬಿತ್ತರಿಸಿ ನೀವು ಬರೆ, ಮರೆಯಾದಳು !

ನುಡಿಯಲೇನಿದೆ ಹೇಳು ಎನಗಿಂದು ಅಪ್ಪಯ್ಯ
ಹೊರೆಯಾದೆ ನಿಮಗೆಲ್ಲ, ವ್ಯರ್ಥ ಬಾಳು
ತಾಯಿ ಸಗ್ಗವ ಸೇರೆ ತಂದೆ ಕಾಶಿಗೆ ಹೋದ
ನಿಮಗು ಆಗಿಹೆನಿಂದು ದೊಡ್ಡ ಗೋಳು !'

ಕುಸಿದು ಬಿದ್ದನು ಮುದುಕ ಕಸದ ಬುಟ್ಟಿಯ ತೆರದಿ
ಕೈಕಾಲ ಕೀಲುಗಳು ಕಳಚಿದಂತೆ !
ಮಗಳ ತಲೆ ನೇವರಿಸಿ ಸಂತಯಿಸಲೆಳಸಿದನು
ಉಕ್ಕುವಾಲಿಗೆ ನೀರನೆರೆಯುವಂತೆ !

ಮಂಜು ಮರೆಯಾಗಿತ್ತು ಬಿಸಿಲು ಮೇಲೇರಿತ್ತು
ಪರಿವ ನದಿ ಎಡವದೇ ನಡೆಯುತಿತ್ತು
ಬಿಮ್ಮೆನುವ ಬೆಟ್ಟವೂ ಗುಮ್ಮೆನುವ ಗುಹೆಗಳೂ
ಕೆಮ್ಮನೆಯ ಗೋರಿಗಳು ಮಲಗಿದ್ದುವು !

# ಕೆಂಗನ ಕಲ್ಲು

**ತೃತೀಯ ಸಂಪುಟ**
**(ಶಿರ)**

ಅದುವೆ ಕೆಂಗನ ಕಲ್ಲು ಇಂದಿಗೂ ನಿಂತಿಹುದು
ಗತಕಾಲದಿತಿಹಾಸ ಸಾಕ್ಷಿಯಾಗಿ
ಅಳಿದುವೆನಿತೋ ಜೀವ ಮಡಿದುವೆನಿತೋ ರಾಜ್ಯ
ನದಿಯಂತು ಹರಿಯುತಿರೆ ಸತತವಾಗಿ

**ಕೆಂಗನಕಲ್ಲು**
**(ಶಿಶಿರ)**

'ನಕ್ಕುಬಿಡು ಸಾಕೆನಗೆ ! ಮುನಿಸೇಕೆ ಮನದನ್ನೆ ?
ಮುಚ್ಚಂಜೆ ಮುತ್ತೈದೆ ಮುಳಿಯೆ ಶೋಭೆಯೆ ಪೇಳು ?
ಮೌನ ಮುದ್ರೆಯನೊಡೆದು ನುಡಿಸು ಬಾ ವೀಣೆ, ಕೃತಿ
ಸ್ವತಂತ್ರದ ತಂತ್ರಿ ಶ್ರುತಿತಪ್ಪಿ ತಾನಸ್ಫುಟಾ
ಸ್ರೋತ ರವವೊಸರುತಿದೆ ಬಾ ಇಂದೆ ಶ್ರುತಿಗೈದು
ರಾಗಮಾಲಿಕೆ ಬಿಡಿಸಿ ನಾದಬ್ರಹ್ಮವ ಸೇರು
ಬರಿಯ ಬೆಳ್ಮುಗಿಲೇರಿ ಬಾನಲೆವ ಕವಿಯಲ್ಲ
ಕಲ್ಪನೆಯ ತಲ್ಪದಲಿ ತಾನೊಬ್ಬನೇ ಮಲಗಿ
ಸುರಕಾಮಿನಿಯರೊಡವೆರೆದು ಸಗ್ಗ ಸುರೆಯನು ಸವಿವ
ಕನಸುಣಿಯು ನಾನಲ್ಲ, ನೈಜತೆಯ ಪಾಡುವೆಂ

ಸತ್ಯಸೂರ್ಯನ ಮರೆಸಿ ನಿತ್ಯತೆಯ ಸಾರುವೆನು
ಶರದ ಹಿಮವಂತಗಳ ಶೈಲ ಶೃಂಗಗಳೇರಿ
ಶಿಶಿರ ಸಂಪುಟವೆತ್ತ ತ್ರೈಕೂಟದಗ್ರಕ್ಕೆ
ಕರೆದೊಯ್ವೆ ಬಾ, ಬೇಸವರೆ ? ನಾ ಬಲ್ಲೆ ನೀ ಮಳ್ಳಿ
ಹುಸಿಮುನಿಸಿನಿಂದೆನ್ನ ಮನಸೆಳೆವ ಯತ್ನವಿದು
ಮರುಳ ನಾನಾದರೂ ಮರುಳಾಗೆ ಮುಳಿಸಿಂಗೆ !
ನೀನೊಮ್ಮೆ ನಕ್ಕುಬಿಡು ಸಾಕದುವೆ ಸಂಜೀವಿನಿ !
ಸತ್ತ ಚಿತ್ತಕೆ ಮತ್ತೆ ಚೇತನವ ತುಂಬುವುದು
ನೀ ಸ್ಫೂರ್ತಿಕನ್ಯೆ ! ತಳುವದಿರು ತರಳೆ, ಪೊಳ್ತಳಿವ
ಮುನ್ನಮೇ ಪಾಂಥ ಮುಗಿಸಬೇಕಲ್ತೆ ತನ್ನ

ದೈನಂದಿನ ಪಯಣಮಂ ಪವಿತ್ರ ಯಾತ್ರೆಯಂ
'ಸಾಕ್ನಾಕು ಸುಮ್ಮನಿರಿ ಕೇಳ್ದವರು ನಕ್ಕಾರು !'
'ನಗಲಿ ಬಿಡೆ, ನಗಲಿ ಬಿಡು, ಮನುಜ ನಗುತಿರಬೇಕು !
ಅದುವೆ ಸಾಂಕ್ರಾಮಿಕವು, ಕೇಳ್ದರಿಯೆಂಯೇಂ ಗಾದೆ,
'ನಗೆ ನೀನು ಜಗವು ನಿನ್ನೊಡಗೂಡಿ ನಗುವುದೆಂದೂ
ಅತ್ತರೆ ಅಳಬೇಕು ನೀನೊಬ್ಬಳೇ ಒಂಟಿ'
'ಸಾಕು ನಿಲ್ಲಿಸಿ ತತ್ತ್ವ, ಕತೆಯೊಂದ ಪೇಳಿರೆನೆ
ಹಿಮವಂತ ! ಹನುಮಂತ ! ನಗುವಂತ ! ಒಣಕಂತೆ!'
'ಅಲ್ತಲ್ತು ಎದೆಯನ್ನೆ ನನ್ನ ಕಾವ್ಯಶ್ರೀಗೆ ನಾನಿಟ್ಟ
ತಿಲಕವನು ಕೇಳ್ದರಿಯಯೇಂ ನೀನು ನನ್ನ ಕೆಂಗನಕಲ್ಲು ?'

ಹ್ಞಾ ! ಅದೇ ಪೇಳಿರಿಂ, ನಾನ ನಿಮ್ಮ ಬೇಳ್ದ ಕತೆ
ಏನಾದಳಾ ಮಲ್ಲಿ ? ಕೆಂಗಜ್ಜನೇನಾದನ್ ?
ಶಿವನು ಪುಟ್ಟುವ ಮುನ್ನ ಪೇಳಿದ್ದಿರಾ ಕತೆಯ
ಮತ್ತೊಮ್ಮೆ ಪೇಳಿರೇ ಬರದಕತೆ ವಾಸ್ತವತೆ !'
ಮನೋರಮೆಯಂದು ಮುದ್ದಣನ ಬೇಡಿದಂದದಲಿ
ಬೇಡಿ ಬರೆಸಿದಳೆನ್ನ ವೀಣೆ ನನ್ನೆದೆಯ ಸಾಮ್ರಾಜ್ಞಿ
ಕಳೆದೇಳು ವತ್ಸರಗಳಿಂದ ವಿಶ್ರಾಂತ ವಿಶ್ರಾಂತಿ
ಗೈದೆನ್ನ 'ಕೆಂಗನ ಕಲ್ಲು' ಮತ್ತೆ ಜಾಗೃತವಾಗಿ
ನಡೆಯಲುಜ್ಜುಗಿಸಿತ್ತೈ ಸ್ಫೂರ್ತಿಗೊಂಡು !
ಮಲ್ಲಿಗೆ

ಮರಳಿದಳು ಮನೆಗೆ ಕೆಂಗಜ್ಜರೊಡಗೂಡಿ,
ತನ್ನೊಳಗೇನನೋ ಕೆಮ್ಮ ಕೆಮ್ಮನೆ ನುಡಿದು ನಗುವಳು
ಮತ್ತೆ ಕೂಗುವು ಕತ್ತ ಮೆಲೆತ್ತಿ ಶೂನ್ಯವನೆ

ನಿಟ್ಟಿಸುತೆ ನಿಲ್ಲುವಳು; ಹೇಳ ತೀರದ ಮಾತ
ಮೌನದಲೆ ಸಾರುವಳು, ಕಣ್ಣುಗಳ ಕಾಸಾರ
ಕೋಡಿವರಿದೆತ್ತತ್ತಲುಂ ಪಸರಿಸಿತ್ತು !
ನಡುಗಿದನು ಕೆಂಗಜ್ಜ ತತ್ತರಿಸುತೋಡಿದನು
ಜೋಯಿಸರ ಕರೆತಂದು ಬರೆಸಿ ಕಟ್ಟಿದ 'ಚೀಟು'
ಮಂತ್ರವಾದಿಯ ತಾಯ್ತ ತೋಳ ಮೇಲೇರಿತ್ತು
ಕೋಳಿಯನು ಬಲಿಗೊಟ್ಟು ಚೆಂದದನ್ನವ ಚೆಲ್ಲಿ

ಮಂಡಲವ ಬರೆಸಿ ಮನೆಗಾವ ಪೀಡೆಯು ಮುಂದೆ
ಸುಳಿಯದೋಲ್ ಕಟ್ಟು ಕಟ್ಟಳೆಗೈದು ಮುಗಿಸಿಯಾಯ್ತು,
ಹಲವು ದೇವರುಗಳಿಗೆ ಹರಕೆ ಹೊತ್ತುದು ಆಯ್ತು;
ಮಲ್ಲಿಗೆಯ ಮಂಕಂತು ಮುಗಿಯಲಿಲ್ಲ.
ನೊರೆನವಿರ

ಕೆಂಗಜ್ಜ, ಗಂಜಿಯನ್ನಟ್ಟೊಡನೆ, ತಂದಿತ್ತ
ಮಗಳ ತುಟಿಗೆ,
'ಕುಡಿ ಸ್ವಲ್ಪು ಕಂದವ್ವ ಗಂಜಿಕುಡಿ
ನನ್ನವ್ವ ಕುಡಿದೆನ್ನ ತಣಿಸು, ನನ್ನ ಜೀವನದುಸಿರೆ,
ನನ್ನ ಬಾಳಿನ ಕಣ್ಣೆ, ಪೇಳವ್ವ ನೋವೇನು ?
ನಾ ಹಣ್ಣು ಮುದುಕ, ನೊಂದಿದೆ ಜೀವ, ಜೀವನದ

ಕುಲುಮೆಯಲಿ ಬೆಂದು ಬೆಂಡಾಗಿಹುದು
ನನ್ನೆದೆಯ ಬಾಂದಳದ 'ಬೆಳ್ಳಿ' ನೀನವ್ವ;
ಮಲ್ಲಿಗೆಯಿದೋ ಕೇಳು ಇದು ಮಾತು ಸತ್ಯ
ನೀನು ನೇರ್ಪಡುವನ್ನೆಗಂ ನಾನಿನಿತು ಸೇವಿಸ
ಲೊಲ್ಲೆ, ನೀರಿಂಟಲಾರೆನೌ ! ಕುಡಿ ಕಂದ
ಕುಡಿ, ನನ್ನೆದೆಯೊಳಿರದೆದ್ದ ಹೆದರಿಕೆಯೇರ್ಗೆ
ಸಂತಸದ ಸವಿಮಾತದಾಗಲೌ ದಿವ್ಯೌಷಧಿ !'
ಮುದುಕನಾ ಮಾತನಾಲಿಸಿದಂತೆ ನಟನೆಯಂ
ತೋರಿ ಮೇಲೆದ್ದು ನಡೆದಳೌ ತನಗೆ ತಾನೆ.
ಕೂಡೆ ಕೆಂಗಜ್ಜನಿಗೆ ಮೂಡಿದವು ಹತ್ತುಭುಜ

ಹತ್ತು ಕಾಲ್; ಗರಿಗೆದರಿ ಕೇಗಿ ನರ್ತಿಸಲಿಕ್ಕೆ
ಉಜ್ಜುಗಿಸದತ್ತವನ ಮನಮಯೂರಿ ತಾನಂದು
ಆನಂದದಾ ಗಿರಿಯನೇರಿ !
ತೆಗೆದು ತೆಂಗಿನ
ನಾರ ತಡಿಯನೊಪ್ಪದಿ ಹಾಸಿ ಬೆಚ್ಚಗಿನ ಕಂಬಳಿಯ

ಮಡಿಸಿ ಹೊದಿಸಿ, ಮಗಳ ಮುಂದಲೆ ಸವರಿ, ಮುದ್ದಿಸಿ
ದೀವಿಗೆಯ ಕೆಳಗಿಳಿಸಿ ಮುದದಿ ಮಲಗಿದ ಮುದುಕ
ಇರುಳ ಮೊದಲಿನ ಯಾಮ ಉರುಳಿತ್ತು, ಮಲ್ಲಿಗೆಯು
ನಿದ್ದೆ ತಿಳಿದವಳೆದ್ದು ಮನೆಯ ಮೂಲೆ ಮೂಲೆಯ
ಮುಟ್ಟಿ, ಮುಟ್ಟಿ ವಂದಿಸುತೊಮ್ಮೆ, ಮತ್ತೆ ಗೋಳಿಟ್ಟು

ಗೌರಿ ಹಸುವಿನ ಕೊರಳ ತಬ್ಬಿ ಮುದ್ದಿಡುತೊಮ್ಮೆ
ನಡೆದಳು ಕಡೆಗೆ ನಡುಮನೆಗೆ,
ನೋಡಿದಳು;

ಕೆಂಗಜ್ಜ ಮಲಗಿದ್ದ ಹಸುಗೂಸಿನಂದದಲಿ
ಸಗ್ಗ ಸೌಖ್ಯದ ಸೊಗಸು ಸುಂದರದ ಕನಸುಂಡು
ಮಲಗಿತ್ತವನ ನಿರ್ಮಲ ಚಿತ್ತ, ಆಪತ್ತ ಮರೆದು !
ಕಾಲ್ದಿಸೆಯೊಳೆನಿತೋ ಪೊಳ್ತು ಕುಳಿತಿದ್ದ ಮಲ್ಲಿ
ಶಿರಬಾಗಿ ನಮಿಸಿದಳು ಪಾದರಜ ಧೂಳಿಯಿಂ
ಮುಂದಲೆಯ ಮುಡಿಸಿದಳು ಗೋಣಗಿದಳು ಮನದೊಳಗೆ,
'ಮನ್ನಿಸೆನನ್ನು ತಂದೆ ಮನ್ನಿಸೈ ದೇವಾತ್ಮ
ನಿನ್ನ ಕರುಣೆಯ ಕಂದ ತಂದುದಿಲ್ಲಾನಂದ

ಓ ತಂದೆ ಕೆಂಗಜ್ಜ ತಂದು ಸಲಹಿದಿರೆನ್ನ
ನೀವಂದು, ತಬ್ಬಲಿಯ ಶಿಶುವೆಂದು ಬಿಸುಡಲಿಲ್ಲ,
ಬರದ ದಳ್ಳುರಿಯಲ್ಲು ಸಲಹಿದಿರಿ ತಂಪೆರೆದು
ನಿಮ್ಮುಪಕಾರದಾ ಋಣಕೆ ಬಡ್ಡಿ ತರಲಾರೆನಾನ್
ನಿಮ್ಮ ಮನ ಮುದಗೊಳಿಸಿ ಮನೆಯ ಕೇಕೆಯ
ದನಿಯ ತಾರಕದಿ ದನಿಗೈಸಿ, ಅಂಬೆಗಾಲಿಡು
ವೊಂದು ಶಿವುವಡೆಯಲಿಲ್ಲ, ತಾಯಿ ತಿಂದವಳಾದೆ
ತಂದೆಗಾನ್ ಕರುಣಿಸಿದೆ ಪರದೇಶಯಾತ್ರೆ,
ಸಾಕಿದ್ದವನಿಗಿಲ್ಲ, ಕೈ ಹಿಡಿದ ಪತಿಗಿಲ್ಲ,
ನನ್ನ ನೆರೆ ನಂಬಿದ್ದ ನಿಮಗಾದೆನೌ ಮಿತ್ತು

ನಾ ಪತಿತೆ, ಹತಭಾಗ್ಯೆ, ಆವ ಜನ್ಮದ ಕರ್ಮ
ನಾನರಿಯೆ ಓ ತಂದೆ ಇಹದ ಬಾಳಿನಲಿಂತು
ಸಮೆಸಿದೆನು ಮುಗಿದುದೊ ಮೇಣಿಹುದೊ
ನಾನರಿಯನಪ್ಪಯ್ಯ; ಏನಾದರಂತಿರಲಿ
ಕೃಪೆಮಾಡಿ ನೀವ್ ಬೀಳ್ಕೊಡಿರೆನ್ನ, ಅಮ್ಮನನು
ದೇವನನು ಕಂಡು ಮಾತಾಡುವೆ, ನಾವೆಲ್ಲರೂ
ಸೇರಿ ನಿಚ್ಚವೈತಂದಿಲ್ಲಿ ನಿನ್ನೊಡನೆ ಕೂಡಿ
ನುಡಿಯುವೆವು ನಿನ್ನೆದೆಗೆ ಸಂತಸದ ಸುಧೆಯೆರೆದು
ನಲಿಯುವೆವು ! ಕಳಿಸಿಕೊಂಡು ಓ ತಂದೆ ನಿನ್ನ ಮಗಳ,
ತವರೂರ ಮರೆಯೆ ನಾಂ ಪತಿಸೇವೆಗೈಯುವೆನು..

ಕೆಂಗಜ್ಜ, ನೀಮೆಂದಿಗಾಗಿರೈ ನನ್ನ ತಂದೆ
ಕೆಂಗವ್ವನೆನ್ನವ್ವೆ, ಸ್ವಾಮಿರಾಮರೆ ಪತಿಯು
ಜನ್ಮ ಜನ್ಮಾಂತರಕು, ಆ ಸೈಥು ನನಗಿರಲಿ;
ನಿಮ್ಮ ಕರುಣಾಗಂಗೆ ಅನವರತ ಪಸರಿಸಲಿ !
ಮನ್ನಿಸಿರಿ ಕೆಂಗಜ್ಜ ಮಂದಮತಿಯವಳ;
ಮನ್ನಿಸೌ ಮಂದಿರವೆ, ಮನ್ನಿಸಿರಿ ಗೋವುಗಳೆ
ಮನ್ನಿಸೆಲೆ ಮಹಮನೆಯ ಸೌಭಾಗ್ಯ ದೇವತೆಯೆ
ಎಲ್ಲರೂ ಮನ್ನಿಸಿರಿ ಬೀಳ್ಕೊಡಿರಿ ಸಂತಸದಿ
ನಿಮ್ಮ ಮನೆ ಮಗಳನ್ನು ಪತಿಯೂರಿಗೆ !
ನಡೆದಳು

ಮನೆಯಿಂದ ಹೊರಗೆ ಕಡೆಯ ವಂದನೆ ಸಲಿಸಿ ನಮಿಸಿ,
ಕರ್ಬೊಗೆಯ ಕರೆದಿದ್ದಿತಾ ರಾತ್ರಿಚಕ್ಕೆಗಳ !
ಮೂತಿಗೂ ಬಳಿದಿತು ಕಪ್ಪುಮಸಿ ! ದ್ರವಿಸಿ
ದಟ್ಟಯಿಸಿದ್ದ ಕತ್ತಲೆಯ ತೆರೆ ಸೀಳಿ, ಹಾರಿದಳು
ತನ್ನ ತಾಯ್ ಪತಿಯಿದ್ದ ರುದ್ರಭೂಮಿಯ ಬಳಿಗೆ,

ತೋಪಂತೆ ನಿಂತಿತ್ತು; ಮಲಗಿದ್ದ ಗೋರಿಗಳು
ಎಚ್ಚೆತ್ತು ನಿಲಲಿಲ್ಲ; ಮಲ್ಲಿಗೆಯ ಕೂಗಿಂಗೆ
ಮಾರ್ದನಿಯ ಬೀರಿತ್ತು ದೂರದ ಅರೆಬಂಡೆ !
ಮತ್ತೊಮ್ಮೆ ಕೂಗಿದಳು, 'ಓ ಅವ್ವ ! ಕೆಂಗವ್ವ !
ಓ ಇನಿಯ ! ಇದೊ ಕಾಣೆ ಬಂದಿರುವೆ ಮಾತಾಡಿ

ಮಾತಾಡಿ, ಕಲ್ಲುಗಳೆ, ಬೋಳೆದೆಯ ಬಂಡೆಗಳೆ,
ಓ ತಮಾಲದ ತರುವೆ ಸುರಿವ ಝುರಿ ಹರಿವ ಹೊಳೆ
ಓ ನಿಂತ ಮಡುವೇ ನುಡಿ ನುಡಿಸಿ ಅಡಿಯಿಡಿಸಿ;
ಕಂಡಿರೇ ಪೇಳಿರೇ ನನ್ನ ತಾಯ್ ಪತಿಯರನು;
ಬರಮಾರಿಗುಣಿಸಾದ ಓ ನನ್ನ ಬಂಧುಗಳೆ
ನುಡಿಸಿರೆ ಬಂದಿಹೆನು, ಓ ಅಮ್ಮ ಮಡಿಲೊಡ್ಡು,
ನಿನ್ನ ಕರುಣೆಯ ಕಂದ ಹಂಬಲಿಸಿ ಹಸಿದಿಹೆನು
ಹಾಲೂಡು, ಬಾ ನಿನ್ನ ತೊಡೆ ಮೇಲೆ ಮಲಗಿ ನಾಂ
ಲಾಲಿಯಾಲಿಸಿ ಜೋಲಿ ತೂಗಿಸಿ ಶಿಶುವಾಗಿ ನಲಿವೆ !
ಇದೊ...ಬಂದೆ... ನಾ ಇಂದೆ... ಇದೊ...
ಬಂದೆ ... ನಾ ಇಂದೆ !

*****

ಹೊಂಗೆ ತೋಪಿನ ದೇಹ ಬೆಚ್ಚಿ ಬಿತ್ತು!
ನಿಂತ ಮಡುವಿನ ನೀರು ತುಳುಕುತಿತ್ತು !
ಸುರಿವ ಝುರಿಯತ್ತಿತ್ತ ಸರಿಯುತಿತ್ತು !
ಗೋರಿ ಗರ್ಭಗಳಿಂ ನಗೆಯೊಂದು ಚಿಮ್ಮಿತ್ತು !

ಪಗಲಿರುಳಿನಿಗ್ಗಾಲಿ ಮೂರುರುಳನುರುಳಿತು.
ಮುದಿ ಕೆಂಗನಂಗಕ್ಕೆ ಹರೆಯ ಹೊನಲ್ವರಿದಿತ್ತು !
ತಿರುಗಿದನು ಮುದುಕ ಮುದ್ದುಗುವರಿಯನರಸಿ
ಕೆರೆ ಬಾವಿ ಹೊಲ ಗದ್ದೆ ಊರೂರನಲೆದಾಯ್ತು
ದಿನ ಮೂರರಿಂದಲೂ ನಿದ್ದೆಯರಿತಿರಲಿಲ್ಲ ಕಣ್

ಹೊಟ್ಟೆ ಸೇರಿರಲಿಲ್ಲ ಅಗುಳನ್ನ ಹನಿನೀರು,
ಸೋಲೆನ್ನುವರಿವಿಲ್ಲ ಅವನೆರಡು ಕಾಲ್ಗಳಿಗೆ
ಕಂಡ ಕಂಡರ ಕೇಳಿ ಕಾಡು ಮಲೆಯಲಿ ಕೂಗಿ
ನಡೆವ ಹೆಂಗೆಳೆಯರೆಲ್ಲಾ ತನ್ನ ಮಲ್ಲಿಯೆಂದೇ
ಭ್ರಮಿಸಿ, ನಡೆ ನಡೆದು, ನುಡಿ ನುಡಿಸಿ, ಓಡಿ ಬಿದ್ದೆದ್ದು,
ಕಂಗೆಟ್ಟು ದೆಸೆಗೆಟ್ಟು ಮತಿವಿಕಳನಂತಾಗಿ
ಅಲೆದಲೆದನೆಲೆಲ್ಲೂ; ಕಾಲ್ ಪರಿವ ಎಲ್ಲೆಡೆಯು
ತಿರುಗಿದನುಮದುಕು ಮುದ್ದು ಕುವರಿಯನರಿಸಿ
ಮನುಜ ರೂಪದ ಮರುಳು ತಾನಾಗಿ ಬಂದನೈ
ಸಿದ್ಧರಡವಿಯ ಮಲೆಯ ಮಡಿಲ ಪ್ರೇತವನಕೆ !

ಏರಿದನು ಅಲ್ಲಿದ್ದ ಮಾಲೆಯಾಕೃತಿಯ ಬಂಡೆ;
ಗುಂಡಾದ ಹೆಬ್ಬಂಡೆ ಎತ್ತರದ ಅರೆಬಂಡೆ !
ನೆತ್ತಿ ಮೇಗಡೆ ನಿಂತು ಸುತ್ತೆಲ್ಲ ನೋಡಿದನು
ಕಾಣಲಿಲ್ಲೇನೇನು, ಕೂಗಿದನು, ಕೇಳಲಿಲ್ಲ !
ಬಿಳಿಯ ಕಲ್ಲಿನ ಬೆಟ್ಟ ಜಾಲ್ಗಿರಿಯ ಹೂಬನ

ತರು ತಮಾಲದ ತೋಪು ಸಮಾಧಿಯಾವರಣ
ಏನೆಲ್ಲ ನಿಟ್ಟಿಸುತ ಹದುವವನಾ ಕಣ್ಣು
ಚಿಲುಮೆಯಿಂ ಪುಟಿದೊಮ್ಮೆ ಝರಿಯಿಂದ ಜಾರಿ
ಧುಮ್ಮಿಕ್ಕಿದುವು ಕೆಳಗಡೆ ತೆರೆದ ಬಾಯ್ ಮಡುಗೆ !
ಕಾಣಿಸಿದೆಂಥದೋ ಕಪ್ಪು ಛಾಯಾರೂಪಿ ತಾನ್

ತೇಲುತಿದ್ದಿತದಲ್ಲಿ ಕರಿಮಡುವಿನೆದೆಮೇಲೆ !
ನಿಟ್ಟಿಸಿದನಾ ಮುದುಕ ಕಣ್ಣು ಕತ್ತಲೆ ಕವಿಯೆ
ಮಿಗೆ ಹೊಸೆದು ನಿಟ್ಟಿಸಿದ ... 'ಹೌದೌದು ! ಬೇರೆಲ್ಲ !!
ಅಹುದವಳೆ ! ನಮ್ಮ ಮನೆ ಬೆಳಗಿಸಿದ ಮಲ್ಲಿಗೆಯೇ !
ಏಕೆ ಮಲಗಿಹಳಿಲ್ಲಿ ಈ ಚಳಿಯ ನೀರಿನಲಿ !
ಬಾ ಮಲ್ಲು, ಮುನಿಸೇಕೆ ಮನೆಯ ಸುಪ್ಪತ್ತಿಗೆಯ
ಮೇಲಿಂದು ಮಲಗಿಸುವೆ ! ಚಿಕ್ಕಂದಿನಂದದಲಿ
ನನ್ನ ಹೆಗಲಿನ ಮೇಲೆ ಕೂರು ಬಾ ಒಯ್ಯುವೆನು
ಬಾ...ಬಾ... ಬಾ ಮಲ್ಲಿ... ಓ ನನ್ನ ಮಲ್ಲಿಗೇ...!
ಮರವಟ್ಟ ಬಂಡೆಯದು ಬೆಚ್ಚಿ ಎದೆ ಬಿಚ್ಚಿತೆನೆ
ನೆತ್ತರೇನೆತೆತ್ತ ಹರಿಯಿತ್ತು ಧಾರೆ !
ಕೆಂಗನಂಗವದೆಲ್ಲ ಸುಗ್ಗಿ ಸೂರೆ !!

*****

ಅದುವೆ ಕೆಂಗನ ಕಲ್ಲು ಇಂದಿಗೂ ನಿಂತಿಹುದು
ಗತಕಾಲದಿತಿಹಾಸ ಸಾಕ್ಷಿಯಾಗಿ !
ಅಳಿದುವೆನಿತೋ ಜೀವ ಮಡಿದುವೆನಿತೋ ರಾಜ್ಯ
ನದಿಯಂತು ಹರಿಯುತಿದೆ ಸತತವಾಗಿ !
ಕೂಗು ಬಂಡೆಯ ಮುಂದೆ ಕೂಗಿದೊಡೆ ಕೇಳುವುದು
ಮರುದನಿಯು ಬೇರೊಂದು ರೀತಿಯಲ್ಲಿ
'ಕೆಂಗಜ್ಜ'ನೆಂದೊರಲೆ, 'ಮಲ್ಲಿ ಬಾರೆ'ನ್ನುವುದು
ತುರುಗಾವರಿಂದಿಗೂ ಕೇಳ್ವರಿಲ್ಲಿ !

## ವಿಪರ್ಯಾಸ
## (೧೯೭೨)

### ವಿಪರ್ಯಾಸ–೧

ಈ ಯುವಕ
ನಮ್ಮ ನಾಯಕ
ಜೈಕಾರ –
ಇವನ ಆವಿಷ್ಕಾರ !
ಬಹಿಷ್ಕಾರ ಕೊಡುವುದಕ್ಕೆ
ಇವನಿಗಿದೆ ಮೊದಲ ಅಧಿಕಾರಿ !
ಪರೀಕ್ಷೆಗೇ ಕೂರದವನಿಗೆ
ಫಸ್ಟ್ ರ್‍ಯಾಂಕ್ ಕೊಡಿಸಿದ ಖದೀಮ !
(ಅವನು ಡಿಗ್ರಿ ಪಡೆದದ್ದೂ,
ಪ್ರಶಸ್ತಿ ಗಿಟ್ಟಿಸಿದ್ದೂ ಹಾಗೇ ಅನ್ನಿ !)
ಆದರೂ ಶುದ್ಧ ಖಾದೀ ಧಾರಿ !

ಅವನ ನಿಘಂಟಿನಲ್ಲಿ ಈ ಪದವೇ ಇಲ್ಲ
ಗೂಂಡಾಗಿರಿ !
ಬಾಯಲ್ಲಿ ಬಸವಣ್ಣನವರ ವಚನ ಉವಾಚಿಸುತ್ತಾನೆ :
'ಹುತ್ತದ ಬಡಿದರೆ ಹಾವು ಸಾಯಬಲ್ಲುದೆ ಅಯ್ಯಾ'
ಎಂದು,
ಇಂತಹ ದಾರ್ಶನಿಕ, ತತ್ವವೇತ್ತ, ದೈವಾವತಾರ
ಇಪ್ಪತ್ತೈದರ ಈ ಯುವಕ
ಇಂದು ನಮ್ಮ ನೆಚ್ಚಿನ ನಾಯಕ !

ಮಾರ್ಕೆಟ್ ಮೂಲೆಯಲ್ಲೊಂದು ಬೋರ್ಡು
'ಇಲ್ಲಿ ಹೇಸಿಗೆ ಮಾಡುವವರನ್ನು ಶಿಕ್ಷೆಗೆ ಗುರಿಪಡಿಸಲಾಗುತ್ತೆ'
– ಎಂದಿದೆ ಶಾಸನ.
ಈ ಶಾಸನ ಓದಿಕೊಂಡೇ ಅದರ ಮೇಲೆ
ಹೇಸಿಗೆ ಮಾಡುತ್ತಿರುತ್ತಾನೆ
ನಮ್ಮ ನಾಯಕ !
ಧೂಮಪಾನ ನಿಷೇಧಿಸಿದೆ ಎಂದಲ್ಲಿ
ಬಂಗಿ ಕುಡಿಯುವುದು
ಡ್ರೈ ಏರಿಯಾವನ್ನು ವೆಟ್ ಮಾಡುವುದು
ಸಿಟಿ ಬಸ್ಸಿನಲ್ಲಿ
'ನಾವು ಇಬ್ಬರು, ನಮಗೆ ಇಬ್ಬರೇ ಮಕ್ಕಳು'
ಎಂದಿದ್ದರೆ –
'ಇ'
ಇಲ್ಲವಾಗಿಸಿ
'ನಮಗೆ ಬ್ಬರೇ ಮಕ್ಕಳು' – ಎಂದಾಗಿಸುವುದು;
ಕಕ್ಕಸ್ ಗೋಡೆಗಳ ಮೇಲೆ
ಚಿತ್ತಾರ, ಚಿತ್ರ ಕವಿತ್ವ ರಚಿಸಿ,
ಬಾತ್‌ರೂಮ್ ಗೀತೆಗಳನ್ನು ಬಿಡಿಸಿ,
ಹಾಡಿ, ಹರಸಿ,
ಭಾಷಣದ ಮೇಲೆ ಭಾಷಣ ಬಿಗಿದು, ಬಾರಿಸಿ,
ಏನಕೇನ ಪ್ರಕಾರೇಣ
ಪ್ರಸಿದ್ಧಿಗೆ ಬಂದವನು
ಕೆಲವರನ್ನು ತಂದವನು,
ಹಲವರನ್ನು ತಿಂದವನು

ಇಪ್ಪತ್ತೈದರ ಈ ಯುವಕ
ಇಂದು ನಮ್ಮ ನೆಚ್ಚಿನ ನಾಯಕ !

ಗಿರಣಿಯ ಚಿಮ್ಮಣಿ – ಇಲ್ಲವೇ
ಗಟಾರದ ರಾಡಿ ನಿಟ್ಟುಸಿರು ಬಿಟ್ಟಾಗ
ಇವನು ಸಿಟ್ಟಾಗುವುದಿಲ್ಲ.
ಅದೇ ತನಗೆ ಅತ್ತರು, ಅಗರು, ಸುಗಂಧವೆಂದು
ಒದರಿ ಆಗಸಕ್ಕೇರಿಸುತ್ತಾನೆ.
ಕ್ಷಾಮ ಪೀಡಿತ ಪ್ರದೇಶಗಳಿಗೆ ಹೋಗಿ
ಭಾಷಣದಿಂದಲೇ ಮಳೆಗರೆಸಿ,
ತನ್ನ T.A, ಬಿಲ್‌ಗೆ ಬಡ್ತಿ ನೀಡುತ್ತಾನೆ !
ರಂಡೆ – ಮೀಂಡೆಯರಿಗೆ –

(ಥೂ ಕೆಟ್ಟ ಬಾಯಿ–)
ಅನಾಥ ಸ್ತ್ರೀಯರಿಗೆ
ಇವನು ಆಪದ್ಭಾಂಧವ !

ಬೊಂಬಾಯಿನ ಸೂಳೆಗೇರಿಗೆ,
ಇಲ್ಲವೇ ಅರಬ್ಬೀ ಸಮುದ್ರ ದಾಟಿಸಿ ಹೊರನಾಡುಗಳಿಗೆ –
ನಮ್ಮ ದೇಶದ ಹೆಣ್ಣುಗಳನ್ನೂ
ಪೂಜೆ ಪ್ರಸಾದ ಕಾಣದೆ ದಿಕ್ಕೆಟ್ಟು
ಬಿದ್ದಿರುವ ಹಲವು ದೇವತಾ ವಿಗ್ರಹಗಳನ್ನೂ
ರವಾನಿಸುವ ಕಾಂಟ್ರಾಕ್ಟ್ ಹಿಡಿದಿದ್ದಾನೆ.
ಬಡ ಭಾರತದ ಹೆಣ್ಣು ಮಕ್ಕಳು, ಪಾಪ
ಹೊಟ್ಟೆ ತುಂಬ ಅನ್ನ ಕಾಣಲಿ,
ಬೇವಾರ್ಸಿ ದೇವರುಗಳು ಷೋಕೇಗಳಲ್ಲಿ
ಬೆಚ್ಚಗಿರಲಿ–ಎಂದು
ಅವರ ಬಗ್ಗೆ ಕನಿಕರದ ಕಣ್ಣೀರು ಸುರಿಸುತ್ತಾನೆ
(ಕ್ಷಮಿಸಿ, ಮೊಸಳೆ ಕಣ್ಣೀರಂತೂ ಅಲ್ಲ)

ಇವನು ತುಂಬಾ ಉದಾರಿ;
ತನ್ನದೇ ಆದ ಹಲವು ಪಿಂಡಗಳನ್ನು
Un-authorise ಎನಿಸಿ,
Remand Home ನಿಂದ Certified ಶಾಲೆಗೆ ತಂದು ಸೇರಿಸಿ,
Copyrightನ್ನು ಬಿಟ್ಟುಕೊಟ್ಟು
ಜಗಜ್ಜಾಹೀರಾತಾರಾದ ನಿಸ್ಸೀಮ !
ಇಪ್ಪತ್ತೈದರ ಈ ಯುವಕ !
ಇಂದು ನಮ್ಮ ನೆಚ್ಚಿನ ನಾಯಕ !

## ನಾನು ಮತ್ತು ನಾಯಿ

ತೊಣಚಿಯ ಕಡಿತಕ್ಕೆ
ಮೈ ತುರಿಸಿಕೊಳ್ಳುತ್ತ,
ಹಾರಿ ಬಂದ ಚೀಗಟಗಳನ್ನು
'ಕ್ಯಾಚ್' ಹಿಡಿಯುತ್ತ
ಕಟಕಟಾ, ಕಟಕಟಾ ಲಾಳಿಯಾಡಿಸಿ,
ಕಚ ಕಚನೆ ಕಚ್ಚಿ ಚಪ್ಪರಿಸಿ,
ಹಾದಿ ಬದಿಯಲ್ಲೊ,
ಮನೆಯ ಹೊಸ್ತಿಲ ಮೇಲೊ
ಬಿದ್ದಿರುವ ಕಜ್ಜಿ ಹತ್ತಿದ ನಾಯಿ ನಾನು !

ಕಣ್ ಮುಚ್ಚಿ ಮಲಗಿದ್ದರೂ
ಹಾಡು ಬಜಾಯಿಸುವ ಗುಂಗಾಡಿ, ನೊಣ, ಸೊಳ್ಳೆಗಳಿಗೆ
ಕೇದಗೆಯ ಕಿವಿಯಿಂದ ಪಟಪಟಾಯಿಸಿ,
ಸೂಸಿ ಬಹ ವಾಸನೆಯ ನಿದ್ದೆಯಲ್ಲೆ ಮೆದ್ದು,
ನಡೆ ನುಡಿಯ ಸಪ್ಪುಳದಿಂದ ಅಪ್ಪಗಳು
ಯಾರೆಂದು ರಿಜಿಸ್ಟರ್ ಮಾಡಿಕೊಂಡು
ಮನೆಯವರು ಮಲಗಿದ್ದಾಗ ಸಾಯುವ,

ಸಾಧುವೋ ಸಂನ್ಯಾಸಿಯೋ
ದಾನಿಯೋ, ದೀನನೋ – ಯಾರೋ
ಯಾರೇ ಬರಲಿ,
ಬಂದವರಿಗೆಲ್ಲಾ ಬೊಗಳುವ
ಬಹುದೊಡ್ಡ ಪೋರ್ಟ್ ಪೋಲಿಯೋ ಹಿಡಿದ
ನಾಯಕ ನಾನು !

ಯಜಮಾನಿಯ ಮರ್ಜಿಗಾಗಿ,
ಬಂದೊಡನೆಯೇ ಅವಳ ಕಾಲು ನೆಕ್ಕಿ,
ಮೇಲಡರಿ ಜೊಲ್ಲು ಸುರಿಸುವ,
ನೀನೇ ನನಗೆ ಸರ್ವಸ್ವ,
ಎಂದೆಂದಿಗೂ ನಾನು ನಿನ್ನ 'ವಸ್ತು'
ಎಂದು,
ಸಿನೆಮಾ ನಟಿಯಂತೆ
ಮಾಂಗಲ್ಯ ಬಿಗಿಸಿಕೊಂಡಂತೆ !
ಮಡದಿಯಾದಂತೆ !!

ಮಕ್ಕಳನ್ನು ಹಡೆದಂತೆ !!!
ಏನೇನೋ ನಂಬುಗೆಯ ಹುಟ್ಟಿಸುವ !!!
ಪ್ರಾಮಾಣಿಕ ಪ್ರಾಣಿ ನಾನು,

ಅವಳ ಸೋದರಗೂ
ಬೆದರಿದವನಂತೆ ನಟಿಸಿ,
ದೂರಾ ಸರಿದು,
ಹತ್ತಿರಾದಾಗ ಕುಯ್ಗುಟ್ಟಿ,
ಮುಚ್ಚಿದ ಬಾಲದಿಂದಲೆ ನಚ್ಚು ಹುಟ್ಟಿಸುವ
ಅಚ್ಚ ನಂಬುಗೆಯ ಜೀವಿ ನಾನು !

ಮಡಿಲ ತೊರೆದು, ತೊಡೆ ಏರಿ,
ಉಂಡ ಮೊಲೆಗಳ ಮೇಲೆ ದುಂಡಾಡಿಸಿ,
ಗಲ್ಲದ ಜೇನು ಸೊರವು ಬಿಟ್ಟು,
ಕಡಿವ ಮೂಳೆಯ ಮರೆಯಲ್ಲಿಗುವ
ಜೊಲ್ಲನು ಹೀರಿ ...
ಹೀ ೯ ೯ ರಿ ೯ ೯ ೯ ರಿ ...
ಅಬ್ಬಾ! ಈ ಸವಿ ಇದೇ ಮೂಳೆಗಂಟಿದ್ದು
–ಎಂದು
ಗ್ಯಾರಂಟಿ ಮಾಡಿಕೊಂಡು,
ಜಗಜ್ಜಾಹೀರು ಮಾಡುವ ಏಜೆಂಟ ನಾನು !

ನಾನು ಈ ಮನೆಯ ಕಾಯುವ ನಾಯಿ
ಈ ಮನೆಯಾಕೆಗೆ ನಾಯಿ
ಮನೆಯ ಬೆಕ್ಕೂ, ಬಿಲಗಳಿಗೂ
ನಾನೊಂದು ಬೊಗಳೇ ನಾಯಿ !

## ಗಾಂಧಿ

೧

ಇವನೊಬ್ಬ ಬೈರಾಗಿ !
ತುಂಬು ಹರೆಯದ ಮಾಗಿ ಇವನ ದೇಹ !

ಥೇಟು ತಟ್ಟಿಗೆ – ಅಲ್ಲ ಉಣ್ಣೆಗೊರವನ ಗೂಡು !!
ತಲೆ ಬೋಳು, ಬಾಯ್ ಬಚ್ಚು
ಹರುಕು ಗಡ್ಡದ ಮೇಲೆ ಮುರುಕು ಮೀಸೆ
ಕಣ್ಣೆರೆದು ಮೂಸೆ !
ಸಣ್ಣ ಸೋರೆ ಬುರುಡೆಗಂಟಿಸಿ ರೆಕ್ಕೆಗಿವಿ
ಇವನ ಮೈ ಬಳಿದವಗೆ ಸಿಗಬಹುದು ಮಾಂಸ
ಒಂದೇ ಒಂದು ಕೆ.ಜಿ. !
ಹೀರಿದರೆ ಬರಬಹುದು ಕಾಲು ಲೀಟರು ರಕ್ತ !
ಆದರೂ ಈತ ಬಹು ಶಕ್ತ !

ಈ ಬಡಜೋಗಿ ತೂಗುವೊಡೆ ಶೆಟ್ಟಿಯಂಗಡಿಯಲ್ಲಿ ಕಲ್ಲುಗಳೇ ಇಲ್ಲ !
ಕೊಳ್ಳುವೊಡೆ ಬ್ಯಾಂಕಿನಲಿ ಹಣವಿಲ್ಲ !
ಇಲ್ಲಾ... ಇಲ್ಲಾ... ಇಲ್ಲಾ...
ಇವನಿಗೊಂದೂ ಇಂದು ಸಾಟಿಯಿಲ್ಲ !!

೨
ಇವನೊಬ್ಬ ಕಾರಣಿಕ,

ಮೇಲಿಂದ ಇಳಿದು ಬಂದವನಲ್ಲ,
ಇಲ್ಲಿಂದಲೇ ಬೆಳೆದು ಮೇಲೇರಿದಾತ
ಬೆಳೆದ
ಇವನು ಬೆಳೆದೇ ಬೆಳೆದ ಬಾನೆತ್ತರ !
ಕಾಲು ಕಡಲಾಳದಲ್ಲಿ,
ತೋಳು ದಿಕ್ಕು ದಿಕ್ಕುಗಳಲ್ಲಿ
ಆದನಿವ ಸೂಕ್ತಪುರುಷ !
ಎಣಿಸಲೇತಕೆಹೇಳು ಸತ್ತ ವರುಷ !

ಅಂದಿಂದು ಎಂದಿಗೂ ಇವನದೊಂದೇ ನಿಲವು,
ಬದಲು ಕಾಣದ ಭಂಗಿ !

ಅಯ್ಯೋ ಪಾಪ !
ನಮ್ಮ ಟೈಲರಿಗಂತೂ, ಟೇಪು ಸಾಲದೆ ಬಂತು
ಹೊಲಿದು ಕೊಡಲೇ ಇಲ್ಲ ಇವಗೆ ಅಂಗಿ !!

೩

ಇವನೊಬ್ಬ ಮಾಯಾವಿ !
ಗುಟ್ಟರಿತ ಗಾರುಡಿಗ !!
ನೋಡಿ, ದೊಡ್ಡ ಪುಂಗಿಯನೊಮ್ಮೆ ಊದಿಯೇ ಊದಿದ.

"ಹಲ್ಲ ಕಳೆದು ಹಾವನಾಡಿಸಬಲ್ಲಡೆ
ಆ ಹಾವಿನ ಸಂಗವೆ ಲೇಸು ಕಂಡಯ್ಯಾ" ಎಂದು

ಹಾವನಾಲಂಗಿಸಿದ, ವಿಷವನ್ನು ದ್ವೇಷಿಸಿದ,
ಅಷ್ಟೇಕೆ? ಮಂತ್ರಾಣಿತನಯನಿಗೆ –
–ಅದೆ–ಅಂಗಲೀಮಾಲನಿಗೆ
ಮಲ್ಲಿಗೆಯ ಹಾರವನು ಹಾಕಿಯೇ ಬಿಟ್ಟ !
ಜಗದ ಮಾನಸದಲ್ಲಿ ವಿಹರಿಸಿದ ಈ ಅಗ್ನಿಹಂಸಕ್ಕೆ
ಮುಗಿಲ ಕೆಚ್ಚಲನೆಲ್ಲ ಕಚ್ಚಿ ಹೀರುವ ದಾಹ !
ಆದರೂ ಬತ್ತಿಲ್ಲ ಮಣ್ಣಮೋಹ !
ಬಯಲು ಬತ್ತಲೆಯೆಂದು ಬಟ್ಟೆಯುಡಿಸಲು ಹೋಗಿ
ತಾನು ಬತ್ತಲೆ ನಿಂದ, ಕಡೆಗೆ ಬಯಲಾದ !

೪

ಇವನೊಬ್ಬ ಬ್ರಹ್ಮಚಾರಿ,

ಒಬ್ಬಳೇ ಹೆಂಡತಿ, ನಾಲ್ಕು ಜನ ಮಕ್ಕಳು !
ಇದ್ದದ್ದೇ ಬಿಡಿ, ಇವನ ಗೋಳು !!
'ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ'
ಮಾತೆತ್ತಿದರೆ ಸಾಕು –
ಇವನು ಹಾಕಿದ್ದೇ ಹಾಕಿದ್ದು ಹೈಡ್ರಾಲಿಕ್ಕು ಬ್ರೇಕು !!

ಆದರೂ ಈ ಮುದುಕ ಕಸ್ತೂರಿ ಪ್ರಿಯ !
ಮೈಯೆಲ್ಲ ಕಸ್ತೂರಿ, ಮನವೆಲ್ಲ ಕಸ್ತೂರಿ,
ಮನೆಯ ಮುಡುಕಿನೊಳಲ್ಲೂ ತುಂಬಿದ್ದ ಕಸ್ತೂರಿ !
ಶುದ್ಧ ಸೌರಭ ಅಷ್ಟೆ !
ಕಪ್ಪುಕಲೆ ಇಲ್ಲವೇ ಇಲ್ಲ !!

ಪಾಂಡುವಿನ ಪರ್ಣಕುಟಿ, ಯಯಾತಿಯುದ್ಯಾನ,
ದೇವೇಂದ್ರನಾಸ್ಥಾನ ಯಾವುದೂ ಅಲ್ಲ,
ಇವನ ನೆಲೆ ಸಾಬರಮತಿ,
ಇವನೋ ಶೃಂಗಾರಗೊಂಡ ಯತಿ

## ಸ್ವತಂತ್ರ ಭಾರತಕ್ಕೆ ಸ್ವಾಮಿ ವಿವೇಕಾನಂದರ ಸಂದೇಶ

"ಭಾರತಕ್ಕೆ ಬಂದೇ ಬರುತ್ತದೆ. ನಿಮ್ಮ ಊಹೆಗೆ ನಿಲುಕದ ರೀತಿಯಲ್ಲಿ, ನೀವು ನಿದ್ದೆಯಲಿದ್ದಾಗ ಅದು ಬಂದು ನಿಮ್ಮನ್ನು ಅಚ್ಚರಿಗೊಳಿಸುತ್ತದೆ. ಆದರೆ ಬಹುಜನರ ತ್ಯಾಗ ಬಲಿದಾನಗಳಿಂದ ಗಳಿಸಿದ ಆ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಯೋಗ್ಯತೆಯನ್ನು ಭಾರತೀಯರಾದ ನೀವು ಪಡೆಯದೇ ಹೋದಲ್ಲಿ ಮೂರೇ ಮೂರು ತಲೆಮಾರಿನಲ್ಲಿ ನಿಮ್ಮ ದೇಶ ಸ್ವಾತಂತ್ರ್ಯವನ್ನು ನೀಗಿಕೊಳ್ಳುತ್ತೀರಿ."

**– ಸ್ವಾಮಿ ವಿವೇಕಾನಂದ**

ಇದು ಕೊಟ್ಟ ವರವಲ್ಲ
ಇಟ್ಟ ಶಾಪವು ಅಲ್ಲ,
ಇದು ಯೋಧೃವಾಣಿ

ಹೃದಯಗಹ್ವರದಿಂದ ಸಿಡಿದೆದ್ದ
ಈ ಅಶನಿಘೋಷಕ್ಕೆ
ಬೆಚ್ಚಿ ಬಿಚ್ಚಿದುವಂದು
ಆ–ದ್ಯಾವಾ
ಈ–ಪೃಥಿವಿ !
ನಕ್ಷತ್ರದಕ್ಷತೆಯೂ ಕಾಳು–ಬೀಳು !

ವಿಪಿನ ವೈತರಣಿಯೆಡೆ
ಬೆನ್ನು ಕಾಯಿಸುತ್ತಿದ್ದ ಓರ್ವ ಮುದಿಗೂನಿ
ಗರ್ಜನೆಗೆ ಬೆದರಿ, ಎಚ್ಚೆತ್ತು,
ಮೈ ಮುರಿದು, ಆಕಳಿಸಿ –

'ಹೂಂ, ದೌರ್ಭಾಗ್ಯ ! ... ದೌರ್ಭಾಗ್ಯ !!
ನಾನೊಂದು ಅಳಲ ಮಗು
ನನಗಿಲ್ಲವಾ ಭಾಗ್ಯ !'
ಎಂದೊಂದೆ ಪಲ್ಲವಿಯ ಕುರುಕಿ.

'ಅಹುದಹುದು !
ಸುಂಡನಾದರೆ ಏನು ? ಗಂಡಲ್ಲವೆ !
ಬಂಜೆ ಬಂಜೆ ಎಂಬ ದೂಷಣೆಯಿಂದ
ದೂರಾದೆ !
ಅದೆ ಸಾಕು, ಅದೆ ಸಾಕು !
ಇನ್ನೇನು ಬೇಕು !'

ಎಂದಿಂತು ಸಾಂತ್ವನದ ಸಂಗೀತ ಹಾಡಿ
ತುಂಬಿದಳು
ಮನದ ಮಡಿಲಲ್ಲಿ ಬೇವು–ಬೆಲ್ಲ !

ಅಂತರಂಗದ ಕರೆಗೆ ಓಗೊಟ್ಟು,
ಅತಿಥಿಯಾಗಿಯೇ ಬಂದು,
ಶುದ್ದ ಶುಚಿಯಾತಿಥ್ಯವನು ಕೈಕೊಂಡು
ಮರೆಯಾದ, ಜಾನಕೀ ಹೃದಯಾಬ್ಧಿ ಚಂದ್ರಮನ,
ಹಾದಿಯನೆ ದಿಟ್ಟಿಸುತ,
ಮನಶೂನ್ಯ, ವನಶೂನ್ಯವಾಗಿ ನಿಂತು
ನಿಟ್ಟುಸಿರೆಳೆದ ಶಬರಿಗೇಣೆಯಾದಳಾ
ಮುದುಕಿ ಮುತ್ತೈದೆ !

ಭಾರತಕೆ ಸ್ವಾತಂತ್ರ್ಯ ಬಂದೇ ಬಂತು
ಕನಸ ಕಂಡೆವು ಎಂದೇ ಜನ ಭಾವಿಸಿತ್ತು ;
ಆದರೆ –

ಗಾಂಧಾರಿ ಗರ್ಭದಿಂದಬ್ಬರಿಸಿ ಹೊರಬಿದ್ದ
ನೂರಾರು ಪಿಂಡಗಳು ತಾಂಡವವ ನಡೆಸಿ
ತಾಯ ತೊಳುಗಳೆರಡ ತುಂಡರಿಸಿ,
ಅವಳ ತೊಡೆಯೇರಿ ನಲಿ ನಲಿದು
ನರ್ತಿಸಿದುವಂದು !

ಎತ್ತ ನೋಡಿದಡತ್ತ ಇಡಿಪಸ್ಸನ ಬಳಗ !
ಮುತ್ತಿರುವುದೆಲ್ಲೆಲ್ಲೂ ಪ್ರಣಯ ರಾಗ !
ಮಾರುತಿಯ ಮನೆಯಲ್ಲೆ ರಾಸಲೀಲೆ !
ಎದೆಯ ಬೃಂದಾವನದಿ ಬರಿಯ ಗೋಳೆ !

'ಮುಗಿವೆಂದೋ ಸಂಕಟಕೆ ?
ಮುಕ್ತಿಯೆಂದೋ ಕಾಣೆ!'

ಎಂದು ಮತ್ತೊಮ್ಮೆ ಮರುಗಿ,
ಸದ್ದಿರದ ಶಿಲೆಯಾಗಿ ಬಿದ್ದಳಲ್ಲಿ !
ಮೊದಲನೆಯ ತಲೆಮಾರು ಮುಗಿಯಿತಿಲ್ಲಿ.

ಮತ್ತೊಂದು ಸಂಪುಟ –
ಇದು ಎರಡನೆ ತಲೆಮಾರು !

ತಂಡಿತಟ್ಟಿದ ಕಡೆಗೆ
ಬಿಸಿಮಾಡಲೆಂದು
ಮಗ್ಗುಲಾದ ಆ ಮುದುಕಿ
ಚಿತೆಗೆ ಮೈಯೊಡ್ಡಿದಳು,
ಚಿತೆಯೋ
ಚೈತ್ಯಾಗ್ನಿಯೋ
ಯಾವುದೋ ಒಂದು ಬೆಂಕಿ !
'ಸಾಯುವಾಕೆಗೆ ಬೇಕೆ ಸೋಮವಾರ !'
ಎಂದೆನ್ನುವಷ್ಟರಲಿ ಚಿಮ್ಮಿದುದು
ತಾ ಹಡೆದ ಪಿಂಡಗಳ ಪಿಡುಗಿನಾ ಗುಡುಗು –
'ಅಮ್ಮ... ಅಮ್ಮಾ ನೋಡೆ

ಎಂಥ ಹಸಿವು !
ಇಲಿಗಳಬ್ಬರ !

ಬಸಿರ ಚೀಲದೊಳಗೆಲ್ಲ ಬಹು ದಾಳಿ !
ತಂದೆಯನೆ ಕೊಂದು ತಿಂದರೂ ಹಿಂಗದಿದೆ !
ಉದ್ದಿನೊಡೆ ಪಾಯಸವ ಬೇಗ ಮಾಡೆ !

ಎಂದು ಬೇಡಿದ ಮಕ್ಕಳನು ಕಂಡು
ಸಾವು–ನಗೆಯೊಂದ ಹರಿಸಿದಳು !

"ನಿರ್ಜೀವಿ ಪಾಂಡುವಿನ
ಹೆಣವನ್ನು ತಿನಬಂದ
ಬಡಪಾಯಿ ಪಾಂಡವರು ನಾವಲ್ಲ!
ಜೀವದಿಂದಿದ್ದ ತಂದೆಯನೆ ತಿಂದು,
ಭವಿಷ್ಯತ್ತು–ಭೂತಗಳ ಕಂಡ
ಸಹದೇವರಾಗಿಹೆ'ವೆಂದು
ಮೀಸೆಯ ಮುರಿದು ಪೇಳಿದುವು !

ಕೇಳಿ, ಕಂಗೆಟ್ಟು

ಬಿಟ್ಟ ನಿಟ್ಟುಸಿರಿಂಗೆ
ಮೈಯ ಕಾಯಿಸುತಿದ್ದ
ಬೆಂಕಿ ಬಲವಾಯ್ತು
ಮೂರನೆಯ ತಲೆಮಾರು

ಸಂಪುಟದ ಪುಟವೆಲ್ಲಾ
ಸಂಕಟದ ಶಿಬಿರ !
ಗೀಚು – ಗೆರೆ
ಕೆಂಪು ಮಸಿಯಿಂದೆಳೆದ ಅಡ್ಡ–ಪಟ್ಟೆ !

"ಮೂರು ತಲೆಮಾರಿನಲಿ ಬದುಕು ಮೂರಾಬಟ್ಟೆ !
ಮೂರು ತಲೆಮಾರಿನಲಿ ಬದುಕು ಮೂರಾಬಟ್ಟೆ !"

ಇದು ಮೂರನೆಯ ತಲೆಮಾರು !
ತಪ್ಪಿದೆಯೋ ನೀ ಕೆಟ್ಟೆ,
ಹೇಳ ಹೆಸರಿಲ್ಲ !

ಹಿತವಲ್ಲಾ ಹಿತವಲ್ಲಾ ಚೇಳ–ಚುಂಬನವೆಂದೂ !

ಹೊತ್ತಿನ್ನೂ ಮುಳುಗಿಲ್ಲ
ಕತ್ತಲಾವರಿಸಿಲ್ಲ !

ಇನ್ನಾದರೆಚ್ಚರೋ... ಇನ್ನಾದರೆಚ್ಚರು !!

ಚಿಂತನೆಗೆ ತೆರೆದಿಹವು ನೂರಾರು ತೆರಹು !
ನಿನಗಿಷ್ಟು ಬೇಗೇಕೋ ಇಂಥ ಮರವು ?

ಏಳು ಭಾರತ ಪುತ್ರ !
ಹಾಡು ಮಂಗಳಗೀತ !!

ಯೋಧೃವಾಣಿಯನ್ನೊಮ್ಮೆ ನೆನೆದು ನೀ ಹಾಡು
ಉತ್ತಿಷ್ಠತ, ಜಾಗ್ರತ, ಪ್ರಾಪ್ಯವರಾನ್ನಿಬೋಧತ !

## ಫ.ಗು.ಹಳಕಟ್ಟಿ

ನಿಂತ ದೀಪದ ಕಂಬ ಅವನ ತನು, ಬಳಕು ಮನ !
ತಲೆಯೊ ತಾಮ್ರದ ಚೊಂಬು, ಮೇಲೆಧವಳ ಕಿರೀಟ !
ಕಡ್ಡಿ ಕನ್ನಡಕದಲಿ ಕಾಂಬ ಕಂನುಡಿ ನೋಟ
ಮಾತು ಮಂಜುಳ ಗಾನ ಐಕ್ಯತೆಗೆ ಸೋಪಾನ !

ನಿಲುವಂಗಿ, ಕಸೆಪಂಚೆ ಗರಿವಡೆದ ಗಾಂಭೀರ್ಯ !
ಕಿಸೆಯಲ್ಲಿ ಕರಣ ಹಸಿಗೆಯ ಅರ್ಥ! ಪ್ರಣಮ
ಸಾದಾಖ್ಯಗಳ ಪಮಚರ್ವಣದ ಕಡತ, ಅವನ
ನಾಡಿಯಾಡಿದುವು, ಉದಿದುವು ಬರಿ ರಗಳೆ ತೂರ್ಯ !

ಶಿವದ ಅನುಭವ ಶೂನ್ಯ ಸಿಂಹಾಸವನಿತ್ತು
ಭವದ ರೋಗಕೆ ಭಿಷಜ ಬೀಜ ಮಂತ್ರವ ಕೊಟ್ಟು
ಓಕಾರದಳದಲಿ ತತ್ತ್ವ ಕುಂಜವ ನಟ್ಟು
ನಿಃಕಲದ ಶಿವದಲ್ಲಿ ಜ್ಞಾನ ಚಿತ್ತವನಿತ್ತು

ಶಿವವಾದ, ಗುರುವಾದ, ಕನ್ನಡದ ಗುಡಿಕಟ್ಟಿ
ವಿಜಯಪುರ ಗೊಮ್ಮಟನೊ, ಅವನೆ ಫ.ಗು.ಹಳಕಟ್ಟಿ !

**ಮುಕ್ತಿವಾಹಿನಿ**

ವರ್ಷ ಋತುವಿನ ಮಾತೃಸ್ವರೂಪಿಣಿಯೆ,
ಕಾಳ ಮೇಘಗಳ ಉಗ್ರರೂಪಿಯೇ,

ಘೋರ್ಗರೆದು ಎದ್ದೆದ್ದು ಸಾಗರದ ವೀಚಿಗಳನುಟ್ಟು
ಗರ್ಜಿಸಲಿ ಆಷಾಢ ಮೇಘಮಾಲೆಗಳು
ಬೀಸಲಿ ಝಂಝುವಾತ,
ಅದ್ರಿ ಶಿಖರಗಳನ್ನಪ್ಪಳಿಸಿ, ನುಚ್ಚುನೂರು ಮಾಡಲಿ
ಸ್ವರ್ಣ ಬಂಗಾಲದ ನೆತ್ತರಿನ ಕಲೆಗಳು ತೊಳೆದು ಹೋಗಲಿ,
ರಕ್ತ ಕಲುಷಿತೆಯಾದ ಪದ್ಮ

ದಡಗಳನೆ ಧಿಕ್ಕರಿಸಿ,
ರುದ್ರ ರೂಪವ ತಾಳಿ
ಮುಕ್ತವಾಹಿನಿಯನೊಡಗೊಂಡು

ಪಶ್ಚಿಮದ ಸರ್ವಾಧಿಕಾರವನು ನಾಶಗೊಳಿಸಲಿ,
ಎಲೆ ನಿಷ್ಠುರತೆಯೆ,

ಮುಕ್ತಧಾಮದ ಕಡೆಗೆ ಧಾವಿಸುವ ಜನಗಣವ
ನೆತ್ತರಿನ ಹೊಳೆಯಲ್ಲಿ ಮುಳುಗಿಸುತ್ತಿರುವೆ,

ನವೀನ ಯುಗ,
ಮಾನವನ ಬಿಡುಗಡೆಗೆ ಸಿದ್ಧವಾಗಿಹುದು,
ದಾಸ್ಯ ಶೃಂಖಲೆಗಳನು ತುಂಡರಿಸುತಿಹುದು.

ಹೇ ನಿಷ್ಠುರತೆ,
ದೂರ ಸರಿ,
ತೊಲಗತ್ತ,
ತೆರವುಗೊಂಡು ಕಾಲಕ್ಕೆ
ಇತಿಹಾಸ ಹಾರುತ್ತ ಬರುತಲಿದೆ ನೋಡು

ಅದರಡಿಯ ಹಾದಿಯಲಿ ನೀನೋ,
ಛೇ ~ ಬಿಡು,
ಕೇವಲ ಒಂದು ಕ್ಷುದ್ರವಸ್ತು;
ಜೇಡನ ಅಲೆ !
ಇದು ಸಲ್ಲ
ಇದು ಹೊಲ್ಲ
ನೀನೇ ಹೇಳು
ಮದ್ದುಗುಂಡುಗಳಷ್ಟೇ ಸ್ವಾತಂತ್ರ್ಯದಾಸೆಗಳ
ತಡೆಹಿಡಿಯಬಲ್ಲುವೆ ?

ಸ್ವಾತಂತ್ರ್ಯವೇ ಮಾನವನ ವೈಕುಂಠ !
ಜೀವನದ ಸಾಕ್ಷಾತ್ಕಾರ !
ಎಲ್ಲ ಉಪಲಬ್ಧಿಗಳು !

ಸರ್ವ ಸಾರ್ಥಕ್ಯವೂ ಸ್ವಾತಂತ್ರ್ಯವೇ !
ಇದನರಿತು ನುರಿತಿದ್ದರೂ,
ಮಾನವೀಯತೆಯ ಮಾರಣ ಹೋಮ,
ಆ ರೌದ್ರ ತಾಂಡವವ ನೋಡಿ,
ಕಂಗೆಟ್ಟ ಜನತೆ ನಿಂತಿದೆ ಇಲ್ಲಿ

ಸ್ತಂಭೀಭೂತವಾಗಿ;
ಅಂತೆಯೇ ಕಾಯುತಿದೆ,
ಕಟ್ಟೊಲುಮೆ ಬೀಡಾದ,
ತನ್ನ ನಾಡಿನ
ದಾಸ್ಯ ಶೃಂಖಲೆಗಳನು ಕಿತ್ತೊಗೆದು ಮೆರೆಯಿಸುವ
ಸ್ವರ್ಣವರ್ಣದ ಕಿರಣಮಾರ್ಗವನ್ನು,
ನೀನದೆಷ್ಟೋ ನೆತ್ತರಿನ ಹೊಳೆಗಳನೆ ಹರಿಸಿರುವೆ
ಆದೊಡಾಯೆಡೆಗಳಲಿ,
ಕೇಳು,
ಕಾಲಪುರುಷ
ದುರ್ಭೇದ್ಯ ದುರ್ಗಗಳ ಕಟ್ಟಿಯೇ ಕಟ್ಟುವನು !
ಇದು ಅಂತಿಂಥ ನೆಲವಲ್ಲ ,
ಶ್ರೀ ಕುರುಕ್ಷೇತ್ರದಾ ಧರ್ಮಧರೆ !
ಅದರಿಂದೆ ಸ್ಪಷ್ಟ ತಿಳಿ,
ಈ ಸಂಗ್ರಾಮ ಭೂಮಿಯಲಿ ಧರ್ಮಧ್ವಜ
ಹಾರಿಯೇ ಹಾರುವುದು ಕಟ್ಟಕಡೆಗೆ !

ವರ್ಷಾಕಾಲದ ಝುಂಝಾವಾತವೆ, ಬಾ,
ಕಾಲ್ದಿಸೆಯ ಸರಪಳಿಯ ತುಂಡರಿಸಿ
ಕ್ರೂರ ದಬ್ಬಾಳಿಕೆಯ ನುಚ್ಚುನುರಿಗೆಯ್ಯು ಬಾ.

ಮುಕ್ತಿವಾಹಿನಿಯನೊಡಗೊಂಡು ಪದ್ಮ
ಎಂದೆಂದಿಗೂ ಪ್ರವಹಿಸಲಿ.

ಭದ್ರ ವಿಸ್ತೃತಳಾಗಿ ಮೂಡಣ ದಿಶಾವಲಯದೊಳು
ಕಿರಣದೆಳೆಗಳನೆಲ್ಲ ಮೂಲೆಮೂಲೆಗೂ ಮುಟ್ಟಿಸುತ
ಸ್ವಾತಂತ್ರ್ಯದುದಯ,
ಉಕ್ಕೇರಿ ಬರಲಿ
ಮತ್ತೆ,
ಸ್ವರ್ಣ ಕಿರಣದ ಮಹಾದೀಪ್ತಿಯಲಿ
ನೆತ್ತರಿನ ಕಲೆಯೆಲ್ಲಾ ತೊಳೆದು ಹೋಗಲಿ
ಎಂದೆಂದೂ ಬೆಳಗಲಿ
ಸೋನಾರ್ ಬಾಂಗ್ಲಾದೇಶ್

ಮೂಲ : ಮಲೆಯಾಳಂ

## ಮಲೆನಾಡು

ಸ್ವಾಮಿ,
ನೀವು ಏನೇ ಹೇಳಿ,
ನನಗಂತೂ ಮಲೆನಾಡು ಅಚ್ಚುಮೆಚ್ಚು
'ಆರಂಕುಶಮಿಟ್ಟೊಂಡಂ ನೆನೆವುದೆನ್ನ ಮನಂ...'
ಏಕೆಂದು ಕೇಳುವಿರಾ ?

ಕೇಳಿ –
ಮಲೆನಾಡಿನ ಜಿಗಣೆಗಳೆಲ್ಲಾ ಗಿರವಿ ಅಂಗಡಿಗೆ
ವಸಲೆ ಹೋಗಿ ಬಹು ದಿನಗಳಾದುವು ;
ನನ್ನ ನೆತ್ತರು ವೃಥಾ ಪೋಲಾಗುವುದಿಲ್ಲ ಅಲ್ಲಿ ;
ಬಸಿದಷ್ಟೂ ಬೆಲೆಯುಂಟು ಬೆವರಿಗೆ
ಬಯಲ ಸೀಮೆಯಮತೆ ಬತ್ತಲೆ ನಿಲ್ಲಬೇಕಾಗಿಲ್ಲ.

ದುಷ್ಟ ಮೃಗಗಳಿಗೆ ದೌಷ್ಟ್ಯವೆ ತಿಳಿದಿಲ್ಲ
ಎಲ್ಲದನ್ನೂ ಪೊಲೀಸ್ ಠಾಣೆಗೆ ಮಾರಿಕೊಂಡು
ಸುಮ್ಮನೆ ಗಸ್ತು ತಿರುಗುತ್ತಿವೆ,
ಅಕಸ್ಮಾತ್ ಮನುಷ್ಯ ಪ್ರಾಣಿಯೊಂದು
ಹೂಂಕರಿಸಿದರೆ ಸಾಕು,
ಕೂಡಲೇ ಗೊಟಕ್ ಅಂದರೂ ಅಂದವೆ !
ಅವಕ್ಕೆ ತುಂಬ ಭಯ

“ಕಲಿಕಾಲ ಕೆಟ್ಟದ್ದು
ನರರು ಸುರರು ಅಸುರರಿಗಿಂತ ಬಲ್ಲಿದರು.
ಆದ್ದರಿಂದ,
ಇದ್ದು ಇಲ್ಲದ ಹಾಗೆ ಇರುತ್ತೇವೆ ”
ಅನ್ನುತ್ತಿವೆ.

ಪಾಪ !
ಕಂಕನರಿಗಳೆಲ್ಲಾ ಬಂಕಿಮರ ಮನೆ ಸೇರಿ ಬಿಟ್ಟಿವೆ.
ಅಲ್ಲಿ ಒಂದೂ ಇಲ್ಲ.
ತುಂಡು ಮಾಂಸಕ್ಕಾಗಿ.
‘ನೀನೆನಗೆ ಕಾಮದೇವಂ
ಇಂದ್ರಂ
ಚಂದ್ರಂ,

ಎಂದೆಲ್ಲ ಹೊಗಳಿದ್ದೂ ಹೊಗಳಿದ್ದೆ !
ಬೆನ್ನು ತೋರಿಸಿದಾಗ ಕೊಟ್ಟದ್ದು ಮಾತ್ರ ಗುದ್ದೆ !
ಆದರೂ,
ಶಿಷ್ಟ ಹಕ್ಕಿಗಳ ಬಳಗದಲ್ಲಿ ಒಂದು ಸಂತಾಪ ಸೂಚಕ ಸಭೆ !
ಪಟ್ಟ ಸಂತಾಪ ಇಷ್ಟೆ –
‘ಅಯ್ಯೋ !
ಕನ್ನಡದ ಕಾಜಾಣ, ಕೋಗಿಲೆಗಳೆಲ್ಲಾ,
ಇತ್ತೀಚೆಗೆ ಕಾಗೆ ಗೂಗೆಗಳಾದುವಲ್ಲಾ’ ಎಂದು,
ಈ ಕಾಂಡೊಲೆನ್ಸನ್ನು ಕಂಡೆಮ್ ಮಾಡುವುದಾದರೆ
Condone ಮಾಡೋಣ Delay

ಮಲೆನಾಡಿನಲ್ಲಿದ್ದ ಮಲೇರಿಯಾ ಈಗಿಲ್ಲ,
ಅದಕ್ಕೆ ಹಿಸ್ಟೀರಿಯಾ, ಡಿಫ್ಟೀರಿಯಾ, ಸಿಫಿಲಿಸ್, ಕ್ಷಯ,
ಅಲ್ಲಿ ಹಾಳಾಗಿ ಇಲ್ಲಿ ಊರಾಗಿ,
ಡಾಕ್ಟರನ ಸಿರಂಜ್, ಸ್ತತಸ್ಕೋಪ್ ಸೇರಿದುವು.
ವಿಕ್ಟರಿ ! ವಿಕ್ಟೋರಿಯಾ !!

ಹೆಬ್ಬಾವುಗಳೆಲ್ಲಾ PWD ಗೆ ಅರ್ಜಿಹಾಕಿ
ಬಾಗಿಲು ಕಾಯ ಹತ್ತಿದ ಮೇಲೆ ಅಲ್ಲಿ ಒಂದು
ವಳ್ಳೆಪೀಗನೂ ಸಿಗುತ್ತಿಲ್ಲ ಸ್ವಾಮಿ,
ಔಷಧಿಗೆ ಬೇಕೆಂದರೂ ಒಂದು ಹಾವಿಲ್ಲ ಅಲ್ಲಿ,
ಏಡಿ, ಸೀಗಡಿ ಎಲ್ಲಾ ಸತ್ತು ಶತಮಾನಗಳಾದುವು

ಕಾಡೆಲ್ಲಾ ಮಡಿದ ಮೇಲೆ,
ಈಗ,
ಮಲೆನಾಡು ಕಳೆ ತುಂಬಿದ ಬೀಡಾಗಿದೆ,

ಅಲ್ಲಿ ಅರಳುವ ಹೂವಿನಲ್ಲಿ ಗೊಬ್ಬರದ ವಾಸನೆಯಿಲ್ಲ !
ಮಾಗಿದ ಹಣ್ಣಿನಲ್ಲಿ ಒಳಚರಂಡಿಯ ರಾಡಿ, ಆ ಸಾರ ಇಲ್ಲ,
ಆದರೆ
ಅದೇ ತುಂಗೆ
ತಾನು ಎದೆಂದಿಗೂ ಸಹಸ್ರ ತರಂಗೆ !
ಪರಮ ಪಾವನೆ
ಗತ ಶತದ ಸಾಕ್ಷಿ
ಭವಿತವದ ಚೈತ್ಯಾಕ್ಷಿ !

ಹಸಿಮೈಯ ಹೊರಳಿಸುತ ಉರುಳುವಳು ಅನವರತವಾಗಿ !
ಸ್ವಾಮಿ,
ನೀವು ಏನೇ ಹೇಳಿ,
ನನಗಂತೂ ಮಲೆನಾಡು ಅಚ್ಚು-ಮೆಚ್ಚು,
'ಮರಿದುಂಬಿಯಾಗಿ-ಮೇಣ್-ಕೋಗಿಲೆಯಾಗಿ
ಪುಟ್ಟುವುದು ನಂದನದೊಳ್'
ಇದೇ ನನ್ನ ಅಂತಿಮ ಬಯಕೆ
ಅಲ್ಲ-ಬೇಡಿಕೆ !

## ಓಂ ಕ್ರಾಂತಿ ಕ್ರಾಂತಿ ಕ್ರಾಂತಿ ಃ

1

ಬಾ ಬೆಳಕೆ ಬಾ !
ಸ್ವರ್ಣ ವರ್ಣೋದಯದ
ಅರುಣ ಜೀಕೋಳವಿಯಲಿ
ಬೆಳ್ದನ್ನೆ ಮುಕ್ಕಳಿಸಿ ಬೆಳ ಬೆಳಗಿ ಬಾ !
ಸಪ್ತ ಸಾಗರದೆದೆಯ ಕುದಿಕುದಿಯ ತಾಂಡವದಿ
ಲಾಸ್ಯಗೈಯುತ ಬಾ !
ಬತ್ತಲೆಯ ಬಯಲೀಂಗೆ ಶಕ್ತಿ ಸಂಕ್ರಮಿಸುತ್ತ
ಭಾರತೀಯನ ಎದೆಗೆ ಸೊದೆ ತುಂಬು ಬಾ !
ಮಸಣ ಮೌನದ ರುಂದ್ರ ಮರುಭೂಮಿಯೆಡೆಳೊಳಿಪ
ಸಾರ ಶೂನ್ಯವ ಸೂಸಿ,
ಭರತಪುತ್ರನಲಿಂದು ನಿರ್ಭಯವ ಬಿತ್ತು ಬಾ !
ಧೀರ ಮಂದರದಂತೆ ಅಚಲನಾಗಲೀ ಇಂದು !
ಉತ್ತುಂಗ ಶೃಂಗದೊಲು ತನ್ನತನ ಮೆರೆಯಲಿ !
ಹರಿವೊನಲ ನೈರ್ಮಲ್ಯ ತನ್ನತನ ಮೆರೆಯಲಿ !
ಹರಿವೊನಲ ನೈರ್ಮಲ್ಯ ಅವನ ಧಮನಿಯಲಿರಲಿ
ಅವನ ನಾಡಿಯಲೆಂದೂ ಮಿಡಿಯುತ್ತಲಿರಲಿ –
'ನಾ ಭಾರತೀಯ ನಾ ಭಾರತೀಯ'
ಎಂದೆಂಬ ತಾರಕಮಂತ್ರ !

2

ಓ ಬೆಳಕೇ,
ಭಾರತೀಯನಿಗಿಂದು ನೈರಾಶ್ಯದಾಕಳಿಕೆ !
ಅವನ ಮನ ಕೊನೆಯಲ್ಲಿ ಬೆಳೆದಿಹುದು ಬಂದಳಿಕೆ !
ಹುಟ್ಟಳಿಸಿ, ನಟ್ಟು ಬಿಡು
ಭಾರ್ಗವನ ಕೊಡಲಿ !

ನೈಚ್ಚಯತೆಗೆ ಕಿಚ್ಚಿಟ್ಟು
ಅಚ್ಚಳಿಕೆಯ ಅಳಿಸಿಬಿಡು
ಭಸ್ಮವಾಗಲಿ ಎಲ್ಲ ಮಸಣದಲ್ಲಿ !

3

ಬೆಳಗಿನೊಳಗಣ ಬೆಳಕೆ
ಜಗದಾದಿ ಮುಂಬೆಳಕೆ
ಇಳೆಯೊಲಳವತರಿಸಿದೀ ಬೆಳಗುಗಳ ಬೆಳಕೆ,
ಮಟವಾಗು, ದಿಟವಾಗು,
ಪ್ರಜ್ವಲಿತ, ಪ್ರಸ್ಪುಟಿತ,
ದಿವ್ಯ ತೇಜೋರಾಸಿ ವಾರಾಶಿಯಾಗು !

4

ಓ ವಿಶ್ವ ಚೇತನವೆ.
ಆದಿತ್ಯ ಲೋಕದಿಂದವತರಿಸಿ ಬಾ !
ವಿಶ್ವವೃಕ್ಷದ ಸಕಲ ಸೌರವ್ಯೂಹದ ಗರ್ಭ –
ದಿಂದ ನೀ ಅಬ್ಬರಿಸಿ ಹೊಲೆ ಹರಿದು ಬಾ,
ಬಂದು ಭಾರತದಲ್ಲೇ
ನೆಲೆ ನಿಲ್ಲು ಬಾ,
ಅಲ್ಲದಿರೆ ಮೇಲೆತ್ತಿ ಸೆಳೆದೊಯ್ಯು ಬಾ !
ಬಾ...ಬಾ.. ಬಾ..!
ಹತೋವಾ ಪ್ರಾಪ್ಯಸಿ ಸ್ವರ್ಗಂ, ಜಿತ್ವಾವ ಭೋಕ್ಷಸೆ ಮಹೀಂ 1
ತಸ್ಮಾದುತ್ತಿಷ್ಠ ಕೌಂತೇಯ ಯುದ್ಧಾಯ ಕೃತ  ನಿಶ್ಚಯಃ ॥

ಓಂ ಕ್ರಾಂತಿ ಕ್ರಾಂತಿ ಕ್ರಾಂತಿ ಕ್ರಾಂತಿಃ !

## ವಿಪರ್ಯಾಸ – 2

ನಮ್ಮ ಘನ ಸರ್ಕಾರದ ಆಜ್ಞೆಗಳಂತೆ
ನಮ್ಮೂರಿನಲ್ಲಿ ಮಳೆ !
ಬರುತ್ತೆ . . .! ಹೋಗುತ್ತೆ . . . . !
ಟೌನ್‌ಹಾಲಿನಿಂದ ಕಲಾಕ್ಷೇತ್ರಕ್ಕೆ ಹೋಗುವಷ್ಟರಲ್ಲಿ

ಮೂರು ಬಾರಿ ಹೂ ಬಿಸಿಲು
ಮೂರು ಬಾರಿ ಮೋಡದ ಉಗುಳು !
ಸಾಕಪ್ಪಾ ಸಾಕು !
ಎಲ್ಲೆಲ್ಲೂ ಪರಪಂಚ,
ಪ್ರಕೃತಿಯಲ್ಲೂ ಪಕ್ಷಪಾತ !
ನೇಮವಿಲ್ಲ, ನಿಷ್ಠೆಯಿಲ್ಲ,
ಮಾಡುವ ನೀಡುವ ನಿಜಗುಣ ಮೊದಲೇ ಇಲ್ಲ !

ಮನೆಯಲ್ಲೂ ಅಷ್ಟೆ –
ಯಾವುದೇ ವಸ್ತುವಾಗಲಿ ಇದ್ದ ಬಳಿ ಇರುವುದೇ ಇಲ್ಲ !
ಅಡಿಗೆ ಮನೆ, ಮಹಡಿಯ ರೂಮು, ದೇವರಕೋಣೆ

ಎಲ್ಲವೂ ರಾಜಕೀಯ ರಂಗಗಳೆ !
ಪಾಕಿಸ್ತಾನ ಪ್ರತ್ಯೇಕವಾದರೂ
ಪುಂಡಾಟಿಕೆ ತಪ್ಪಲಿಲ್ಲ !
ಬಾಂಗ್ಲಾ ಬಂದರೂ ಬಂಡಾಟ ನಿಲ್ಲಲಿಲ್ಲ,
ನಿಲ್ಲುವುದು ಇಲ್ಲ !
ಬೇರೆಯಾದರೇನು ?

ಬೆಲೆಯಾಯಿತೆ ? ? ?
ನೆಲೆ ಕಂಡಿತೆ ? ? ?

'ಉಹುಂ..!'
ಹೀನ ಸುಳಿಯನ್ನು ಬೋಳಿಸಿದಂತೆ –
"ಪಯಃ ಪಾನಂ ಭುಜಂಗಾನಾಂ
ಕೇವಲಂ ವಿಷವರ್ಧನಂ"
ಹುಟ್ಟುಗುಣ ಸುಟ್ಟರೆ ಹೋದೀತೆ ?

"ಸಗಣಿಯ ಬೆನಕಂಗೆ ಸಂಪಗೆಯರಳಲ್ಲಿ ಪೂಜಿಸಿದರೆ
ರಂಜನೆಯಲ್ಲದೆ ಅದರ ಗಂಜಳ ಬಿಡದಣ್ಣಾ!

ಮಣ್ಣಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದರೆ
ನಿಚ್ಚ ನಿಚ್ಚಕ್ಕೆ ಕೆಸರಹುದಲ್ಲದೆ ಅದರಚ್ಚುಗೆ ಬಿಡದಣ್ಣಾ !"

ಅಣ್ಣನ ಮಾತು ಆಕಾಶ ಪುರಾಣವಲ್ಲ;
ಅನುಭವದ ಅಣಿಮುತ್ತು

ಮರಳುಗಾಡಿನಲ್ಲಿ ಬಿಸಿಲುಹಣ್ಣು ತಿನ್ನುತ್ತಿದ್ದ,
ಕಣ್ಣೀರನ್ನೇ ಪನ್ನೀರು ಎಂದು ಕುಡಿಯುತ್ತಿದ್ದ
ಬೇವಾರ್ಸಿಗಳು ಇಂದು ನಮ್ಮ ಅನ್ನದಾತರು !
ಹೆತ್ತವ್ವೆಗೆ ಲಾಡಿ ಬಿಚ್ಚುವ ಪುಂಡರು ನಮಗಿಂದು
ಅಪ್ಪಟ ಪ್ರವಾದಿಗಳು !

ಇದು ಶುದ್ದ ವಿಪರ್ಯಾಸ !

ಹಾದರಕ್ಕೆ ಹುಟ್ಟಿದ ಮಕ್ಕಳೇ ಅಮೃತ ಪುತ್ರರು;
ಅವರೇ ನಮಗಿಂದು ಆದರ್ಶ ನಿರ್ಮಾಪಕರು 1

ಏನು ಕೇಡುಗಾಲ ಬಂತೋ ಏನೋ !
ಕಾಗೆ ರಾಗಿ ತಿನ್ನೋ ಕಾಲ;
ತಣ್ಣೀರನ್ನೇ ಆರಿಸಿಕೊಂಡು ಕುಡಿಯೋ ಕಾಲ !

ಎಂದು,
ವಠಾರದ ತಲೆಬಾಗಿಲಲ್ಲಿ
ತಂಬಾಕು ತೀಡುತ್ತ ಕುಳಿತಿದ್ದ
ನಿಂಗಜ್ಜ
ತನಗೆ ತಾನೇ ಗೊಣಗಿಕೊಂಡ.

## ವಿಪರ್ಯಾಸ – 3

ಕರ್ಣಾಟಕಾ ಕರ್ಣಾಟಕಾ
ಆಯ್ತು ಮಹಿಷನ ಊರು ಕರ್ಣಾಟಕಾ
ಕನ್ನಡದ ರಾಜರಾಜೇಶ್ವರಿಯ
ಮಸ್ತಕವ ಮುಡಿಸಿಹುದು ಮಂಗಳದ ಮಕುಟ,

ಕರ್ಣಾಟಕಾ ಕರ್ಣಟಕಾ
ಆಯ್ತು ಮಹಿಷನ ಊರು ಕರ್ಣಾಟಕಾ !

'ಏನ್ಲಾ ಇದು ಕಟಕಟಾ' ಅಂದಾ ಕೆಂಗಜ್ಜ
ಕೂಳಿ ಒಳಗಿಂದ ಕೋ ಕೋ ಕೋSS ಎಂದು
ಹ್ರಸ್ವ ದೀರ್ಘ ಪ್ಲುತದಲ್ಲಿ ದನಿಗೈದ ಕೋಳಿಗಳ
ತಿಪ್ಪೆಯ ಕಡೆಗೆ ದೂಡುತ್ತ
ಮೂಲಂಗಿ ಪ್ಯಾಂಟ್ ಮೇಲೇರಿಸುತ್ತಲೇ ಉತ್ತರಿಸಿದ ರಂಗ:
'ಅಜ್ಜಾ ಇದು ರಾಜ್ಯೋತ್ಸವದ ಮೆರವಣಿಗೆ !

ಇವೊತ್ತು ಕರ್ಣಾಟಕ ರಾಜ್ಯೋತ್ಸವ Day!
ಅದಕ್ಕೇ ಕರ್ಣಾಟಕ ಮಾತಾಕೀ ಜೈ..'
'ವಾಗಾ ನಿನ್ನವ್ವನ.. ಗುಯ್ ಅಂತಾನೇ
ಕಿವೇ ಬಡ್ಡೇಗೆ ಬಂದು..'
ಎಂದೇನೇನೊ ಗೊಣಗಿ ಕೆಂಗಜ್ಜ
ಕಿವಿಯಲ್ಲಿ ಸಿಕ್ಕಸಿದ್ದ
ಅರ್ಧ ಕೆಡಿಸಿ ಇಟ್ಟುಕೊಂಡಿದ್ದ
ಗಿಣಿಗಡಕ ಬೀಡಿಯ ತುಂಡನ್ನು
ತುಟಿಗೆ ತಂದು
'ಮಗಾ.. ವಸಿ ಕೊಳ್ಳಿ ತತ್ತಾ' ಅಂದ
ನಿರ್ಲಿಪ್ತನಾಗಿ !
– ಅವನಿಗೋ ಅದು ದಿವ್ಯ ನಿರ್ಲಕ್ಷ್ಯ.

ರಾಜ್ಯೋತ್ಸವದ ಮೆರವಣಿಗೆ ಅಂಗಡಿ ಬೀದಿಗೆ ಬಂತು –
ಮತ್ತೊಮ್ಮೆ ಉದ್ಘೋಷ –
'ಕರ್ಣಾಟಕ ಮಾತಾಕಿ ಜೈ !'
ಜೈಕಾರ ಕೇಳಿದ್ದೇ ತಡ

ಶೆಟ್ಟಿ ದಢಾರನೆ ಅಂಗಡಿಯ ಬಾಗಿಲು ಬಡಿದು
ಬೀಗ ಜಡಿದು ಪಿಳಪಿಳನೆ ನೋಡುತ್ತ ನಿಂತ
ಚರಂಡಿಯ ಪಕ್ಕದ ಪುಟ್ಟ ಪ್ಲಾಟ್‌ಫಾರಂ ಮೇಲೆ.

ನಮ್ಮೂರ Big Baloon Street ನ
ವೈದಿಕ ಕಟ್ಟೆಯ ಮೇಲೊಂದು Conference !
ಘೋಷಣೆಯ ಕೇಲಿ ಸೊರಗ್ಗನೆ ನಶ್ಯ ಏರಿಸಿ,
ಮೂಗಿಗೆ ಇಸ್ತಿ ಮಾಡಿ, ಚಿಟಿಕೆ ಹೊಡೆದು
'ಹ್ಯಾ' ಎಂದು ಬಾಯ್ದೆರೆದ ತಿಪ್ಪಾಜೋಯ್ಸರು ಅಂದರು –
'ಎಂಟು ವರ್ಷಕ್ಕೆ ನನ್ನ ಮಗ ದಂಟು' ಅಂದ ಅಂತ !
ಗಂಡಾಗುಂಡಿ ಮಾಡಿ ಗಂಡಗೆ ಹೆಂಡತಿ ಮಾಡಿದರು
ನೋಡಿ ...'
'ಅಯ್ಯೋ ಬಿಡಿ'
ಮಧ್ಯೆ ಮೂಗುಹಾಯಿಸಿದ ರಾಮರಾಯರು,
'ಷೋಡಶವರ್ಷೇ ಸಂಪ್ರಾಪ್ತೇ ಗಾರ್ಧಭಫ್ಲಾರಾಯತೇ'
– ಅಂದರು.
ಕೃಷ್ಣಭಟ್ಟರು ರೇಗಿದವರ ಹಗೆ ಸೋಗು ಹಾಕಿ –

'ಛೇ–ಎಂಥ ಮಾತು
ಸಾಕು ನಿಲ್ಲಿಸ್ರೀ ನಿಮ್ಮ ಪರಿಹಾಸ !

ಹದಿನಾರು ವರ್ಷದ ಯುವತಿ !
ಇವಳು ಅಪ್ಸರೆಯೋ ಅಲ್ಲವೋ ಕಾಣೆ
ಆದರೆ...
ಕತ್ತೆಯತೂ ಅಲ್ಲವೇ ಅಲ್ಲ'
– ಅಂತ ಗದರಿದರು

ಅದಕ್ಕೆ ಅವಧಾನಿಗಳು–
'ಹೌದು –

ಹಡೆದರೂ ತಾಯಿಯಲ್ಲ
ಕೂಡಿದರೂ ಮಡದಿಯಲ್ಲ
ಮೈ ನೆರೆದಿದ್ದರೂ ಈಕೆ
ಮುಟ್ಟನರಿಯದ ಬಾಲೆ –
ಇವಳಿಗೆ ನಾಮಕರಣ ಮಾಡಿದವಳು ಯಾರು ಹೇಳಿ ?
ಗರತಿ ಗೌರವ್ವನೇ ? ಅಲ್ಲ !
ನೂರು ಜನಕ್ಕೆ ಸೆರಗು ಹಾಸಿದ ವನಿತೆ ನಿತ್ಯ ಮುತ್ತೈದೆ –
ಅವಳೆ ರಾಜಕೀಯದ ಸೂಳೆ ಅಹ್ಹಹ್ಹಾ' ಅಂದರು.

ನ್ಯಾಯನಿಷ್ಠುರಿ, ಖಂಡಿತವಾದಿ,
ಖಾದೀಧಾರಿ, ಅಪ್ಪಟಾ ದೇಶಭಕ್ತ
ನಮ್ಮ ಪಂಚಣ್ಣನ ನೇತೃತ್ವದಲ್ಲಿ
ರಾಜ್ಯೋತ್ಸವದ ಮೆರವಣಿಗೆ
ಬೀದಿಯಿಂದ ಬೀದಿಗೆ,
ಸಾಗುತ್ತಲೇ ಇತ್ತು.

## ಸೇವಾಶುಶ್ರೂಷೆ

ಉರುಳುತಿದೆ ಬೈಗು ಬೆಳಗು
ಬಹು ಕಿರಿಯ ಸುರಂಗದೊಳು ಹಾಯ್ದು,

ದಿನ ದಿನವು ಗಳಿಸಿದಾ ಧೈರ್ಯ ಸ್ಥೈರ್ಯವನು
ಹೀರಿ ಹಾಕುತ್ತಲಿದೆ ಆಕಾಶವು.

ಕಾಲದ ತಲೆದೆಸೆಯೊಳಿಟ್ಟಿರುವ ಪೀಠದೊಳು
ಕುಳಿತು ಕಾಯುತ್ತಲಿದೆ ನಿಯತಿ !
ಸಾಮರ್ಥ್ಯವನು ಮೆಟ್ಟಿ
ಸ್ವಾರ್ಥ ಬೆಳೆದಿಹುದಿಲ್ಲಿ !

ಕೆರೆಯ ಮೇಲಿನ ವೃಕ್ಷ ಬೀಳದೆಲೆ ನಿಂದಿಹುದು,
ಇದು ಅಚ್ಚರಿಯ ಮಾತಲ್ಲವೇನು ?

ರೆಂಬೆಯ ಗೂಡಿನಲಿ ವಾಸಿಸುವ ಹಕ್ಕಿಗೂ
ಅಪ್ಪಳಿಸುವಲೆಗಳಿಗೂ ಒಂದು ಬಾಂಧವ್ಯವಿದೆ !

ಬೀಳುವುದು ಮರ,
ಮತ್ತೆ ಹಾರಿ ಹೋಹುದು ಹಕ್ಕಿ

ಆದರು ಬಾಂಧವ್ಯ ಕಡಿವುದಿಲ್ಲ

ಎಲ್ಲದರ ಅಂತ್ಯಕ್ಕೂ ಹೊಸೆದುಕೊಂಡೆ ಇಹುದು
ಹೊಸತೊಂದು ನಾಂದಿ !

ನಿಡಿದಾದ ಜನಶೂನ್ಯ ಹಾದಿಯೊಳು ಧ್ವನಿಸುತಿದೆ
ಹುಟ್ಟು–ಸಾವುಗಳೆಂಬ ಸಂಕಟದ ಸಪ್ಪಳವು !

ಎಲ್ಲವನು ಕೇಳುತಿದೆ
ಸೇವೆ ಶುಶ್ರೂಷೆಗಳ ಸ್ಮೃತಿಪುಂಜ,
ಆದರೂ ಸುಮ್ಮನಿದೆ !

ಎದುರಿನಲಿ ಕಾಣುತಿದೆ ಮಬ್ಬು ತುಂಬಿದ ಅಡವಿ,
ಶೋಕವಸ್ತ್ರವನುಟ್ಟು ಅಲೆಯುತಿದೆ ಸುಳಿಗಾಳಿ,
ಎತ್ತರದ ಬಿತ್ತರದ ಕತ್ತಲೆಯ ಕೋಣೆಯಲಿ,
ಕಾಣಿಸುವ ಕಿರಿದೊಂದು ಬೆಳಕಿಂಡಿಯಿಂದ

ತೂರಿ ಬರುತಹುದೊಂದು
ಆಸೆಕಿರಣ !

ಅದರಿಂದ ಸೂಸುತಿದೆ ಬೆಳಕು,
ರೆಕ್ಕೆಗಳ ಬಡಬಡಿಸಿ ಹಾರಿ ಹೋಗುತ್ತಲಿದೆ
ಪಾರಿವಾಳದ ಹಿಂಡು !

ಸುಖವಾವುದೂ ಇಲ್ಲಿ ದೊಡ್ಡದಲ್ಲ
ದುಃಖವಾವುದು ತಾನು ಚಿಕ್ಕದಲ್ಲ !

ಕೋಣೆಯಲಿ ನೆಲಸಿರುವ ತಾಪದಾಸರೆ ಪಡೆದು,
ಮಂಜಿನಾಗರದಿಂದ ಇಳಿಯುತಿದೆ
ಸಂಜೆಯದು ನೀರವತೆಯಿಂದ.

ಕಂಪಿಸುವ ಕಾಲುಗಳನಾಧರಿಸಿ
ವರ್ತಮಾನದ ಭುಜವನಾಶ್ರಯಿಸಿ,
ನಿಂದಿಹುದು ರುಗ್ಣಭವಿತವ್ಯತೆ !

ಅಂತೆಯೇ ನಡೆವುದನು ಹೊಸದಾಗಿ ಕಲಿಯುತಿದೆ,
ತತ್ತಿರಿಪುದೆಂದೊಡೆ

ಬೀಳಲೆಂದಲ್ಲ
ಬಾಳಲೆಂದು !

ವ್ಯಥೆಯ ಆಘಾತಕ್ಕೆ ಶಬ್ದಗಳು ಉಡುಗಿದರೂ
ಮೌನ ಮಾತಾಡುತಿದೆ !
ಏರುತಿದೆ ಇಳಿಯುತಿದೆ
ಉಷ್ಣಮಾಪಿಯೊಳಗಿರುವ ಪಾದರಸ
ಪರರ ಹಿತಕಾಗಿ !
ಆವ ಸ್ಪರ್ಶದೊಳಾವ ಮೋಡಿ ತಾನಡಗಿಹುದೊ
ಅರಿತಿರುವವರಾರು ?

ಪ್ರೇಮವೆನ್ನುವ ಶಕ್ತಿ
ಗತಕಾಲದಿತಿಹಾಸವಲ್ಲ,
ಅದು ನಿತ್ಯನೂತನ ಸತ್ಯವ !

ಎರಡೆ ಚಣ,
ಚಿಕ್ಕವೆರಡೇ ಕಲ್ಲು,
ಮೇಲೆ ನಿರ್ಮಿತವಾದ ಮೆಹರಾಬದ್ದಾದ
ನಿಲ್ಲುವುದೆಷ್ಟೋ ಶತಮಾನಗಳ ತನಕ !

ಮತ್ತಿಲ್ಲಿ ನೋಡುವೊಡೆ,
ಭದ್ರ ಬುನಾದಿಯನು
ಪಡೆದಿರುವ ಭಿತ್ತಿಯೂ

ಒಮ್ಮೊಮ್ಮೆ ನಿತ್ತರಿಸಲಾರದಲೆ ತತ್ತರಿಸ ಹೋಗುತಿದೆ ~
ಭೂಕಂಪನವ ಹೊತ್ತು ಬೆನ್ನಿನ ಮೇಲೆ
ಪಾಳು ನೆಲದಲಿ ಅಲೆಯುತ್ತಲಿದೆ ವಿವೇಕ !
ಆದೊಡಂ ಅಡಿಪಾಯವಿಲ್ಲದಾ ವಸ್ತುಗಳ
ವಸತಿಯದು ನೆಲೆಗೊಳ್ಳುತಿದೆ

– ಇಲ್ಲಿ –
ಈ ಹೃದಯಾಂತರಾಳದಲಿ
ದೇವ–ಮಾನವರಿವರ
ಸೇವೆಗೆಂದು

ಶುಶ್ರೂಷೆಗೆಂದು !!

## ಅತೀಂದ್ರಿಯದ ಅವಿರ್ಭಾವ

ಮೈತ್ರಿ
ಮುರಿದು ಬಿತ್ತು !

ಸರಿ;
ನಾನು ಮುಗಿಲಿಂದ
ಮೋರಿಗೆ
ಬಂದು ಬಿದ್ದವನಾದೆ,

ಛೇ !,
ಈ ಬಗೆಯ ಭಾವನೆಯೂ ತಪ್ಪೆ;
ಏಕೆಂದರೆ,
ಆ ಮುಗಿಲು
ಈ ಮೋರಿ
ಎರಡೂ
ತಮ್ಮ ತಮ್ಮೊಳಗೆಲ್ಲಿ
ಮೈತ್ರಿಯನು ಮೂಡಿಸಿವೆ ?
.. ಅಹುದು;
ವಿಶ್ವಾಸವಿರಿಸಿದೆ ನೀನು
ವ್ಯಕ್ತಿಯಲ್ಲಿ – ಇಲ್ಲವೇ,
ವಸ್ತುವಿನ ಮೇಲೆ,

ಕಾರಣ,
ಸಕಲವೂ ಮನ ತಳೆದ
ಚೇಷ್ಟೆಯಾದುದರಿಮದ !

ಮನವೋ
ಪಕ್ಕಾ ದಗಲ್‌ಬಾಜಿ !
ಅಲ್ಲದೆ,
ಮೂಲತಃ ಅದು ತನಗೆ ತಾನೆ
ಅಖಂಡದ ಎಲ್ಲೆಯೂ ಅಲ್ಲ.

ಅದರ ಇರುವಿಕೆಯೂ ಅಲ್ಲ,
ಅದು ಕರಗಿಹೋಗುವ ಒಂದು
ಸರಳ ಸಾಧಾರಣ ಸ್ಥಿತಿ

ಒಂದು ಚಿತ್ರ, ಮತ್ತೊಂದು ಚಿತ್ರದ ಮೇಲೆ

ವಿಶ್ವಾಸವಿಡಲಿ
ಅವಿಶ್ವಾಸವಿಡಲಿ
ಅದರಲ್ಲಿ ವ್ಯತ್ಯಾಸವೇನೂ ಇಲ್ಲ;
ಏತಕ್ಕೆಂದರೆ,
ಚಿತ್ತ, ಅದು ಹೆತ್ತ ವಿಶ್ವಾಸ,
ಇಲ್ಲವೇ ಅವಿಶ್ವಾಸ
– ಈ ಮೂರು ಆಗಿವೆ
ಮರಿಚಿಕೆ !
ಭ್ರಾಂತಿ !
ಮತ್ತು ಛಾಯೆ !
ನಿನ್ನ ಮೇಲೆಯೂ ನಿನಗೆ ವಿಶ್ವಾಸವಿರದಿರಲಿ !

ಕಾರಣ,
ನಿನ್ನನ್ನೆ ನೀನು ತಿಳಿದಿರುವೆಯೆಲ್ಲಿ ಹೇಳು ?
ವಿಶ್ವಾಸವಿಡು,
ಕೇವಲ ಅನಾಕೃತ, ಅವ್ಯಾಕೃತ,
ನಿರಾಲಂಬ, ನಿರಧಾರಿತ ಶೂನ್ಯತೆಯ ಮೇಲೆ !

.... ನಿಶ್ಚಲ ನಿರಾಳ ಮನದಿಂದ ಒಂದಾಗು ಪಡೆಯುವೆ
ಸಕ್ಷಾತ್ಕರಿಸಿಕೊಳ್ಳುವೆ...

ನಿನ್ನ ಮೈತ್ರಿಯ ಮೆತ್ತೆ ಸಿಕ್ಕಿದೆಯೆಂದು
ಅದು ಅಚಲವಾಗಿದೆ
ಸ್ವಯಂ ಶ್ರದ್ಧೆಯೂ ಆಗಿಬಿಟ್ಟಿದೆ !
ಯಾವುದೋ ಒಂದು
ಅಜ್ಞಾತ ಧ್ರುವದಲ್ಲಿ ನೆಲೆ ನಿಂತಿದೆ ~
ಕಸುವಿದ್ದರೆ ನೋಡು,

ಇಂದೇ... ಇಂದೇ
ನಿನ್ನ ಹೃದಯಸ್ಥವಾದ ಸಹಜ ಅವಿಶ್ವಾಸದ,
ಸರ್ವವನು ಸ್ವಾಹಗೈಯುವ,
ಆ ಅಗ್ನಿಜ್ವಾಲೆಗಳನ್ನು ಆಲಿಂಗಿಸಿಕೊಂಡು
ಉ ರಿ ಯು ತ್ತಾ
ಉ ರಿ ಯು ತ್ತಾ
ನಿಶ್ಚಿಂತನಾಗಿ ನಿದ್ದೆ ಹೋಗು !

ಆದರೆ !
ಇವನಾರು ?
ತನ್ನವೇ ಚಿತೆಯ ಭಸ್ಮದೊಬ್ಬೂಳಿಯಿಂದ
ಮೇಲೆದ್ದು ಬರುತ್ತಿದ್ದಾನೆ !

ಇವು ಯಾರ ರೆಕ್ಕೆಗಳು ?
ಇವು ಹಾರಿದಂತೆಲ್ಲ
ಅವಕಾಶವೀಯುತಿದೆ !

ಮೂಲ : ಹಿಂದಿ

**ಪೋಷವತಿ**
**(1972)**

## ಹೊಸವರುಷ

ಹಸುರಿನ ಪಸೆಯಲಿ ಹೂಬಿಸಿಲಾಡಿಸಿ
ಹೊಸವರುಷವು ಕಾಲೂರಿತಿದೆ !
ತುಂತುರು ಹನಿಗಳ ಮಂತ್ರಾಕ್ಷತೆಯಲಿ
ಅಂತರಂಗಗಳ ಕೆಣಕುತಿದೆ !

ಮನೆಮನೆಯಂಗಣ ಮಾವಿನತೋರಣ
ಬೇವೂ ಆಗಿದೆ ಆಭರಣ !
ಮಾಗಿಯ ಯೋಗಿಗೆ ಮೋಹವ ಪುಟ್ಟಿಸಿ
ನಡೆಸಿದೆ ಅಭ್ಯಂಜನ ಸ್ನಾನ !

ತಳಿರಿನ ಬೆರಳಲಿ ಕಚಗುಳಿಯಿಕ್ಕುತೆ
ಮಂದಾನಿಲನದೊ ಸುಳಿಯುತಿದೆ!
ಬೃಂದಾವನ ಗೋವಿಂದನ ಹೃದಯದಿ
ರಾಧೆಯ ನೆನಪನು ತುಂಬುತಿದೆ !

ಹೂ ಹೂ ಚುಂಬನ ತಿರೆ–ಬಾನ್ ಬಂಧನ !
ಕೇಳದೊ ಮುರಳಿಯ ನವಕೇಳಿ !
ಯುಗಯುಗದಾದಿಯು ಈ ಶುಭನಾಂದಿಯು
ಮುಪ್ಪನೆ ಮರೆಸಿದೆ ಮೋದದಲಿ !

## ನೀನು ವೀಣೆ ನುಡಿಸುವಾಗ...

ನೀನು ವೀಣೆ ನುಡಿಸುವಾಗ ಎದೆಯೊಳೇನೋ ಮಿಡಿವುದು
ಮೇಳದೊಡಲನಪ್ಪಿದಾಗ ನನ್ ತೋಳು ಕುದಿವುದು !

ಬೆರಳ ಚಿಗುರು ಚಲಿಸದೊಡನೆ ಮಿಂಚು ಪಸರಗೊಳುವುದು
ಮೀಟು ತಂತಿ ಒಳಗ ಮೀಟಿ ಏನೋ ಕಾಟ ಕೊಡುವುದು !

ತಾನ ತಾನ ಸ್ತನ್ಯಪಾನ–ಅಯ್ಯೋ–ಎನ್ನುವುದೆನ್ನ ಮನ
ಕಂಪಿನಿಂಪಿನುಸಿರ ಸೂಸೆ ಬಯಸಿ ಬಿರಿವುದಾದನನ !

ಸಪ್ತ ಸ್ತರದ ಸುಪ್ತರಾಗ ಪುಟಿಯೆ ತುಟಿಯು ಕುಣಿವುದು
ನಾದ ಮೋದದಲ್ಲಿ ಬೆರೆದು ನನ್ನ ಮೆಯ್ಯಿ ಮರೆವುದು !

ಓಂಕಾರದ ಝೇಂಕೃತಿಯೊಳು ಅಹಂಕಾರವಳಿವುದು
ನಾನು ಇಲ್ಲ ನೀನು ಇಲ್ಲ ಅದೊಂದೆ ಎಲ್ಲೂ ಮೆರೆವುದು !

## ಹೇಮಕೂಟದ ಮೇಲೆ ..1

ಹೇಮಕೂಟದ ಮೇಲೆ ಕನ್ನಡದ ಬಾವುಟ
ಹಾರುತಿದೆ, ಮಣಿಯದಕೆ ನಟ್ಟಿರಲಿ ಶಾಶ್ವತ ॥

ಶ್ರೀ ವಿಜಯ, ನೃಪತುಂಗ, ಕನ್ನಡದ ಶತಶೃಂಗ,
ಶಿವಮಾರ, ದುರ್ವಿನೀತಾದಿ ಗಂಗ,
ಕಂಡು ಕಂಡರಿಸಿದೀ ನಾಡು ನಲಿನಲಿದಾಡಿ
ಬಿತ್ತರಂಗೊಂಡಿತೋ ಕಡಲತಡಿತನಕ

ಜೈನ ತೀರ್ಥಂಕರರು ಶೃಂಗಗಿರಿ ಶಂಕರರು
ಕಲ್ಯಾಣದಣ್ಣಗಳು ಶರಣ ಶರಣೆಯರು
ಹರಿದಾಸರೆಲ್ಲರೂ ಉಸಿರಿತ್ತು ಪೋಷಿಸಿದ
ಹಸಿರುಡೆಯ ಬೆಳೆನಾಡು ಹಸನಾಯಿತೆಂದು

ಕೆಳದಿ, ದ್ವಾರಾವತಿಯು, ಕಿತ್ತೂರು, ಕೊಡಗು,
ಸ್ವಾದಿ, ಬಿಜ್ಜಾವರವು, ಮಾಗಡಿಯು, ಸೋದೆ,
ಮಹಿಷ, ಹಾಗಲವಾಡಿ, ಸುರಪುರವು ಮತ್ತೆ
ವಿಜಯನಗರಕೆ ಶುಭವ ಕೋರುತಿಹುವೆನುತೆ

ಕನ್ನಡಿಗನೆದೆ ಕೆಚ್ಚು ತಾನಾಗಿ ಧ್ವಜಪಟ
ಹಾಲುಕ್ಕಿ ಜೇನಹೊಳೆ ಹರಿಸಿಹುದು ದಿಕ್ತಟ
ಹೇಮಕುಟದ ಮೇಲೆ ಕನ್ನಡದ ಬಾವುಟ
ಹಾರುತಿದೆ, ಮಣಿಯದಕೆ ನಟ್ಟಿರಲಿ ಶಾಶ್ವತ

## ಹೇಮಕೂಟದ ಮೇಲೆ..2

ಹೇಮಕೂಟದ ಮೇಲೆ ಹೊಂಬೆಳಗು ಚಿಗಿಯುತಿದೆ
ಕನ್ನಡದ ಬಾಂದಳದಿ ಹೊಸ ನೇಸರುದಿಸೆ !
ಶತಮಾನದಪಮಾನ ತಿಮಿರ ಗರ್ಭದ ಸಿಗಿದು
ಚಂಡ ಕಿರಣಗಳಿಳೆಗೆ ಚುಮುಚುಮುಸಿ ಚಿಗಿಯೆ

ಹಾಲುಗಲ್ಲದ ಹಸುಳೆ ತುಟಿ ತೆರೆದು ನಕ್ಕಂತೆ
ಕೋಟಿ ಮೂರರ ಭಾಗ್ಯ ಅರಳುತಿಹುದು;
ಕನ್ನಡಿಗನೆದೆಗೊಳದಿ ಅರಿವಿನರವಿಂದವಿದೊ
ಸ್ನೇಹ ಸೌರಭವನ್ನೆ ಸೂಸುತಿಹುದು !

ಶಾಂತಲೆಯ ಶಿಲ್ಪಕಲೆ ಕಾವೇರಿ ಹೊಳೆಯಾಗಿ
ದಾಸರುಸಿರೇ ಗಾನ ತುಂಗೆಯಾಗಿ,
ವಿಜಯನಗರದ ಶುಭದ ವೈಜಯಂತಿಯು ಮೆರೆದ
ಕರುನಾಡ ನುಡಿಹಾಲು ಭದ್ರೆಯಾಗಿ

ಚೆಲುವಿರಲಿ ಗೆಲವಿರಲಿ ಚೆನ್ನಿಗನ ಬೀಡಿನಲಿ
ವೀರನಾರಾಯಣನ ನಾಡಿನಲ್ಲಿ
ಗೊಮ್ಮಟನ ಬೆಳುಗೊಳದಿ ಬಸವ ಕಲ್ಯಾಣದಲಿ
ರಾಜರಾಜೇಶ್ವರಿಯ ತೌರಿನಲ್ಲಿ

## ನವಭಾರತ ನವಯುವಕನೆ...

ನವ ಭಾರತ ನವ ಯುವಕನೆ ನವೋದಯದ ಹರಿಕಾರನೆ
ನಾಡ ನಾಡಿಯನ್ನೆ ಮಿಡಿವ ನವ–ನೂತನ ಚೇತನವೆ

ಹಿಮಾಚಲದ ತುಂಗಶೃಂಗ ನಿನ್ನ ಉತ್ತಮಾಂಗ
ಧವಲವರ್ಣ ದಯಾಪೂರ್ಣ ನಿನ್ನ ಅಂತರಂಗ
ರಕ್ತದುನೀ ಧಮನಿ ಧಮನಿ ನದಿನಂದಗಳೆಲ್ಲ
ತರತ್ತರಂಗವಾಗಿ ಹರಿವ ತೇಜದೊಡಲು ನಿನ್ನದು

ದ್ರೋಹ ದರ್ಪ ದೌರ್ಜನ್ಯಕೆ ಎತ್ತು ಕೊಡಲಿ ಇಂದೆ
ತುಂಡಾದರೂ ಮೊಂಡಾದರೂ ಭರತಖಂಡ ನಿನ್ನದೇ
ದಕ್ತಟದಲಿ ಪಟಪಟಿಸಲಿ ಭವ್ಯನಾಡ ಬಾವುಟ
ಶಾಂತಿ ಸಾಕು, ಕ್ರಾಂತಿ ಬೇಕು ತೋರೊ ಮನದ ಆರ್ಭಟ

ಮೈಯನೊದರು ಮುಡಿಯ ಕೆದರು ಕಣ್ಣು ಕೆಂಡವಾಗಲಿ.
ನಚ್ಚ ತುಂಬು ಮನದ ತುಂಬ ಕೆಚ್ಚು ನಿನ್ನದಾದಲಿ

‘ನಾನು ಭಾರತೀಯ’ನೆಂಬ ತಾರಕದ ಮಂತ್ರ
ಘೋಷಿಸುತ್ತೆ ಮುಂದೆ ಸಾಗೊ ಧನ್ಯ ನೀ ಸ್ವತಂತ್ರ !

## ಓ ಭಾರತೀಯ...

ಭಾರತಾಂಬೆ ಕಾರುಣ್ಯಗಂಗೆ ಕಂಡಂಥ ಜೇನುಗನಸೇ !
ವೇದವಿದರ ಶ್ರುತಿಘೋಷವೆಂಬ ಜೋಗುಳದಿ ಬೆಳೆದ ಕೂಸೇ
ಸ್ವಾತಂತ್ರ್ಯದುಸಿರ ಸ್ವಚ್ಛಂದದಿಂದ ಸೆಳೆದುಲಿವ ಸವಿಯ ತೇನೇ
ಗಂಗೆತುಂಗೆಯರ ದಿವ್ಯ ಸಲಿಲದಲಿ ಮಿಂದುಮೆರೆದ ಮೀನೇ !

ಸಾರುತಿಹುದು, ಓ ಭಾರತೀಯ, ಒಕ್ಕೊರಲಿನಿಂದ ಜನತೇ
ಹಕ್ಕು ಬಂದಿಹುದು ಬಿಕ್ಕೆಯಲ್ಲ ದಕ್ಷತೆಯ ವಿಜಯಮಾಲೆ !
ರಾಜರಾಜ್ಞೆಯನು ತುಳಿದೆ ನೀನು ಬೀಸಿದೆಯಾ ಗಂಡುಗೊಡಲಿ
ರಕ್ತರಹಿತಕ್ರಾಂತಿಯನೆ ನಡೆಸಿ ನಿಲಿಸಿದೆಯೋ ವಿಶ್ವಶಾಂತಿ !

ಹರಿವ ನೀರು ಕಣ್ತೆರೆವ ಹೂವು ಕುಕಿಲಿಡುವ ಬನದ ಹಕ್ಕಿ
ಜಿಗಿವ ಜಿಂಕೆ ನರ್ತಿಸುವ ನವಿಲು ಜಾಗರದಿ ಮೈಯಿಸೊಕ್ಕಿ
ಬಂಡನುಂಡು ಝೇಂಕಾರದಿಂದ ಓಂಕಾರಗೈವ ದುಂಬಿ
ಸ್ವೇಚ್ಛೆಯಿಂದ ಪಂಚಮವ ಮಿಡಿವ ಕೋಗಿಲೆಯೆ ಇಂಚರಶ್ರೀ !

ಇವಕಿಹುದು ಪ್ರೀತಿ ಸ್ವಾತಂತ್ರ್ಯಜ್ಯೋತಿ ಸಹಜತೆಯ ನೇಮ ನಿಯತಿ
ಮನವುಳ್ಳ ಜೀವಿ ಆತ್ಮವನು ಪಡೆದ ಮಾನವನಿಗೇಕೆ ನೇತಿ ?
ಸ್ವಾಭಿಮಾನ, ದೇಶಾಭಿಮಾನ, ಸ್ವಾತಂತ್ರ್ಯ ಬಯಸದವನು
ಸತ್ತಂತೆ ಎಂದೆ, ನೈಚ್ಯತೆಗೆ ಮುನಿದೆ ನಿಲ್ಲಿಸಿದೆ ಸಮತೆಯನ್ನು !

ತ್ಯಾಗದಿಂದ ಬಲಿದಾನದಿಂದ ಹೋರಾಟ ಜತನದಿಂದ
ದೈತ್ಯತೆಯ ಮೆಟ್ಟಿ, ದೇವತ್ವ ಮೆರೆಸಿ ಸಗ್ಗವನೆ ಸೂರೆಗೊಂಡ
ಪುರುಷಪುಂಗವರು ಹತ್ತಿಸಿಟ್ಟ ಈ ಹಣತೆ ಬೆಳಗುತಿರಲಿ
ಜಯಮಕ್ಕೆ ನಮಗೆ ಶುಭಮಕ್ಕೆ ಜಗಕೆ ಮಂಗಳವು ಕೂಡಿ ಬರಲಿ.

## ಗಾಂಧಿ ಸ್ಮೃತಿ

ಇವನು ದಿನ ದಲಿತ ಬಂಧು
ಇವನೆ ಕರುಣೆಯಮಲ ಸಿಂಧು
ಇವನೆ ಭಾಗ್ಯಲಹರಿಯು !

ಇವನೆ ಭಾವ, ಇವನೆ ಭಾಷೆ

ನಿಯತಿಕೃತ ನಿಯಮ ರಹಿತ
ಇವನೆ ಭಾವಗೀತೆಯು !

ಕಲ್ಲಿನಲ್ಲಿ ನಾರ ಸಿಗಿದು, ಮಣ್ಣಿನಲ್ಲಿ ಎಣ್ಣೆ ತೆಗೆದು
ಮಾನವತೆಯ ಬೆಳಕನಿತ್ತ
ದಿವ್ಯ ತೇಜವು

ವಿಶ್ವಮುಖ ವಿಶ್ವಬಾಹು ವಿಶ್ವಚಕ್ಷು ವಿಶ್ವರೂಹು
ವಿಶ್ವವ್ಯಾಪಿಯಾಗಿ ಬೆಳೆದ
ಇವನೆ ವಿಶ್ವದೇಹವು

ನಿನಗೆ ನಮನ, ವಿಶ್ವಚರಣ
ನಮೋ ನಮೋ ಎಂಬೆನು

204

## ದೇಶವೊಂದೆ ಭಾರತ

ವೇಷ ಬೇರೆ ಭಾಷೆ ಬೇರೆ ದೇಶವೊಂದೆ ಭಾರತ
ಒಂದೆ ತಾಯಿ ಮಕ್ಕಳೆಂದು ಘೋಷಿಸೋಣ ಸಂತತ ॥

ತೀರ್ಥನಗೆಯ ಕ್ಷೇತ್ರವಿದೋ ಭವ್ಯನಾಡು ಭಾರತ
ಋಷಿಗಳುಸಿರ ಹರಕೆ ಹೊತ್ತ ದಿವ್ಯನಾಡು ಭಾರತ

ಕಡಲುಗಳನೆ ಉಡುಗೆಯುಟ್ಟು
ಘಟ್ಟದೋಳು ಬಳೆಯ ತೊಟ್ಟು
ನದಿ ನದಗಳ ಹಾರವಿಟ್ಟು

ಸೇತುವಿಂದ ಸಿಂಧುವರೆಗು ಬೆಳೆದು ನಿಂತ ಭಾರತ
ಭಂಗಗೊಳದ ವಂಗನಾಡ ಕೂಡಿ ಮೆರೆದ ಭಾರತ

ಇದೇ ನಮ್ಮ ಭಾರತ
ಪುಣ್ಯಭೂಮಿ ಭಾರತ

ಮನೆಯು ಬೇರೆ ಮತವು ಬೇರೆ, ಭಿನ್ನ ಭಿನ್ನ ದರ್ಶನ
ಒಂದುಗೂಡಿ ಆದವಿಲ್ಲಿ, ಭಾರತ ಸಂದರ್ಶನ !

ಕಂಗಳೆರಡು ಕಾಣ್ಕೆ ಎರಡೆ ?
ನೂರುನದಿಯ ನೀರು ಹಲವೆ ?

ಕೆರೆಯು ಒಂದೆ ತೆರೆಯು ಹಲವು !
ತಿಳಿದು ನಡೆಯೋ ನಿನಗೆ ಗೆಲವು

ರೂಪ ಬೇರೆಯಾದರೇನು ಭಾವವೊಂದೆ ಅಲ್ಲವೇ !
'ನಾನು ಭಾರತೀಯ'ನೆಂಬ ಮಂತ್ರ ಉಚಿತವಲ್ಲವೇ !

ಭರತ ಖಂಡದಿಂದಲೇನೆ ನಿನಗೆ ಮೋಕ್ಷ ಪ್ರಾಪ್ತಿ
ತಪ್ಪಿ ನುಡಿದೆಯೆಂದರಹುದು ನಿನಗೆ ತಕ್ಕ ಶಾಸ್ತ್ರಿ !

ಯಾವ ದೇಶದಲ್ಲೆ ದುಡಿ
ಯಾವ ಮಣ್ಣಿನಲ್ಲೆ ಮಡಿ

ನಿಂತ ನಿಲುವು ಹಿಡಿದ ಹುಡಿ
ಭರತ ಭೂಮಿಯೆಂದು ತಿಳಿ

ಮಣ್ಣ ಮೋಹ ಬಿಟ್ಟರಿಲೊ ನಿನಗೆ ಬೇರೆ ಸದ್ಗತಿ
ಬರಿಯ ಮಾತಿನಲ್ಲೆ ಮುಗಿವುದಲ್ಲೊ ನಿನ್ನ ಸಂಸ್ಕೃತಿ

ಮಾನವತೆಯ ಶುಚಿಮತಿ
ಸನಾತನದ ಸತ್ಕೃತಿ

ವೇಷ ಬೇರೆ ಭಾಷೆ ಬೇರೆ ದೇಶವೊಂದೆ ಭಾರತ
ಒಂದೇ ತಾಯ ಮಕ್ಕಳೆಂದು ಘೋಷಿಸೋಣ ಸಂತತ

## ಸಮಾಧಾನ

ಸತ್ತ ದಿನಗಳ ಜಪಿಸಿ ಜಡವಾಗದಿರು ಮನವೆ
ಮತ್ತೆ ಹೊಸ ಚೇತನವ ತುಂಬಿಕೊ ಘನವೆ ॥

ನಿಂತ ನೀರದು ಕೊಚೆ ಹರಿವ ನದಿಯೇ ತೀರ್ಥ
ಉಳಿದೆಲ್ಲ ಮಾತುಗಳ ಅರ್ಥ ವ್ಯರ್ಥ ।
ಅದ ತಿಳಿದು ಮೇಲೇಳು ಮೈ ಕೊಡವಿ ಸಿಡಿದೇಳು
ಹುಟ್ಟಳಿಸು ಹಳೆಯ ಕೊಳೆ, ಇರಲಿ ಸ್ವಾರ್ಥ ॥

ರಣ ಕಾಟಿಯಂದದಲಿ ಚಿಂತೆ ಸಂತೆಯ ನೆರೆಯೆ
ನೀನತ್ತ ಸುಳಿಯದಿರು ಮರುಳು ಮನವೆ ।
ಬಿಸಿಲುಗುದುರೆಯ ತೆರದಿ ಮೋಹ ಮದಿರೆಯು ಕುಣಿಯೆ
ನೆಕ್ಕದಿರಲದ ನಿನ್ನ ನೆನಪಿನಾ ರಸನೆ ॥

ಮುಗಿಲ ಮಲ್ಲಿಗೆಯಿಂದ ಸೌಗಂಧ ಸೂಸಿ ಬರೆ
ವಾಸಿಸಲು ನಾಸಿಕವು ಹಲುಬದಿರಲಿ ।
ಕಣ್ಣ ತಣಿಸಿದ ಮಾಟ, ಮೈಯ ಮರೆಸಿದ ಬೇಟ
ಕಿವಿಯ ತುಂಬಿದ ಗಾನ ಮತ್ತೆ ಬರದಿರಲಿ ॥

ಬಯಲು ಬತ್ತಲೆ ಎಂದು ಬಟ್ಟೆಯುಡಿಸಿದು ಸಾಕು
ಶ್ರೀಗಂಧವಾಗಿ ನೀ ಸವೆದದ್ದೆ ಸಾಕು
ಸ್ನೇಹ–ಸರ್ಪಕೆ ಹಾಲು ಎರೆದದ್ದು ಸಾಕಯ್ಯೋ
ಸೋಗಿದನಾ ಶುನಕಗಳ ಸೇರಿಸಿದಿರೋ ॥

## ಜಯಹೇ ಭಾರತ ಮಾತೆ

ವಿಶ್ವವಿನೂತನ ವಿಜಯ ಪತಾಕೆಯ
ಹಿಮಗಿರಿ ಶಿಖರದಿ ನೆಟ್ಟವಳೆ
ನೇಹದ ನೂಪರ ಹಿತ ಕಾಲುಂಗರ
ಸೌಹಾರ್ದದ ಬಳೆ ತೊಟ್ಟವಳೆ

ಸತ್ಯ ಅಹಿಂಸಾ ಬೆಂಡೋಲೆಯ ಜೊತೆ
ಸಂಯಮ ಶೀಲವನುಟ್ಟವಳೆ
ಮಾನವನೆದೆಯಲಿ ಮಮತೆಯ ಬಿತ್ತುತ
ಅಮೃತೋಪಮ ಫಲ ಕೊಟ್ಟವಳೆ

ಜಯ ಬನಶಂಕರಿ ಜಯ ರಾಜೇಶ್ವರಿ
ಬಯ ಋತ ಚಾರಿಣಿ ದಿವ್ಯನುತೆ
ಸ್ವಾತಂತ್ರ್ಯೋದಯ ಪ್ರಥಮ ಪ್ರಭಾತದಿ
ಜಯಹೇ ಭಾರತಮಾತೆ

## ಬೆಳಗುತಿರು ಬೆಳಕೆ

ಬೆಳಗುತಿರು ಭಾರತದ ಬಿಡುಗಡೆಯ ಬೆಳಕೇ
ಶ್ರಾವಣದ ಶುಭದಿನದಿ ಎಮೆದೆರೆದ ಬೆಳಕೇ

ಬೆಳಗುತಿರು ಬೆಳಗುತಿರು ಬೆಳಗುತಿರು ಬೆಳಕೇ
ಬೆಳಗುತಿರು ಭಾರತದ ಬಿಡುಗಡೆಯ ಬೆಳಕೇ ॥

ತೈಲ ತೀರಿದರುಂಟು ದುಡಿವವರ ಬೆಮರು
ಬತ್ತಿಯದು ಬರಡಾಗೆ ಮಡಿದವರ ಉಸಿರು
ನಿನ್ನೊಡಲ ಬಟ್ಟಲಿಗೆ ಕೋಟಿ ಮಕ್ಕಳ ಬಸಿರು
ಮೀಸಲಿದೆ ಓ ಬೆಳಕೆ ಆ ಹುತಾತ್ಮರ ಮಡಿಲು

ಬೆಳಗುತಿರು ಬೆಳಗುತಿರು ಬೆಳಗುತಿರು ಬೆಳಕೇ
ಬೆಳಗುತಿರು ಭಾರತದ ಬಿಡುಗಡೆಯ ಬೆಳಕೇ ॥

ಗಣತಂತ್ರದಟ್ಟಣೆಯ ವಿಸ್ತೃತದ ಗಂಧಕುಟಿ
ಜನಮನವೆ ವೇದಿಕೆಯು ವೈಜಯಂತಿ !
ಸಕಲ ಸೌಹಾರ್ದದ ಸಮಬಾಳು ನಿನ್ನ ಗುಡಿ
ಸತ್ಯ ಸೂರ್ಯನ ತೇಜ ನಿನದಾಯ್ತು ಪ್ರಣತಿ

ಬೆಳಗುತಿರು ಬೆಳಗುತಿರು ಬೆಳಗುತಿರು ಬೆಳಕೇ
ಬೆಳಗುತಿರು ಭಾರತದ ಬಿಡುಗಡೆಯ ಬೆಳಕೇ

ಬೆಳಗುತಿರು ಜಗದೊಡಲ ಚೆಲುವಿಕೆಯ ಚೇತನವೆ !
ಬೆಳಗುತಿರು ಕವಿ ಸವಿ ಸುಸ್ಮೃತಿಯ ಸೌರಭವೆ !
ಬೆಳಗುತಿರು ರಾಷ್ಟ್ರಕನ ನಡೆಸುತಿಹ ಹೊಂಬೆಳಕೆ !
ಬೆಳಗುತಿರು ಅಭಿಜಾತ ಸ್ವಾತಂತ್ರ್ಯದಾ ಹಣತೆ !

ಬೆಳಗುತಿರು ಬೆಳಗುತಿರು ಬೆಳಗುತಿರು ಬೆಳಕೇ
ಬೆಳಗುತಿರು ಭಾರತದ ಬಿಡುಗಡೆಯ ಬೆಳಕೇ

## ದಿಬ್ಬಣ ಹೊರಟೈತೆ ಹೊಸ ಹಬ್ಬ!

ಮೂಡು ಮಲೆಯಾ ಮ್ಯಾಲೆ
ಬಡಗ ಬಾರೆಯ ಮ್ಯಾಲೆ
ಕಣಿವೆಯ ಕಿಬ್ಬಿ ಕೆನ್ನೆ ಮ್ಯಾಲೆ ॥

ಕಣಿವೆಯ ಕಿಬ್ಬಿ ಕೆನ್ನೇಯ ಮ್ಯಾಲೆ
ದಿಬ್ಬಣ ಹೊರಟೈತೆ ಹೊಸಹಬ್ಬ ॥

ಹಸೆಯನೇರಿ ನಿಂತ ಹೊಸ ಹೆಣ್ಣ ತೆರದಲ್ಲಿ
ಹಸುರುಟ್ಟು ನಿಂತೌಳೆ ಬನದವ್ವ ॥

ಟೊಂಗೆ ಟೊಂಗೆಗು ಪ್ರಾಯ
ತುಂಬಿದೆ ಹೊಸ ಮಾಯ
ಹಕ್ಕೀ ಸೋಬಾನೆ ಬನವೆಲ್ಲ ॥

ಮಾವು ಬೇವುಗಳೆಲ್ಲ ಮಲ್ಲೀಗೆ ಮುಡಿದವ್ವೆ
ಮನೆ ಮುಂದೆ ಒಳಗೇ ಸಿಂಗಾರ ॥

ಮನೆ ಮುಂದೆ, ಒಳಗೇ ಸಿಂಗಾರ ಮಾಡ್ಯಾಳೆ
ಮಲೆ ಬಂದು ಚಳೆಯ ಕೊಟ್ಟೈತೆ ॥

ಬಾಳೆಲ್ಲ ಗೋಳಲ್ಲ, ಜೇನು ಜೋನಿ ಬೆಲ್ಲ
ಮುಳ್ಳು ಮಾಣಿಕವೂ ಬಂಗಾರ ॥

ಮುಳ್ಳು ಮಾಣಿಕವೂ ಬಂಗಾರ ಬೆಲೆ ಹಿಂದೆ
ಒಳ್ಳೆ ಬಾಳೇವು ಬಾಳೆಂದು ॥

## ಆಹ್ವಾನ

ನಾಡಿನ ಗುಡಿಯಲಿ ನರಕಾಸುರನಿಗೆ
ನವೀನ ಪೂಜೆಯು ನಡೆಯುತಿದೆ,

ಸಾಸಿರ ಕೈಗಳ ರಕ್ತಾಂಗುಲಿಯಲಿ
ಶೋಷಣೆಯಾರತಿ ಎತ್ತುತಿದೆ !

ಈ ನರಮೇಧಕೆ ಶಿಶು ಬಲಿಯಾಗಿದೆ
ಚೈತ್ಯಾಗ್ನಿಯೆ ಚಿತ ಏರುತಿದೆ !

ನೇಸರ ತೇರಿಗೆ ಆಸರೆಯಿಲ್ಲದೆ
ಭಸ್ಮಾಸುರನನು ಬೇಡುತಿದೆ

ದೀಪದ ಬುಡದಲಿ ಕತ್ತಲು ಕವಿದಿದೆ
ತುದಿಯೊಳು ತುಂಬಿದೆ ಧೂಮಶಿಖೆsss

ನುತಿಗೊಟ್ಟಾಗಿದೆ, ಮತಿಗೆಟ್ಟಾಗಿದೆ
ಬರಬೇಕಾಗಿದೆ ಸುಸ್ಥಿರತೆ ss ..!

ಎಂಥದೋ ತುಂಬಿದೆ ಹೆಸರಿಲ್ಲದ ತಮ !
ಭಾಸುರ ತೇಜವೆ ಕರಗಿಸು ಬಾ

ದಿವ್ಯ ದಿಗಂತದ ಜ್ಯೋತಿರ್ಲೇಖೆಯೆ
ಭೂತಳದಲಿ ಹರಿದಾಡುತೆ ಬಾ

ಕತ್ತಲ ಬಳ್ಳಿಯೆ ಹೂ ಬಿಟ್ಟಿತೊ ಎನೆ
ಸುತ್ತಲು ಬೆಳಗುವ ಓ ಬೆಳಕೆ

ದೀಪಾವಳಿಯಲಿ ದಿವದಿಂದಿಳಿಯುವ

ಶುಭ್ರ ಸನಾತನ ಶ್ರೀ ಬೆಳಕೆ,

ಬೆಳಕಿನ ಚಿಲುಮೆಯ ಪದ್ಮ ಪ್ರಣತಿಯೆ
ಇಳೆಯಂಗಳವನು ಬೆಳಗಿಸು ಬಾ

ತಿಳಿವಿನ ಹೊಳೆಯನು ಹರಿಹರಿಸುತೆ ಬಾ
ದೀವಳಿಗೆಯ ನವತೇಜವೆ ಬಾ !

## ನನ್ನ ನಂದನಲ್ಲಿ

ನನ್ನ ನಂದನದಲ್ಲಿ ಮಂದಾರ ಕುಸುಮ
ನನ್ನೆದೆಯ ಬಾಂದಳದಿ ನೀನೆ ಚಂದ್ರಾಮ

ಕಂದ ಬಂದಾನೆಂದು ಎನ್ನೊಡಲು ನುಡಿದಿತ್ತು
ತೊಡೆ ತಲ್ಪ ತುಟಿದೆರೆದು ದನಿಗೂಡಿಸಿತ್ತು
ನೀ ಬಂದೆ ನಾನಾದೆ, ಮನ್ನಣೆಗೆ ಮನೆಯಾದೆ
ತೆನೆ ತಳೆದ ತೇರಾದೆ ನಾ ಧನ್ಯಳಾದೆ !

ಎನಗೆ ತಾಯ್ತನವಿತ್ತೆ, ಸದ್ಗತಿಯ ನೆಲೆಯಾದೆ
ಬದುಕು ನಂದನವಾಯ್ತು ನಿನ್ನಿಂದ ತಂದೆ !

ನಿಬಿಡ ನೀಹಾರಿಕೆಯ ಜ್ಯೋತಿಮಯ ವಲಯದಲಿ
ಹೊಸತಾರೆ ಬೆರೆವಂತೆ ನಿನ್ನ ಬರವು
ಶಿವನಾಗಿ, ರವಿಯಾಗಿ, ರಾಗಿಣಿಯ ರೂಪಾಗಿ,
ಭುವನ ಭಾಗ್ಯವದಾಗಿ, ನಲ್ಮೆಯಾಗಿ

ಬುವಿಗಿಳಿದು ಬೆಳಕಾದೆ ಅಕ್ಕರೆಯ ಸಕ್ಕರೆಯೆ,
ನಕ್ಕುಬಿಡು ಸಾಕದುವೆ ಸಗ್ಗ ಸುಖವೆಂಬೆ !

ನುಡಿಯಲ್ಲಿ ಗುಡಿಯಾಗು, ನಡೆಯಲ್ಲಿ ಮಡಿಯಾಗು
ದಿನದ ದಾಹಕೆ ನೀನೆ ತೀರ್ಥವಾಗು
ನಾಡಿನೇಳಿಗೆಗಾಗಿ ದುಡಿವ ಧೀರನೆ ಆಗು
ಸದ್ಗುಣದ ಗಣಿಯಾಗು, ಸೊದೆ ಸಿಂಧುವಾಗು

ಜನ್ಮ ಜನ್ಮಾಂತರದ ಹೊನ್ನ ಬಸುರಿನ ಹಸುಳೆ
ಶಶಿಯಾಗು ಲೋಕಕ್ಕೆ ಜ್ಯೋತಿಯೇ ಆಗು !

## ನಿನ್ನ ತೋಲ ತೊಟ್ಟಿಲಲ್ಲಿ_

ನಿನ್ನ ತೋಳ ತೊಟ್ಟಿಲಲ್ಲಿ ನಾ ಲಾಲಿಯಾಡುವೆ
ನಿನ್ನ ತೊಡೆಯ ತಲ್ಪದಲಿ ನಾನೊಮ್ಮೆ ಪವಡಿಸುವೆ
ಅಮ್ಮ, ನಿನ್ನ ಕಣ್ಣಿನಲ್ಲಿ ಬಿಂಬವಾಗಿ ಮೂಡಿ ಬರುವೆ
ನೂರು ಬಗೆಯ ಭಾವದಲ್ಲಿ ಭಾವಗೀತವಾಗುವೆ !

ನಿನ್ನ ಗುಡಿಯ ಗರ್ಭದಲ್ಲಿ ಜ್ಯೋತಿಯಾಗಿ ನೋಡುವೆ
ನಿನ್ನ ಮಡಿಲ ಬಳ್ಳಿಯಲ್ಲಿ ಮೊಗ್ಗಿಯಾಗಿ ಮೂಡುವೆ
ಅಮ್ಮ, ನಿನ್ನ ಹಾಸಿನಲ್ಲಿ ಕನಸೆ ಆಗಿ ಸುಳಿಯುವೆ
ನನಸಿನೆಳೆಯ ನೇಯುತಿರುವ ಜೇಡ ಜಾಲವಾಗುವೆ !

ನಿನ್ನ ಕೊರಳ ಶಂಖದಲ್ಲಿ ನಾನು ಶುಭ್ರನಾಗುವೆ
ನಿನ್ನ ತಿಳಿವು ತೀರ್ಥದಲ್ಲಿ ನಾನು ಶುದ್ಧನಾಗುವೆ
ಅಮ್ಮ, ನಿನ್ನ ಪಾದದಲ್ಲಿ ತುಂಬಿಯಾಗಿ ಮೊರೆಯುವೆ
ನಿನ್ನ ಪುಣ್ಯ ತಾಣದಲ್ಲಿ ಕರುಣೆಯಾಗಿ ಆಡುವೆ !

ಚಂದ್ರಕಾಂತಿ ಬಿಂಬದಲ್ಲಿ ನಿನ್ನ ಹೆಸರ ಕೆತ್ತುವೆ
ಎದೆಯ ಕಡಲ ತೆರೆಯ ಮೇಲೆ ದೋಣಿಯಾಗಿ ತೇಲುವೆ
ಅಮ್ಮ, ಜನ್ಮವಿತ್ತ ಋಣವ ಇಂದೆ ನಾನು ತೀರಿಸುವೆ
ನಾಡಿಗಾಗಿ ದುಡಿದಾ ಮೇಲೆ ಮಡಿದು ಮುಕ್ತನಾಗುವೆ !

## ಮಿತಿಯು ಬೇಕು

ಮಿತಿಯು ಬೇಕು ಸನ್ಮತಿಯು ಬೇಕು ಸಂಸಾರ ನಡೆಯುವಲ್ಲಿ
ಹತ್ತು ಮಕ್ಕಳಿನ ಕುತ್ತು ಸಾಕು ಸುಖ ಬೇಕು ಎನ್ನುವಲ್ಲಿ
ಗೊನೆಯೊಂದೆ ನೋಡು ರಸಬಾಳೆ ಗಿಡಕೆ ನೂರಿಲ್ಲ ತಂಟೆ ತಳ್ಳಿ
ಸಾಕೊಂದೆ ಎರಡು ಬೇಕಾದರಿರಲಿ ಬೆಳೆಹಂಬು ಕುಲದ ಬಳ್ಳಿ !

ತೊಟ್ಟಿಲೆತ್ತಿ ತೂಗುತ್ತ ಕುಳಿತ ಕೈಗಿಲ್ಲ ಒಂದೆ ಬದುಕು
ಅತ್ತಾಗ ತೆರೆವ ಜೋಗುಳದ ಬಾಯ್ಗೆ ಬರಿ ಹಾಡೆ ಅಲ್ಲ ಪಲುಕು
ಬಾಳಿನೆಳೆಯ ಹಾಸಿಕ್ಕಿ ಬೀಸಿ ಹೊಸ ವಸ್ತ್ರ ನೇಯಬೇಕು
ಆದಾಯದಲ್ಲಿ ಉಳಿತಾಯ ಮಾಡಿ ಸಂಚಯಿಸಬೇಕು ಸರಕು !

ಚಿಕ್ಕದಾದ ಸಂಸಾರದಲ್ಲಿ ತುಂಬಿಹುದು ಸಗ್ಗ ಸಾರ
ಅಕ್ಕರೆಯ ಅಣುಗರೊಕ್ಕಲಿಗೆ ಬೇಕು ಚುಕ್ಕಾಣಿ ಶುಕ್ರತಾರ !
ಎರಡು ಬೆಕು, ಮೂರಿರಲು ಸಾಕು, ಹೆಚ್ಚಿದರೆ–ತಲೆಗೆ ಭಾರ
ಎಚ್ಚರವು ಬೇಕೆ ? ಕೆಚ್ಚಿರಲು ಸಾಕೆ ? ಸಂಯಮವು ಬೇಕೊ ಧೀರ !

## ಬೇಕು !

ಶಾಂತಿ ಬೇಕು ಸೌಹಾರ್ದ ಬೇಕು ಸಹಕಾರ ಬಲಿಯಬೇಕು
ದೇವದುನ್ನತಿಯ ಕಾರ್ಯದಲ್ಲಿ ನಾವೆಲ್ಲ ದುಡಿಯಬೇಕು ॥

ಮನೆಯ ಕಟ್ಟಿ ಬಂಗಾರ ಬೆಳೆದು ಸಿಂಗಾರ ಮುಡಿಯಬೇಕು
ಮಂದಾರ ಸುರಿಸಿ ಮಾಧುರ‍್ಯ ಬೆರೆಸಿ ಸೌರಭವ ಸೂಸಬೇಕು
ಜನಮನದ ಮೆಟ್ಟಿ ಹಡೆದೊಡಲ ಕುಟ್ಟಿ ಹುಡಿಗೈವ ಮೋಡಿ ಸಾಕು
ಮುಷ್ಕರದ ಧೂಮ, ಮಾರಣದ ಹೋಮ, ದುರ್ಭಾವ ದಹಿಸಬೇಕು !!

ಭರತ ಖಂಡ ಬರಿ ಭೂಮಿಯಲ್ಲ ನಮ್ಮಗಳ ಹಡೆದ ತಾಯಿ
ಹದಿನಾಲ್ಕು ಪ್ರಾಂತ ಮೈ ಮಾಂಸಖಂಡ ನಿರ್ಝರಣಿ ಅವಳ ಧಮನಿ
ಆ ತಾಯ ಉಡಿಗೆ ಕಿಚ್ಚಿಡಲು ಬೇಡ ಕೆಚ್ಚೆದೆಯ ಭರತ ಪುತ್ರ
ದೇಶದಾಸ್ತಿಯನು ಉಳಿಸಿ ಬೆಳಸು ನಿನಗದುವೆ ಶುಭದ ಸೂತ್ರ ॥

ಸ್ವಾತಂತ್ರ್ಯದರ್ಥ ಸ್ವಚ್ಛಂದವಲ್ಲ ಸ್ವೇಚ್ಛಾऽऽऽಚಾರವಲ್ಲ
ಹುಚ್ಚೆದ್ದು ಚೀರಿ ಕಿಚ್ಚಿಟ್ಟು ತೂರು ನುರಿ ನುಚ್ಚುಗೈವುದಲ್ಲ
ಮಚ್ಚರವು ಸಾಕು ಎಚ್ಚರವು ಬೇಕು ನಿಶ್ಚಿತದ ನಿಲುವು ಬೇಕು
ನರನಾಡಿಯಲ್ಲು 'ನಾ ಭಾರತೀಯ' ಎಂಬರಿವು ಮಿಡಿಯಬೇಕು ॥

## ಮತ್ತೆ ಬಂತು ಈ ಯುಗಾದಿ

ಮತ್ತೆ ಬಂತು ಈ ಯುಗಾದಿ
ಹುಚ್ಚನಂತೆ ತಿರುಗಿ ತಿರುಗಿ ॥

ಅದೆ ರಾಗ ಹಾಡುತಾ
ಹಳೆಯ ಹಾದಿ ತುಳಿಯುತಾ ॥
ಮತ್ತೆ, ಮತ್ತೆ ಮತ್ತೆ ಬಂತು,
ಮತ್ತೆ ಬಂತು ಈ ಯುಗಾದಿ ॥

ಅಚ್ಚ ಹಸುರು ಪಚ್ಚೆಯೇರಿ
ಕಿಚ್ಚಿನಂಥ ತಳಿರ ತೋರಿ
ಯುಗ ಯುಗಕೂ ಬನ್ನ ಬೀರಿ
ತನ್ನ ಬರಿಯ ಹೊಗರ ಕಾರಿ

ಮತ್ತೆ, ಮತ್ತೆ, ಮತ್ತೆ ಬಂತು
ಮತ್ತೆ ಬಂತು ಈ ಯುಗಾದಿ ॥

ಮನುಜರೆಂಬು ದನುಜರರಲ್ಲಿ
ಮಹದಾಸೆಯ ಮಾಯೆ ಚೆಲ್ಲಿ

ನಕ್ಕು ನಲೀsss
ಬೆಕ್ಕಿ ಅಳುsss

ಬಾಳು ಬೇವು–ಬೆಲ್ಲ ತಿಳೀsss
ಎಂಬ ಮಂತ್ರ ಪಠಿಸುತಾ ॥

ಮಿಥ್ಯೆ–ಸತ್ಯಕೊಂದೆ ಬೆಲೆ ।
ಹುಡುಕಬೇಡ ಬೇರೆ ನೆಲೆ ।

ಎಂಬ ತತ್ವ ಸಾರುತಾ
ಸಮತವಾದ ಬೀರುತಾ

ಮತ್ತೆ, ಮತ್ತೆ, ಮತ್ತೆ ಬಂತು
ಮತ್ತೆ ಬಂತು ಈ ಯುಗಾದಿ
ಅದೆ ರಾಗ ಹಾಡುತಾ
ಹಳೆಯ ಹಾದಿ ತುಳಿಯುತಾ

**ಲಾಜವಂತಿ**

ಆರಿಲ್ಲ ಮೂರಿಲ್ಲ ಇರುವಳೊಬ್ಬಳೆ ಮಗಳು
ನಮ್ಮ ಮುದ್ದಿನ ಮುಗುಳು ವಿಜಯಲಕ್ಷ್ಮಿ
ಉದಯ ವೇದಿಕೆಯ ಮೇಲೆ ಉಷೆ ಹಸೆಯ ಬರೆದಂತೆ
ಅವಳ ಹೂಗೆನ್ನೆಯಲಿ ಎಳೆಯ ರಶ್ಮಿ

ನವಿಲ ಜಾಗರದಂತೆ ಅವಳ ನಡೆ ನರ್ತನವೊ
ಚಿಗರೆ ಕಂಗಳ ಚೆಲುವು, ಚೆನ್ನೆ ಚೆದುರು
ಪಾದರಸ ಹರಿದಂತೆ, ಹೊಲೆದಂತೆ, ಉಳಿದಂತೆ
ಚತುರತೆಯ ಬೆಳಕಿವಳು ಕಣ್ಣ ಕದಿರು

ಕಲಿತವಳು ಕುಲವಧುವು ಕಣ್ಮಣಿಯೆ ಆಗಿಹಳು
ಕುಲದ ಕುಡಿಗೆರಡುಂಟೆ ಬೇರೆ ಕೋಡು
ಕಡಲಾಚೆ ಇದ್ದರು ಕನ್ನಡತಿ ತಾನಾಗಿ
ಕರುನಾಡ ಮೆರೆಸುವಳು ಕೇಳಿ ನೋಡು

ಹೆಣ್ಣವಳು, ಗೀರ್ವಾಣಿ ಓರ್ವಳೇ ಧ್ರುವತಾರೆ
ನಮ್ಮ ಮನೆತನಕವಳೆ ವೈಜಯಂತಿ,
ಮನದ ಮಂದಿರದಲ್ಲಿ ಬೆಲಕಾಗಿ ಬಂದರಳು
ನಮ್ಮ ಬಾಳಿನ ಬನದ ಲಾಜವಂತಿ

## ಹಸೆಮಣೆಯ ಹೊಸ ಹಾಡು

ಹಸೆಮಣೆಯ ಹೊಸ ಹಾಡು ಸೊಸೆಯರಿರ ಕೇಳಿ
ಎರಡೆ ಹಸುಗೂಸಿರಲಿ ಎಚ್ಚರಿದ ಬಾಳಿ ॥

ಬೆಚ್ಚನಾ ಮನೆಯಿರಲಿ ವೆಚ್ಚಕ್ಕೆ ಹೊನ್ನಿರಲಿ
ಇಚ್ಛೆಯರಿತಾ ಮಡದಿ ಇದ್ದರೂ ಸಹ ಕೇಳಿ

ಸಗ್ಗಕ್ಕೆ ಕಿಚ್ಚಿಡಲು ಸಾಧ್ಯವಿಲ್ಲ
ಮಕ್ಕಳಿಬ್ಬರ ಇರಲು ಮಂಗಳವು ಎಲ್ಲ !

ಆರತಿಗೆ ಅರಳೊಂದು ಕೀರುತಿಗೆ ಕುಡಿಯೊಂದು
ಮಾನವತೆಗಿಹುದಿದುವೆ ಮಂದಾರ ನೋಡು

ಹಳ್ಳಿದಿಳ್ಳಿಯು ಬೆಳೆದು ಬಳ್ಳದಲಿ ಹೊನ್ನಳೆದು
ಒಳ್ಳಿತಾಗಲು ಇಂದು ಸಾಕು ಎರಡು !

## ತೆರುವ ತೆರಿಗೆಯ ತೆತ್ತು

ವಚನ : "ಹರದಿ ಗೋಣಿಯಲೊಬ್ಬ ಕಳವೆಯನು ತುಂಬಿದ
ಇರುಳೆಲ್ಲ ನಡೆದನಾ ಸುಂಕಕಂಜಿ !
ಕಳವೆ ಎಲ್ಲ ಹೋಗಿ ಬರಿಯ ಗೋಣಿ ಉಳಿಯಿತ್ತು 1
ಅಳಿಮನದವನ ಭಕ್ತಿ ಇಂತಾಯಿತ್ತು ರಾಮನಾಥ"

ಗೀತೆ : ತಮದ ತಿಂಥಿಣಿಯಲ್ಲಿ ತೇಲಿಬಹ ಶಶಿಯಂತೆ
ನಿಮ್ಮ ಸೂಳ್ನುಡಯಿಂದು ಸರ್ವಮಾನ್ಯ
ಕಡಗೀಲು ಇಲ್ಲದಿಹ ಒಡಲೆಂಬ ಬಂಡಿಗೆ
ನಿಮ್ಮ ನುಡಿ ಕಡೆಗೀಲು ದಾಸಿಮಾರ್ಯ

ನೆಲದ ಬಾಡಿಗೆ ಮತ್ತೆ ದುಡಿಮೆಯಲಿ ದಾಯವನು
ತೆಗೆವ ಸುಂಕಿಗನಿಹನು ಎಂಬುದನೆ ಮರೆತೆ
ಬಾಗಿನಂಗಡಿಯಲ್ಲಿ ತೆರಿಗೆಯನು ಕಾರಿಸುವ
ಕಾಣಿ ಸೊಲದ ಗಿದ್ದಗಾಣಿಯನೆ ಮರೆತೆ !

ಇಳೆಯ ಬೆಳೆ, ಹೊಳೆಯ ಕಳೆ, ಸುಳಿದು ಬೀಸುವ ಗಾಳಿ
ಅವನ ಕರುಣೆಯ ಕೊಡುಗೆ ಎಂದು ನೀ ಬೋಧಿಸಿದೆ.
ತೆರವು ಕರವನು ತೆತ್ತು ನಿಜವಾದ ಉಳಿಮೆಯಲಿ

ಬಾಳ ಸಾಗಿಸುವಂತೆ ಸಂದೇಶವಿತ್ತೆ !

ಬಾಳ.. ಸಾಗಿಸು.. ವಂತೆ.. ಸಂದೇಶ.. ವಿತ್ತೇ ..!!

**ನಾಯಕರು–ನಾಡಿಗರು ಕೂಡೆ ಹೊಂಬಾಳೆ !**

ವಚನ : "ಅಗ್ನಿ ಸುಡುವುದಲ್ಲದೆ ಸುಳಿಯಲರಿಯದು
ವಯು ಸುಳಿವುದಲ್ಲದೆ ಸುಡಲರಿಯದು
ಆ ಅಗ್ನಿ ವಾಯು ಕೂಡಿದಲ್ಲದೆ ಆಡಿ ಇಡಲರಿಯದು
ಈ ಪರಿಯಂತೆ ನರರ ಅರಿವರೆ
ಕ್ರಿಯಾ ಜ್ಞಾನ ಭೇದವ ರಾಮನಾಥ ?"

ಗೀತೆ : ಇಲ್ಲ ದಾಸಿಮದೇವ, ನಿನ್ನ ನುಡಿ ಸಟೆಯಲ್ಲ
ಎರಡು ಕೈ ಕೂಡಿದರೆ ಚದುರು, ಚಪ್ಪಾಳೆ,
ಸತಿ–ಪತಿಗಳೊಂದಾದ ಭಕ್ತಿ ಹಿತವಪ್ಪಂತೆ
ನಾಡಿಗರು ನಾಯಕರು ಕೂಡ ಹೊಂಬಾಳೆ !––

ಕೊಳದ ಜಲ ಮರೆಯಾದ ಮೇಲೆ ಸುಳಿವುದೆ ಹಂಸೆ..?
ಸಮರಸ್ಯವೆ ಜಗದ ಜೀವನವು ಬೆಳಕು
ಮೊಗ್ಗಿನಾ ಮಡಿಲಿನಲಿ ಅಡಗಿರುವ ಬಂಡಂತೆ
ಒಂದರೊಳಗೊಂದು ನೆಲೆ ನಿಂದಿರಲು ಬೇಕು

## ಇನ್ನಿಲ್ಲ ಸ್ವಾತಂತ್ರ್ಯ ಧಕ್ಕೆ

ಓರ್ವ ತಾಯಿಯ ಗರ್ಭದಿಂದುದಿಸಿ ಬಂದವರು
ಭಾರತೀಯರು ನಾವು ಜ್ಯೋತಿರತರು
ಸರ್ವರಿಗು ಸಮಪಾಲು, ಸರ್ವರದು ಸುಖಬಾಳು
ಸಗ್ಗಸಿರಿ ಸಂಪದವ ಸೂರೆಗೊಂಡವರು

ಆಳರಸರಿಲ್ಲಿಲ್ಲ ಅಂಕುಶಕೆ ಎಡೆಯಿಲ್ಲ
ನಮಗೆ ನಾವೇ ಆಳು ಒಡೆಯರುಗಳಹೆವು !
ಅಂದಿದ್ದುದಾ ದಾಸ್ಯ ಇಂದದುವೆ ಪರಿಹಾಸ
ಎಂದೆಂದಿಗೂ ನಾವು ಕೂಡು ಬಾಳುವೆವು

ಜೀತಪದ್ಧತಿ ಸತ್ತು ನೀತಿ ನೆಲೆ ನಿಂತಿಹುದು
ಸತ್ಯ ಸೂರ್ಯನ ತೇಜ ಬಿತ್ತರಿಸುತಿಹುದು
ಜೀತದಾಳಿಗು ಇಂದು ಸಮ ಆದಯ ಸಂದಿಹುದು

ಮಾನವೀಯತೆಯೊಂದೆ ಮೆರೆಯುತಿಹುದು.

ಸರ್ವತಂತ್ರ ಸ್ವತಂತ್ರ ಸ್ವಚ್ಛಂದದೈಸಿರಿಯು
ಹಂಚಿಹುದು ಗುಡಿಸಲಿಗೆ ಗುಡಿಗೆ ಸೌಧಕ್ಕೆ
ದಿಕ್ತಟದ ಧ್ವಪಟವು ಪಟಪಟಿಸಿ ಹಾರುತಿದೆ
ಸಾರುತಿಹೆ ಇನ್ನಿಲ್ಲ ಸ್ವಾತಂತ್ರ್ಯ ಧಕ್ಕೆ !

## ಬಾಳು ಬೃಂದಾವನ

ಹತ್ತು ಕಟ್ಟುವ ಬದಲು ಮುತ್ತು ಕಟ್ಟೆಂಬಂತೆ
ಒಬ್ಬಳೇ ಮಗಳು ನನಗೆ !
ಕಣ್ಣೆರಡು ದೇಹಕ್ಕೆ ಕಾಂತಿ ಕಳೆಯಿಟ್ಟಂತೆ
ಗಂಡುಗಳು ಜೋಡಿ ಜೊತೆಗೆ !

ಶಿವು, ರಾಣಿ, ಎಳೆಯ ರವಿ ಪುಟ್ಟಾಣಿ ಕಂದಗಳು
ಪಟ್ಟದರಸಿಯು ವೀನೆ, ನನ್ನ ಮನದನ್ನೆ
ಹಾಲು ಸಕ್ಕರೆ ಜೇನು ಒಂದಾಗಿ ಹರಿಯುತಿದೆ
ಎಲೆ ತುಂಬಿತಿಹುದಿಲ್ಲೆ ಶುಭ್ರ ಜೋತ್ಸ್ನೆ

ಬಾಳು ಬಂಧನವಲ್ಲ, ಬದುಕೆಮಗೆ ಹೊರೆಯಲ್ಲ
ಪುಟ್ಟ ಸಂಸಾರವೆ ಬೇವು–ಬೆಲ್ಲ 1
ಆರತಿಗೆ ಅತಿಯಿಲ್ಲ, ಕೀರುತಿಗೆ ಕೊರೆಯಿಲ್ಲ
ಮುದ್ದು ಮಕ್ಕಳು ಮೂರು, ಅವರೆ ನಮಗೆಲ್ಲ 1

ಚುಕ್ಕೆ ಬಾಂದಳದಲ್ಲಿ ಕಿಕ್ಕಿರಿದ ವಯದಲಿ
ನಕ್ಕು ನೋಡುವುದೊಂದೆ ಶುಕ್ರತಾರೆ !
ನಂದಗೋಕುಲದಲ್ಲಿ ನೂರು ಬಾಲರ ಮಂದೆ
ಕೃಷ್ಣನೊಬ್ಬನೆ ಬೆಳಕು ; ಬೇಡ ಬೇರೆ 1

ಚಿಕ್ಕ ಸಂಸಾರದಲಿ ತುಂಬಿಹುದು ಸುಖಸಾರ
ಚೊಕ್ಕ ಬಂಗಾರಕ್ಕೆ ಬೆರೆತ ಗಂಧ !
ಎರಡು ಮಕ್ಕಳು ಬೇಕು, ಮೂರು ಮಕ್ಕಳು ಸಾಕು
ಬಾಳು ಬೃಂದಾವನವೊ ! ಅದುವೆ ಚೆಂದ !

### ನಾವು ನಾಡ ಕಟ್ಟುವಾ 1

ಕರ್ಮಯೋಗಿ ತನಾಗಿ ದುಡಿಯುವವನೆ ದೇವನು,
ರಾಷ್ಟ್ರಕಾಗಿ ಹೋರಾಡಿ ದುಡಿಯುವವನೆ ಯೋಧನು,

ಅವನು ಸುರಿದ ಬೆವರಿಗೆ
ಅವ ಹರಿಸಿದ ರಕುತಕೆ

ಬೆಲೆಯ ಕಟ್ಟಿ ಒಲ್ಲೆಯೇನೋ ಮಂದಮತಿಯ ಮಾನವಾ ..?
ತನ್ನ ತನೆ ಗಂಧದಂತೆ ಪರರಿಗಾಗಿ ತೇಯುವ
ಹೊಲಗಳಲ್ಲಿ ಗಿರಣಿಗಳಲಿ ನಿಷ್ಠೆಯಿಂದೆ ದುಡಿಯುವ

ನಿತ್ಯಯೋಗಿಗಳಿಗೆ ನೆಲ
ಸತ್ಯಶೀಲರಿಂಗೆ ಜಲ

ಹಂಚಿ ಬಾಳದಿದ್ದರೇ ನೀನೆನಿಸುವೆ ದಾನವಾ !

ಸ್ವಾರ್ಥ, ಸುಲಿಗೆ, ದಬ್ಬಾಳಿಕೆ ಅನ್ಯರಕ್ತ ಶೋಷಣೆ
ಕಳ್ಳ ದುಡಿಮೆ ಸಾಗಾಣಿಕೆ ಬೆರಕೆ ವಸ್ತು ಘೋಷಣೆ

ದಾಸ್ತಾನಿನ ದುರ್ಗಕೆ
ವರದಕ್ಷಿಣೆ ವರ್ಗಕೆ

ಅಳಿಗಾಲವೆ ಅವತರಿಸಿದೆ ತಿಳಿದು ದಾರಿ ತುಳಿಯುವಾ !

ವಕ್ಷ ವಕ್ಷ ಫಲಕಗಳಲಿ ಸಾಕ್ಷರತೆಯ ಕೆತ್ತುವಾ
ಲಕ್ಷ ಲಕ್ಷ ಹೃದಯಗಳಲಿ ಸತ್ಯ ಶಿವವ ಬಿತ್ತುವಾ
ಉತ್ಪಾದನೆ ಹೆಚ್ಚಿಸಿsss ಬೆಲೆಗಳನ್ನು ಇಳಿಸುವಾ
ಸುವ್ಯವಸ್ಥೆಯನ್ನು ರಚಿಸಿ ರಾಷ್ಟ್ರವನ್ನು ಕಟ್ಟುವಾ !

ನಾವು ನಾಡ ಕಟ್ಟುವಾ
ನಾಡ ಗುಡಿಯನೆತ್ತುವಾ
ನಾವು ಗಿರಯ ಮುಟ್ಟುವಾ !

## ನಮ್ಮ ನಾಡಿದು ಭಾರತ

ಭಾರತ ಇದು ಭಾರತ
ನಮ್ಮ ನಾಡಿದು ಭಾರತ
ವಿಶ್ವ ಮೋಹಿನಿಯಾಗಿ ಮೆರೆದಾ
ಶಾಂತಿ ಸದನವೋ ಭಾರತ ॥

ಹಿಮ ಶಿಖರ ಮಣಿ ಮಕುಟದಿಂದ
ಜಡೆಯ ಜೋಡಿಯ ನದಿಗಳಿಂದ

ಬೆಟ್ಟ ತೋಳಿಗೆ ಕಡಲ ಕಂಕಣ
ಉಟ್ಟ ಹಸುರುಡೆ ಕಾನನ
ಸತ್ಯ ಸುಂದರ ಶಿವವ ಮುಡಿದು
ನಿತ್ಯ ನಂದನವಾಗಿ ಬೆಳೆದು
ಮೆರೆದ ನಾಡಿದು ಸುಂದರ
ರತ್ನಗರ್ಭ ವಸುಂಧರಾ ॥

ಶತಕ ಸಾವಿರ ದಾಟಿ ಹೋದರು
ತನ್ನತನವನು ಬಿಡದೊಲು
ಸ್ವಾಭಿಮಾನದ ಸ್ವಾವಲಂಬನ
ಶ್ರೇಷ್ಠ ಸಂಸ್ಕೃತಿ ಮೆರೆವೊಲು
ನಾಡು ಬೆಳೆಯಲಿ, ಗುಡಿಯನೆತ್ತಲಿ
ಮನಕೆ ಮಂಗಳವೀಯಲಿ

ಕೆಚ್ಚು ನಚ್ಚಿನ ಕಿಚ್ಚು ಬೆಳಗಲಿ
ಎಚ್ಚೆತ್ತು ಸಾಗಲಿ ಸಂತತ

## ದೀವಳಿಗೆಯೆ ಬಾ

ವರುಷದ ಹರುಷದ ದೀವಳಿಗೆಯೆ ಬಾ
ಬೆಳಕನು ತುಂಬುತ ಮನೆಮನೆಗೆ
ನಂದನ ಚಂದನ ತಾರಾಲೋಕದ
ಸೌರಭ ಸೂಸುತ ಎದೆಎದೆಗೆ

ಬತ್ತಲೆ ಬಯಲಿನ ಕತ್ತ ಮನೆಯಿದು
ಭಿತ್ತಿಯೆ ಇಲ್ಲದ ಚಿತ್ತಾರ !
ನಕ್ಷತ್ರವೇ ರವಿ ರಾಕಾ ಚಂದಿರ
ಆಗಿದೆ ಬರಿ ಹೂ ಮಂದಾರ !

ಅನ್ನವೆ ಹಸಿದಿದೆ ಜಲ ಬಾಯಾರಿದೆ
ಭೂಮಿಯು ಬಯಸಿದೆ ಹಿಡಿಮಣ್ಣು
ತಲೆಯಿಲ್ಲದ ತನು ಮನವಿಲ್ಲದ ಎದೆ
ಶೂನ್ಯವ ಸೋಸಿದೆ ಬರಿಕಣ್ಣು !

ಏನೋ ಎಂಥದೊ ಹೆಸರಿಲ್ಲದ ತಮ
ತಾಂಡವ ನಡೆಸಿದ ಎಲ್ಲೆಡೆಯು
ಇದ ಬಡಿದೋಡಿಸೆ ಚಂಡ ಕಿರಣ ಬಾ
ದಿಂಡುಗೆಡೆಯಲೀ ಹಾವಸೆಯು !

## ಉದಯರಾಗ

ಬಾನದೊ ಬಿರಿಯುತಿದೆ
ಹೊಂಬೊಗರೊಡೆಯುತಿದೆ

ದಳ ದಳ ತೆರೆಯುತಿದೆ
ಕಿಲ ಕಿಲ ನಗುತಲಿದೆ
ಬಾನದೋ ಬಿರಿಯುತಿದೆ
ಹೊಂಬೊಗರೊಡೆಯುತಿದೆ ॥

ನವ ಅರುಣೋದಯ ಕೆಂಪಿನಾ
ಕಂಪನೆ ಸೂಸುತಿದೆ

ಬಾನದೊ ಬಿರಿಯುತಿದೆ
ಹೊಂಬೊಗರೊಡೆಯುತಿದೆ ॥

ಹಕ್ಕಿಯು ಮರಿಗಳು ಮಡಿಲಿನ
ಬಿಕ್ಕಳಿಸುತ್ತಿವೆ ರಾಗದಿ

ತಣ್ಣನೆ ತೀಡುವ ಗಾಳಿಗೆ
ಬಳ್ಳಿಯು ಬಳುಕುತಿದೆ
ತಳಿರದೊ ನಲಿಯಲಿದೆ
ಕಚಗುಳಿಯಕ್ಕುತಿದೆ

ಬಾನದೊ ಬಿರಿಯುತಿದೆ
ಹೊಂಬೊಗರೆಡೆಯುತಿದೆ ॥

ಕಬ್ಬಗನೆದೆಯನು ಉಬ್ಬಿಸಿ&
ಕಬ್ಬನವರಳಿಸಿದೆ
ಹೆಬ್ಬಾಗಿಲ ತೆರೆಸಿ&
ದಿಬ್ಬಣ ಹೊರಡಲಿದೆ
ಹಬ್ಬವ ನೆನಪಿಸಿದೆ

ಮಬ್ಬಿನ ಮುಸುಕನು ಗಬ್ಬರಿಸಿ
ತಬ್ಬಿದೆ ತಿರೆಯನ್ನೆ
ತಬ್ಬಿದೆ ಹಸುರನ್ನೆ
ಚುಂಬಿಸಿ ಬಿಂಬಿಸಿದೆ
ಇಬ್ಬನಿ ಮಣಿಯನ್ನೆ

ಬಾನದೊ ಬಿರಿಯುತಿದೆ
ಹೊಂಬೊಗರೊಡೆಯುತಿದೆ ॥

ಕೋಗಿಲೆ, ಕೂಜನ, ಹರಿಕಾರ
ದುಂಬಿಯ ಬಂಬಲ ಝೇಂಕಾರ
ಸುತ್ತ ಸುಷುಮ್ನದ ಓಂಕಾರ
ಇಳೆಯಾಯಿತು ಪ್ರಣವಾಗಾರ

ಇಳೆಯಾಯಿತು ಪ್ರಣವಾಗಾರಽಽಽ...

ಬಾನದೊ ಬಿರಿಯುತಿವೆ
ಹೊಂಬೊಗರೊಡೆಯುತಿದೆ ॥

## ಜೀವನ ಗೀತ

ನೀನಾರೊ ನಾನಾರೊ ಎಲ್ಲಿಂದ ಬಂದವರೊ
ಪಯಣದೀ ಹಾದಿಯಲಿ ಒಂದಾದೆವು
ತಂದು ಬುತ್ತಿಯ ತಿಂದು ಒಕ್ಕುಡಿತೆಯಲಿ ಕುಡಿದು
ಸಾಲು ಮರದಡಿ ತಂಗಿ ಸಾಗುತಿಹೆವು.

ಹೂದೋಟದಂಚಿನಾ ಮುಳ್ಳುಬೇಲಿಯ ತಿರುವು
ಮುಡುಕಿನಲಿ ನಾನಿನ್ನ ಭೆಟ್ಟಿಯಾದೆ
ಕಣ್ಣುಗಳು ಮಾತಾಡಿ ಕರಣಗು ಕುಣಿದಾಡಿ
ಕೈ ಕೈಗಳೊಂದಾಗಿ 'ಸೈ' ಎಂದುವು.

ಮುಂಗುರುಳ ಮುಗಿಲೆತ್ತಿ ಬೆರಳುಗಳು ಬೆದಕಾಡೆ
ನಡು ಸುತ್ತು ಬಳಸಿದುವು ತೋಳ ಬಳ್ಳಿ
ಏನೇನೂ ಮುಲುಕಾಟ ಎಂಥದೋ ಮಿಡುಕಾಟ
ಹಾವು ಹರಿದಾ ಸದ್ದು ಬೇಲಿಯಲ್ಲಿ !

ಗುಬ್ಬಿಗಳ ದಿಬ್ಬಣಽ ಕೋಗಿಲೆಯ ಕೂಜನ
ಹಾದಿಯುದ್ದಕು ಸಿದ್ಧ ಮನ ಮಯೂರ !
ಗಿಳಿಗಳೊಲವಿನ ಮಾತು ಬೆಳ್ಳಕ್ಕಿ ಪಿಸುಮಾತು
ಚಿಟ್ಟೆ ಚಲಿಸಿತು ಕುಂಚ, ವರ್ಣಪೂರ !

ನೆತ್ತಿ – ನೆಲ ಸುಡುವಾಗ ನಿನ್ನ ಮಲ್ಲಿಗೆ ಸೆರಗು
ಕೊಡೆಯಾಗಿ ಹರಡಿತ್ತು ಅದು ಕಾವಣ,
ಕಲ್ಲು ಮುಳ್ಳಿನ ಹಾದಿ ಹೂ ಬೀದಿಯಾಗಿತ್ತು

ನಿನ್ನೊಲವೆ ನಲವೆನಗೆ ತಂಪು ತಾಣ.

ನಮ್ಮ ಪ್ರೇಮವೆ ಪೂಜೆ, ಅನುರಾಗ ಜಪ ಮಂತ್ರ,
ಸರಸ ವಿರಸಾರ್ಚನೆಯ ಮುಗಿಸಿದೆವು ಇನ್ನು
ಹೊತ್ತು ಮುಳುಗುವ ಮುನ್ನ ಕತ್ತಲಿಳಿಯುವ ಮುನ್ನ
ಸೇರೋಣ ಸೈತಾಗಿ ನಮ್ಮ ಮನೆಯನ್ನು !

## 82ರ ಮಾಗಿ

ಚಳಿಯ ಕೊಟ್ಟೆ ಕಳೆಯ ಕೊಟ್ಟೆ  ಸೂರ್ಯ ನೀರು ಕದಿಯುತಿದ್ದ
ಉರಿವ ಬಿಸಿಲು ಬಣ್ಣ ಕೊಟ್ಟೆ  ಚಂದ್ರ ಹಾಲು ಕುಡಿಯುತಿದ್ದೆ
ಹಸುರ ಹೆಸರ ಅಳಿಸಿಬಿಟ್ಟೆ  ತಾರೆ ಹಲ್ಲು ಕಿರಿಯುತಿತ್ತು
ಹದವ ಮಾಡಿದೆ–ಎದೆಗೆ ನಾಣೆ ಇಲ್ಲದೆ ತನಗೆ ತಾನು
ಬೆದೆಯ ತುಂಬಿದೆ !  ಹೇಸಿಕೊಳ್ಳದೆ !

ಎಂದು ಹಾಡ ಹಾಡಿಕೊಂಡು ಮಾಗಿ ಬಂದಿದೆ
ಸುಧಾಕರನ ಸೋಗು ಹಾಕಿ ಡೊಳ್ಳು ಮೆರೆದಿದೆ.

ಸುಟ್ಟುರೆಗಳ ನೆರವಿನಿಂದ ದಾಸ್ಯವಿಲ್ಲ ಹಾಸ್ಯವಿಲ್ಲ
ಕೆಂಧೂಳಿಯ ಕೋಟೆ ಕಟ್ಟಿ  ವೇಶ್ಯೆಯನ್ನು ಗರತಿಗೈದೆ
ಅಡಿಯ ಕಣವ ಮುಡಿಗೇರಿಸಿ  ಕೊಚ್ಚೆಯಮಲ ತೀರ್ಥವಾಯ್ತು
ಬದುಕ ನೀಡಿದೆ ಬಯಲಶುದ್ಧಿ ಮಾಡಿದೆ–ಮನವ
ಗುಡಿಸಿ ನೋಡಿದೆ  ಸ್ವಚ್ಛಗೊಳಿಸಿದೆ

ಎಂದು ಹಾಡ ಹಾಡಿಕೊಂಡು ಮಾಗಿ ಬಂದಿದೆ
ಸುಧಾಕರನ ಸೋಗು ಹಾಕಿ ಡೊಳ್ಳು ಮೆರೆದಿದೆ.

ಬಾನು ತೋಳ ಚಾಚಿಕೊಂಡು  ಮುಂದೆ ಬರುವ ಸುಗ್ಗಿಗಾಗಿ
ದಿಕ್ಕುಗಳನು ಕಾಡುತಿತ್ತು ನಿಮಗೆ ಹಿಗ್ಗು ತರಲಿಕಾಗಿ
ನೆಲದ ಕೆಳಗೆ ಕೈಯ ತೂರಿ  ಅವರನೆಲ್ಲ ಬಗ್ಗು ತರಲಿಕಾಗಿ
ಲಂಚ ಕೇಳಿತು ಮತ್ತೆ  ನಾಡ ಒಳಿತಿಗೆ ದೀನ
ಮಂಚ ಬೇಡಿತು !  ದಲಿತರೇಳ್ಗೆಗೆ !

ಎಂದು ಹಾಡ ಹಾಡಿಕೊಂಡು ಮಾಗಿ ಬಂದಿದೆ
ಸುಧಾಕರನ ಸೋಗು ಹಾಕಿ ಡೊಳ್ಳು ಮೆರೆದಿದೆ

ನಾನು ಯೋಗಿ ಮಾಗಿ ಅಲ್ಲ  ಭೂಮಿ ತಾಯಿ ಬೆದರದಿರು
ನನ್ನ ಕೈಯ ಸ್ಪರ್ಶ ಸಾಕು  ಸೆರಗ ನನಗೆ ಹಾಸೆ ಇರು
ನಿನ್ನ ಕುತ್ತ ಮಂಗಮಾಯ  ನಿನಗೆ ಸಗ್ಗ ತೋರಿಸುವೆ
ಪ್ರಾಯ ಪಡೆಯುವೆ – ಹೊಸ ಯ  ಮೋಕ್ಷ ಕೊಡಿಸುವೆ–ನನ್ನ

ಯಾತಿಯಾಗುವೆ !      ನಂಬು ಮೆರೆಸುವೆ !

ಎಂದು ಹಾಡ ಹಾಡಿಕೊಂಡು ಮಾಗಿ ಬಂದಿದೆ
ಸುಧಾಕರನ ಸೋಗು ಹಾಕಿ ಡೊಳ್ಳು ಮೆರೆದಿದೆ.

ಗತಕಾಲದ ಇತಿಹಾಸದ ಮಾಗಿ ಮೋಸಗಾರನಲ್ಲ
ಪಟವ ತೆರೆದು ನೋಡಿರೊ     ಕಾಸೆಮೀಸೆ ಕಟ್ಟಲಿಲ್ಲ
ಶೋಷಿತರನು ಮೇಲಕೆತ್ತಿ ದಾಸಿಯಂತೆ ದುಡಿದನಲ್ಲ
ಸುಟ್ಟರೆಯಲಿ ಸುತ್ತಿಸುಳಿಸಿನವ ವಸಮತ =ಯಾರದೋ ?
ಗೌರಿಶಂಕರದಲಿಟ್ಟೆ'      ನನ್ನ ಕೊಡುಗೆ ಅಲ್ಲವೆ ?

ಎಂದು ಹಾಡ ಹಾಡಿಕೊಂಡು ಮಾಗಿ ಬಂದಿದೆ
ಸುಧಾಕರನ ಸೋಗು ಹಾಕಿ ಡೊಳ್ಳು ಮೆರೆದಿದೆ.

## ರಕ್ತಾಕ್ಷಿ ಚೈತ್ರ

ಮುಳ್ಳು, ಬೇಲಿಯ ಮೇಲೆ ಬಳ್ಳಿ ಹಸುರರು ಚೆಲ್ಲಿ
ಇದೊ ಇದೋ ಬಂತು ಚೈತ್ರ

ಕಳ್ಳಿ ಹಾಲನು ಕುಡಿಸಿ ಅಮೃತಧಾರೆಯನೆರೆದೆ
ಎನ್ನುತಿದೆ ಇದೆ ವಿಚಿತ್ರ

ಇಳೆಯೆಡೆಗೆ ಹೊಳೆ ಹರಿವ ಬಿಳಿಯ ಹಾಲ್ದಿಂಗಳಿದೊ
ಕಲಬೆರಕೆ ಕಾಂತಿಯನು ಬೀರುತಿಹುದು

ದುಂಬಿ ಝೇಂಕೃತಿಯಲ್ಲಿ ಓಂಕಾರದೊಲವಿಲ್ಲ
ಠಂಕಾರ ತುಂಬಿಹುದು, ಹೂಂಕರಿಪುದು

ಕೋಗಿಲೆಯ ಕೂಜನವೊ ಮಧುಮಾಸದೊಸಗೆಯೊ
ಹಿಂದಿತ್ತು, ಇಂದೆಲ್ಲ ಬರಿಯಗುಲ್ಲು

ಸುಳ್ಳು ಆಶ್ವಾಸನೆಯ ಶಿಳ್ಳೆ ಹಾಕಿದೆ ಚಿಗುರು
ಮಾತನಾಡುವ ಗಿಳಿಗೆ ಇಲ್ಲ ಸೊಲ್ಲು

ಬೆಟ್ಟಕ್ಕೆ ಬೆಲೆ ಕಟ್ಟಿ, ನದಿಯ ನೀರಳೆದಳದು
ಚಿಕ್ಕೆ ಚದುರಂಗಕ್ಕೆ ಕೈ ಚಾಚಿದ

ಬತ್ತಲೆಯ ಬಯಲಿಂಗೆ ಕತ್ತಲೆಯ ಮಡಿ ಉಡಿಸಿ
ನೇಸರಿನ ನೆತ್ತಿಯಲಿ ಮೊಳೆ ಹೊಡೆದಿದೆ

ಈ ಯುಗಾದಿಯಲಿಂದು ಬೇವಿನಲಿ ಬದಲಿಲ್ಲ
ಕಹಿಯನೇ ನೀಡುವುದು ಎಂದಿನಂತೆ

ಬೆಲ್ಲ ಸೋಗಿನ ಸಿಂಬೆ, ಹೂವು ಹಾವಿನ ಹುತ್ತ,
ರಕ್ತಾಕ್ಷಿ ಚೈತ್ರವನು ನಂಬಬಹುದೇ ?

## ಚೈತ್ರ ನಂದನದಲ್ಲಿ

ಚೈತ್ರ ನಂದನದಲ್ಲಿ ಚಿತ್ರಕೂಟ !
ಏನೇನೊ ಹುಡುಕಾಟ
ಎಲ್ಲಡೆಯು ಹೊಸಬೇಟ
ತೊರೆಯ ತಡಿ ತೊಡೆಯಲ್ಲಿ ಮಿಡುಕುವಾಟ ॥

ಪೊದೆ ಪೊದೆಯು ಬೆದೆಯ ಮೆದೆ, ಮೋದ ತುಂಬಿದ ಮಜಲು
ಕೋಗಿಲೆಯ ಕಂಠದಲಿ ಗೀತ ಪ್ರಣಯ
ಮಲ್ಲಿಗೆಯ ಬಳ್ಳಿಯಲಿ ಮೊಳೆಹಲ್ಲು ಮೂಡಿದರೆ
ಚಿಗುರು ಗಲ್ಲದ ಮೇಲೆ ಉಗುರು ಗಾಯ !

ಹಸಿರು ಸುಸಿಲನು ಸೂಸೆ ಶಶಿ ಇಳಿದು ನಸೆ ತುಂಬೆ
ಪಿಸುಮಾತು ತೆಂಗುಗರಿ ಬಾಳೆಗಳಲಿ
ದುಂಬಿ ಚುಂಬನವೀಯೆ ತುಟಿಯ ಸವರಿದೆ ಬಳ್ಳಿ
ತೆಕ್ಕೆ ಬಿದ್ದವೆ ಮಾವು–ಬೇವು ಇಲ್ಲಿ

ಎಲ್ಲೆಲ್ಲು ಹೊಸ ಹರಯ ಹೊಸ ಪ್ರಣಯ ಹೊಸ ಹುರುಪು
ಸೂರೆಯಾಗಿದೆ ಸೊಬಗು ಧಾತ್ರಿಯಲ್ಲಿ
ಓಹೊಹೋ ! ಸಾಕಿನ್ನು ಮಾತು ಸೋತಿದೆ ನುಡಿಸಿ
ಅಪ್ಪುಗೆಯ ಹೆಪ್ಪಿರಲಿ ಬಾರಿ ಮಳ್ಳಿ !

## ಚೈತ್ರ ಚೈತನ್ಯ

ಮುಳ್ಳು ಬೇಲಿಯ ಮೇಲೆ ಬಳ್ಳಿ ಹಸುರಿನ ಹಾಸು
ನೆಲವೆಲ್ಲ ಮಕಮಲ್ಲು, ಮೃದುಲ ತಲ್ಪ

ಪೊದೆಯೆಲ್ಲ ಮೊಗ್ಗೆ ಜಡೆ, ತಳಿರ ಮಿರುಗಿನ ಸೀರೆ
ಕುಪ್ಪಸಕೆ ಹೊಂಬಾಳೆ ಕುಸುರು ಸ್ವಲ್ಪ

ಮಾವು ಬೇವಿಗು ಮದುವೆ ಇಂದೆ ಶೋಭನ ಪ್ರಸ್ಥ
ನವಿಲ ಜಾಗರದಲ್ಲಿ ತೂಗುಮಂಚ

ಅಲ್ಲಿ ಗಿಳಿಗ ಹರಟೆ ಇಲ್ಲಿ ದುಂಬಿಯ ಮಂತ್ರ
ಮತ್ತೆಲ್ಲೊ ಕೋಗಿಲೆಯ ಸ್ವಸ್ತಿ ವಚನ

ಬಂದ ಮಂದಾನಿಲನು ಚಿಗು ಕಚಗುಳಿಯಿಕ್ಕೆ
ಮಲ್ಲಿಗೆಯು ಪಕಪಕನೆ ನಗುತಲಿಹಳು

ಮಾಗಿ ಮುಸುಕನು ಸರಿಸಿ ಚೈತ್ರ ಚುಂಬನವೀಯೆ
ವಾಸಂತಿ ಹೂಬನದಿ ನಲಿನಲಿವಳು

ಕೊಂಬೆ ರೆಂಬೆಗು ಹರಯ, ಬಾಳೆ ತೋಳಿಗೆ ಗಾಯ
ಗಿಡಗಿಡವು ಮಿಡುಕುಹಿತಹ ಬೆಡಗಿ, ಹುಡುಗಿ

ಸೊಬಗು ಸೋರಿದೆ ಇಲ್ಲಿ ತೆಂಗುಗರಿ ಕೊಂಕುಳಲಿ
ಹಸೆ ಬರೆದು ಹಾಡುತಿದೆ ಚೈತ್ರ ಚೈತನ್ಯ

ಹಳತೆಲ್ಲ ಮರೆತು ಬಿಡಿ ಹೊಸತ ಹಿತವಾಗಿಸಿರಿ
ಎಂದು ಸ್ವಾಗತಿಸುದೆ ಹೊಸವರ್ಷ ನನ್ನ

## ಬೇಕು ರಸಗೊಬ್ಬರ

ರಕ್ತ ವೃದ್ಧಿಗೆ ಬೇಕು ಪೌಷ್ಠಿಕಾಹಾರ
ಬಿತ್ತು ಮೊಳೆಯಲು ಬೇಕು ರಸಗೊಬ್ಬರ

ಹಸಿರಿತ್ತ ಹಸಿರತ್ತ ಎತ್ತೆತ್ತಲೂ ಹಸಿರು
ಪಚ್ಚೆ ಹಾಸಿದೆ ನೊಡು ಗದ್ದೆ ಬಯಲು

ಗರ್ಭ ತುಂಬಿದ ನೆಲ್ಲು ಗಂಭೀರೆಯಾಗಿಹಳು
ಕೊರಳು ಬಾಗಿದೆ ಅಲ್ಲಿ ಬಂಗಾರ ಗೊನೆಯ

ದಿಂಡು ತೆವಡೆಯ ಮೇಲೆ ಗಂಡಿನಂತಿದೆ ಕಬ್ಬು
ಹುಬ್ಬನೇರಿಸಿ ನೋಡೊ ದುಂಡುಕಾಂಡ

ರಸಗೊಬ್ಬರವನುಂಡು ರಸವನುಕ್ಕಿಸುತಿಹುದು
ಗರಿವಡೆದ ಗಾಂಭೀರ್ಯ ಸಿರಿಯ ನೋಡ

ಕರುನಾಡ ಮಡಿಲಲ್ಲಿ ನರಗಂಪ ಸೂಸುತಿಹ

ಹಾಲು ತುಂಬಿದ ತೆನೆಯ ಜೋಳ ಜೋಡಿ

ಎಳ್ಳು ಜೀರಿಗೆ ಬೆಲ್ಲ ಒಳ್ಳೊಳ್ಳೆ ಧನಧಾನ್ಯ ;
ಬೆಳೆವ ರಸಗೊಬ್ಬರವೆ ರೈತನಾಡಿ

ರಕ್ತವೃದ್ಧಿಗೆ ಬೇಕು ಪೌಷ್ಠಿಕಾಹಾರ
ಬಿತ್ತು ಮೊಳೆಯಲು ಬೇಕು ರಸಗೊಬ್ಬರ

ಸಸ್ಯ ಸಂಕುಲದುಸಿರು ರಸಗೊಬ್ಬರ
ರೈತನೇಳ್ಗೆಯ ಸಿರಿಯೊ ರಸಗೊಬ್ಬರ !

## ಹಳ್ಳಿ ನಾಡ ಜೀವನಾಡಿ

ದಿಳ್ಳಿಯ ದರ್ಬಾರಿನಲ್ಲಿ
ಒಳ್ಳೊಳ್ಳೆಯ ಸೌಧಗಳಲಿ
ಲೋಲಾಡುವ ಅಣ್ಣಗಳೇ,
ನಿಮ್ಮ ನೆಲೆಯ ಹೇಳಿ,
ನಿಮ್ಮ ತಾಯೆ ಮಡಿಲು ಎಲ್ಲಿ ?
ಹೇಳಿ ಹೇಳಿ ಹೇಳಿ, ನೆನಪಿದ್ದರೆ ಹೇಳಿ,
ನಮ್ಮ ಹಳ್ಳಿ ಕರುಳ ಬಳ್ಳಿ
ನಿಮ್ಮ ಬಾಳ ಬಾನ ಬೆಳ್ಳಿ,
ತಾಯ ಮಡಿಲು ಕರುಣೆ ಕಡಲು
ಅಕ್ಕರೆಯಾ ಸಕ್ಕರೆಯು
ಎದೆಯ ಹಾಲ ಸೊದೆಯನಿತ್ತ
ಅಪ್ಪಿ ಮುತ್ತನಿಟ್ಟ ತುಟಿಯು
ಲಾಲಿಯಾಡಿ ಬಳೆದ ತೊಡೆಯು
ನಿಮ್ಮ ಬಾಳ ಬಳ್ಳಿ ಬೆಳೆದ
ಪುಣ್ಯ ತಾಣವು
ನಿಮ್ಮ ತೃಪ್ತಿ ತಲ್ಪವು;

ಅಪ್ಪುಗೆಯಾ ಹೆಪ್ಪು ತುಂಬಿ
ಹಬ್ಬುಗೆಯಾನಂದ ಚೆಲ್ಲಿ
ಜೋ ಜೋ ಜೋ ಜೋ ಎಂದು
ಜೋಗುಳ ಜೋಕಾಲಿಯಲ್ಲಿ
ದೂರು ದೂಯಾಡಿದಂಥ
ತೋಳ ತೊಟ್ಟಿಲು
ನಿನ್ನ ಹಾಲು ಬಟ್ಟಲು ;
ಹಳ್ಳೀ ನಾಡ ಜೀವನಾಡಿ
ಉಸಿರಿನುಸಿರು ಬೆಳೆಯ ಹಸಿರು
ನಾಡ ಬೆನ್ನಿನೆಲುಬು ಮತ್ತೆ

ರಾಷ್ಟ್ರದನ್ನವು
ದೇಶವೆಂಬ ದೇಹದಲ್ಲಿ

ಹಳ್ಳಿಯದರ ಹೃದಯ ತಾಣ
ಅದರ ಕ್ತ, ಅದುವೆ ಪ್ರಾಣ
ಜೀವರಸವು ಚೈತನ್ಯವು
ಸರ್ವಸ್ವವು ಬದುಕಿಗೆ.

ದಿಳ್ಳಿಯಣ್ಣ ಕೇಳೊ ಇಲ್ಲಿ
ನಿನ್ನದೆಂಬುದೆಲ್ಲವೂ
ಹಳ್ಳಿಯಿಂದಲಾದುದೊ ಅದು
ಮರೆಯದಿರು ಎಂದಿಗೂ
ರೈತ ನಿನ್ನ ಅನ್ನದೇವ
ಮಣಿಯವನಾ ಪಾದಕೆ ॥

## ರೂಪಸಿ
## (1985)

## ಅಭಿಮನ್ಯು

ಪಥವ ತಪ್ಪಿದ ಉಲ್ಕೆ
ಉರಿಯುತ್ತಾ ಉರಿಯುತ್ತಾ ಕರಗಿ ಕಣ್ಮರೆಯಾಗುವಂತೆ
ಲಂಗುಲಗಮಿಲ್ಲದ ಕುದುರೆಯಂತೆ
ಬ್ರೇಕು ತಪ್ಪಿದ ಬಸ್ಸಿನಂತೆ

ಬೆಟ್ಟದ ಬುಡವನಪ್ಪಳಿಸಹೋದ ಹುಚ್ಚು ಹೊಳೆಯಂತೆ
ಧಾವಿಸಿದೆ
ದಟ್ಟಿಸಿದೆ
ಧುಮ್ಮಿಕ್ಕಿದೆ

ಗಾಳಿ ಬೆವರಿತು
ನೀರು ಬಾಯಾರಿತು
ಬಿಸಿಲು ಉಬ್ಬಸಗೊಂಡು
ಬೀಸಣಿಗೆ ಬಯಸಿತು

ಕಡೆಗೆ ತುಂಬಿದುತ್ಸಾಹಕ್ಕೆ ನಿನ್ನ ವಿವೇಕ ಬಲಿಯಾಯಿತು
ಮತ್ತೆ ಉಡಿಸಲು ಹೋದೆ ಬತ್ತಲೆಯ ಬಯಲಿಂಗೆ ಕತ್ತಲೆಯ ಸೀರೆ !
ಅಭಿಮನ್ಯು, ನಿನಗೆ ತಿಳಿದಿಲ್ಲ.

ಇದು ದ್ರೋಹ ನಿರ್ಮಿತ ದುರ್ಗವಪ್ಪಾ !
ದುರ್ಗಮ
ದುರ್ಭೇದ್ಯ
ಇದು ವಕ್ರವ್ಯೂಹ !

ಇರುವುದು ಕುರಿ–ಕ್ಷೇತ್ರದ ಧರ್ಮದ –
ರೆಯಲ್ಲಿ !

ಸೈಂಧವದ್ವಾರ
ಬಿಟ್ಟು ಕೆಳದರೆ ಸಾಕು ಹತ್ತಾರು ತಿರುವುಗಳು
ನೀರು ನೀಮತ ನೆಲ ಪಾಚಿಕಟ್ಟಿದ ಬಂಡೆ !
ಉಸುಬು ತುಂಬಿದ ಹೊಂಡ !
ಹೆಜ್ಜೆ ಇಟ್ಟೆಡೆಯಲ್ಲಿ ನೂರಾರು ಶಲ್ಯಗಳು !
ಶತಕೋಟಿ ಶಕುನಿ ಚೀತ್ಕಾರ !

ಕೆಲವು ಕಡೆ ಬೆಳಕಿಲ್ಲ
ಬೆಳಕಿದ್ದ ಬಳಿಯಲ್ಲಿ ಬೆಲೆಯಿಲ್ಲ !
ಪಾಪ,
ಬೆಳುದಿಂಗಳಿಗೆ ಅಂಟಿದೆ ಇಂದು ಬಿಳಿಯ ತೊನ್ನು !

ಅಭಿಮನ್ಯು,
ನಿನ್ನ ಪೌರುಷ ಪ್ರತಾಪಗಳಿಗೆ ಉತ್ತರ
ನನ್ನ ಬೇಸರವಲ್ಲ,
ಸಮುದ್ರದ ಮುಂದೆ ನಿಲ್ಲಿಸಿ,
ಅಲೆಯೆಲ್ಲಾ ನಿಂತ ಮೇಲೆ ಸ್ನಾನ ಮಾಡು
ಎಂದು ಹೇಳುವ ಮೇಧಾವಿ ನಾನಲ್ಲ !
ದಳದೆರೆದ ಹೂವಿನಲ್ಲಿ
ಗೊಬ್ಬರದ ವಾಸನೆ ಹುಡುಕುತ್ತಿಲ್ಲ ನಾನು !

ಕ್ಷಮಿಸು,
ಎಚ್ಚರಿಸುವುದು ನನ್ನ ಕರ್ತವ್ಯ !
ಅದಕ್ಕೆ ಚ್ಯುತಿ ತರದಂತೆ ಆಚರಿಸಿದ್ದೇನೆ !

ತಿಳಿದುಕೊ,
ಎಷ್ಟಾದರೂ ನಾವು ಮರ್ತ್ಯರು,
ಮಾನವರು,

ಜ್ವರವನ್ನು ಜೋಗುಳ ಹಾಡಿ ಜೋಪಾನ ಮಾಡುವ ಜನ !
ಜ್ವರವಿರದ ಉಷ್ಣಮಾಪಿ ಎಲ್ಲರ ಉಷ್ಣವನ್ನೂ ಅಳೆಯುತ್ತದೆ ಅಲ್ಲವೇ

## ಒಂದು ಕವಿತೆ

ಕೂಗುತಿದೆ ಕಹಳೆ !
ಧಗೆ ಧೂಮದಾವರ್ತನ !!
ರಣಕಹಳೆ ಕೂಗುತ್ತಿದೆ !!!

ಯಾರಿವನು ದಾಪುಗಾಲಿನ ಭೂಪ ?
ಸತ್ತ ದಿನಗಳ ಶುದ್ಧ ಸತ್ವ ಭೂಮಿಯಿನೆದ್ದು
ಧಾವಿಸುವವ !

ಯಾವ ಸಂಪಾದನೆಗೆ ಈ ತೀರದಬ್ಬರ ?
ಹುಟ್ಟು, ಹರೆಯದ ನನ್ನ ಒಡನಾಡಿ, ಓ ಗೆಳೆಯ ,
ಹೇಳು,
ನಿನ್ನ ಚೆಂದುಟಿಗಳಿಗೆ ತುಟಿಯೊತ್ತಿ ಹೀರಿದ ಸವಿಯ,
ಮತ್ತೆ,
ಈ ಮಧುಮತ್ತ ಮೈದಾನ, ನದಿ, ಪಕ್ಷಿಗಳ ವಕ್ಷದಲಿ
ಪಡೆಯಬಲ್ಲೆನೆ ಹೇಳು ?

ಇದೋ
ತುಂಬಿದುತ್ಸಾಹದಲಿ ಮೇಲೆದ್ದು
ತೋಳೆರಡ ಚಾಚಿ ಬಾಚಿ ತಬ್ಬುತ್ತೇನೆ.
ನಿನ್ನ ಕ್ರೋಧೋನ್ಮತ್ತ ನಗ್ನತೆಯನು ;

ಕೂಗಿತಿದೆ ಕಹಳೇ !
ಧಗೆ ಧೂಮದಾವರ್ತನ !!
ರಣ ಕಹಳೆ ಕೂಗುತ್ತಿದೆ !!!

ಅಯ್ಯೋ,
ಅಳಿದು ಹೋಗಿದೆ ಇಂದು !
ಸರ್ವ ಶೂನ್ಯ !!

ನಿನ್ನೊಬ್ಬನುಳಿದಿಂದು
ಸರ್ವವೂ ಶೂನ್ಯ !
ಸರ್ವವೂ ಶೂನ್ಯ !!
ಸರ್ವವೂ ಶೂನ್ಯ !!!

**ಮೂಲ : ಅಸ್ಸಾಮಿ   ಕವಿ : ನೀಲಮಣಿಫುಕರ್**

# ಪ್ರತಿಧ್ವನಿ

ಹೃದಯಾಂತರಾಳದಲಿ ಪುಟಿಯುತಿದೆ ಪೂತ್ಕಾರ
ಮರುದನಿಯ ಬೀರುತಿದೆ ಮತ್ತೆ ಮತ್ತೆ !
ನನ್ನ ಎದೆಯೊಳಗೇನೋ ನೂರು ನೋವಿನ ಶೂಲ
ಧಮನಿ ಧಮನಿಗಳಲ್ಲಿ ಜೇಡಜಾಲ !

ನೆತ್ತರಿನ ನೆರೆಯಲ್ಲಿ ಅಗ್ನಿ ಬೆರೆತಂತೆ, ಹತ್ತಿ ಉರಿದಂತೆ
ಭಾಸವಾಗಿದೆ ನನಗೆ, ಕಾಣುತಿದೆ ಉರಿಯ ಮಾರ್ಗ;

ನನ್ನ ಸುತ್ತುಮುತ್ತೆಲ್ಲ ಕತ್ತೆತ್ತಿ ನಿಂತಿಹುದು
ನೂರಾರು ಕೌರವರ ಅಗರಿನರಮನೆಯುಟ್ಟ ದ್ರೋಹದುರ್ಗ !
ಹೃದಯ ವೇದಿಕೆ ಮೇಲೆ ದೈತ್ಯ ಯಂತ್ರದ ಬಡಿತ
ಅದರ ಆಘಾತಕ್ಕೆ ಪಕ್ಕೆಲುಬು ನುಚ್ಚುನುರಿ
ತಾಳಲಾರದ ಇರಿತ, ಎದೆಯುರಿತ, ಬೇಗೆ, ಉರಿ !

ಹೃದಯಾಂತರಾಳದಲಿ ಪುಟಿಯುತಿದೆ ಪೂತ್ಕಾರ
ಮರುದನಿಯ ಬೀರುತಿದೆ ಮತ್ತೆ ಮತ್ತೆ !
ಮಾರ್ದನಿಗೆ ಮರುಗುತಿದೆ ನನ್ನೊಳಗಿನೊಳು !

ಅದೆ ತಾನೆ ದಳದೆರೆದ ದಾಸವಾಳದ ತೆರದಿ
ಒಲವೆರೆದ, ಮಿದುವಾದ, ನಿಷ್ಪಾಪ ಮುಗ್ಧ ವದನವದೊಂದು
ಯಾತನೆಯ ಚೇತನವ ಸಂತವಿಡವುದ ಕಂಡೆ
ಆ ಮುಗ್ಧ ಮೋಹಕ ವದನ ಬೇರಾರದಲ್ಲ ನನ್ನ ಹೆತ್ತಮ್ಮನದು
ನಾ ಹುಟ್ಟಿ ಬಂದ ದಿನ ಇದ್ದಂಥ ಸ್ನಿಗ್ಧ ಸದನ !

ನನ್ನ ಅನಿಸಿಕೆಯುಂಡ ನರಕಯಾತನೆ ಮತ್ತೆ
ಎತ್ತೆತ್ತಿ ಬಡಿಯುತಿದೆ ಚಾವಟಿಯ ಪುಟಿಸಿ
ಲಂಗಿಲ್ಲ, ಲಗಾಮು ಮೊದಲಿಲ್ಲ, ಒಂದು ನಿರಂಕುಶ ಶಕ್ತಿ
ನೆಮ್ಮದಿಯ ಸಾಯಿಸಿದೆ ತೋಳ ಬೀಸಿ

ಇದೊ, ಈಗ ಇಲ್ಲಿಲ್ಲೆ ಪ್ರಚಂಡ ಪ್ರತಿಜ್ಞೆಯಗೈವೆ
ಕಸುವು ತುಂಬಿದ ತೋಳ್ಗಳಿಂದಲೆ ತಡೆವೆ ಆ ದೈತ್ಯ ಯಂತ್ರವನೆಂದು
ವಂಚನೆಯ ಮಂಚವಿಹ ಅರಗಿನರಮನೆಗೈದಿ
ದ್ವಾರಗಳ ಪುಡಿಗೈದು, ನನ್ನ ಧಮನಿಯಲುರಿವ ರೋಷ ರಕ್ತಜ್ವಾಲೆ
ಯಿಂದಲೆ ಸುಟ್ಟುರುಹಿ ಬೂದಿಗೈಯುವೆನೆಂದು !

ನನ್ನೊಳಗಿನೊಳಗಿನಾ ಪೂತ್ಕಾರ
ಪ್ರತಿಧ್ವನಿಸಿ ಎಚ್ಚರಿಸುತ್ತಿದೆ ಮತ್ತೆ ಮತ್ತೆ !

ಅದರ ಬೇರು–ಸೇರುಗಳೆಲ್ಲ ನನಗೂ ಗೊತ್ತು –
ಇಪ್ಪತ್ತನೆಯ ಈ ಶತಮಾನದ ದುಃಖತಪ್ತ ಮಾನವನ
ಜಯಘೋಷವೆಂದು ನನಗೆ ಚೆನ್ನಾಗಿ ಗೊತ್ತು !

ಹೃದಯಾಂತರಾಳದಲಿ ಪುಟಿಯುತಿದೆ ಪೂತ್ಕಾರ
ಮರುದನಿಯ ಬೀರುತಿದ ಮತ್ತೆ ಮತ್ತೆ !
ಮಾರ್ದನಿಗೆ ಮರುಗುತಿದೆ ನನ್ನೊಳಿಗಿನೊಳಗು
ಅದೆ ತಾನೆ ದಳದೆರೆದ ದಾಸವಾಳದ ತೆರದಿ
ಒಲವೆರೆದ, ಮಿದುವಾದ ನಿಷ್ಪಾಪ ಮುಗ್ಧವದನವದೊಂದು
ಯಾತನೆಯ ಚೇತನವ ಸಂತವಿಡುವುದ ಕಂಡೆ.

ಆ ಮುಗ್ಧ ಮೋಹಕ ವದನ ಬೇರಾರದಲ್ಲ, ನನ್ನ ಹೆತ್ತಮ್ಮನದು,
ನಾ ಹುಟ್ಟಿ ಬಂದ ದಿನ ಇದ್ದಂಥ ಸ್ನಿಗ್ಧ ಸದನ !

ಮೂಲ : ಅಸ್ಸಾಮಿ ಕವಿ : ಶ್ರೀರಾಮಗಗೈ

## ಶಬ್ದಪಾತ

ನವಿಲು ಗೊಂಬೆಗೆ ಬಿಗಿದ
ಸಪ್ಪೆ ದಾರವ ಹಿಡಿದು
ಹಾದಿಯಲಿ ಎಳೆತರುವ ಕುಂಟು ಹುಡುಗಿಯ ರೀತಿ
ನಮ್ಮಪ್ಪ ನನಗೆಂದೆ ಕೊಟ್ಟ
ನನಗಿಷ್ಟ ಬಂದಂತೆ ಬಳಸೆಂದು ಕೊಟ್ಟ
ನುಡಿನಾಣ್ಯ ಹಿಡಿದು ಹೊರಟೆ ಮಾರುಕಟ್ಟೆಗೆ
ಏನಾದರೂ ತಿನಿಸು ಕೊಳ್ಳಲೆಂದು
ಗಜಿಬಿಜಿ ಬಜಾರದ ಅಂಗಡಿಯವ
ತೆತ್ತ ನಾಣ್ಯವ ನೋಡಿ
ಅಲ್ಲೋ ಹುಡುಗ,
ನಿನ್ನದು ಖೋಟಾ ನಾಣ್ಯ,
ಇಲ್ಲಿ ಸಲ್ಲದು, ಅಲ್ಲಿ ಸಲ್ಲದು,
ಎಲ್ಲಿಯೂ ಸಲ್ಲದು
ತೊಲಗಾಚೆ
ಎಂದೆದ್ದು ಬೊಬ್ಬೆಯಿಟ್ಟ
ಹೊರಟೆ
ಓಡುವ ಬಸ್ ಹಿಡಿದು ಹತ್ತುವ ಚಾಲ್ತಿ ಇಲ್ಲ ನನಗೆ, ಗಡಿಬಿಡಿಯಲ್ಲಿ
ಚಪ್ಪಲಿಯ ಎದೆಬಾರು ಕಿತ್ತುಹೋಯ್ತು
ಕಣ್ಣ ಕಣ್ಣಡಕ ತುದಿಮೂಗಿಗಿಳಿಯಿತು
ಅಂಗಿ ಹರಿದು ಗುಂಡಿ ಕಳಚಿಬಿತ್ತು

ಬಸ್ಸು ಬುಸ್ಸೆಂದು ಹೊರಟೇಹೋಯ್ತು ನನ್ನ ಬಿಟ್ಟು

ಕಡೆಗೆ,
ಬರಿಗಾಲಲ್ಲಿ
ಮಿಡಿದ ನಾಣ್ಯವ ಹಿಡಿದು ನೆಗೆಸುತ್ತ ನಿರ್ಧರಿಸಿದೆ
ಆರತಿಯ ತಟ್ಟೆಗೆ ಹಾಕಿಬಿಡುವುದು ಲೇಸು ಎಂದು,
ದೇವಮಂದಿರದಲ್ಲಿ ಆರತಿ ಬಂದಾಗ
ಕೈ ನಡುಗುತ್ತಿತ್ತು
ಹಿಡಿದ ಹಿಡಿಯಿಂದ ಇನ್ನೇನು
ಕಾಣಿಕೆಯ ಸಲ್ಲಿಸಬೇಕು
ಅಷ್ಟರಲೆ ವೃದ್ಧ ಪೂಜಾರಿ
ಕೈ ತಡೆದು ನುಡಿದ –

'ತಮ್ಮಾ, ನನಗೆ ಗೊತ್ತು
ನೀನೊಬ್ಬ ಕವಿ ನಂಬಿರುವೆ
ಹುಚ್ಚು ಝುಂಝಾವಾತಕೀ ಆರತಿ
ಎಂದೆಂದೂ ನಂದದೆಂಬ

ಭ್ರಮೆಯ ಬಿಡು;
ತೆಗೆದುಕೊ ನನ್ನ ಈ ಆರತಿ;

ಹೋಗು,
ಅದೊ ಅತ್ತ ಆ ಗಂಗಾಘಾಟಿಗೆ
ಅಲ್ಲಿ ಬರೆ, ಹರಿಸು,
"ಗಂಗಾಲಹರಿ'
ಪರಮ ಪಾವನೆಯಾದ ಗಂಗೆ ಉಡಿಯಲ್ಲಿ'

ಅಗಸ ಕುಳಿತಿದ್ದ
ಅವನೊ ಬಟ್ಟೆಗಳ
ಸುಕ್ಕು ನಿಗುರಿಸುವುದರಲ್ಲೇ
ಬದುಕನ್ನೆಲ್ಲಾ ಕಳೆದಿದ್ದವ

ಆದರೆ,
ತನ್ನ ಮೈಮೇಲಿದ್ದ ಸುಕ್ಕು
ನೆಟ್ಟಗೆ ಮಾಡಲರಿದಯವನಾಗಿದ್ದ

ನೆರೆ–ತೆರೆ ತುಂಬಿದ್ದ ಕೈಗಳಿಂದಲೆ
ಇಸ್ತ್ರಿ ಮಾಡುತಿದ್ದ ದೋಬಿಯಂತೆ
ನನ್ನ ಲೇಖಣಿಯನ್ನು ಕೈಗೆತ್ತಿಕೊಂಡೆ
'ಗಂಗಾಲಹರಿ'ಗೆ ಶ್ರೀಕಾರ ಹಾಡಲೆಂದು

ಪದ್ಯದ ಚರಣದಿಂದ ಚರಣಕ್ಕೆ ಮುಂಬರಿದಂತೆ
ಗಂಗೆಯ ನೀರು ಬತ್ತುತ್ತ ಹೋಯ್ತು
ಹೋಯ್ತು ಬತ್ತುತ್ತಲೇ
ಬತ್ತುತ್ತ
ಬತ್ತು
ಬ

**ಮೂಲ : ಗುಜರಾತಿ     ಕವಿ : ಅನಿಲ್‌ಜೋಶಿ**

## ಇನ್ನೊಮ್ಮೆ ನಗಲಾರೆಯಾ !

ಆ ದಿನದ ನಿನ್ನ ನಗೆ ಇಂದಿಲ್ಲ ;
ರಾಹುಗ್ರಸ್ಥ ಚಂದ್ರಮನಂತೆ
ಇಲ್ಲವೆ,
ಹಿಮಾಚ್ಛಾದಿತ ಪುಷ್ಪದಂತೆ
ಇಂದು ಅದು ಸತ್ತೇಹೋಗಿದೆ

ಭೂಮಿತಾಯಿ,
ನೀಲಿಹೂ ಬಟ್ಟಲಲ್ಲಿ ರಸಸೋರಿ ಹರಿವಂತೆ
ನಿನ್ನ ಕಣ್ಣಲ್ಲಿಂದು ಕಣ್ಣೀರ ಕೋಡಿ
ಹರಿದಿದೆ ನಿನ್ನ ಬಾಳಿನ ಸೂತ್ರ
ದೈತ್ಯ ದಾನವರ ದ್ರೋಹ ದುರ್ಗದಲ್ಲಿ ಸೆರೆಸಿಕ್ಕ ನೀನು
ನಿನ್ನ ಬದುಕಿನ ಗಾಯತ್ರಿಯನ್ನೇ ಮರೆತಿದ್ದೀಯೆ !

ಯಾವುದಿದು ಈ ವ್ಯಾಪಾರಿ ತಂಡ ?
ನಿನ್ನ ಸಂಪದ್ಭರಿತ ಈ ದ್ವೀಪ ವಲಯದಲಿ
ತನ್ನದೇ ಅದೊಂದು ಹೊಸ ರೇವು ನಿರ್ಮಾಣ ಮಾಡಿ
ಅಂಗೈಯಲ್ಲಿ ಆಕಾಶ ತೋರಿ
ತನ್ನ ವಿಧ್ವಂಸಕಾರೀ ರೆಕ್ಕೆಗಳ ಬುಡದಲ್ಲಿ
ನಿನ್ನ ದಾಲ್ಚಿನ್ನಿ, ಏಲಕ್ಕಿ, ಲವಂಗ ಮೊದಲಾದ
ಸಂಬಾರ ಪದಾರ್ಥಗಳ ಸೌರಭರನ್ನು
ಸುಲಭ ಬೆಲೆ–ಅತಿ ಸುಲಭ ಬೆಲೆಗೆ
ಕೊಂಡಯ್ದ ಈ ಭಂಡ ವ್ಯಾಪಾರಿ ತಂಡ ಯಾವುದಿದು ?

ತಾಯೀ,
ಬಹುಶಃ ಮಾನವನ ರಕ್ತರಂಜಿತ ಇತಿಹಾಸ
ಅವನ ಬಿಲ್ಜಾಣ್ಮೆ
ಅವನ ಯುದ್ಧವ್ಯೂಹಗಳ ಸನ್ನಾಹ
ಇವುಗಳಾವೂ ನಿನಗೆ ತಿಳಿದಿರಲಾರವು !

ಅಮ್ಮ,
ಯಂತ್ರಕ್ಕೆ ಗುಲಾಮನಾದ ಮಾನವ
ಇಂದು ತನ್ನ ಬಾಳಿನ ಮಧುರ ಗೀತವನ್ನೇ ಮರೆತಿದ್ದಾನೆ,
ಅವನ ನಾಡಿನಲ್ಲಿ ಶಕುನಿ ಜ್ವಾಲೆ ಢಾಲಾಗಿ ಉರಿಯುತ್ತಿದೆ !
ಆದರೂ,
ಹಾಳಾದ ನಿನ್ನ ಈ ಬಾಳ ಹೊಲದಲ್ಲಿ
ಶಾಂತಿ–ಮೈತ್ರಿಗಳ ಗೀತಗಾನಗಳನ್ನು
ಮತ್ತೊಮ್ಮೆ ಕೇಳಬಲ್ಲೆಯಾ ?
ಹೇಳು, ತಾಯಿ, ಹೇಳು.

ಜಗದ ಸಾರಥಿಯದ, ಯುಗವಾಣಿ ತಾನಾದ
ನಿಯವಾರ್ತೆಯನೀವ ಅಮೃತ ಸಂದೇಶದಾ ಹರಿಕಾರನಾದ
ಕವಿ
ಇಂದು

ಈ ಕ್ಷಣಿಕ ಹಾಳೆಯ ಮೇಲೆ
ಕ್ಷುದ್ರ ಹಾಗೂ ವಿಷಪೂರಿತ ವಿಷಯಗಳನ್ನು
ಕಕ್ಕುತ್ತಿಲ್ಲವೆ ?
ಅವನ ಈ ಆತ್ಮಹತ್ಯೆ
ಅಕ್ಷಮ್ಯ ಅಪರಾಧವಲ್ಲವೆ ?
ಹೇಳು, ತಾಯಿ ನನಗೀಗ ಸ್ಪಷ್ಟ ಹೇಳಿಬಿಡು.

ಇಂದಿನೀ ದೈತ್ಯದಾಹವ ದೂಡಿ
ಮೃಗೀಯ ಮಮತಾಹೀನ ದೌಷ್ಟ್ಯವ ಮೆಟ್ಟಿ
ನಿಷ್ಠೆಯ ನಿರಂತರಾಮರ ಸೃಷ್ಟಿ
ಅಮಲ ಗೀತೆಯ ಕೂಡೆ
ಮತ್ತೊಮ್ಮೆ ಈ ಬದುಕು ಬಾಳಲಾರೆಯಾ ?

ಕಳವು ಕೈತವ ಕಗ್ಗೊಲೆಯ ಚಿಂತೆಯಲಿ
ಯುದ್ಧ ಸಿದ್ಧೆಯಲ್ಲೇ ಸದಾ ಮಗ್ನರಾಗಿರುವ
ಈ ದುಷ್ಕರ್ಮಿಗಳ ಮರಣ ಚಿತೆಯನ್ನಳಿಸಿ
ಮತ್ತೊಮ್ಮೆ ಆ ಬಂಗಾರ ಬದುಕು ಬಾಳಲಾರೆಯಾ ?

ಬರಡು ಬಾಳಿನ ದಡದ ಈ ಬಂಜರನ್ನು
ನಿನ್ನ ನಗೆ ಅಮೃತಸೇಚನದಿಂದ ಹಸಗೈಯಲಾರೆಯಾ ?
ಹೇಳು, ತಾಯಿ ಹೇಳು,
ನನಗೆ ಪೂರಾ ನಂಬಿಕೆ ಇದೆ
ನಿನ್ನ ಕಟಾಕ್ಷ ವೀಕ್ಷಣದಿಂದ
ಈ ಎದೆಯ ಬಂಜರಿನಲ್ಲಿ

ನವೀನ ಸಸ್ಯ ಶ್ಯಾಮಲ ಶಾದ್ವಲ ಸೃಷ್ಟಿ
ಮತತೆ ಆಗಿಯೇ ಆಗುತ್ತದೆ ಎಂದು !

ಆ ಕಾರಣ,
ನಕ್ಕು ಬಿಡು ಓ ತಾಯಿ,
ಇಂದೊಮ್ಮೆ, ಈ ಚಣವೆ ನಕ್ಕುಬಿಡು.
ಸತ್ತ ದಿನಗಳ ಮರೆತು
ಅತ್ತ ಬವಣೆಯ ಮರೆತು
ಉತ್ತುತ್ತಿ ತೆಗೆತೆಗೆದ ನಿನ್ನ ಮೈ ಮುತ್ತಿಡುವ
ಈ ಗಹನ ಗಂಭೀರ ಗಾಯಗಳನೆಲ್ಲ ಮರೆತು
ಇನ್ನೊಮ್ಮೆ ನಗಲಾರೆಯಾ ?

ಮೂಲ : ಒರಿಯಾ 'ತುಮ್‌ಕೆ ಹಸೀಬನಹಿ'
ಕವಿ : ಶ್ರೀ ಚಿಂತಾಮಣಿಬೆಹರ

## ನೀನು – 'ಇರುವೆ'

ನೀನು ಇರುವೆ
ಎಂದೆಂದು ನನ್ನ ಜೊತೆಯಲ್ಲೆ
ಇರುವೆ, ಹಳಕಟ್ಟಿ !

ಸಕ್ಕರೆ ಸೂರೆಯಾದೆಡೆಯಲ್ಲಿ
ಹಾಲು ಹರಿ–ಚೆಲ್ಲಿದೆಡೆಯಲ್ಲಿ
ಬಿಚ್ಚಿದ ಬಾಳೆ, ಕಬ್ಬಿನ ಚಿಣ್ಣಿ
ಅಕ್ಕಿಯ ನುಚ್ಚು, ದೇವರ ನೈವೇದ್ಯ
ತೆಗೆದಿಟ್ಟ ಬಳಿಯಲ್ಲೆಲ್ಲಾ
ಪರಿವ್ರಾಜಕನಂತೆ,
ಫಕಿರನಂತೆ
ಅಡ್ಡಾಡಿ ಗುಡ್ಡೆ ಮಾಡುತ್ತಾ
ನೀನು
ಇರುವೆ
ಇದ್ದೇ ಇರುವೆ !

ಒಣ ನೆಲದ ಕಣಜದಲ್ಲಿ ಕಾಳುಕಡಿ ಕುಡಿಟ್ಟೆ
ತುಂಬಲಾರದ ಕಣಜ ತುಂಬಿಸಲು ಹೊರಟೆ !

ನಿನ್ನ ಸಾಹಸ ಮೆಚ್ಚುವಂಥದು ನೋಡು
ಯಾರು ಮೆಚ್ಚಿದರೇನು?

ಯಾರು ಬಿಕ್ಕಿದರೇನು?
ನಿನ್ನ ಕರ್ತವ್ಯ
ನಿನಗೆ ಬಿಟ್ಟಿ ಅನ್ನಿಸಲೇ ಇಲ್ಲ
ನಿಷ್ಠೆಯಿಂ ಮಾಡಿದೆ.
ಕಸಬಿಗೆ ಕಾಯಕದ ದೀಕ್ಷೆ ಇತ್ತೆ !
ಕಾಯಕವೆ ನೀನಾದೆ ! ಆದರೂ
ಇರುವೆ
ನೀನು ಇದ್ದೇ ಇರುವೆ !
ಕಾರಣ,

ನಿನ್ನ ಸಾಲವನ್ನು ನಾನಿನ್ನೂ ತೀರಿಸಿಲ್ಲ !
(ಬಡ್ಡಿಗೇ ಬಂಡಾಟವಾಗಿರುವಾಗ ಅಸಲೆಲ್ಲಿ ಬಂತು ಹೇಳು?)

ಬಡ್ಡಿಯಾದರೂ ಬರಲಿ ಎಂದೇ ಇರಬೇಕು
ನೀನು
ಇರುವೆ
ಎಂದೆಂದಿಗೂ ನನ್ನ ಜೊತೆಯಲ್ಲಿ ಇದ್ದೇ ಇರುವೆ

### ಕೆ. ವೆಂಕಟರಾಯಾಚಾರ್ಯರಿಗೆ

ಕೆಟ್ಟ ಸ್ಕೂಟರಿಗೊಬ್ಬ ಡಾಕ್ಟರು ಬೇಕಿತ್ತು;
ಪುಟ್ಟ ಭಾಂಗಡೆವಾಲ, ತೂತು ಮುಚ್ಚುವ ಸಾಬಿ,
ಸೊಟ್ಟ ತಗಡಿನ ಟ್ರಂಕು ರಿಪೇರಿಯಾ ಜುಜುಬಿ
ಜನವು ಬೇಕಿರಲಿಲ್ಲ, ವೈದ್ಯನನೆ ಬೇಡಿತ್ತು !

ಕ್ಲಚ್‌ವೈರು, ಸ್ವಿಚ್‌ಗೇರು, ಪ್ಲಗ್ಗನೂ ಹೊರತೆಗೆದು
ಪೆಟ್ರೋಲು ಪ್ಯಾಸೇಜ್ ತುತ್ತೂರಿಯುದಿ,
ಊದೂದಿ ಚಕ್ರಕ್ಕೆ ಗಾಳಿಯನು ದೂಡಿ,
ದೂಡುವಾ ಧೀರನನು ಹುಡುಕಿ ಬೇಸತ್ತೆನಂದು !

ನೀನು ಸಿಕ್ಕಿದೆ ನನಗೆ ಕೆಂಪು ಟೋದ ಮುಂದೆ !
ಹಸಿದ ಹೊಟ್ಟೆಗೆ ರೊಟ್ಟಿ ಬಿಸಿಹಿಟ್ಟು ಸಿಕ್ಕಂಥ
ಅನುಭವವು ನನಗಾಯ್ತು ಮಾಯವಾಯಿತು ಪಂಥ
ಕಂನುಡಿಯ ಕನ್ನಡಿಗೆ ನೀನು ಹೊನ್ನುಡೆಯಾದೆ !

ಸಹಜ ಸಂಶೋಧನೆಯ ಅಧ್ವರ್ಯು ಆಚಾರ್ಯ್,
ಮೊಳಗಲೆಂದಿಗು ನಿನ್ನ ಕೀರ್ತಿಯಲೇ ತೂರ್ಯ !

## ಣಮೋ ಗೊಮ್ಮಟಾಣಾಂ

ಷಟ್‌ಖಂಡ ಮಂಡಲದ ಉಪ್ಪು ಕಡಲಿಗೆ ದಾಹ !
ನಿಂತ ವೃಷಭಾಚಲಕೆ ಹೆಸರಿ ಕೆಸರಿನ, ಮೋಹ

ಬಿ ರು–ದು
'ಬಹು ರತ್ನಾ ವಸುಂಧರಾ'
ಆದರೆ
ಮಣ್ಣಿಗೇ ಬರ

ಅನ್ನಕ್ಕೆ ಹಸಿವು, ಚಿನ್ನಕ್ಕೆ ತುಕ್ಕು
ನುಸಿ ತಿಂದ ಬೆಳಕಿಗೊ ನಿಶೆಯ ಬೇಟದ ಕಾಟ 1

ಗಾಳಿ ಬಯಸಿದ್ದು
ಒಂದೇ ಒಂದು ದಿನದ ಆಕಸ್ಮಿಕ ರಜೆ
ಎಂಥ ಅಧಿಕಾರಿಗೂ ಮುಜುಗರ, ವಜೆ.

ಭರತದಾವರ್ಷ ಸತ್ತ್ವ ವರ್ತುಳದಲ್ಲಿ ನೀನು ಮೂಡಿದೆ
ದಿವ್ಯ ಚಕ್ರರತ್ನ !

ಆಯುಧಾಗಾರಕ್ಕೆ ಗಾಯವಾಗಿಸಿದಂತೆ
ಸಮ್ಯಕ್ತ್ವ ಸಕಾರನೆನಿಸಿ ನಿಂತೆ !
'ಗುಡಿ'ಯ ಗರ್ಭದಲ್ಲಿದ್ದ ಗರ್ವರಸ ಸೋರ್ವಂತೆ
ಪುಟಿಯಿತ್ತು ಉದ್ಘೋಷ

'ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಲಮೀ ಭಟಖಡ್ಗ ಮಂಡಲೋ
ತ್ಪಲವನ ವಿಭ್ರಮ ಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ
ವಲಯಮನ್ ಅಯ್ಯನಿತ್ತುದುಮನ್ ಆಂ ನಿನಗಿತ್ತೆನ್ ಇದೇವುದಣ್ಣ
ನೀನೊಲಿದ ಲಲಿತಾಂಗಿಗಂ ಧರೆಗಂ ಅಟಿಸಿದಂದು ನೆಗಜ್ಜಿಮಾಸದೆ

ಸಾಕೆ ಮರ್ಯಾದೆ ? ಬೇಕೇನು ಬಹುಮಾನ ?
ಇದ ಜೀರ್ಣಸಿಕೊಳಲು ಬೇಕು ಶತಮಾನ !
ಚಿತ್ತ ಚೈತ್ಯಾಲಯದ ಎತ್ತರಕೆ ಬಿತ್ತರಕೆ
ವಲಯ ಸಾಲದೆ ಬಂತು
ಲೋಕ ನಿಂತಿತು ನಿನ್ನ ಕಟಿತಟದ ಬಳಿಯೆ

ಕೇವಲ ಜ್ಞಾನೋತ್ಪತ್ತಿ ಬೆಳ್ಳನೆಯ ಬೆಳಕಾಗ
ವಿಂಧ್ಯಗಿರಿ ಬಯಲೇರಿ ಬತ್ತಲೆಯೆ ನಿಂತಿತು

ಮೆಲುಕು ಹಾಕಲು ಹೋಗಿ

ಋತು ಸೋತುಹೋಯ್ತು
ಮಾಸಕ್ಕೆ ತ್ರಾಸವಾಯ್ತು

ಣಮೋ ಅರುಹಂತಾಣಾಂ
ಣಮೋ ಗೊಮ್ಮಟಾಣಾಂ

## ಇದು ವ್ಯಾಖ್ಯಾನಕ್ಕೆ ಸಿಕ್ಕ ಸಂಗತಿಯಲ್ಲ !

ಇದು ವ್ಯಾಖ್ಯಾನಕ್ಕೆ ಸಿಕ್ಕ ಸಂಗತಿಯಲ್ಲ
ಭಾವುಕದ ಭಾವನೆಗೆ ಬಿಟ್ಟದ್ದು

ಬಾಳು ಎನ್ನುವುದೇನು?
ಕೇವಲ ಜೀವ ಹಿಡಿದು ಬದುಕಿರುವುದೆ ?
ಅಲ್ಲ,
ಅದೊಂದು ಭವ್ಯ ಕಲೆ !
ಕಗ್ಗಲ್ಲಿಗೂ ರೂಪು ಕೊಡುವ, ಜೀವ ತುಂಬುವ
ಕ್ರಿಯಾಪೂರ್ಣ ಕಲೆ !

ಬಾಳ ಬಟ್ಟೆಯ ಕಡೆಯ ನೆಲೆ
ನಮ್ಮ ಪಾಲಿಗೆ ಸೊನ್ನೆ; ಏನೇನೂ ತಿಳಿದಿಲ್ಲ
ಆದರೆ ನಮಗೆ ತಿಳಿದಿರುವುದಿಷ್ಟೆ ;
ಅದರೆ ಇಕ್ಕೆಲದ ರೆಕ್ಕೆ !

ಕರ್ತವ್ಯವೇ ದೈವ,
ಕರ್ತವ್ಯವೇ ಧರ್ಮ
ಅದರಿಂದೆ,
ಚಾಚು ಕೈಗಳನತ್ತ ಕರೆ ಬಂದ ಕಡೆಗೆ !
ತನ್ನ ತಾನರಿಯಲಿಕೆ ಮನಕೆ ಆಸ್ಪದ ನೀಡು
ಹೊಣೆಯ ಹೊರೆ ಎನಿತು ಗುರುತರವೆಂದು
ಅದು ತಿಳಿಯಲಿ !

ನೆನಪಿರಲಿ...
ಮೌನದ ಮರಣಕಿಂತಲೂ ಬಾಳಿನ ಗೋಳು ಲೇಸು..!

ಆ ಕಾರಣ...
ಸೃಷ್ಟಿ ನಾಟಕದಲ್ಲಿ
ವಹಿಸು ನಿನ್ನಯ ಪಾತ್ರ ಅರ್ಹತೆಗೆ ಅನುವಾಗಿ,
ಮೂಕ ಪ್ರೇಕ್ಷಕನಾಗಿ ಕುಳ್ಳಿರಲು ಬೇಡ.

ಪಥದ ನಿರ್ಮಾಣಕ್ಕೆ ಬರಿ ಮಾತು ವ್ಯರ್ಥ
ನೆಲಕೆಸೆದ ಕಲ್ಲೊಂದೆ ಸೃಷ್ಟಿಕಾಯದ ಅರ್ಥ

**ಮೂಲ : ಅಸ್ಸಾಮಿ**
**ಕವಯಿತ್ರಿ : ಡಾ॥ ನಿರ್ಮಲ್ ಪ್ರೋವಾ ಬರ್ದೋಲಿ**
ಕವನ : ಐಬೋರ್ ಬಕ್ಸ್ಯಾರ್ ಕಥಾನಹೆ

## ಪತ್ರೆಯವರಿಗೆ ಬರೆದ ಒಂದು ಪತ್ರ !

ಉಳ್ಳವರು ನೀವಾರ್ಯ ಬೆಲೆಯುಳ್ಳವರು ನೀವು
ಭೂಮಿ ಲೋಕದ ತೂಕ ತೂಗಿದವರು
ಕೋಟಿ ಸೂರ್ಯರ ತೇಜ ಬೆಳಗಿದವರು
ಬಿತ್ತಿದೆಹೆ ಬೆಳೆಯಾಗಿ ಬೆಳೆದವರು ನೀವು !

ನೀವು ಮುಟ್ಟಿದ ಮಣ್ಣು ಹೊನ್ನಾಗಿ ಹರಿಯಿತ್ತು
ದೀನ ದಲಿತರಿಗೆಲ್ಲ ಉಣಿಸಲಾಯಿತು !
ಒಂದು ಕೈ ದುಡಿಯುತಿರೆ ಒಂದು ಕೈ ನೀಡುತಿರೆ
ತೂಗು ತೊಟ್ಟಿಲ ಕುಡಿಗೆ ಹಾಲಾಯಿತು !

ನೀವು ಮಾಡಿದಿರಯ್ಯ ಮನವಿಟ್ಟು ಮಾಡಿದಿರಿ
ನೀವು ನೀಡಿದಿರಯ್ಯ ನಿಜವರಿತು ನೀಡಿದಿರಿ
ಅಣ್ಣನೌದಾರ್ಯಕ್ಕೆ ಸರಿಯೆನಿಸಿ ಬಾಳಿದಿರಿ
ಇಲ್ಲಿಯೂ ಸಂದವರು, ನೀವಲ್ಲಿಯೂ ಸಂದಿಹಿರಿ !

ನಿಮ್ಮಿಂದ ಊರಾಯ್ತು ಸಿರಿಯಾಯ್ತು ಪತ್ರೆ !
ನೆಲೆಗೆ ನಿಲ್ಲಲಿ ಬೆಳೆದ ನಿಮ್ಮ ಯಾತ್ರೆ !
ನಾಡಿನೇಳಿಗೆಗಾಗಿ ದುಡಿದುಡಿದ ಓ ತಂದೆ,
ನಿಮಗಿದೋ ಮಣಿಯುತಿದೆ ಈ ನಾಡ ಜನತೆ !

## ಬಸಪ್ಪ ದಾನಪ್ಪ ಜತ್ತಿ

ಸಣ್ಣನೆಯ ಸೊಂಪಾದ ಬಿಲ್ವವೃಕ್ಷದ ತುದಿಗೆ
ಸಿಕ್ಕಿಸಿಡು ಒಂದುಂಡೆ ಪಚ್ಚ ಕರ್ಪೂರ
ಮೇಲಿರಿಸು ಶುದ್ಧ ಸ್ಫಟಿಕದ ಟೋಪಿ ಪೂರಾ,
ನಡುವೆ ಸೇರಿಸು ಓಂಕಾರದಕ್ಕರವ ಜೊತೆಗೆ

ಅದೆ ಕಣ್ಣ ಬಟ್ಟಲೆನು, ನೀಳಮೂಗೆಂದುಕೊಳು,
ತುಂಬೆ ಹೂವಿನ ತುಟಿಯ ಮೇಲಿರಲಿ ಕರಿದುಂಬಿ,

ಬಂಡುಣುವ ಭಾವದಲಿ ಕಂಡು ಕಾಣದ ತೆರದಿ
ಕುಳಿತಿರಲಿ ತುಟಿ–ಮೂಗು ಮಧ್ಯದೊಳು ಚುಕ್ಕೆವೊಲು

ಅದೆ ಮೀಸೆ ! ದಾಸವಾಳದ ಕೆನ್ನೆ, ಅಂಟಿರಲಿ ರೆಕ್ಕೆಗಿವಿ,
ತುಂಬು ಲಿಂಗದ ತಲೆಗೆ ಬೆಳದಿಂಗಳೊಂದಿನಿಸು,
ಉಬ್ಬಿ ದಳದೆರೆದಿರುವ ಹಣೆಗಡ್ಡಲಾಗಿರಿಸು
ಮೂರು ಬೆರಳಿನ ಪಟ್ಟಿ ಢಾಳ ದಪ್ಪ ವಿಭೂತಿ !

ನೂರು ಪೌಂಡಿನ ತೂಕದೀತನೇ ಜಗಜಟ್ಟಿ !
ಹೃದಯ ಶ್ರೀಮಂತಿಕೆಯ ಬಸಪ್ಪ ದಾ. ಜತ್ತಿ !!

ಅವನೆಲ್ಲ, ನೆರೆನೆಕ್ಕಿ,
ಚಪ್ಪರಿಸಿ,
ನಗೆಸೂಸಿ,
ಸಕಲ ಪ್ರಜಾತಂತ್ರವನ್ನೇ ಇಂದು
ನುಂಗಿ ನೊಣೆಯುತ್ತಿರುವೆ.

ಆದರೂ,
ಹೇ ಮೋಸಗಾರ್ತಿ,
ನನ್ನನ್ನು ಬಚ್ಚಿಟ್ಟಿರುವ ಬರ್ಲಿನ್ನಿನ ಗೋಡೆಗಳ ನಡುವೆ,
ಕಿಟಕಿ–ಕಿಂಡಿಗಳಿವೆ ಎಂಬುದನ್ನು ನೀನು ಮರೆತಿದ್ದಿಯೆ !

ಆ ಕಿಂಡಿಗಳ ಮೂಲಕವೆ ನಾನು
ದಿನನಿತ್ಯ ಶಾಲೆಗೆ ನಡೆದು ಹೋಗಿ ಬಹ
ಪುಟ್ಟಾಣಿ ಮಕ್ಕಳನು ನೋಡುತ್ತಲಿದ್ದೇನೆ !

**ಮೂಲ : ಗುಜರಾತಿ**
**ಕವಿ : ಶ್ರೀ ಯಶವಂತ ತ್ರಿವೇದಿ**
ಕವನ : "ಹೇ ಘಮಡೀ ಯುದ್ಧ ದೈವತ"

## ಉನ್ಮತ್ತ ರಣಮಾರಿ

ನನ್ನ ನೊರೆ ನೆತ್ತರಿನ ಸಂತತ ಸ್ರೋತಕ್ಕೆ
ಅಡ್ಡಗೋಡೆಯನಿಡಲು ಇಚ್ಛಿಸಿಹೆಯೇನು ?

ಹೇಳು,
ಓ ಉನ್ಮತ್ತ ರಣಮಾರಿ,
ಗಟ್ಟಿ ರಕ್ತದ ಮಡುವು ದಡ ತುಂಬಿ ತುಳುಕುತಿದೆ
ಅದ ನೀನು

ವಿಯಟ್ನಾಂ ಎಂದೋ,
ಅಥವಾ
ನಿನ್ನ ನಿಶ್ಚಿತ ನಿಯಂತ್ರಣದಂತೆ ಸಾಗಿಬಹ ಸ್ರೋತಕ್ಕೆ
ಸೂಯೆಜ್ ಕಾಲುವೆ ಎಮದೋ,
ಹೆಸರಿಸುವೆ

ನನಗೆ ಇದು ಗೊತ್ತಿದೆ –
ನೀನು ಮಾನವನನ್ನು ಮದ್ದು ಗುಂಡುಗಳಿಂದ
ತುಂಬಿರುವ ತುಪಾಕಿಗಳನ್ನಾಗಿ ಮಾರ್ಪಡಿಸಿ
ಸಾಲಾಗಿ ನಿಲ್ಲಿಸಬಲ್ಲೆ !

ಅವನಿಗೊಂದೇ ಒಂದು ತುಂಡು ಮಾಂಸವನೆಸೆದು
ಬೇಟೆನಾಯನ್ನಾಗಿ ರೂಪಿಸಲು ಬಲ್ಲೆ !

ನೆಲದೊಡಲ ಸಿಮಗಾರಗೊಳಿಸಲೋಸುಗ
ದಟ್ಟ ಸಮಭಾಜಕದ ಅಟ್ಟಣೆಯ ಮೇಲೆ,
ಬೆಡಗಿಯರ ಬಿರಿಮುಗುಳ ನಗೆಯಂತೆ ತೋರಿಬಹ,
ರಮ್ಯತರು ಲತಕುಂಜಗಳ ಬೆಳಸಲೂ ಬಲ್ಲೆ !

ಹೇ ಮಹಾಪರಾಧಿನಿಯೆ
ಗತದಿನ ಯುದ್ಧದಲಿ
ಮುಗುದೆಯರ ಸೆಳೆತಂದು
ರೇಖಾಂಶ ರೇಖೆಗಳನಾಗಿಸುತ ಸೀಳಿ,
ಅಕ್ಷಾಂಶ ವಕ್ಷದ ಮೇಲೆ ಹರಿ–ಹಂಚಿ ಬಿಸುಟೆ !

ಅದೋ
ಸಿಡಿಗುಂಡುಗಳನುಂಡ
ಬಂಗಾಳಿ ಕನ್ನೆಯರ
ನೆತ್ತರಿನ ಬಿತ್ತುಗಳು
ಇನ್ನೂ ಮಿನುಗುತ್ತಲಿವೆ ನಿನ್ನ ನಾಲಗೆಯ ಮೇಲೆ !

## ಕಕ್ಕಯ್ಯನಿಗೆ

ಕೀಳು ಕುಲದವನೆಂಬ ಕಾಳಜಿಯು ನಿನಗೇಕೆ ?
ಕೀಳಿಗಲ್ಲದೆ ಹಯನ ಕರೆಯದೆಂದನು ಅಣ್ಣ
ಕೀಳು ಮೇಲಾಗಿಸಲು ಸವೆದಂಥ ಬಾವನ್ನ

'ಶ್ರೀ ಶರಣ ಸಂಪನ್ನ' ಎಂದೆಂಬ ನುಡಿಬೇಕೆ ?

ಚರ್ಮ ಹದಗೈದಂತೆ ಎದೆಗಳನು ಹದಗೈದೆ

ಕಾಯಕದ ಕಣದಲ್ಲಿ ಕೈಲಾಸ ನಿರ್ಮಿಸಿದೆ
ಡೋಹರರ ದೇಹದಲಿ ದೇವನನು ಕಾಣಿಸಿದೆ

ಮಾಯೆ ಮೋಹವ ಗೆಲಿವೆ ಮಂದಾರದರಳಾದೆ !
ದೈತ್ಯತೆಯ ತುಳಿದಿಟ್ಟ ದೇವ–ಮಾನವ ತಂದೆ

ಉಳವಿ ರುಂದ್ರಾಟವಿಯ ಕೆಸರಿಯು ನೀನಾಗಿ
ಶರಣ ಸಂರಕ್ಷಣೆಯ ವಜ್ರ ಪಂಜರನಾಗಿ
ಕಾದರಳ್ಳಿಯ ಬಳಿಯ ಕಕ್ಕೆರೆಗೆ ತೊರೆಯಾದೆ

ನಿನ್ನ ನಿಲವನು ಅಳೆಯ ಅಳತೆಗೋಲಿಲ್ಲಿಲ್ಲ
ಅಪ್ರಮೇಯನು ನೀನು ಬರಿ ಮಾತು ಸಾಕಲ್ಲ

## ನಾನು ಹತ್ತು ಮಕ್ಕಳ ತಂದೆ

ನಾನು ಹತ್ತು ಮಕ್ಕಳ ತಂದೆ
ಮೂರು ಹೆಂಡಿರ ತಿಂದೆ
ಆರು ಮಕ್ಕಳ ಕೊಂದೆ
ಮೈಯಿಳಿದ ಪಿಂಡಗಳೋ
ಲೆಕ್ಕಕ್ಕೆ ಸಂಖ್ಯೆಯಲ್ಲ
ಆದರೂ ಆಗಿದದೇನೆ – ಹಾಲೀ –
ಅಸಲು ಹತ್ತು ಮಕ್ಕಳ ತಂದೆ !

ದಯವಿಟಟು
ಮಡಿದ ಮಡದಿಯರ ಸುದ್ದಿ ಕೇಳದಿರಿ
ಶುದ್ದ ನತದೃಷ್ಟ ಜೀವಿಗಳು,
ಹೇಡಿಗಳು, ಹೆಂಬೇಡಿಗಳು,
ಹಡೆಯಲಾರದೆ ಸೊರಗೀ ಸೊರಗಿ
ಸತ್ತೇ... ಹೋದುವು !

ಸತ್ಯವಾಗಿಯೂ ಸತ್ತಿದ್ದಾರೆಂದು
ಸರ್ಟಿಫಿಕೇಟ್ ಕೊಡುವ ಡಾಕ್ಟರ್
ಅಂದ –
ಅಯ್ಯಾ ಮನುಜ ರೂಪದ ಪಶುವೆ !
ನಿನ್ನ ಹೆಂಡಂದಿರೇನು ಯಂತ್ರಗಳೆ
ವರ್ಷಕ್ಕೊಂದು ಎರಡು ಹಡೆದುಕೊಡಲಿಕ್ಕೆ ?

ನಿನಗೆ ನಾಚಿಕೆಯೇ ಇಲ್ಲವೇ?

ಇನ್ನು ಏನೇನೋ ಅಂದ
ಅವನ ಬಯ್ಗುಳಕ್ಕೆ ಬ್ರೇಕೇ ಇರಲಿಲ್ಲ !!
ಶುಕ್ಲ ಶೋಣಿತ ಪಿಂಡ
ಮೈ ಬಿಡುವ ಮುನ್ನವೇ
ಸತತ ರಕ್ತಸ್ರಾವ
ಬ್ಲೀಡಿಂಗ್
ಬ್ಲೀಡಿಂಗ್

ಬ್ಲೀಡಿಂಗ್ !
ಮೀಟದ ಬ್ಲೀಡಿಂಗ್ !!

ಅಂತೂರಿಲ್ಲ,
ಅದೇ ನೆಪದಲ್ಲಿ ಕಟ್ಟಿದರು
ತಮ್ಮ ತಮ್ಮ ಬೆಡ್ಡಿಂಗ್ !
ಬಳ್ಳಿ ಸುತ್ತಿದ ಒಂದು ಕಂದು
ಕೊಂದೆ ಬಿಟ್ಟಿತು
ಮುನ್ನ ಹೊತ್ತವಳ
ತನ್ನ ಹೆತ್ತವಳ
ಪ್ರಾಣ ಕೊಟ್ಟವಳ

ಹೀಗಾಗಿ,
ತಲೆಚಿಪ್ಪು ಬಲಿಯದ
ಕೆಂಪು ನೀರು ತುಂಬಿರದ
ಹತ್ತಾರು ಎಳನೀರ ಕುರುಬುಗಳು
ತಾವೂ ಬಿದ್ದು
ಮರವನ್ನೂ ಬೀಳಿಸಿದುವು !

ಸತ್ತು ಹುಟ್ಟಿದ ಕಂದುಗಳು
ಹುಟ್ಟಿ ಸತ್ತ ಪಿಂಡಗಳು
... ಬೇಡ ಬಿಡಿ;
ಬದುಕಿರುವ ಬೆಂತರಗಳೋ
ಒಂದೊಂದೂ ಬೆಲೆಯೊಲದ ಬೆರ್ಚು !
ಒಬ್ಬ ರೋಮಿಯೊ
ಮತ್ತೊಂದಕ್ಕೆ ಪೋಲಿಯೊ
ಮಿಕ್ಕವಕ್ಕೆಲ್ಲಾ ಪಾಲು –
ಮಲೇರಿಯಾ, ಹಿಸ್ಟೀರಿಯಾ, ಡಿಫ್ತೀರಿಯಾ
ಸಾಯಲಾರದೆ
ಬದುಕಲಾಗದೆ

ನನ್ನನ್ನೇ ಕಿತ್ತು ತಿನ್ನುತ್ತಿರುವ
ಪೆಣದಿನಿಗಳು !
ಅಪ್ಪಟ ಸಗಣಿ ಹುಳಗಳು !

--

## ನಟ

ಹೇಳಿ-ಕೇಳಿ ನೀನೊಬ್ಬ ನಟ
ನಿನಗೇಕೆ ಸಲ್ಲದ ಪಾರುಪತ್ತೆ ?
ಎಲೆ ಎತ್ತುವುದೆಷ್ಟೋ ಅಷ್ಟೇ ನಿನ್ನ ಕಎಲಸ
ಉಂಡವರ ಸಂಖ್ಯೆ ಬೇಡ
ಬಡಿಸಿದವರ ಗೊಡವೆಯೂ ಬೇಡ
`Do th duty that's best
And leave the lord to the rest'

ಈ ರಂಗಮಂಟಪದ ನವರಂಗಿನಾಟದ ನಟರಲ್ಲಿ
ನೀನೊಬ್ಬ.... ಹತ್ತರಲ್ಲಿ ಹನ್ನೊಂದನೆಯವನು 1
ನಿನ್ನದೆನ್ನುವುದು ಇಲ್ಲಿ ಯಾವುದೂ ಇಲ್ಲ
ಈ ಥಿಯೇಟರ್ ನಿನ್ನದೆ ? ಅಲ್ಲ –
ಅದಾಗಲೆ ಹಣವಂತನಿಗೆ ಅಡಬಿದ್ದು
ಹನ್ನೆರಡು ವರ್ಷಗಳಾದುವು !
ಈ ಪರದೆ ? ಈ ಸೆಟ್ಟಿಂಗ್ಸ್ ?
ಇವೂ ಅಷ್ಟೆ –
ನನಗೆ ಚೆನ್ನಾಗಿ ಗೊತ್ತಿದೆ ನೀನು ಇವುಗಳನ್ನು ಬರೆದವನಿಗೆ
ಅಡ್ವಾನ್ಸ್ ಹೊರತು ಬೇರೊಂದು ದಮ್ಮಡಿಯನ್ನು
ಕೊಟ್ಟಿಲ್ಲ ಎಂದು !

ಹೋಗಲಿ –
ಈ ವೇಷ ಭೂಷಣಗಳು ? ಈ ಎಲೆಕ್ಟ್ರಿಕ್ ಸಾಮಾನು ?
ಇವೂ ನಿನ್ನವಲ್ಲ –
ನೀನು ನಿಂತಿರುವ ನೆಲವೂ ಬಾಡಿಗೆಯದೇ !
ಹೆಚ್ಚೇನು ?
ನಿನ್ನ ಕಂಪೆನಿಯ ನಾಮಫಲಕವನ್ನು ಎತ್ತಿ ಕಟ್ಟಿದವನಿಗೆ
ನೀನಿನ್ನೂ ಕೂಲಿ ಕೊಟ್ಟಿಲ್ಲ !

ಸದ್ಯದಲ್ಲಿ –
ಈ ಬಣ್ಣದ ಬಟ್ಟಲು ನಿನ್ನದಾದರೂ

ಬಣ್ಣ ನಿನ್ನದಲ್ಲ,

ನಟಿಸುವರನು ನೀನಾದರೂ
ಅಭಿನಯ ನಿನ್ನದಲ್ಲ !
ನೀನು ಕೇವಲ ಪಾತ್ರಧಾರಿ !
ನಾನು ನಿನಗೆ ಸೂತ್ರಧಾರಿ !

ಗಡ್ಡ ಕಟ್ಟಬೇಕು,
ಮೀಸೆ ಅಂಟಿಸಬೇಕು,
ಹುಬ್ಬು ತಿದ್ದು, ವಿಗ್ ಹಾಕಿ
ತುಟಿ ಕೆಂಪು, ಕಟಿರಂಪು
ಎಲ್ಲ ಎಲ್ಲ ಎಲ್ಲಾ ನೇರ್ಪಡಿಸಿ
ನಿನ್ನನ್ನು ರಂಗದ ಮೇಲೆ ತಂದು ನಿಲ್ಲಿಸಬೇಕು

ಒಟ್ಟಿನಲ್ಲಿ –
ನನ್ನ ತಾಳಕ್ಕೆ ತಕ್ಕಂತೆ
ಕುಣಿಯುವ ನಟ ಮಾತ್ರ !

'ನನಗೆ ಆ ಪಾತ್ರವೆ ಬೇಕು, ಈ ಪಾತ್ರವೆ ಬೇಕು' ಎಂದು
ಕೇಳುವ ಅಧಿಕಾರ ನಿನಗಿಲ್ಲ
ರಾಮನೊ, ರಾವಣನೊ –
"ನಾನು" ಕೊಟ್ಟದ್ದನ್ನು ಗಟ್ಟಿ ಮಾಡಿಕೋ !

ಮರೆಯಬೇಡ –
ತಿಮ್ಮನ ಪಾತ್ರ ಮಾಡುವುದಕ್ಕೂ
ತಾಖತ್ತು ಬೇಕು !
ನಿನಗೆ ಇದಕ್ಕಿಂತಲೂ ಹೆಚ್ಚಿನ ಆಶೋತ್ತರಗಳಿದ್ದರೆ...
ನನ್ನದೊಂದೇ ಉತ್ತರ–
First Deserve and then Desire !
ಅಭಿನಯಕ್ಕೆ ನಿಂತಾಗ ಮಾತ್ರ ನಿನಗೆ ಸ್ವಾತಂತ್ರ್ಯ ಇದೆ
ಇಲ್ಲವೆನ್ನುವುದಿಲ್ಲ – ಆದರೆ

ಹಕ್ಕಿರುವುದು ಬಿಕ್ಕೆ ಬೇಡಲಿಕ್ಕಲ್ಲ
ಸ್ವಾತಂತ್ರ್ಯದ ಅರ್ಥ ಸ್ವೇಚ್ಛಾಚಾರವೆಂದಲ್ಲ
ಸ್ವಚ್ಛಂದ ಪ್ರವೃತ್ತಿಗೆ ಅಲ್ಲಿ ಸ್ಥಾನವೇ ಇಲ್ಲ !
ಪ್ರೇಕ್ಷಕರಿದ್ದಾರೆ – ಎಚ್ಚರಿಕೆ
ವೀಕ್ಷಿಸುವ ಸಾಕ್ಷಿಗಳಿದ್ದಾರೆ–ಜೋಕೆ
ಕಲ್ಲು ಹೊಡೆದಾರು
ಟೊಮಾಟೊ, ಕೋಳಿ ಮೊಟ್ಟೆಗಳು

ನಿನ್ನ ಮುಖಕ್ಕೆ ಪಚ್ ಅನ್ನುವಂತೆ ಬಡಿದಾವು !

ಅವರು ನಿನ್ನ ಪ್ರತಿಯೊಂದು ಭಾವ ಭಂಗಿಗೂ ಬೆಲೆ ಕಟ್ಟುತ್ತಾರೆ,
ಪ್ರಶಸ್ತಿ ಬೇಕಿದ್ದರೆ –

ದುಡಿ ದುಡಿ ದುಡಿ
ನಿಷ್ಠೆಯಿಂದ ದುಡಿ

ಮೊದಲು ಹೊಟ್ಟೆಗೆ ಹಿಟ್ಟು ಆಮೇಲೆ ಜುಟ್ಟಿಗೆ ಮಲ್ಲಿಗೆ !
ಅಲಂಕಾರಕ್ಕೆ ಮೊದಲು ಅನ್ನ, ಹಕ್ಕಿಗೆ ಮೊದಲು ಅರ್ಹತೆ !
'ಕರ್ಮಣ್ಯೇವಾದಿಕಾರಸ್ತೆ, ಮಾಫಲೇಷು ಕದಾತನ !'

## ರೈಲು – ಲೆವೆಲ್ಲು

ನಾ ಹೊರಟೆ ರೈಲಿಗೆ
ಬೆಸರಿಕೆ ಪಟ್ಟು.
ಕೊಂಡೆ,
ಆರಾಣೆ ಬೆಲೆಯ ಟಿಕೆಟ್ಟು,
ಎಲ್ಲಂದಲೋ ಬಂತು
ಜುಕು ಬುಕು ಜುಕು ಬುಕು ಜುಕು ಬುಕು
ರೈಲು !
ನನಗೇನೋ ಏಲು !
ಬಂತು ಬಂದೇ ಬಂತು
ತೆರೆದ ಬಾಯ್ ! ಬಿಟ್ಟ ಕಣ್ !!
ತಿಂದು ಚಾರುಕೋಲು
ಕುಡಿದು ಕಣ್ಣೀರು.
'ಕೂ' ಎಂದು ಕೂಗಿ ನಿಂತುಬಿಟ್ಟಿತು,
ಮುಂದೆ,
ಪ್ಲಾಟ್‌ಫಾರಂ ;

ಚುರಮುರಿ.. ಚುರಮುರಿ
ಬೀಡಿ ಬೆಂಕಿಪಟ್ಲ ಸಿಗರೇಟ್
ಬೀಡಿ ಬೆಂಕಿಪಟ್ಲ ಸಿಗರೇಟ್
ಕಾಫಿ ಟೀ ಕಾಫಿ ಕಾಫಿ ಕಾಫಿ
ಪೇಪರ್... ಪೇಪರ್
ಚಾ..ಚಾ.. ಚಾ..
ನಾಯಿಬಿಟ್ಟರು ಮುಂದೆ ಚೂಚು !

ಅಪ್ಪಾ, ಎರಡು ಕಣ್ಣಿಲ್ಲ ತಂದೆ

ಬಾಬೂ ಅನಾದಿಯಪ್ಪಾ ಅನಾದಿ ಜಲ್ಮ
ಲೋಕ ಟಿಕೆಟ್ ಎಲ್ಲೋ ಭಾಡ್ಯಾ !
ರ್ರೀ ಸ್ವಲ್ಪ ನಿಲ್ರೀ ಎಲ್ಲರೂ ಇಳೀಲಿ
ಥೇ, ಏನು ಅವಸರ !
ಸಾಕಪ್ಪಾ ಈ ರೈಲು ಪ್ರವಾಸ
ಕಲ್ಪು ಕಟ್ಟೆಗೂ ಪ್ರಯಾಸ!

ಚಣಕಾಲ ಬಿಟ್ಟು
ರೈಲು ಹೊರಟೇಬಿಟ್ಟಿತು.
ಮತ್ತೊಮ್ಮೆ ಕೂಗು ಕೂೂೂೂೂೂೂ ಕುಕೂಕ್ !
ಸೀಟಿ ಹಾದಿ ಗಾರ್ಡು
ಕೆಳಮೋರೆ ಹಾಕಿತ್ತು ಬೋರ್ಡು
ಬಾವು, – ಅದೇ ಹಸಿರು ಬಾವುಟ ಬೀಸಿ ಹೇಳಿತು :

"ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆದ ಮುಂದೆ
ಜಗ್ಗದೆಯ ಕುಗ್ಗದೆಯ ಹಿಗ್ಗಿ ನಡೆ ಮುಂದೆ"
"ಉತ್ತಿಷ್ಠತ ಜಾಗ್ರತ ಪ್ರಾಪ್ತ್ಯವರಾನ್ನಿಬೋಧತ"

"ಅಡಿಯ ಮುಂದಿಡೆ ಸ್ವರ್ಗ್, ಅಡಿಯ ಹಿಂದಿಡೆ ನರಕ"

ಸಾಕು ಇಂದಿಗೆ, ಬರಲಿ ನಾಳೆ, ಹೂಂ, ನಡೆ
ಬಿಟ್ಟು ಕಲೆ ಈಕೀಸ್ಥಾನ
ಇದಲ್ಲ ಪಾಕೀಸ್ತಾನ

ಹಲ್ಲು ಕಚ್ಚಿದ ರೈಲು ಓಡಿಯೇ ಓಡಿತು;
ಓಡಿ, ಸೇರಿತು ಹರಿ– ಹರ
ಅಲ್ಲಿ ನಾನಿಳಿದೆ ಸರಸರ

ಅದೇ ಮಂತ್ರದ ಘೋಷ
ಅದೇ ಯಾಂತ್ರಿಕ ತೋಷ
ಕಿವಿಗೆ ಬೆರಳಿನ ಬಿರಿಡೆ ಇಟ್ಟು
ಸಾಗಿದೆ ಯಂತ್ರದ ಮನೆಗೆ ಆಸೆಪಟ್ಟು
ಅದೇ ಕೀರಲೊಸ್ಕರ
ಕೊರೆಯುತಿದ್ದಿತು ಒಂದು ಗರ ಗರ ಗರ ಗರ !
ಶಿಯ್ ಜುಕ್.. ಶಿಯ್ ಜುಕ್..
ಕಟಕಟೌ ಕಟಕಟೌ
ಸಾಕಪ್ಪಾ ಈ ಕಾಟ !
ಅದೇನು ನೋಟ ?
ಮೇರುಗಿರಿ ತೆಂಕಲಲಿ ನಿಂತಿರುವ
ಸಂಯಮಿನಿ ಪಟ್ಟಣ

ನಿಂತಿತ್ತು ಮನುಜ ರೂಪದ ಯಂತ್ರ ಕೇಳಿದೆ,

'ಇದೇನು?'
'ಇದು ಲೆವೆಲಿಂಗ್'
'ಸಾಧ್ಯವೆ..'
'(ಉಹುಂ)'
'ಪ್ರಕೃತಿಯೇ ಲೆವೆಲ್ ಇಲ್ಲ'

'ಮತ್ತೆ ???'
ಅಲ್ಲೆ ಕಂಡಿತು ಲೇಬಲ್
Made in Masco
ಪಕ್ಕದಲೆ ಮತ್ತೊಂದು ಚೂರು ಚೀಟಿ
Made in Newyork!

ಬದಿಯಲ್ಲೆ ನಿಂತಿತ್ತು ಜೋಕಾಲಿ ಜಟಕ

## ರೂಪಸಿ

ಆ ದಿನದಿಂದಲೂ
ನಾನು ಒಂದೇ ಸಮನ ಹುಡುಕುತ್ತಿದ್ದೇನೆ,
ನಿನ್ನ ವಿಳಾಸವೇ ನನಗೆ ಸಿಕ್ಕುತ್ತಿಲ್ಲ !

ನಮ್ಮಜ್ಜನ ಕಡತ, ಅಜ್ಜಿಯ ಕವುದಿ
ಹಳೆಮನೆಯ ಸಂದಿಗೊಂದಿ, ಜಂತೆ, ಜೋಳಿಗೆ
ಹೊಸ ಮನೆಯ ಕಪಾಟು, ಮೋಜು, ಸವ್ರಗ್ರಾಹಿ
ಎಲ್ಲಾ ತಡಕಿ ತಣ್ಣಗಾಗಿದ್ದೇನೆ.

ನೀನು ಎತ್ತರ ಮನೆಯವಳೆಂದು ಮಾತ್ರ ಗೊತ್ತು,
ಬೀದಿ, ಓಣಿ, ಮನೆಯ ನಂಬರು ಯಾವುದನ್ನೂ ಕಾಣೆ.

ನಾನು ಯಾರು ಯಾರಿಗೊ ಪತ್ರ ಬರೆದೆ
ಪಾರ್ವತಿ, ಪದ್ಮಾವತಿ, ಲೀಲಾವತಿ, ಮಾಲತಿ, ಸರಸ್ವತಿ, ವಾಸಂತಿ
ಉಹುಂ !
ಯಾರಿಂದಲೂ ಸಿಗಲಿಲ್ಲ ಸರಿಯಾದ ಮಾಹಿತಿ

ಚಿನ್ನದ ಬಳ್ಳಿ ಹಬ್ಬಿದ ಮಹಿಷಯವರ
ಆಫೀಸು ಗೇಟು ತೆರೆದಿತ್ತು,
ಕರೆಗಂಟೆ ಒತ್ತಿ ಒಳಗೆ ಕಾಲಿರಿಸಿದೆ,

'ನನ್ನ ರೂಪಸಿ'ಯ ಅಡ್ರೆಸ್ ಗೊತ್ತೇಎಂದು ಕೇಳಿದೆ.

ಆಕೆ ಹೇಳಿದರು –
'ಅಡ್ರೆಸ್ಸೇ?.. ದಾವೆ ಹೂಡುವ ಬನ್ನಿ !

ಎಂದು.
ಗೀತಾ, ಸೀತಾ, ಶಾಂತಾ, ಲಲಿತಾ, ಎ ಟು ಜಡ್ ಪಂಕಜಾ
ಅನುಪಮಾ, ನಿರುಪಮಾ
ಎಲ್ಲ ಉಪಮ–ಉಪಮಾತೀತರನ್ನೂ
ಕಂಡೆ, ನುಡಿಸಿದೆ.
ಎಲ್ಲಡೆಯೂ ಒಂದೇ ಉತ್ತರ –
'ಸಾವು ಕಾಣದ ಮನೆಯ ಸಾಸಿವೆಯ ತಾರವ್ವ!'

ಕಡೆಗೆ ಕುಲಶೇಖರಿಯನ್ನು ಬೇಡಿದೆ,
ಆಕೆ ಹೇಳಿದರು –
"ನೋಡು ಮಗು, ಆ 'ಕ್ಷಿತಿಜದಾಚೆ'
ಉಷೆ ಹೊಸ ಮನೆಯ ಹಸೆಯೇರುವಲ್ಲಿ
ಅಲ್ಲೆಲ್ಲೊ ಇದೆ ಎಮಬ ನೆನಪು ;
ಬೇಕೇಬೇಕು ಎಂದಿದ್ದರೆ

ಆ ಬೀದಿ ಶಾರದೆಯ ಮನೆಗೆ ಹೋಗು'
ಎಂದು.
ಹೋದೆ.
ಮುಂದೆ,
ಮೊದಲು ಸಿಕ್ಕಿದ್ದು ಪ್ರೇಮಾ 'ಮನೆ'
ಆಕೆ –
"ರೂಪಸಿಯ ಬೀದಿಗೆ ಹಾಸೆಷ್ಟು, ಬೀಸೆಷ್ಟು,
ಲಯ, ಮಾತ್ರ, ಗಣ ಗೊತ್ತಿಲ್ಲ,
ಛಂದಸ್ಸು ತಿಳಿದಿಲ್ಲ..
ಹೇಮಾಳ ಕೇಳಿ"
ಎಂದರು.
ಹೇಮಾ,
'ವಿಹೋತ್ಸವ' ದಲ್ಲಿದ್ದಳು !
'ದೇವ ಬಂದಾನು ಸ್ವಾಮಿ ಬಂದಾನು ಒಡೆಯ ಬಂದಾನು
ಆಸೆ–ಆಶ್ವಾಸನೆಯ ಕೊಡೆಯ ತಂದಾನು
ಬೀಳು ಹಕ್ಕಲದಲ್ಲಿ ಹೂಡಿ ಒಕ್ಕಲುಗಳನು
ಚಿಕ್ಕೆ ಮಾಲೆಗಳನ್ನು ಕೈತುಂಬ ಮೈತುಂಬ
ಹೊತ್ತು ತರುವನು ನನಗೆ.
ನನ್ನಮಾಸಿಯ ಕೇಶ ಮುದ್ದಿಸಿ ಸಿಂಗರಿಸುವನು.
ಭಾಷೆ ಪುಷ್ಪಗಳಿಂದ ನೀಲ ಜಲಧಿಗಳಿಂದ
ಎಂದು ಕಾದಿದ್ದೇನೆ.. ದಿಟ್ಟಿ ವಿಶ್ವಕೆ ತೇಪೆ ಹಾಕುತ್ತಿದೆ.'

ರೂಪಸಿ
ನಾನು ಅದೇ ಹೇಮಾಳ ಜಾಯಮಾನಕ್ಕೆ ಸೇರಿದವನು
ಕಾಯುತ್ತೇನೆ ಕಾಯುತ್ತೇನೆ, ನಿನಗಾಗಿ ಕಾಯುತ್ತೇನನೆ
ನಿನ್ನ ನೆನಪಿನಲ್ಲೇ ಮೋಜಿದೆ ನನಗೆ
ಕೃತಿಗಿಂತ ಸ್ಮೃತಿ ಲೇಸು
ಕನಸು ಬಿದ್ದಾಗೆಲ್ಲ ನಾನಂತು ಕೂಸು !

--

## ಕೆಲವು ಅಪ್ರಕಟಿತ ಕವನಗಳು

### ಸಹಸ್ರಮಾನಕ್ಕೆ ಸ್ವಾಗತ

ನಮ್ಮ ಅಜ್ಜ ಮುತ್ತಜ್ಜರಿದ್ದಾಗ ಬಾರದ ನೀನು
ಈಗ ನನ್ನ ಮನಗೆ ಬಂದಿದ್ದೀಯೆ
ಅಪರೂಪಕ್ಕೆ !
ನನ್ನಂತೆ,
ನನ್ನ ಮೊಮ್ಮಗ ಅಂಶು
ಮೊಮ್ಮಗಳು 'ಇಷ'ಳಿಗೂ
ದರ್ಶನವನ್ನಿತ್ತಿದ್ದೀಯೆ
ಸಂತೊಷ.
ಸಹಸ್ರಮಾನ

ನಿನಗೆ ನನ್ನ ಹಾರ್ದಿಕ ಸ್ವಾಗತ
ದಯವಿಟ್ಟು ಬೇಸರಪಟ್ಟುಕೊಳ್ಳಬೇಡ
ಮನೆಯೇನೂ ಬದಲಾಗಿಲ್ಲ !

ಅದೇ ಹುಳು ತಿಂದ ಜಂತೆ
ಕುಳಿ ಬಿದ್ದ ನೆಲ
ನೀರಿಲ್ಲದ ನಳ
ಬಿರುಕು ಬಿಟ್ಟು ತೇಪೆ ಕಾಣದ ಗೋಡೆ !
ಕೋತಿ ನೆಗೆತಕ್ಕೆ ಒಡೆದು ಬಾಯ್ಬಿಟ್ಟ
ಹಳೆ ಹೆಂಚಿನ ಇಣುಕು ನೋಟ !

ಸಾಲದ್ದಕ್ಕೆ ಮಹರಾಯ,

ಮನೆಯಲ್ಲಿ ಏಳರಾಟ ಶನಿಕಾಟ !

ಅಂತೂ ಹೆಂಗೋ ಇದರಲ್ಲೇ ವಾಸಿಸುತ್ತಿದ್ದೇನೆ

ವಠಾರ ಕಸದ ತೊಟ್ಟಿಯೆಂದು ಮೂಗು ಮುಚ್ಚಬೇಡ
ಎಷ್ಟು ಸ್ವಚ್ಛಗೊಳಿಸಿದರು ಕೊಳೆತು ನಾರುವುದೆ
ಅದರ ಜಾಯಮಾನ
ಹೌದಲ್ಲವೇ?
'ಸಗಣಿಯ ಬೆಕಂಗೆ ಸಂಪಗೆಯರಳಲ್ಲಿ ಪೂಜಿಸಿದರೆ
ರಂಜನೆಯಲ್ಲದೆ ಅದರ ಗಂಜಳ ಬಿಡದಣ್ಣಾ'
ಎನ್ನುವಂತಾಗಿದೆ !
ನನ್ನಂತೆ,

ಇನ್ನೂ ಕೆಲವರಿದ್ದಾರೆ ನಮ್ಮ ವಠಾರದಲ್ಲಿ
ಬಾಡಿದೆ ಕೊಟ್ಟಿಲ್ಲ
ಬ್ಯಾಂಕ್ ಕಂಡಿಲ್ಲ
ಬಯ್ಯುವುದನ್ನು ಬಿಟ್ಟಿಲ್ಲ

ಪುಣ್ಯಾತ್ಮರು

ಹುಳು ಕಟ್ಟಿದ ಹುತ್ತಕ್ಕೆ ಹಾವು ಬಂದು ಸೇರಿಕೊಂಡಂತೆ
ಸೇರಿಕೊಂಡವರು
ನಿತ್ಯ ಹಿಂಸೆಯ ಕಂಸವತಾರ !

ಸಹಸ್ರಮಾನ,

ನಿನಗೆ ಗೊತ್ತಿಲ್ಲ, ಕೇಳು –
ಇಂಥ ಗಲೀಜಿನಲ್ಲಿದ್ದುಕೊಂಡೇ
ನಾನು ಏನೇನೋ ಸಾಧಿಸಿದ್ದೇನೆ.

ಕಾಗೆಗೆ ರಾಗಿ ತಿನ್ನುವುದನ್ನು ಕಲಿಸಿದ್ದೇನೆ !
ಜಾತಿಯ ಅಡಿಯಲ್ಲಿ ಅಡೆಹಾಕಿ

ಜೊಳ್ಳೂ ಮೊಳಕೆ ಬರುವಂತೆ ಮಾಡಿದ್ದೇನೆ !
ದರ್ಪದ ಕೈಗೆ ದರ್ಭೆಕೊಟ್ಟು ಜಪಮಣಿ ಎಣಿಸಲು ನಿಯೋಜಿಸಿದ್ದೇನೆ !

ಎಲ್ಲೆಡೆಯನ್ನೂ ಸವೆ ಮಾಡಿ
'ಸರ್ವೇ ಜನಾಃ ಸುಖಿನೋಭವಂತು'
ಎಂದು ಮಂತ್ರ ಘೋಷಿಸಿದ್ದೇನೆ !
ತಲೆಗೆ ಅರಿವೆ ಕಾಣದ
ಹೊಟ್ಟೆಗೆ ಹಿಟ್ಟು ಕಾಣದ
ಮುದುಕನಿಗೆ ಗುಂಡಿಟ್ಟು –

'O Lord than hast made this beautifful earth\

When will it be ready to receive they saints?
How long O Lord how long !'

ಸೂರ್ಯನ ಬೆಳಕು ಸಾಲದೆಂದು
ಹಗಲ ದೀವಟಿಗೆ ಹಿಡಿದು,
ಅರಬ್ಬೀ ಸಮುದ್ರದ ಆಳದಾಳಕ್ಕಿಳಿದು ಸಂ
ಶೋಧಿಸಿ,
ಲ್ಯಾಬ್‌ನಲ್ಲಿ ಭಟ್ಟಿ ಇಳಿಸಿ,
ಕಡೆಯಲ್ಲಿ
ಸಮುದ್ರದ ನೀರು ಸಪ್ಪೆ ಎಂಬ ಸಿದ್ಧಾಂತವನ್ನು

ಸಾಬೀತುಪಡಿಸಿದ್ದೇನೆ !
ಸಹಸ್ರಮಾನ,

ಗುಲಾಬಿ ಹಾರ ದುಬಾರಿಯಾದ್ದರಿಮದ
ಕಣಿಗಿಲೆ ಹಾರ ಹಿಡಿದು
ನಿನ್ನನ್ನು ವಾಗತಿಸುತ್ತಿದ್ದೇನೆ
ಸ್ವೀಕರಿಸು.
ಇದು ಲಂಚ ಅಲ್ಲ, ನನ್ನ ಮೆಚ್ಚಿನ ಕಾಣಿಕೆ !

ಬಾಗಿಲಲ್ಲೇ ನಿಂತೆಯೇಕೆ !
ಬಾ ಮಾರಾಯ,
ಬಂದು
ನನ್ನ ಕಾರ್ಯಚಟುವಟಿಕೆಗಳಿಗೆ ತಪ್ಪದೆ ಚಾಲನೆ ನೀಡು !
ಅದರಲ್ಲಿ ನಿನಗೂ ಒಂದಿಷ್ಟು ಲಾಭ ಇದೆ !!

## ಸಾಮರಸ್ಯ ಪ್ರಗಾಥ

ನಾನು ಬಂಧಾಗ
ನೀನು ಹುಟ್ಟಿದ್ದೆಯಾದರೂ
ನೀನು ಯಾರು ? ಏಕೆ? ಹೇಗೆ
ಎಂಬುದೇ ನನಗೆ ತಿಳಿದಿರಲಿಲ್ಲ
ಬೆರಳು ಚೀಪುತ್ತ
ಬತ್ತಲೆ ಬಿದ್ದಿದ್ದೆ ನಿಮ್ಮಪ್ಪನ ಹಾಗೆ
ಹಗಲು ಇರುಗಳುಗಳ ಅರಿವಿರಲಿಲ್ಲ
ಕಾಡು ನಾಡುಗಳ ಕಲ್ಪನೆಯೂ ಇರಲಿಲ್ಲ
ನೀನೊಂದು ಎಮ್ಮೆ ಸೆಗಣಿಯ ಹಾಗೆ
ತೊಪ್ಪೆ ಕುಳಿತಿದ್ದೆ 10

ಅವು ಈವರು ಪಡೆದ ಮಾವು ಬೇವುಗಳಲ್ಲಿ
ನೋವೇ ರೂಹಾದಂತೆ
ಪೀಕುಗಳು ನೂಕಾಡಿ ಮಡಿದಾಗ
ನೀನು ಎಚ್ಚೆತ್ತೆ, ಹೆಮ್ಮರವಾದೆ !
'ಮಮಾತ್ಮಾ ಸವ್ ಜಿವಾತ್ಮಾ'
ಎಂಬ ಮೃತವಾಣಿಯ ಕೇಳಿ,
ಹಚ್ಚಡ ಹೊದೆದು ಬೆಚ್ಚಗೆ ಮಲಗಿದೆ
ನದೀಪಾತ್ರದ ಹೆಬ್ಬಂಡೆಯಂತೆ
ಕರಗಲೂ ಇಲ್ಲ, ಮೊಳಕೆ ಬರಲೂ ಇಲ್ಲ

ನಿನ್ನ ಪ್ರಾಯದ ದಿನಗಳನ್ನು ಓದಿದೆ
ನೀನು ಪ್ರಬುದ್ಧನೆನಿಸಿದ್ದು ಕಂಡು ಹಿಗ್ಗಿದೆ
ಮುಪ್ಪು ಚಪ್ಪರಿಸಲಿಲ್ಲ, ಹಲ್ಲುದುರಿ
ಗಡ್ಡ ನರೆತು ಚರ್ಮ ಸುಕ್ಕು ಕಾಣಲಿಲ್ಲ
ಮೈಮಾಂಸ ಕರಗಿ ಅಸ್ಥಿಪಂಜರ ಆಗಲಿಲ್ಲ
ಆಗುವುದೂ ಇಲ್ಲ – ಏತಕೆನೆ
ನೀನು ಯಾವಾಗಲೂ ತರುಣ, ನವನವೋನ್ಮೇಷಶಾಲಿ !
ಟ್ರಾಯ್, ರೋಮ್, ಹಸ್ತಿನಾವತಿ ಮತ್ತೆ ಇಂದ್ರಪ್ರಸ್ಥಗಳಲ್ಲಿ
ನಡೆದ ವ್ಯಥೆಕಥೆಯ ಕೇಳಿ ಕಣ್ಣಿಗೆ
ಕರೀ ಬಟ್ಟೆಕಟ್ಟಿಕೊಂಡು ನೀ ಕುಳ್ಳಿರಲಿಲ್ಲ

ನಿನ್ನ ಅಗತ್ಯತೆ ಬಹಳವಿದೆ; ನೀನೀಗ ಬರಬೇಕು
ನೀನಿಲ್ಲದೆ ನಾವೆಲ್ಲ ಕಂಗಾಲಾಗಿ,
ಒಬ್ಬೊಬ್ಬನೂ ಒಂದೊಂದು ದ್ವೀಪವಾಗಿ,
ದೀಪಕ್ಕೆ ಬದಲು ಉರಿವ ಕೊಳ್ಳಿಗಳಾಗಿ,
ಸೊಳ್ಳೆ ಶಿಕಾರಿಯಲ್ಲಿ ತೊಡಗಿದ್ದೇವೆ.
ಬಳ್ಳುಗಳು ಬಗುಳುತ್ತಲೇ ಇವೆ
ಉಪ್ಪೇ ಸಪ್ಪೆಯಾಗಿರುವಾಗ ಈಗ
ತುಪ್ಪದ ರುಚಿ ತುಂಬಬೇಕು ನೀನು
ಅದಕ್ಕಾಗಿ ಬಾ,
ಬಂದು ಜಿನವಾಣಿ ಜಪಿಸು, ಕಲಿಸು

'ಖಮ್ಮಾಮಿ ಸವ್ವ ಜೀವಾಣಾಂ
ಸವ್ವ ಜೀವ ಖಮಂತು ಮೇ
ಮೇತ್ತಿಮೇ ಸವ್ವಭೂದೇಸು,
ವೇರಂ ಮಜ್ಝಣ ಕೇಣಚಿ'
ಸಮಸ್ತ ಜೀವಕೋಟಿಗಳನ್ನೂ
ನಾನು ಕ್ಷಮಿಸುತ್ತೇನೆ.
ಸಮಸ್ತ ಜೀವಗಳೂ

ನನ್ನನ್ನು ಕ್ಷಮಿಸಲಿ
ಸಕಲ ಪ್ರಾಣಿಗಳಲ್ಲಿಯೂ
ನನಗೆ ವಿಶ್ವಾಸವಿದೆ
ವೈರವೆನ್ನುವುದನ್ನು
ಎಲ್ಲಿಯೂ ಕಂಡರಿಯೆ !

## ಕನಕಶ್ರೀ ಶಿಖರಿ

ತಾಳ ತಂಬೂರಿಗಳ ಶ್ರುತಿತಂತಿ ಸರಿಪಡಿಸಿ
ರಾಗರಾಗಿಣಿಯರಿಗೆ ಸುಮಭಾವವಿತ್ತವನು
ಖಡ್ಗಕೂ ಲೇಖಣಿಯ ದೀಕ್ಷೆಯನು ಕೊಟ್ಟವನು
ತುಂಡುಗಂಬಳಿ ಹೊದೆದ ತರುಣ ತುಲಸಿಯ ತವಸಿ

ಇವನಾರು ? ಈ ಅರೆಬತ್ತಲೆಯ ಹರಿಕಾರ
ಮಾನವತೆಯನು ಬಿತ್ತಿ ಬೆಳೆದ ಸದ್ಗುಣಸಾರ !
ಬಯಲು ಆಲಯಗಳನು ತನ್ನೊಳಗೆ ಕಂಡವನು
'ನಾನು' ಹೋಗಲು ತಾನೆ ವೈಕುಂಠಕೇರ್ದವನು

ಅಣುವಿನಲಿ ಘನದಲ್ಲಿ ಜಲ ಅನಿಲ ವಾಯುವಲಿ
ಎಲ್ಲೆಲ್ಲು ಶ್ರೀ ಹರಿಯ ಹೆಸರು ಹಸಿರಾಗಿರಲಿ
ಎಂದೆನುತೆ ಮೋಹನದ ತಾನತ್ತರಂಗಿಣೀ
ನಾದಮೋದವ ಮೆರೆದ ಭಾವ ಭಾಗೀರಥಿ

ಕಾಗೆನೆಲ್ಲಿಯ ಆದಿಕೇಶವನ ಕೋಗಿಲೆಯೊ
ಇವನಿಹನು ಸಂತಕವಿ ಕನಕಶ್ರೀ ಶಿಖರಿಯೊ

### ಬರುತಿದೆ ಹೊಸ ವರುಷ

ಬರುತಿದೆ ಬರುತಿದೆ ಹೊಸ ವರುಷ
ತರುತಿದೆ ತರುತಿದೆ ನವ ಹರುಷ ॥

ಎಲೆ ಎಲೆ ಎಲೆಗಳ ಮೇಲೆ
ಬರೆದಿದೆ ಅಕ್ಷರ ಮಾಲೆ
ಅ ಆ ಇ ಈ । ಆಆಇಈ
ಕಸ್ತೂರಿ ಕನ್ನಡ ಲೀಲೆ ॥1॥

ಕೋಗಿಲೆಗಳ ಮಾತಾಡಿಸುತ
ಗಿಳಿಗಳ ಕಿಲ ಕಿಲ ನಗಿಸುತ್ತ
ನವಿಲಿಗೆ ನರ್ತನ ಕಲಿಸುತ್ತಾ
ದುಂಬಿಯ ಹಿಂಡನು ಓಡಿಸುತ ॥2॥

ಬಳ್ಳಿಯ ಹುಡುಗಿಗೆ ಹೂಜಡೆ ಹಾಕಿ
ಚಿಗುರು ಬೆರಳಲಿ ಕಚಗುಳಿಯಿಕ್ಕಿ

ಹಳತನು ಮರೆಯಿರಿ ಹೊಸತನು ನೆನೆಯಿರಿ
ಮುನ್ನಡೆಯಿರಿ ಎಂದೆಚ್ಚರಿಸಿ ॥3॥

## ಮಾಗಿಯ ಯೋಗಿ ಕುರಿತು

ಐವತ್ತು ಕಳೆದರೂ ನೋವಂತು ಮುಗಿದಿಲ್ಲ
ಏನೆಂದು ತಪಗೈವೆ ಮಾಗಿಯೋಗಿ ?
ಅಸ್ಥಿಪಂಜರದಂತೆ ಬೋಳುಮರ ನಿಂದಿರಲು
ಹಾಡಹಕ್ಕಿಯ ಕನಸೆ ಹೇಳೊ ಜಾಗಿ !

ಶಿಶಿರ ಬಸಿರಲಿ ಹಡೆದ ಹೇಮಂತ ಋತುಗಾನ
ಚೈತ್ರ ಚಿತ್ತಾರದಲಿ ಶ್ರುತಿಗೂಡಲಿಲ್ಲ
ಸುಳ್ಳು ಸೋನೆಯ ಮಳೆಗೆ ಮೊಳಕೆ ಬರಲೇ ಇಲ್ಲ
ಕರುಳ ಬಳ್ಳಿಗೆ ಕರುಣೆ ಹುಟ್ಟಲಿಲ್ಲ

ಏನಿತೆನಿತೊ ಕನಸುಗಳು ಕನವರಿಕೆಯಾಗಿರಲು
ನೆಲಮುಗಿಲು ಹರಿದುದಕೆ ತೇಪೆಯಿಲ್ಲ
ಗೋವು ತಿನ್ನುವ ಮೇವ ಗೋದಲೆಯೆ ಕಬಳಿಸಿರೆ
ನಿನ್ನ ಬಯಕೆಗೆ ಇಲ್ಲ ಬೇವು ಬೆಲ್ಲ !

ಏಕೆ ವ್ಯರ್ಥಾಲಾಪ ಜಪವೇಕೆ ? ತಪವೇಕೆ ?
ಬಾಯಿಬಿಡೊ ಬಡಜೋಗಿ ನುಡಿಬಾರದೆ ?
ಎಂದಾದರೊಂದು ದಿನ ಶುಭಘಳಿಗೆ ಬಹುದೆಂಬ
ಘಮದ ಮುಡಿಗೆ ಮರಳಿ ನುರಿವುದೆಂದೆ ?

## ಜಾಗರವನಾಡು ನವಿಲೆ

ಆಡು ಆಡು ಆಡು
ಜಾಗರವನಾಡು ನವಿಲೆ
ಗರಿಗರಿಯ ನಿರಿಯ ಕೆದರಿ
ನಲಿದಾಡು ಸೋಗೆ ನವಿಲೆ

ಎಳೆಹುಲ್ಲ ಮೇಲೆ ಮಕಮಲ್ಲ ಬಾಲೆ
ಮಲಗಿಹಳು ಕೆಣಕು ನವಿಲೆ
ಮಳೆಬಿಲ್ಲಿನೊಂದು ಕಾವಣವ ಕಟ್ಟಿ
ಕಾಮನನು ಕಳುಹು ನವಿಲೆ

ಹೊಂಬಾಳೆ ತುಂಬಿ ಹೊರಸೂಸಿ ನಗಲಿ
ರಂಗೋಲೆ ಬರೆದು ನವಿಲೆ
ಬಾಳೆಲೆಯ ತೋಳು ತೂಗಾಡುತಿರಲಿ
ತೋರಣವ ಸೃಜಿಸು ನವಿಲೆ

ಅಲ್ಲೆ ಅಲ್ಲೆ ತೆರೆತೆರೆಯ ಮೇಲೆ
ತೆಳು ಬೆಳಕ ಬಾಲಲೀಲೆ
ಹಸುರೆಲ್ಲ ಹೂವು ಚಿಗುರೆಲ್ಲ ಮಾವು

ಬತ್ತಲೆಯ ಮರಕೆ ಸೀರೆ

ಎಲ್ಲೆಲ್ಲು ಚೆಲುವು ಕಾಮಂಗೆ ಗೆಲವು
ಸೌಂದರ್ಯ ಸುಗ್ಗಿ ಸೂರೆ !
ನೋಟಕ್ಕೆ ಸೋತು ಬೇಟಕ್ಕೆ ಕಾತು
ನಿಂದಿಹವು ಬೆಟ್ಟದೋರೆ

ಶಿವ ಸುಟ್ಟ ಕಾಮ ಮೂಡಿಸಿದ ಪ್ರೇಮ
ಸಂತಾನ ಕೋಟಿ ಕೋಟಿ
ಅಳಿವಿಲ್ಲ ಅವಗೆ ತಿಳಿ ಸೊಬಗ ನವಿಲೆ
ಬಾಳಲ್ಲಿ ಇರಲಿ ಪ್ರೀತಿ

## ಕುಣಿ ಕುಣಿ ನೀರನಟಿ

ಕುಣಿಕುಣಿ ಕುಣಿಕುಣಿ ನೀರನಟಿ
ಬೃಂದಾವನದಾನಂದವೆ ಪುಟಿವೊಲು
ಕುಣಿಕುಣಿ ನೀರನಟಿ

ಚಿಲುಮೆಯ ಚೆಲುವಿನ ತೋಳನು ಚಾಚಿ
ಭಾವದ ಭಂಗಿಗೆ ಮೈಮನ ಹಾಸಿ
ಜುಳು ಜುಳು ಜುಳು ಜುಳು ನಾದಾಮೋದದಿ
ವರ್ಣ ಪರ್ಣಗಳ ದೆಸೆದೆಸೆಗೆರಚುತೆ
ಕುಣಿಕುಣಿ ನೀರನಟಿ

ಸೀರ್ಪನಿ ಸಿಂಪಡಿಸೆಲ್ಲೆಡೆ ಬಿಡದೆ
ಇಬ್ಬನಿ ಮಣಿಗಳು ಹಸುರೆಲೆ ತಲೆಗೆ
ಮಿನ ಮಿನ ಮಿನುಗುವ ಮಿಂಚಿನ ಮಳೆಗೆ
ಮೋಹನ ಮುರುಳಿ ನಾದವ ಬೆರಸುತೆ
ಕುಣಿಕುಣಿ ನೀರನಟಿ

ಮಾಗಿಯ ಯೋಗಿಗೆ ಮಂಗಳವಾಗಲಿ
ಬರುವ ವಸಂತಗೆ ಶುಭವಿರಲಿ
ಕಡಲಿನ ಕ್ಷೋಭೆಗೆ ಶಮವೈ ತರಲಿ
ಶಾಂತಿಯು ನೆಲಸಲಿ ಜಗದಲಿ ಎನುತೆ
ಕುಣಿಕುಣಿ ನೀರನಟಿ

## ಋತುಕನ್ಯೆ

ಶುಚಿಮತಿ ಋತುಕನ್ಯೆ
ನೀನಲ್ಲ ಅನ್ಯೆ
ಶತಶತಮಾನಗಳ
ಗತಿಭಾವುಕ ರನ್ನೆ

ಕೋಕಿಲ ಋತುಗಾನ

ದುಂಬಿಯ ಗುಂಗಾನ
ಗರಿ ಗರಿಗೆದರೆ
ನವಿಲಿನ ನರ್ತನ
ಹೂವಿನ ತೇರಲಿ
ನಿನ್ನದೆ ರಸಯಾನ
ಅದುವೆ ವಸಂತನಾ ಆಗಮನ

ಶುಚಿಮತಿ ಋತುಕನ್ಯೆ
ನೀನಲ್ಲ ಅನ್ಯೆ

ಭೀಷ್ಮ ಗ್ರೀಷ್ಮನ
ಸುಷ್ಮ ಸುಗಲ್ಲಕೆ
ಸೂಕ್ಷ್ಮ ಸ್ಪರ್ಶದ
ಮುತ್ತಿಡುವೆ
ವರ್ಷಾಕರ್ಷಕೆ
ಬಾಷ್ಪವ ಸುರಿಸುತೆ
ಆಲಿಂಗಿಸಿ ನೀ ಮೈಮರೆವೆ

ಶುಚಿಮತಿ ಋತುಕನ್ಯೆ
ನೀನಲ್ಲ ಅನ್ಯೆ
ಶರದದ ಸಮಯದ
ಮೋಡವನೇರಿ
ಹಿಮವಂತನಿಗೆ
ಹಿತಳೆನಿಸಿ
ಶಿಶಿರನ ಸುಸಿಲಿಗೆ
ಬಿಸಿಯುಸಿರಾಗಿ
ಮುದವನೆ ತುಂಬುವ
ಮತಿವಂತೆ

ಶುಚಿಮತಿ ಋತುಕನ್ಯೆ
ನೀನಲ್ಲ ಅನ್ಯೆ

ಬೆಂದೆದೆ ಸುಧೆಯೆ
ತುಟಿ ತಟಿ ಜೇನೆ
ಚೆಲುವಿನ ಚಿಲುಮೆಯೆ
ನಿಯತಿ ಸಂಹಿತೆಯ
ಅದು ಆದೆ ಇದು ಆದೆ
ಏನೆಲ್ಲವಾದೆ
ಕಡೆಗೆ ಚಿದ್ರೂಪದಾ ಚೇತನವೆ ಆದೆ

ಶುಚಿಮತಿ ಋತುಕನ್ಯೆ
ನೀನಲ್ಲ ಅನ್ಯೆ
ಶತಶತಮಾನಗಳ
ಗತಿಭಾವಕ ರನ್ನೆ

## ಸ್ವಗತ

ನಾನೊಂದು ಹೆಣ್ಣು
ಪುರುಷ ವಂಚನೆಯ ಮಂಚವೇರ್ದ
ಪುಣ್ಯಶಾಲಿ ಹೆಣ್ಣು !

ಹಕ್ಕು ಅಧಿಕಾರ ಸೊಕ್ಕು ಸಾಮರ್ಥ್ಯ
ಯಾವುದೂ ಇಲ್ಲ ನನಗೆ !
ಪ್ರೇಮವಂಚನೆ ಪತಿತ ಪಾತಕಿ
ಬೆಂದ ಬಿಳಿಯ ಹಾಳೆ

ಹಿಡಿಕೂಳನುಂಬ ಬಡದಾಸಿ ನಾನು
ಆತ್ಮಾಭಿಯಾನರಹಿತೆ
ಕಣ್ಣೀರಿನಲ್ಲಿ ಕೈ ತೊಳೆಯುತಿರುವ
ಕನಸುಗಳ ತಿಂಬ ಸ್ವಸ್ಥೆ !

ಹೆಜ್ಜೆ ಇಟ್ಟರೆ ತಪ್ಪು, ಹೆಜ್ಜೆ ತೆಗೆದರೆ ತಪ್ಪು
ಪ್ರತಿ ಪದಕು ಎಚ್ಚರಿಕೆ ಮಂತ್ರಪಠಣ
ತಿರುಗಿದಡೆ ಪಾಶ ಬಂಧನದ ನೇಣು
ಸಪ್ತಪದಿ ಸಂಕೋಲೆ ಬೇರೆ ಕಥನ

ಏನು ಕ್ರೌರ್ಯ ಏನೆಂಥ ದೌಷ್ಟ್ಯ
ಈ ಗಂಡು ಕುಲದ ಬೊಂತೆ
ನೀತಿ ಸಂಹಿತೆಕಟ್ಟು ಕಟ್ಟಳೆ
ಹೆಣ್ಣಿಗಷ್ಟೆಯಂತೆ

ಪುರುಷಗಿಲ್ಲ ಬಂಧನದ ಬೇಡಿ
ಸ್ವಾಚ್ಛಂದ್ಯ ಸಿಂಹವವನು
ಎಲ್ಲ ಬೇಡಗಳು ಹೆಣ್ಣಿಗಷ್ಟೆ
ಪಂಜರದ ಪಕ್ಷಿಯವಳು

ಹೆಣ್ಣ ಮಾಂಸಲವನ್ನು ಕಿತ್ತು ತಿನುತಿರೆ ಗಂಡು
ಹೆಣ್ಣು ಮಣ್ಣಾಗಿಹಳು ಸಟ್ಟಸುಣ್ಣ !
ತಣ್ಪುಂಡು ಬಾಳೆಲೆಯ ಬೀಸಿಕೊಂಬುವ ಬಾಳು
ಕಣ್ಣೊಡೆಯುತಿಹುದಯ್ಯೋ ದೃಶ್ಯ ತೀಕ್ಷ್ಣ !
ದೀನ ದಾಸ್ಯದ ಮೇಲೆ ಪುರುಷ ಪ್ರಭುತ್ವ
ಮೊಸಳೆ ಕಣ್ಣೀರಿನೊಲು ಸಾನುಕ್ರೋಶತ್ವ ।
ಪುರುಷ ದಬ್ಬಾಳಿಕೆಗೆ ಹೆಣ್ಣೊಂದು ಕಿರು ತುತ್ತು
ರಣಹದ್ದುಗಳು ಕಸಿಯೆ, ಅದು ಸತ್ತು ಬಿತ್ತು

ಸಂಪ್ರದಾಯದ ಭೂತ ಕಾವಲಿಹುದಿಲ್ಲಿ
ಎಡವಿದರೆ ಸಾಕೆಂದು ಕಾಯುತಿಹುದಿಲ್ಲಿ
ಹೆಣ್ಣ ಮಣ್ಣಾಗಿಸಲು ಬಾಣ ಹೂಡಿ
ಹೊಂಚು ಹಾಕುತ್ತಲಿದೆ ಬೋಧೆ ಬಿಲದಲ್ಲಿ

ಭಯದಿಂದ ಕಂಪಿಸುವ ಈ ವರ್ತಮಾನ
ಬಂಗಾರ ಗೋಪುರದ ಸ್ವರ್ಣ ಪ್ರಾಚೀನ
ಇವುಗಳೆರಡರ ನಡುವೆ ಸಿಕ್ಕಂಥ ಹೆಣ್ಣುತನ
ಏನಾಯ್ತು ! ಏನಾಯ್ತು ! ಪಿಷ್ಟಚೂರ್ಣ

ಹೆಣ್ಣು ಮಾಸತಿಯಾಗಿ ಚಿತೆಯಲ್ಲಿ ಬೆದೆ ಬೆಂದು
ಶುದ್ಧಳಾದಳು ಎಂದು, ಸಗ್ಗ ಸೇರ್ದಳು ಎಂದು
ಹದಿಬದೆಯು ತಾನಾಗಿ ಸತಿಯಾದಳೆಂದು
ಏನೇನೋ ಶಾಸನವ ಬರೆಸಿತೀ ಗಂಡು

ಧರ್ಮದಾ ಹೆಸರಿನಲ್ಲಿ ದ್ರೋಹಯಜ್ಞವೊ ಇಲ್ಲಿ
ಈ ಪುಣ್ಯಭೂಮಿಯಲಿ ಭರತಖಂಡದಲಿ
ಹೆಣ್ಣು ಶೋಷಣೆಗೊಳಗು ಮಸಣ ಮೌನದ ಸೆರಗೂ
ಸಂಪ್ರದಾಯವು ಪಠಿಪ ಚರಮಗೀತ !
ಓಂ ಸ್ವಸ್ತಿ !
ಓಮ !
ಸ್ವ ......

## ದಾಂಪತ್ಯ ಜೀವನ

ಹೆಣ್ಣು ಹಡೆಯಲು ಬೇಕು
ಗಂಡು ದುಡಿಯಲು ಬೇಕು
ಕೂಡಿ ಬಾಳುವ ಪಾಠ ಕಲಿಯಬೇಕು
ಮೇಲು ಕೀಲುಗಳಿಲ್ಲ
ಪಕ್ಷಪಾತವು ಸಲ್ಲ
ದಾಂಪತ್ಯ ಜೀವನವೆ ಬೇವು–ಬೆಲ್ಲ

**ನಾಟ್ಯವೇದದಲಿ**

ನಾಟ್ಯವೇದದಲಿ ನಾದೋಪಾಸನ
ಸ ರಿ ಗ ಮ ಪ ದ ನಿ ಸ್ವರಸಂಯೋಜನ ॥ಪ॥

ಜೇನಿನ ಝೇಂಕಾರ ಶ್ರುತಿ ಸಮ್ಮಿಲನ
ಪದಲಯ ವಿನ್ಯಾಸ ಮೃದು ಸಂಕ್ರಮಣ
ಹೆಜ್ಜೆಯ ಗೆಜ್ಜೆಯ ನುಡಿ ಸಮ್ಮೇಳನ
ಝಣರು ಝಣರು ಝಂ ಝಂ ಝಂ ವಾದ ॥1॥

ಚಾರಿ ಚರಣ ಗತಿ ಷಡ್ಜ ಪಂಚಮ
ಆಂಗಿಕಾಭಿನಯ ವಾಚಿಕ ಸುಗಮ
ಸಾತ್ವಿಕ ಆಹಾರ್ಯ ನಾಟ್ಯಪಾಠ್ಯಗುಣ
ಧಿಕಿಟ ಧಿಕಿಟ ತೋಂ ತೋಂ ತೋಂ ತನನ ॥2॥

ನವಿಲಿನ ನರ್ತನ ದೈವತ ಮಿಲನ
ಸರ್ಪಗತಿಯಲ್ಲಿ ಕಾಕು ಸಂಚಲನ
ರುದ್ರತಾಂಡವದಿ ಕಂಪಿತ ವರ್ಣ
ಢಂ ಢಂ ಢಮ ಢಮ ಡಿಂಡಿಮ ಬಾಜನ ॥3॥

**ಹಾರುತಿದೇ ..... !**

ಹಾರುತಿದೇ....
ಹಂಸೆಯು ಗಗನದಿ
ಹಾರುತಿದೆ

ಒಕ್ಕೊರಲಲಿ
ಉಲಿದಾಡುತ ಹಾಡುತ
ದಿಕ್ಕಿನ ತೆಕ್ಕೆಯ
ಸೇರುತಿದೆ

ನೀಲಾಕಾಶದ
ಕಡಲಿನ ಒಡಲಲಿ
ನಿಭಿಡೆ ನಿರಾಳದಿ
ಈಸುತಿದೆ

ತೆರೆ ತೆರೆ ಮೇಗಡೆ
ತೇಲುತ ತೇಲುತ
ತಾವರೆ ತೇರನು
ಏರುತಿದೆ

ಹಕ್ಕಿಯು ತನ್ನಯ
ರೆಕ್ಕೆಯ ಕೆದರಿ
ಚುಕ್ಕಿಗಳೆಡೆ
ಚಕ್ಕಂದವನಾಡಲು

ಅಕ್ಕನ ಮಗಳೇ
ಬೆಕ್ಕಿನ ಮರಿಯೇ
ಕೊಕ್ಕನು ತೆರೆ
ಮುತ್ತಿಕ್ಕುವೆನೆನುತೆ
ಹಾರುತಿದೇ ಹಂಸೆಯು ಗಗನದಿ ಹಾರುತಿದೆ

**'ಬಹುಶಃ' ಎಂಬುದು ಭರವಸೆಯ ಆಯ್ಕೆ**

ಭರವಸೆ ತನಗಾಗಿ ಆಯುವುದು
'ಬಹುಶಃ' ಎಂಬ ಸಣ್ಣ ಶಬ್ದವನ್ನು.

ಅಪರಾಧವೇ ಸಂಘಟಿಸಡೆಯಲ್ಲಿ ಶೋಧನೆಯ ಸಲುವಾಗಿ,
ಸಮವಸ್ತ್ರಧಾರಿಯೊಬ್ಬ ಬಾಗಿಲು ತಟ್ಟುತ್ತಾನೆ ಸರಿರಾತ್ರಿಯಲ್ಲಿ
ಎಂದಿಟ್ಟುಕೊಳ್ಳಿ.

ಆಗ,
ಕಗ್ಗತ್ತಲ ಮೂಲೆಯಲ್ಲಿ ಪಿಳಿಗಣ್ಣ ಮಿಟುಕಿಸುತ
ಕುಳಿತಿರುವ ಮನೆಬೆಕ್ಕಿನಂತೆ,
ಭರವಸೆ ಅಂದುಕೊಳ್ಳುತ್ತೆ –
'ಬಹುಶಃ' ಹೊರಗಡೆ ಗಾಳಿ ಘೀಳಿಡುತ್ತಿದೆ'

ಎಂದು,

ಬುಟ್ಟಿ ಹೂವಿನ ಮಟ್ಟಿಯಲ್ಲಿ ಸಮಾಧಿಸ್ಥವಾದ
ಸಂದಿಗ್ಧ ದೇವತೆಯ ಮುಂದೆ
ಕಿವಿಗಡಚಿಕ್ಕುವಂತೆ ಬಜಾಯಿಸುವ
ಭಜನೆ, ಪ್ರಾರ್ಥನೆಗಳ ಮಧ್ಯೆ,
ವನಸ್ಪತೀ ತುಪ್ಪದ ಕಟುವಾಸನೆಯ ನಡುವೆ,
ಅರೆ ಬೆಂದ ದೈವ ನೈವೇದ್ಯದೆಡೆಯಲ್ಲಿ
ಲೊಚಗುಡವ ಭಕ್ತಿಯಡಿಯಲ್ಲಿ
ಯಾವುದೋ ಮರೆತ ಮಂತ್ರದೋಪಾದಿಯಲ್ಲಿ

ಭರವಸೆ ನಿಧಾನವಾಗಿ ಕಳ್ಳಹೆಜ್ಜೆ ಹಾಕುತ್ತ ಬಂದಾಗ
'ಬಹುಶಃ' ಎಂಬುದು ಹೇಳುತ್ತೆ –
'ಅಬ್ಬಾ ! ಪ್ರಾಚೀನ ಪವಿತ್ರತೆ ಇನ್ನೂ ಕ್ವಚಿತ್ ಉಳಿದಿದೆಯಲ್ಲಾ !'
ಎಂದು

ಕಿಕ್ಕಿರಿದ ಮಂದಿ ಮಂದೆಯು ಹರಿವ ನಡುಬೀದಿಯಲ್ಲಿ
ಆಡುತ್ತಲೇ ಓಡಿಬರುತ್ತಿದ್ದ ಮುಗ್ಧ ಹಸುಗೂಸು ಹೆಣ್ಣು ಮಗುವನ್ನು
ಎಲ್ಲಿಂದಲೋ ಭರ್ರನೆ ಭೋರ್ಗರೆಯುತ್ತ ಬಂದ
ಕರುಣಾಹೀನ ಟ್ರಕ್ಕೊಂದು ಅಪ್ಪಚ್ಚಿಮಾಡಿತೆಂದಿಟ್ಟುಕೊಳ್ಳಿ.

ಆಗ,
ಮುಂದಕ್ಕೆ ಧಾವಿಸಿ ಬಂದ ಭರವಸೆ
ಅದೃಷ್ಟ ಮತ್ತು ಅಪಘಾತಗಳನ್ನು ಅಳವಡಿಸಿ ಅಲಂಕರಿಸಿದ್ದ
ಅಂಗಡಿ ಮುಂಗಟ್ಟುಗಳನ್ನು ಚೆಲ್ಲಾಪಿಲ್ಲಿ ಮಾಡಿ
ನೊರೆವಿರ ಮುದಿಗೂನಿ ಅಡಗೂಲಜ್ಜಿಯಂತೆ,
ಲಾರಿಯಡಿ ಜಜ್ಜಿ ಹೋಗಿದ್ದ ಹಸುಳೆ ಹೆಣವನ್ನು
ಹಿಡಿದೆತ್ತಿ ಎದೆಗಪ್ಪಿಕೊಳ್ಳುತ್ತದೆ !

ಬಾಲ್ಯದಲ್ಲಿ ಬಕುಲ ವೃಕ್ಷದಡಿಯಲ್ಲಿ ಆಡುವಾಗ
ಅಕಸ್ಮಾತ್ ಉದುರಿದ ಹೂವೊಂದರಂತೆ
ಆವರಿಸುತ್ತದೆ 'ಬಹುಶಃ' ಎಂಬ ಶಬ್ದ !

'ಬಹುಶಃ' ಎನ್ನುವುದು
ಪರೀಕ್ಷೆಯಲ್ಲಿ ಬಹು ಅಂಕ ಗಳಿಸದ ಉದ್ವಿಗ್ನ ವಿದ್ಯಾರ್ಥಿ
ಕಿಟಕಿ ಕದಗಳಿಗೆ ಬೀರಿದ ಕಲ್ಲಿನಂತೆ !

'ಬಹುಶಃ' – ಎನ್ನುವುದು
ಪ್ರಿಯತಮನ ಇರವ ಕಾಣದೆ ತಪಿಪ, ವಿರಹಿನೋರ್ವಳ ಮನದ
ವೇದನೆಯ ನೆನಹುಗಳ ಕಾಣಿಸುವ ಕಿಟಕಿಯಂತೆ !

'ಬಹುಶಃ' – ಎನ್ನುವುದು
ನೇಹಿಗ ಹೆಣಕೆ ಬೆಂಕಿಕೊಟ್ಟಕೂಡಲೆ
ಉರಿಯೊಡನೆ ಹರಿಬಿಟ್ಟ ಸ್ನೇಹದಂತೆ !
ಚಿತೆ ಉರಿಯುತ್ತಿದ್ದರೂ, ಅಸ್ಥಿಸಂಚಯಕಾರ್ಯ ಆಗಿಲ್ಲದಿದ್ದರೂ
ಬೂದಿಯಾಗದೆ ಉಳಿದ ಮೂಳೆಯಂತೆ 1

ಭರವಸೆ ಆರಿಸಿಕೊಂಡಿದೆ ಕ್ಷುದ್ರಕ್ಷುಲ್ಲಕ

'ಬಹುಶಃ'
ಎಂಬ ಶಬ್ದವನ್ನು

ಮೂಲ : ಹಿಂದಿ ಅಶೋಕ್ ಕುಮಾರ್ ವಾಜಪೇಯಿ

**ಹಾರಯಿಕೆ**

ಚೆಲುವು ಚಿಮ್ಮುತಿರಲಿ ! ಎಲ್ಲೆಡೆಯು
ಒಲವೆ ಮೂಡಿ ಬರಲಿ
ಬಾನಾಡಿಯಂತೆ ತೇಲಾಡುವಂತೆ
ನಿಶ್ಚಿಂತ ನಿಲವು ಇರಲಿ

ನೆಲಮುಗಿಲಿನಲ್ಲಿ ಜಲಧಾರೆಯಲ್ಲಿ
ಎಲೆಮಿಂಚು ಕುಂಚದಲ್ಲಿ
ಹೂ ಅರಳುವಲ್ಲಿ ಮಧು ಸುರಿಯುವಲ್ಲಿ
ಮುತ್ತಿಡುವ ದುಂಬಿಗಳಲಿ

ಎಲ್ಲೆಲ್ಲು ಒಲವೆ ನೆಲೆ ನಿಲ್ಲುತಿರಲಿ
ದ್ವೇಷಾಂಶ ದೂರವಿರಲಿ
ಅನುರಾಗ ಸೂತ್ರ ಸೌಭದ್ರವಿರಲಿ
ಸುಖಶಾಂತಿ ತೃಪ್ತಿ ತರಲಿ

'ಓಂ ಸಹನಾವವತು ಸಹನೌಭುನಕ್ತು
ಸಹವೀರ್ಯಂ ಕರವಾವಹೈ
ತೇಜಸ್ವಿನಾವಧೀತಮಸ್ತು
ಮಾವದ್ವಿಷಾವಹೈ
ಓಂ ಶಾಂತಿಃ ಶಾಂತಿಃ ಶಾಂತಿಃ'

## ಆಶಯ

ನೀನೆ ಭಾವ ನಾನೆ ಭಾಷೆ
ಭಾವಗೀತವಾಗುವಾ
ನೀನು ಹೆಜ್ಜೆ ನಾನು ಗೆಜ್ಜೆ
ನಾಟ್ಯವೇದವಾಗುವಾ

ನಾನು ಹೂವು ನೀನು ದುಂಬಿ
ಮಾಧುರ್ಯವ ಸವಿಯುವಾ
ನೀನೆ ಒಲವು ನಾನೆ ಚೆಲುವು
ಆನಂದವೆ ಆಗುವಾ

ನೀನು ಬಾನು ನಾನು ಬಯಲು
ಬೆರೆದು ಬೆಳಕ ನೀಡುವಾ
ನಾನು ಮೋಡ ನೀನು ಮಿಂಚು
ಜೇನುಮಳೆಯ ಕರೆಯುವಾ

ಕರುನಾಡಿನ ಬಂಡೆಗಳಲಿ
ಶಾಸನಗಳೆ ಆಗುವಾ
ಕನ್ನಡಮ್ಮನಡಿಗಳಿಗೆ
ಚಂದನವನೆ ಚೆಲ್ಲುವಾ

**ಸಂಸಾರ ಸಂಗೀತದಂತೆ**

ಸಂಸಾರ ಸಂಗೀತದಂತೆ
ಪ್ರೀತಿಯೆ ಅದರ ಶ್ರುತಿಯಂತೆ

ಸತಿಪತಿಗಳೊಲವೆ ರಾಗ
ನಲ್ನುಡಿಯೆ ತಾಳಮೇಳ
ಸಲ್ಲಾಪ ಪಲುಕು ಅಲ್ಲಿ
ಲಯ ಗತಿಯು ಬಾಳಜೋಡಿ

ಅನ್ಯೋನ್ಯ ಪ್ರೇಮ ಯತಿಯು
ದಾಂಪತ್ಯ ಯೋಗ ಜತಿಯು
ಸಂಗತಿಯು ಮಾರ್ಗದೇಸಿ
ಸುಸ್ಮಿತವು ಭೀಮ್ ಪಲಾಸಿ

ಅಲರಿಪುವು ಪುತ್ರನಲ್ಲಿ
ತಿಲ್ಲಾನ ಪುತ್ರಿ ಬಳಿ
ಸಾಹಿತ್ಯ ಶ್ರೇಯದಲ್ಲಿ
ಸಾಗುವುದು ನಾದದಲ್ಲಿ

## ಬಂದಿದೇ ಹಬ್ಬ ಬಂದಿದೆ

ಬಂದಿದೇ ಹಬ್ಬ ಬಂದಿದೆ
ಸಂಕ್ರಾಂತಿ ಬಂದಿದೆ
ಸಂಕ್ರಮಣ ಬಂದಿದೆ
ಸುಗ್ಗಿಗೆ ಶುಭ ನಾಂದಿಯನ್ನು
ಹಾಡ ಹರಿಸಿ ಬಂದಿದೆ

ಗರುಕೆ ದೋಣಿ ಎಲೆಗಳಲ್ಲಿ
ಇಬ್ಬಣಿ ಮಣಿ ದೀಪಮಾಲೆ
ಮಿರುಮಿರುಗಿಸಿ ಹೊಂಬಿಸಲಲಿ
ಸಂಗಮಿಸುತೆ ಸಂಭ್ರಮದಲಿ ॥ಬಂದಿದೇ ಹಬ್ಬ ಬಂದಿದೆ॥

ಹೂವು ಹೂವು ಹೂವು ಚೆಲ್ಲಿ
ಹೊಂಬಾಳೆಯ ರಂಗವಲ್ಲಿ
ನೀಲಿಯ ಆಕಾಶದಲ್ಲಿ
ಬೆಳ್ಳಕ್ಕಿಯ ಸಾಲ ರಚಿಸಿ ॥ಬಂದಿದೇ ಹಬ್ಬ ಬಂದಿದೆ॥

ಮಾಗಿ ಚಳಿಗೆ ಪುಂಗಿಯೂದಿ

ಅದರ ಬೆಂಗೆ ಸುಗ್ಗಿ ಸೂಡಿ
ರಾಗ ರಸಿಕನಂದದ
ರಾಸಕ್ರೀಡೆಯನ್ನು ಆಡಿ ॥ಬಂದಿದೇ ಹಬ್ಬ ಬಂದಿದೆ॥

ಹಚ್ಚ ಹಸುರ ಹಚ್ಚಡದಲಿ
ಬೆಚ್ಚನೆ ಪಿಸುಮಾತನಾಡಿ
ಹುಚ್ಚು ಹೊಳೆಯ ಹಸಿರ ಹರಿಸಿ
ಕಾಶ್ಮೀರದ ಚವರಿ ಬೀಸಿ ॥ಬಂದಿದೇ ಹಬ್ಬ ಬಂದಿದೆ॥

ಅಂಬೆಗಾಲ ಕಂಡರಿಗೆ
ಆನಂದದ ಚೆಣ್ಣರಿಗೆ
ಬೆಳ್ಳಿ ಬೊಂಬೆಯನ್ನು ಕೊಟ್ಟು
ಎಳ್ಳು ಬೆಲ್ಲ ಕೊಬ್ಬರಿಯಿಟ್ಟು ॥ಬಂದಿದೇ ಹಬ್ಬ ಬಂದಿದೆ॥

ತೆರ್ಕ್ಯಾಲ ಕೃಷ್ಣನನ್ನು
ತಳಿಗೆ ತೋರಿ ಕರೆವುತಾ
ಬಾರೊ ಕೃಷ್ಣ ಕೃಷ್ಣ ಬಾರೊ
ಮುದ್ದು ಮಗುವೆ ಬಾರೊ ಎನುತ ॥ಬಂದಿದೇ ಹಬ್ಬ ಬಂದಿದೆ॥

## ಅಣ್ಣ ಬಂದ ಧರೆಗೆ

ಎಲ್ಲರಣ್ಣ ಜಗದಣ್ಣ ಬಂದ ಬಸವಣ್ಣ ಬಂದ ಧರೆಗೆ
ಸತ್ಯವನೆ ಬಿತ್ತಿ ಸೌಹಾರ್ದ ಬೆಳೆದು ಮನುಷ್ಯತ್ವವಿತ್ತ ಜಗಕೆ
ಕೀಳು ಮೇಲು ಕೊಳೆಯನ್ನು ತೊಳೆದ ಸಮತೆಯನು ಸಾರಿ ನಿಂದ ॥
ಸರ್ವರಿಗು ಇಹುದು ಸಮಪಾಲು ಎಂದ ದಲಿತತೋದಯಕೆ ನಾಂದಿಯಾದ ॥1॥

ಶತಶತಗಳಿಂದ ಶೋಷಣೆಗೆ ಸಿಕ್ಕ ಹೆಣ್ಣಿನಾ ಬಂಧ ಬಿಡಿಸಿ
ಅವಳೆಮ್ಮ ತಾಯಿ, ಕಾರುಣ್ಯಮೂರ್ತಿ ದಿವ್ಯಾಥ್ಮಳೆಂದ ಭಜಿಸಿ ॥
ಮೌಢ್ಯವನು ದೂಡಿ ಮಮತೆಯನು ತುಂಬಿ ಮನುಕುಲಕೆ ಕೊಟ್ಟ ಬೆಳಕು
ಕಾಯಕವು ತಾನೆ ಕೈಲಾಸವೆಂದ ದಾಸೋಹ ಶ್ರೇಷ್ಠವೆಂದ ॥2॥

ದೇವನಿಹನು ಅವನೊಬ್ಬ ತಂದೆ ಕಲ್ಲಲ್ಲ ಮಣ್ಣು ಅಲ್ಲ
ಮಾನವನ ದೇಹ ಅವನಿರುವ ನಿಲಯ ಪ್ರೇಮದಲಿ ಪೂಜಿಸೆಂದ ॥
ವಚನವೆಂಬ ಹೊಸ ರಚನೆಗೈದು ಕಾವ್ಯಕ್ಕೆ ಕೊಟ್ಟ ತಿರುವು
ಆಡುನುಡಿಯ ತಾ ದುಡಿಸಿಕೊಂಡು ಜನ ಭಾಷೆಗಿತ್ತ ಕಸುವು ॥3॥

ಕಳಬೇಡ ನೀ ಕೊಲ್ಲಬೇಡ ಹುಸಿಯನ್ನು ನುಡಿಯಬೇಡ
ಮುನಿಯಬೇಡ ಅಸಹ್ಯಬೇಡ, ಅನ್ಯರಲಿ ದೂಷ್ಯಬೇಡ ॥
ನಿನ್ನನ್ನು ನೀನು ತಿದ್ದಿಕೋ ಎಂದ ಅಹಂಕಾರ ಬೇಡವೆಂದ
ಸ್ವಾತ್ಮ ಶಿಕ್ಷಣದಿ ಸ್ವಾನುಭಾವದಲಿ ನೀ ದೇವನಾಗು ಎಂದ ॥4॥

ಸತ್ತ ಮೇಲೆ ತೆರೆಯುವುದು ಎಂಬ ಭ್ರಮೆ ಬೇಡ ಸಗ್ಗಬೇಡ
ಇಹದಲ್ಲೆ ಸ್ವರ್ಗ ಇಹದಲ್ಲೆ ನರಕ ಹಸಗೈಯೊ ಬಾಳು ಬದುಕ ॥
ನುಡಿದಂತೆ ನಡೆಯೊ ಮಡಿಯಾಗಿ ಬಾಳೊ ಮನಮೆಚ್ಚುವಂತೆ ಬದುಕು
ಸಕಲ ಜೀವಕ್ಕು ಲೇಸನ್ನೆ ಬಯಸು ದಯೆ ಧರ್ಮಮೂಲವೆಂದ ॥5॥

ಭಕ್ತಿಯೆಂಬುದದು ಯುಕ್ತಿಯಲ್ಲ ವಿಶ್ವಾತ್ಮ ಶಕ್ತಿಯನ್ನು
ತನ್ನೆಡೆಗೆ ಸೆಳೆವ ಬಲಯುಕ್ತ ಸೂತ್ರ ನಂಬುಗೆಯು ಬೇಕು ಎಂದ
ನೈರ್ಮಲ್ಯವಿರಲಿ, ನಿಷ್ಕಾಮವರಿಲಿ, ನಿಷ್ಠೆಯಾ ಮುಷ್ಠಿಯಿರಲಿ
ಕಷ್ಟವಲ್ಲ ಶಿವ ಸತ್ಯಸೇತು ಇಹಪರಗಳಾತ್ಮ ಬಳ್ಳಿ ॥6॥

ಮರದ ನೆಳಿನಲ್ಲಿ ನಿನ್ನ ನೆರಳ ನೀ ಹುಡುಕುವಂಥ ಜಾಣ
ನೀನಾಗಬೇಡ, ತಾನಾಗು ಎಲ್ಲ ಜಗದೊಲವೆ ದೇವ ಕಾಣಾ
ಛಲಬೇಕು ಎಂದ, ಬಲಬೇಕು ಎಂದ ಕೆಟ್ಟವಗೆ ಕೆಳೆಯ ಇಲ್ಲ
ಎಂದೆಲ್ಲ ನುಡಿದ, ನುಡಿದಂತೆ ನಡೆದ ಎಲ್ಲರಿಗು ಆದ ಬೆಲ್ಲ ॥7॥

ಸಂಗನಲ್ಲಿ ನಿಸ್ಸಂಗವಾಗಿ ಸರ್ವಾಂಗಲಿಂಗವಾಗಿ
ಬೆಳಕಿನಲ್ಲಿ ಹೊಂಬೆಳಕು ಬೆರೆವ ಚೆಂಬೆಳಕು ತೇಜವಾಗಿ
ಐಕ್ಯಾನುಸಂಧಿ ಲಯಲೀನವಾಯ್ತು ವಿಶ್ವಾತ್ಮನಲ್ಲಿ ಬೆರೆದು
ಶಿವ–ಶೂನ್ಯವಾದ ಬಸವಾತ್ಮಕಿದುವೆ ಅಷ್ಟಕವು ಮೀಸಲಹುದು ॥8॥

**ಅತ್ತಿಮಬ್ಬೆ ಕುರಿತು**

ಅಬ್ಬೆ,
ನಾನೆಂಬ ಬೀಜ ಮೊಳೆತು ಸಸ್ಯ
ವಾದದ್ದು ನಿನ್ನ ವಾತ್ಸಲ್ಯ ವಕ್ಷದಲ್ಲಿ
ನಿನ್ನೆದೆಯ ಪ್ರೇಮಮಧು ಪೀಯೂಷ
ಪಾನವಗೈದೆ ನಿನ್ನಣುಗನಣ್ಣಿಗನಾಗಿ !

ಮತ್ತೆ,

ಖ್ಯಾತಿವೆತ್ತವನಾದೆ ಪಡೆವಳ ತೈಲನೆಂದು...

ಅಂದು,

ನನ್ನ ಹಸುಳೆತನದಲಿ ಕಂಡ ದೃಶ್ಯವನು
ನೆನೆದಾಗ ನಿನ್ನಪ್ರತಿಮ ಪ್ರತಿಮೆಯೊಂದು
ಧುತ್ತನೆ ನನ್ನೆದುರು ಬಂದು ನಿಲ್ಲುತ್ತದೆ !

ನಿನ್ನ ಸುಡಲೆತ್ನಿಸಿದ,
ಅರಳಿ, ಆಲ, ಶ್ರೀಗಂಧ ಮೊದ
ಲಾದ ಕಟ್ಟಿಗೆಗಳ ಅಟ್ಟಣೆಯ ಮೇಲೆ
ನೀನು ನಿಂತಿದ್ದೆ,

ಅವುಗಳ ಜ್ವಾಲೆ,
ಕೆನ್ನಾಲಗೆಯ ಚಾಚಿ, ಸುತ್ತಿ ಬಳಸಿದರೂ ನೀ
ಕರಿಕಾಗಲಿಲ್ಲ, ಬೆಂದು ಬೂದಿಯೂ ಆಗಲಿಲ್ಲ !
ಬಿಳಿಸೀರೆ, ಬಿಳಿಯಕುಪ್ಪಸ, ಹೆರಳ ಬಿಚ್ಚಿದ
ಕರಿಯ ಸೋರ್ಮುಡಿಯ ಸೋಗೆ
ಧರಿಸಿ ನಿಂತೆ ಧೀರ ಮಂದರದಂತೆ !
ಕಾಳ್ಗಿಚ್ಚು ಕಾಡ ಸುಟ್ಟಿತಲ್ಲದೆ ಬೆಟ್ಟವನ್ನಲ್ಲ.

ಅಬ್ಬೆ,
ನನ್ನ ಪ್ರಬುದ್ಧಮಾನಾವಸ್ಥೆಯಲ್ಲಿ

ನಾನು
ಪ್ರಕ್ಷುಬ್ಧ ಸಾಗರದ ನಿಕ್ಷಿಪ್ತ ನವರತ್ನವಾಗಿದ್ದೆ;
ಮುದುವೊಳಲ ಕವಿ ರನ್ನ ಕನ್ನಡದ ಕವಿರತ್ನ
ಎಂಬೆನಿತೊ ಹೊಗಳಿಕೆಗೆ ಪಾತ್ರನಾಗಿದ್ದೆ
ನಿನ್ನಕ್ಕರೆಯ ಸಕ್ಕರೆಯನುಂಡು !
ಅಜಿತನಾಶೀರ್ವಾದ, ನಿನ್ನೊಲವು,
ಚಾಮುಂಡನೌದಾರ್ಯ
ಮುಪ್ಪುರಿಗೊಂಡು ಚಪ್ಪರಿಸಿದೆ
ಬಂತು ಕನ್ನಡ ನುಡಿಗೆ ಕಸುವು ಕಳೆ ಹಸಿರು ಬೆಳೆ
ವಾಗ್ದೇವಿಯ ಭಂಡಾರವನೊಡೆದ ಕೆಚ್ಚು ಧೀಮಂತತೆ !

ಸಾವಿರದ ಅಯ್ನೂರು ಜಿನರ ಹೆತ್ತದರಿಂದೆ
ಜಿನ ಜನನಿ ನೀನಾದೆ !
ದೊರೆಕೊಂಡತ್ತು ಕನ್ನಡದ ಶ್ರೀಮಂತತೆ !
ದಾನಚಿಂತಮಣಿಯೆ,
ಪರಮನಿಗು ಸಂಪ್ರಾಪ್ತಿ ಸಾಹಿತ್ಯ ಸಂಸ್ಕೃತಿ,
ನನಗೆ ಪ್ರಾಪ್ತಿಸಿತಂದು 'ಕವಿ ಚಕ್ರವರ್ತಿ'

ಅಬ್ಬೆ,
ಅರುಹಂತನರ್ಹತೆ ಸಿದ್ಧಪುರುಷನ ಸಿದ್ಧಿ
ಆಚಾರ್ಯನೌದಾರ್ಯ ಉಪಾದ್ಯಾಯನುಪದೇಶ
ಮಿಗಿಲಾದ ಸರ್ವಸಾಧುವಿನ ಸಾಧುತ್ವ ಸತ್ವಗುಣ
ನಿನ್ನಲ್ಲಿ ಸಮ್ಮಿಲಿಸಿತಮೃತಸ್ಕಂದಿನ್
ಚಿತ್ತ ಚೈತ್ಯಾಲಯದಲ್ಲಿ ಸಾವಿರದ ಕಂಬಗಳ
ಜೈನ ಬಸದಿ

## ಸಂಸಾರವೆಂಬ ಹೆಣಬಿದ್ದರೆ !

"ಸಂಸಾರವೆಂಬ ಹೆಣ ಬಿದ್ದಿರೆ
ತಿನಬಂದ ನಾಯ ಜಗಳವ ನೋಡಿರೆ !
ನಾಯ ಜಗಳವ ಕಂಡು ಹೆಣ ನಗುತ್ತಿದೆ
ಗೊಹೇಶ್ವರಲಿಂಗವಲ್ಲಿಲ್ಲ ಕಾಣಿರಯ್ಯಾ

ಪ್ರಭು ವಾಣಿಗೆ
ಪಕ್ಷಪಾತವಿಲ್ಲ ಪಾಷಂಡಿತನವಿಲಲ
ಅದು ಪಕ್ಷಾಂತರಿಯಂತೂ
ಅಲ್ಲವೇ ಅಲ್ಲ.
ಎಂತಹ ವಿಪರ್ಯಾಸ ಇದು
ಹೆಣಕ್ಕಾಗಿ ಜಗಳ !
ಈಗಿದ್ದು ಮರುಘಳಿಗೆಯಲ್ಲೇ
ಕೊಳೆತು ನಾರುವ ಹೆಣಕ್ಕಾಗಿ
ನಾಯಿ ಜಗಳ ೧

ಬೋಫರ್ಸಿನ ಪರ್ಸಿಗಾಗಿ
ಹವಾಲಾ ಬಿಲಕ್ಕಾಗಿ
ರಸಗೊಬ್ಬರದ ಕಸಕ್ಕಾಗಿ
ಜಾಗತೀಕರಣಕ್ಕಾಗಿ
ಕಿ–ತ್ತಾಟ !

ನಾಯ –
ಕರುಗಳ ನಿತ್ಯ ಜಗಳ !
ಮತ್ತೆ,

ನೆತ್ತರಿನ ಶ್ರೋತಕ್ಕೆ
ಮಾಂಸಖಂಡದ ಕಟ್ಟೆ
ಮದ್ದು ಗುಂಡು ಬಾಂಬುಗಳಂಕಾರ
ಹೆಣಕ್ಕೆ ಶೃಂಗಾರ !

ಯಾವ ದೇವನ ತೃಪ್ತಿಗಾಗಿ
ಈ ಮಾರಣ ಹೋಮ ?
ಯಾವಾಗಲೂ,
ಜ್ಯೋತಿ ಬೆಳಕಾಗಬೇಕು
ಉರಿಕೋಲ್ಲಿ ಆಗಬಾರದು !

ಮನೆಯೊಳಗಣ ಕಿಚ್ಚು
ಮನೆಯ ಸುಟ್ಟಲ್ಲದೆ
ನೆರಮನೆಯ ಸುಡದು !

ನನ್ನನ್ನು ಬಚ್ಚಿಟ್ಟುಕೊಂಡಿರುವ ಗೋಡೆಗೂ
ಕಚ್ಚಿ ಹೆಚ್ಚಿದೆ ಕಿಚ್ಚು

ನಾನು ಕರಿಗೊಂಡು ಕರಿಕಾದ
ಕಾರ್ಬನ್ ಪೇಪರ್ !
ಕಿಟ್ಟ ಕಟ್ಟಿದ ದೀಪದಕುಡಿ !

ಜುಟ್ಟಿನಲಿ ಜಟೆಯಲ್ಲಿ
ದಾಡಿ ದೊಗಲಂಗಿಯಲಿ
ಅಜ್ಞಾತವಾಸಿ !

ಸಕಲ ಪ್ರಜಾಪ್ರಭುತ್ವವನ್ನು
ಒಳಗೊಳಗೇ ಕೊರೆಯುತ್ತಿರುವ

ಜಂತೆಹುಳುವಿನ ಬಂಧು
ನಾನೊಂದು ಬೊಂತೆ !

ನನ್ನ ಮನೆಯಲ್ಲಿ
ದೀಪವಿದೆ
ಬೆಳಕಿಲ್ಲ !
ಅನ್ನವಿದೆ
ಬಾಯಿಲ್ಲ !

ನನ್ನ ಮೊಮ್ಮಗ ಆಶು ಕೇಳಿದ !
ತಾತ,
ನಾನು ಕಾಲೇಜಿಗೆ ಹೋಗುವಾಗ
ನಿತ್ಯವೂ ಗೋಡೆಗಳ ನಡುವೆ ನೋಡುವೆ
ಅವುಗಳಲಿ
ಕಿಟಕಿ ಕಿಂಡಿಗಳಿವೆ
ಕವಾಟಗಳಿವೆ
ಬೆಳಕು ಹಾಯಬಲ್ಲ ಎಷ್ಟೋ ಗವಾಕ್ಷಗಳಿವೆ

ಆದರೆ,
ಅವೆಲ್ಲಾ ಮುಚ್ಚಿ ಮುದುಡಿವೆ
ಗೆದ್ದಲು ತಿಂದೊ
ಅಥವಾ

ಜಂಗು ಹಿಡಿದೊ
ಹಾ ಳಾ ಗಿ ವೆ !
ಅವುಗಳು ರಿಪೇರಿ

ಮುಂದಿನ ಯುಗಾದಿಗೆ
ಹೌದೇ ತಾತ ? ? ? ?

*****

ಏಜ್‌ಗ್ಯಾಪ್‌ಗೆ ನಕ್ಕೆ
ಇಪ್ಪತ್ತೊಂದನೆಯ ಶತಮಾನದ ಬೆಳಕಿನತ್ತ
ನನ್ನ ದಿಟ್ಟಿಯನ್ನಟ್ಟುತ್ತ ಕುಳಿತೆ !

## ಆರದಿರು ಹಣತೆ

ಆರದಿರು ಆರದಿರು ಆರದಿರು ಹಣತೆ ॥
ಆರದಿರು ಓ ವಿಶ್ವ ವೀರಶೈವದ ಬೆಳಕೆ

ಈಶಾನ ತತ್ಪುರುಷ ಪರಮ ಸದ್ಯೋಜಾತ
ವಾಮದೇವಘೋರ ಪಂಚಮುಖದಿಂದೆ
ಜನಿಯಿಸಿದ ಜಗದಾದಿ ಚಿಜ್ಯೋತಿ ಚೇತನವೆ
ಪ್ರಜ್ವಲಿಸು ಪ್ರಸ್ಫುರಿಸು ದಿವ್ಯದೀಧಿತಿಯಾಗಿ ॥೧॥

ಅಕ್ಕ ಮುಕ್ತಾಯಿಯರು ಬಸವೇಶ ಸಕಲೇಶ
ಪ್ರಭುದೇವ ಸೊನ್ನಲಿಗೆ ಸಿದ್ಧರಾಮ
ಚೆನ್ನಬಸವಾದಿಗಳು ಶರಣ ಶರಣೆಯರೆರೆದ
ಕರುಣೆಯೊಲವಿನ ತೈಲ ತುಂಬಿರುವ ಹಣತೆ ॥೨॥

ಎಡೆಯೂರ ಜಡೆಮುಡಿಯ ವರಸಿದ್ಧಲಿಂಗಯತಿ
ಬೋಳ ಬಸವಾದಿಗಳು ನೂರೊಂದು ಅಮರಗಣ
ಅನವರತ ಪೋಷಿಸಿದ ಪುಣ್ಯಪುಂಜದ ಬೆಳಸೆ
ದಿಟವಾಗು ಸ್ಫುಟವಾಗು ದಿವ್ಯತೇಜೋರಾಶಿ ವಾರಾಸಿಯಾಗು ॥೩॥

ಆರದಿರು ವಿಶ್ವದಾ ವೀರಶೈವದ ಕೆಚ್ಚೆ
ಆರದಿರು ಜನಮನದ ಸ್ವಾತಂತ್ರ್ಯದಿಚ್ಛೆ
ಆರದಿರು ಲಿಂಗಾಂಗಿ ಸತ್ಸಂಗ ತೇಜವೇ
ಆರದಿರು ಆತ್ಮರತ ಪರತರದ ಜ್ಯೋತಿಯೇ ॥೪॥

ಆರದಿರು ಆರದಿರು ಆರದಿರು ಹಣತೆ
ಆರದಿರು ಓ ವಿಶ್ವ ವೀರಶೈವದ ಬೆಳಕೆ ॥

**ಶ್ರೀ ಚೆನ್ನಕೇಶವಾ**

ಶ್ರೀ ಚೆನ್ನಕೇಶವಾ
ಸಕಲ ಕಳಾರ್ಣವ
ವಿಮಲ ಚರಣತಲ
ಸನ್ನುತ ವಿಭವ ॥ ಶ್ರೀ ಚೆನ್ನಕೇಶವಾ ॥

ಶಂಕ ಚಕ್ರಧರ ಶಾಲಿನಿ ಶಾರ್ಙ್ಗವ
ದೀರ್ಘಾಲಿಂಗ ಪುಣ್ಯ ಪ್ರಭಾವ
ಕೋಟಿ ಸೂರ್ಯ ಪ್ರಭಾಮಯ ಮಂಡಲ
ವರದ ಹಸ್ತ ಶ್ರೀ ಕರುಣ ಪ್ರಾಂಜಲ ॥ ಶ್ರೀ ಚೆನ್ನಕೇಶವಾ ॥

ಅಣುರೇಣುವಿನ ಅಂತರ್ಯ ದನ
ಮುಗ್ಧ ಮನೋಹರ ಸೌಂದರ್ಯ ವದನ
ವಿಶ್ವಮೋಹನ ಸಕಲ ಕಾರಣ
ತ್ರಿಜಗದ್ವಂದಿತ ಪಾವಚನ ಚರಣ ॥ ಶ್ರೀ ಚೆನ್ನಕೇಶವಾ ॥

## ಸಂವಾದ

ಅಕ್ಕನ ಮಗಳೆ ನೀ ನಕ್ಕರೆ ಸುರಿದಾವೆ
ಮುಕ್ಕುಳಿಸಿ ನಗುವಾ ಮಲ್ಲಿಗೆ
ಮುಕ್ಕುಳಿಸಿ ನಗುವಾ ಮಲ್ಲೀಗೇ ಚೆಲ್ಯಾವೆ

ತಿಂಗಳ ಬೆಳಕು ತುಳುಕ್ಯಾವೆ

ಕಣ್ಣ ಮುಂದೊಮ್ಮೆ ಹೆಣ್ಣೆ ನೀ ಸುಳಿದಾರೆ
ಬೆಣ್ಣೇಯ ಮುದ್ದೇ ತೇಲ್ಯಾವೆ
ಬೆಣ್ಣೇಯ ಮುದ್ದೇ ತೇಲ್ಯಾವೆ ಮುಗಿಲಲ್ಲಿ
ಬೆಳ್ಳಕ್ಕಿ ಮಾಲೆ ಬೆಳೆದಾವೆ

ಹಾಗಲ್ಲ ಮಾವ ಹಾಲುಗಲ್ಲದ ಚೆಲುವ
ಯಾಲಕ್ಕಿ ಬಾಳೆ ತೊನೆದ್ಹಾಂಗೆ
ಯಾಲಕ್ಕಿ ಬಾಳೆ ತೊನೆದ್ಹಾಂಗೆ ಕೊಳದಾಗ ।
ಬೆಳ್ಳೀಯ ಮೀನು ಸುಳಿದ್ಹಾಂಗೆ

ಬಿರಿಹೂವ ಕಂಡು ಮರಿದುಂಬಿ ಬರುವಂತೆ

ಬರಬ್ಯಾಡ ಮಾವನ ಸನಿಹಾಕೆ
ಬರಬ್ಯಾಡ ಮಾವನ ಸನಿಹಾಕೆ ಮನದಾಗೆ
ಜೇನೀನ ಗೂಡು ಜುಮ್ಮೆಂದೊ ।

ನಿಂಬೆಯ ಹಣ್ಣಂಥಾ ತುಂಬೀದ ಮೆಯ್ಯೋಳೆ
ತೆರೆದ ತಾವರೆಯ ಮುಖದೋಳೆ
ಬಾರೆ ಬಾ ಬಾರೆ ಬನದಮ್ಮನ ತೇರೇ
ಬಳ್ಳೀಯ ತೋಳಾ ಬಿಗಿ ಬಾರೆ

ಬರುವೊಲ್ಲೆ ಮಾವಾ ನನ ಉಡೆಚೆರಗು ಜಾರೀತು
ತೊಡರಿಕ್ಕುತಾವೆ ಗರಿ ನೆರಿಗೆ । ಮಾವಯ್ಯ ।
ತೊಡರಿಕ್ಕುತಾವೆ ಗರಿ–ನೆರಿಗೆ.

ಸರಿಮಾಡುತೇನೇ ನನ್ನ ಶೆಲ್ಲೇಯ ಮರೆಮಾಡುತೇನೇ
ಉಡೆ ಉಟ್ಟು ಬಾರೆ ನಡೆ ಬೆಡಗಿ ! ಓ ಚೆಗರಿ !
ಉಂಟೆ ಉಟ್ಟು ಬಾರೇ ನಡೆ ಬೆಡಗಿ.

ಸೆರಗು ಜಾರ್‍ಯಾವೆ ಸೆಳ್ಳುಗುರು ಮೂಡ್ಯಾವೆ
ಚಿಕ್ಕೆಯ ಬಾನು ನಗುತಾದೆ ಮಾವಯ್ಯ !
ಚುಕ್ಕೇಯ ಬಾನು ನಗುತಾದೆ.

ನಕ್ಕಾರೆ ನಗಲೇಳೆ ತಕತಕ ಕುಣಿಯೋಣಾ
ತೆಕ್ಕೇಗೆ ಬರೆ ತಡೆಯಾದೆ ! ಚೆನ್ನಿ,
ತೆಕ್ಕೇಗೆ ಬಾರೇ ತಡೆಯಾದೆ.

ಕಳ್ಳನಾಗಾ ಬ್ಯಾಡ ಸುಳ್ಳಾಕಿ ಸುಳಿಬ್ಯಾಡಾ
ಒಳ್ಳೇನಲ್ಲೇನೋ ನನ ಮಾವ ! ನೀನು !
ಒಳ್ಳೆನಲ್ಲೇನೋ ನನ ಮಾವ,

ಸಾಕು ಮಾಡೇ ಜಾಣಿ ನಿನ್ಯಾಸದ ಆಟಾವ
ಮೀಟೂಂತ ಬಾರೆ ಕಿರುಗೆಜ್ಜೆ । ನನ್ನ ಕಬ್ಬೀನ್ ಚೆಣ್ಣಿ ।

ಕುಡಿಮೀಸೆ ಮಾವಾ ನೀ ನಡೆಸಿದ್ದೀಯೇನೇನೊ
ಹೆಂಗೆಂಗೊ ಆಗುತ್ತೆ ನುಡಿಲಾರೆ । ಮಾತಿನ ಜಾಣ ।
ನಂಗೆಂಗೊ ಆಗುತ್ತೆ ನುಡಿಲಾರೆ.

ಹೇಳೋದು ಬ್ಯಾಡ ಇನ್ ಕೇಳೋದು ಬ್ಯಾಡ
ನಾಡೇ ನಲಿವಂತೆ ಮಾಓಣ । ಓ ಹೆಣ್ಣೇ ।
ಜೋಡಿ ನಾವಾಗಿ ಬಾಳೋಣ.

ದೀವಳಿಗೆ ಹಬ್ಬದಾಗೆ ದೀಪಾವ ಹಚ್ಚೋಣ
ಒಂದಾಗಿ ಹಾಡಾ ಹಾಡೋಣ ! ನಾವ್
ಒಂದಾಗಿ ಹಾಡಾ ಹಾಡೋಣ

**ಕರುನಾಡಿನ ಸಿರಿ**

ಕರುನಾಡಿನ ಸಿರಿ ಕಣ್ಣಿವೆ ತೆರೆಯಿತು
ಅಲೆ ಅಲೆ ಅಲೆಗಳ ಮೇಲೆ
ಚೆಂಬೆಳಗೆಳೆಯೆಳೆ ಚಿಗುರೊಡೆಯಿತು ಅದೊ
ಹೂವಿ ಎಸಳಿನ ಮೇಲೆ

ಶಿಲ್ಪದ ಕಲ್ಪದ ನಾದದ ಜಲ್ಪದ
ಸಂಗೀತದ ಸೌರಭ ತಾನ
ಅಲರಿಪು ತಿಲ್ಲಾನ ರಂಗವಿಧಾನ
ನಾಟ್ಯಾಗಮದ ಉದ್ಯಾನ

ಕವಿಗಳು ಕಲಿಗಳು ರಸಋಷಿವರ್ಯರು
ಚಿತ್ರಚೈತ್ಯದೀ ನೆಲೆವೀಡು
ಸಗ್ಗವು ನಾಚುವ ಅಗ್ಗದ ನೆಲವೊ
ಸೊಬಗಿನ ಸುಗ್ಗಿಯ ತವರೂರು

ಗಂಗ ಕದಂಬ ಚಾಲುಕ್ಯರಸರು
ರಾಷ್ಟ್ರಕೂಟರಾಳಿದರಿಲ್ಲಿ
ಹೊಯ್ಸಳ ದೊರೆಗಳು ಕೆಳದಿಯ ಪ್ರಭುಗಳು
ವಿಜಯನಗರ ಮೆರೆದದ್ದಿಲ್ಲಿ !

ಮೈಸೂರಸರ ನಾಡು
ಕಿತ್ತೂರರಸಿಯ ಕರುಗೂಡು
ಮಾಗಡಿ ಕೆಂಪೇಗೌಡರ ಬೀಡು
ಕೊಡಗಿನ ವೀರರ ನೆಲೆವೀಡು

ಗತ ಇತಿಹಾಸವು ಮಣ್ಣಿನ ಕಣದಲಿ
ಕಲ್ಲಿನ ಬಂಡೆಯ ಮೇಲೆ
ಶಾಸನವಾಗಿದೆ ಘೋಷಣೆ ಕೊಡುತಿದೆ
ಕನ್ನಡ ನಾಡಿನ ಲೀಲೆ

## ಏನು ಚೆಲುವೆಯೇ ನೀನು !

ನಿನ್ನ ಬಣ್ಣಿಸಲೆನಗೆ ಸಿಂಗರದ ನುಡಿಯೇಕೆ ?
'ನೀ ಚೆಲುವೆ' ಎಂಬೊಂದು ನುಡಿ ಸಾಲದೆ ? ॥ಪ॥

ಕೋಗಿಲೆಯ ಕೂಜನಕೆ ಶ್ರುತಿ ತಂತಿ ಬೇಕೇನು ?
ಹಾಡಿದುದೆ ತಾ ಭಾವಗೀತೆಯಲ್ಲೇನು? ॥ಅ.ಪ॥

ಜಗದೊಲವು ಚೆಲುವೆಲ್ಲ ಎರಕಗೊಂಡಿಹ ದೇಹ
ಪ್ರೇಮಕಾರಂಜಿಯೊಲು ಪುಟಿವ ಮಾಟ
ಸೊಬಗು ಸೋರಿದೆ ಇಲ್ಲಿ ನಿನ್ನೆದೆಯ ಬದಿಯಲ್ಲಿ
ದಳದೆರೆದ ಹೂವಂತೆ ನಿನ್ನ ನೋಟ ॥೧॥

ಏನು ಚೆಲುವೆಯೆ ನೀನು ಏಳು ಬಣ್ಣದ ಬಿಲ್ಲು
ಕಣ್ಣುಗಳು ಸಾರ್ಥಕವು ನೀಲಾಂಜನೆ

ನಿನ್ನೊಂದು ನಗೆಗಾಗಿ ಶತಮಾನ ತಪಗೈವೆ
ಪ್ರೇಮದಧಿದೇವತೆಯೆ ಭಕುತ ನಾನು ॥೨॥

ನಾನೆಂಬುದೇನಿಲ್ಲ ನೀನು ನೀನೇ ಎಲ್ಲ
ನನ್ನ ಕನಸಿನ ರಾಣಿ ಕರಮುಗಿವೆನು
ನನ್ನದೆಂಬುದನೆಲ್ಲ ನಿನ್ನೊಡಲಿಗರ್ಪಿಸುವೆ
ನಿನ್ನಲ್ಲಿ ಒಡಬೆರೆದು ಐಕ್ಯನಹೆನು ॥೩॥

## ಸಂಕ್ರಾಂತಿ

ಸಂಕ್ರಾಂತಿ ಇದು ಸಂಕ್ರಾಂತಿ
ಹರಸಲು ಬಂದಿದೆ ಸುಖಶಾಂತಿ ॥ಪ॥

ವರುಷದ ಹರುಷದ ಸಂಕ್ರಾಂತಿ
ಬೆಳಕಿನ ಸಂಗಮ ಸಂಕ್ರಾಂತಿ ॥ಅನು.ಪ॥

ಲಂಗದ ಹುಡುಗಿಗೆ ಸೀರೆಯ ಉಡಿಸಿ
ಬಂಗಾರದ ಆಭರಣವ ತೊಡಿಸಿ
ತಳಿಗೆಯ ತುಂಬಿಸಿ ಎಳ್ಳು ಬೆಲ್ಲ
ಬೀರಿಸಿ ನಲಿಯುವ ಸಂಕ್ರಾಂತಿ ॥೧॥

ಮನೆ ಮನೆಯಂಗಳಾ ಕಾಮನಬಿಲ್ಲು
ಏಳು ಬಣ್ಣಗಳ ರಂಗೋಲಿ
ರಾಸಲೀಲೆಗೆ ಹಾಸು ಹಾಸಿದೊಲು
ವೇಷವ ಧರಿಸಿವೆ ಬೀದಿಗಳು ॥೨॥

ಉತ್ತರಾಯಣದ ಸಂಕ್ರಾಂತಿ
ಪುಣ್ಯಪ್ರದವಿದು ಸಂಕ್ರಾಂತಿ
ದೂರ ಸರಿಯುತಿದೆ ಮಾಗಿಚಳಿ
ನವ ಚೈತನ್ಯದ ಕಸು ತುಂಬಿ ॥೩॥

## ಸಂಕ್ರಾಂತಿ ಬಂದೈತೆ

ಊರು ಊರುಗಳಲ್ಲಿ
ಕೇರಿ ಸೂರುಗಳಲ್ಲಿ
ಸಾರುತ್ತ ಬಂದೈತೆ ಸಂಕ್ರಾಂತಿ ।

ಎಳ್ಳು ಬೆಲ್ಲ ತಿಂದು
ಒಳ್ಳೆ ಮಾತುಗಳಾಡಿ
ಮನ ಮನವ ತುಂಬಲಿ
ಸುಖ ಶಾಂತಿ ॥ಪ॥

ಕುಸುರೆಳ್ಳು ಒಣ ಕೊಬರಿ
ಹಸನಾದ ಹೊಸಬೆಲ್ಲ
ಸಕ್ಕರೆ ಅಚ್ಚು ಚಿಣಿ ಕಬ್ಬು ।

ಸಕ್ಕರೆ ಅಚ್ಚು ಚಿಣ್ ಕಬ್ಬು ಬೀರುತ್ತಾ
ಅಕ್ಕರೆಯ ಹೆಸಯ ಬರೆದಿದೆ ॥೧॥

ದನಕರು ಹಸು ಹೋರಿ ದವನದ ತುತ್ತೂರಿ
ಹೊಂಬಾಳೆ ಚವರಿ ಹಣೆ ಏರಿ ।
ಹೊಂಬಾಳೆ ಚವರಿ ಹಣೆ ಏರಿ ತೊನೆದಾಗ
ಗೊಂಡೆಯ ದಂಡೆ ನಲಿದಾವೊ ॥೨॥

ಮನೆಯ ಅಂಗಳದಲ್ಲಿ ಗೊನೆಯ ಬಾಳೇಹಣ್ಣು
ಗಂಗಳದ ತುಂಬ ಪೊಂಗಾಲು ।
ಗಂಗಳದ ತುಂಬ ಪೊಂಗಾಲು ತಂಬಿಟ್ಟು
ತಂಗೀಯ ತೌರೀಗೆ ಕರೆಸೈತೆ ॥೩॥

ಹೊಂಗೆಯ ನೆರಳಂತೆ ತುಮಗೆಯ ದಡದಂತೆ
ತಂಪು ಸಂಕ್ರಾಂತಿ ಬಂದೈತೆ ।
ತಂಪು ಸಂಕ್ರಾಂತಿ ಬಂದೈತೆ ಜನರಿಗೆ
ಶಾಂತಿ ಸೌಹಾರ್ದ ತಂದೈತೆ ॥೪॥

## ಕಳ್ಳ ಬಂದನೆ

ಕಳ್ಳ ಬಂದನೆ ಮನೆಗೆ
ಕಳ್ಳ ಬಂದನೆ ॥ಪ॥

ಸುಳ್ಳಿಗೊಂದು ಜೊಳ್ಳು ಮನೆಗೆ
ಕಳ್ಳ ಬಂದನೆ ॥ಅ.ಪ॥

ಹೊಸ್ತಿಲಲ್ಲಿ ಹುಲ್ಲು ಹುಟ್ಟಿ
ಮನೆಯೊಳಗೆ ರಜತುಂಬಿ
ಒಡೆಯನಿಲ್ಲದೀ ಮನೆಗೆ
ಕಳ್ಳ ಬಂದನೆ ॥೧॥

ಉಚ್ಚನೀಚ ಭೇದಭಾವ
ಕೊಚ್ಚೆ ತುಂಬಿ ಹರಿಯುತಿರುವ
ಹುಚ್ಚರಾಳುವೀ ಮನೆಗೇ
ಕಳ್ಳ ಬಂದನೆ ॥೨॥

ರಾಜಕೀಯ ಜೇಡಪಾಲ
ಲಾಳಿಯಾಡಿ ಕಟ್ಟಿದಂಥ
ಜಂತೆ ಹರಿದ ಬೊಂತೆ ಮನೆಗೆ
ಕಳ್ಳ ಬಂದನೆ ॥೩॥

## ಬಸವ ಬಾ ಬಾ

ಬಸವಾ ಬಾ ಬಾ
ವಸುಧೆಗೆ ನಿನ್ನಯ

ಜಸವನು ತೋರಲು
ಬೇಗನೆ ಬಾ ಬಾ ॥

ಕನ್ನಡ ನುಡಿಯಿದು
ಸಣ್ಣಾಗುತ್ತಿದೆ
ಚೆನ್ನಿಗ ಬಸವನೆ
ಪೊರೆಯಲು ಬಾ ಬಾ ॥

ಕನ್ನಡ ಜನರಿಗೆ
ಕನ್ನಡ ಮಂತ್ರವ
ನಿನ್ನಯ ವಚನದಿ
ಕಲಿಸಲು ಬಾ ಬಾ ॥

ಅನ್ನವೆ ಹಸಿದಿದೆ
ನೀರ್ ಬಾಯಾರಿದೆ
ಗಾಳಿಯು ಬಯಸದೆ ಬೀಸಣಿಗೆ
ಈ ಆಭಾಸಕೆ
ದೇಶವೆ ಕುಸಿದಿದೆ
ಮಾನವತೆಯ ಮೇಲೆತ್ತಲು ಬಾ ॥

## ಕೊಡುವೆಯೇನೆ ?

ಜೋಳಾದ ಹೊಲದಾ ಗಾಳಿ ಮಂಚಿಕೆ ಮ್ಯಾಲೆ
ಓಲಾಡಿ ಗಿಣಿಯಾ ಓಡಿಸೋಳೆ । ಎಲೆ ಗೌರಿ
ಸೀರೇಯ ಸೆರಗ ಸಡಿಲೀಸೆ ॥೧॥

ಸೆರಗಿನ ಚುಂಗು ಮರುಗ ಮಲ್ಲಿಗೆ ಪುನುಗು
ರಂಗೀನ ರವಿಕೆ ಬಿರಿವೂದೆ । ಎಲೆ ಗೌರಿ
ತಾವರೆಯ ಮೊಗ್ಗು ನಿನ್ನೆದೆ ಮ್ಯಾಲೆ ॥೨॥

ಮಾವನ ಮಗಳೆಂದು ಮಗ್ಗುಲಿಗೆ ಕರೆದರೆ
ಮುಲ ಮುಲ ಎನ್ನಲ್ವೇನೇ । ನಿನ್ನೆದೆಯಲ್ಲಿ
ಕಲ ಕಲ ನುಡಿಯಲ್ವೇನೆ ॥೩॥

ಕಗ್ಗಲ್ಲ ಕಣಿವೇಲಿ ಇಬ್ಬರೇ ಬರುವಾಗ
ತಬ್ಬಿದರೆ ಏನಾಗುತ್ತೇ ! ಎಲೆ ಗೌರಿ
ಮುತ್ತಿಟ್ಟರೆ ಹ್ಯಾಂಗಿರುತ್ತೆ ॥೪॥

ಅತ್ತೆಯಾ ಮಗಳೆಂದು ಹತ್ತಿರಕೆ ಕರೆದೊಮ್ಮೆ
ಒತ್ತಿದರೆ ಏನನ್ನುತ್ತೆ । ಎಲೆ ಗೌರಿ
ಮುತ್ತಿಟ್ಟರೆ ಹೆಂಗನ್ನುತ್ತೆ ॥೫॥

ಓರಗೆಯ ಗೆಳತೆಂದು ತೇರೀಗೆ ಕರೆದಾರೆ
ಮಾಮರದ ಮರೆಗೆ ನೀ ಬರುವೆಯೇನೆ । ಎಲೆ ಗೌರಿ
ಸೆರಗ್ಯಾಸಿ ಸುಖವಾ ನೀ ಕೊಡುವೆಯೇನೆ ॥೬॥

## ತಂದಾನಿ ತಾನ !

ತಂದಾನಿತಾನ ತಂದನಾನ । ತಾನಿ ।
ತಂದಾನಿ ತಾನೊ ತಂದನಾನ ॥

ಓಣೀಲಿ ಹೋಗೋಳೆ ಜಾಲ ತುರುಬೀನೋಳೆ
ಬಿತ್ತಲೆಲ್ಲ ಗ್ಯಾನ ನಿನಮ್ಯಾಲೆ । ಎಲೆ ಹೆಣ್ಣೆ
ನೆಟ್ಟಿತ್ತು ಕಣ್ಣು ನಿನ್ ಎದೆ ಮ್ಯಾಗೆ ॥೧॥

ಜಿಂಕೆಯ ಮರಿಹಂಗೆ ಜಿಗಿದೊಮ್ಮೆ ನೋಡೋಳೆ
ಕಣ್ಣಲ್ಲೆ ಮಿಂಚ ಹೊಳೆಸೋಳೆ । ಮಂಚದ ಮ್ಯಾಲೆ
ನಗೆಯಾ ಮಲ್ಲಿಗೆಯಾ ಸುರಿಬಾರೆ ॥೨॥

ನಡೆದರೆ ನಡು ಸಣ್ಣ ಮಿಡಿದರೆ ಮುಡಿ ಚುನ್ನ
ತೊಡೆ ಬಾಳೆದಿಂಡು ಬಾವನ್ನ । ಎದೆ ಮ್ಯಾಲಿನ
ಸೆರಗು ಜಾರಿದರೆ ಬಲು ಎನ್ನ ॥೩॥

ಸಂಗಾತಿ ಹೆಣ್ಣೇ ಜಂಬು ನೇರಿಲೆ ಹಣ್ಣೆ
ಮೈಯೆಲ್ಲ ಕಪ್ಪು ಮುಡಿಕಪ್ಪು । ಜೇನಗೂಡು
ಮನವೆಲ್ಲ ದವನದ ಘಮ ಘಮ ॥೪॥

ನಿಲ್ಲೇ ನಿಲ್ಲೇ ಚೆಲ್ಲೆ ನೆಲ್ಲೀಕಾಯ್ ಕೊಡುತೀನಿ
ತಿಂದಷ್ಟು ರುಚಿಯಾ ಕೊಡುವಂಥಾ । ಬೆಲ್ಲವ
ನಲ್ಲೆ ನಾನೀವೇ ಸವಿ ಬಾರೆ ॥೫॥

## ಚೆನ್ನ ಚೆಲುವ ಚಂದಗಾರ

ಚೆನ್ನ ಚೆಲುವ ಚಂದಗಾರ ಜಂಗಮ ॥ ನಾನು ।
ರನ್ನದಂಥಾ ಹುಡುಗಿ ಕಾಣೊ ಜಂಗಮ ॥

ಜಂಗುಜೋಳಿಗೆ ಜಾಲಗಾರ ಜಂಗಮ । ನೀನು ।
ಮಂಗನ್ಹಾಂಗೆ ಮಾಡುಬ್ಯಾಡ ಜಂಗಮ ॥
ಕಾವಿ ಕಪಿನಿ ಕಮಂಡಲು ಜಂಗಮ । ಅವ್ನ ।
ಜುಟ್ಟಿನ ಜೋಡಿ ಬಿಟ್ಟು ಬಾರೊ ಜಂಗಮ ॥

ಸಾಸಲ್ ಕೆರೆ ಸೋದೋಬಾವಿ ಜಂಗಮ । ಇದು ॥
ಮೀಸಲು ಕೊಡ ತುಳುಕಿಸಬ್ಯಾಡ ಜಂಗಮ ॥
ಮಣ್ಣೀನ ಕೊಡನಲ್ಲ ಜಂಗಮ । ಇದು ।
ಉಣ್ಣೋರ ಹಣ್ಣು ಕಾಣೊ ಜಂಗಮ ॥

ಮನೆಯೊಳ್ಗೆ ಯಾರೂ ಇಲ್ಲ ಜಂಗಮ । ಒಲೆಮ್ಯಾಲೆ ।
ಕೆನೆ ಹಾಲೂ ಕಾದೈತೆ ಜಂಗಮ ॥
ಸಕ್ಕರೆ ಸವಿ ತುಂಬಿಕೊಂಡು ಜಂಗಮ । ಅದು
ಮುಕ್ಕೋನಿಗಾಗಿ ಕಾದೈತೆ ಜಂಗಮ ॥

ಬಿಳಿ ಎಲೆ ಹಸಿ ಅಡ್ಕೆ ಜಂಗಮ
ನಾನೊಬ್ಬಾಳೆ ಮನೆನಲ್ಲಿ ಜಂಗಮ ॥
ಸುಣ್ಣಕಂತ ನೀನು ಬಾರೊ ಜಂಗಮ । ನಾನು ।
ಸಣ್ಣಾನೆ ಬಾಗ್ಲಾಗೆ ಜಂಗಮ ॥

ತೆರೆಯ ನಿರಿಗೆ ಗರಿಸೀರೆ ಜಂಗಮ । ಅದರ ।
ಮರೆಯಾಗಿ ಸರಿದು ಬಾರೊ ಜಂಗಮ ॥
ಒಳಗೊಂದು ಕಿರುಕೋಣೆ ಜಂಗಮ । ಅದರ ।
ಸೆರಗು ಮೆರಗು ಚಿನ್ನದ ಸರಿಗೆ ಜಂಗಮ ॥

ಬಾಗ್ಲಲ್ಲೆ ಬಾ ಬಾ ಎಂಬೊ ಸಂಭ್ರಮ । ನಿನಗೆ ।
ಸ್ವಾಗತವ ಕೋರುತ್ತೆ ಗಿಣಿರಾಮ ॥
ಕೋಣೇಯ ಸೆಳೆಮಂಚ ಜಂಗಮ । ಅಲ್ಲಿ ।
ವೀಣೇಯ ದನಿ ಕಾಣೊ ಜಂಗ ॥

ತಂತೀಯು ಮಿಡಿಯುತ್ತೆ ಜಂಗಮ । ಅದರ
ಚಿಂತೇಯ ದೂರಮಾಡೊ ಜಂಗಮ ॥

## ಜಾಣೆ ಬಾ ಮನೆಗೆ

ಜಾಣೆ ಬಾ ಮನೆಗೆ ಸುಮ್ಮನೆ ಮನೆಗೆ
ಬರಬೇಕು ಜಾಣೇ ನನ ಮನೆಗೆ ॥

ನಾನೆ ಒಂದು ಕೋಟೆಯಾಗಿ
ನೀನೆ ಒಂದು ಪೇಟೆಯಾಗಿ
ನೋಟಕೊಂದು ನೀಟಾದ ಧಾಟಿಯಾಗಿ
ಮೇಟಿ ಇಲ್ದ ಮನೆ ಕಾಣೆ ಬಾರೆ ॥೧॥

ನಾನೆ ಒಂದು ಕದವಾಗಿ
ನೀನೆ ಒಂದು ಬೀಗವಾಗಿ
ಕದವಲ್ಲ ಮನೆ ಇದು ಹದಗೆಟ್ಟು ಹೋಗುವದು
ಬೀಗಿ ಬಾ ಬಾಬಿ ಬಾ ಬಾ ಬಾ ಬಾ ॥೨॥

ನಾನೆ ಓಂದು ಜ್ಯೋತಿಯಾಗಿ
ನೀನೆ ಒಂದು ರೀತಿಯಾಗಿ
ಜ್ಯೋತಿ ಇಲ್ದ ಮನೆಯಿದು ರೀತಿಗೆಟ್ಟು ಹೋಗುವದು
ಚೆಂದೊಳ್ಳೆ ಚೆಲ್ವೆ ಬಾರೇ ಕಬ್ಬಿನ ಚಿಣ್ಣಿ ಬಾರೆ ॥೩॥

ಜಾಣೆ ಬಾ ಮನೆಗೆ ನೀ ಸುಮ್ಮನೆ ಮನೆಗೆ
ಬರಬೇಕು ಜಾಣೆ ನನ ಮನೆಗೆ
ಬರಿದಾದ ಮನೆಗೆ ಮುರಿಬಿದ್ದ ಮನೆಗೆ
ತೆರೆ ಸರಿಸಿ ಬಾರೆ ಬೆಳಕಾಗಿ ನನ್ನ ಮನೆಗೆ ॥೪॥

## ಕುಂಜರದ ಗೊಂಬೆ ಕೇಳೆ !

ಕುಂಜರದ ಗೊಂಬೆ ಕೇಳೆ
ಎಲ್ಲರ ಜಾಣೆ ಕುಶಲಾದ ಗೊಂಬೆ ಕೇಳೆ ॥

ಈ ಊರ ಗೌಡನ ಮಗಳು ಗಜಗೌರಿ ಎಂಬೋಳು
ಗರಿ ಮುರಿಯದಂಥಾ ನೆರಿಗ್ಯೋಳು ॥ ಕುಂಜ ॥

ಗರಿ ಮುರಿಯದಂಥಾ ನೆರಗ್ಯೋಳು ನೆರೆದಾಳು
ಹುಡುಗಿ ಗಜನಿಂಬೆ ರಸಬಾಳೆ ॥ ಕುಂಜ ॥

ಹುಡುಗಿ ಮೈ ನೆರೆದದ್ದು ಗುಲ್ಲು ಗುಲ್ಲಾಗಲು
ಬಿಲ್ಲುಬಾಗಿದ್ದ ಬಳೆಗಾರರ್ಹುಡುಗ ॥ ಕುಂಜ ॥

ಬಿಲ್ಲಾಗಿ ಬಾಗೂತ ಹುಲ್ಲಾಗಿ ಹುದುಗೂತ
ಮಲ್ಲೆ ಮಲ್ಲಿಗೆಯಾ ಮುಡಿಯೂತ ॥ ಕುಂಜ ॥

ಮಲ್ಲೆ ಮಲ್ಲಿಗೆಯಾ ಮುಡಿಯೂತ ಆ ಹುಡುಗ
ಕಲ್ಲು ಸಕ್ಕರೆಯಾ ಸವಿಯಲಿತ್ತ ॥ ಕುಂಜ ॥

ಸಕ್ಕರೆಯ ಹಂಚುತ್ತ ಅಕ್ಕರವ ಹಾಡುತ್ತ
ಬೆಕ್ಕಿನ ಮರಿಹಂಗೆ ಸುಳಿವೂತಿದ್ದ ॥ ಕುಂಜ ॥

ಸುಳಿ ಸುಳಿದು ಒಳ ಒಳಗೆ ಏನೇನೋ ನಡೆಸಿದ್ದ
ಬಾಲೆಯ ಕಿರುಬೆರಳ ಹಿಚುಕುತ್ತಿದ್ದ ॥ ಕುಂಜ ॥

ಬೆಟ್ಟಕ್ಕೆ ಹೋಗಾನ ಪುಟ್ಟ ಕಾಲುಂಗುರದವಳೆ
ಪಟ್ಟೇಯ ಸೀರೆ ಕೊಡಿಸುವೆ ॥ ಕುಂಜ ॥

ಪಟ್ಟೇ ಸೀರೇಗೊಂದು ಚಿಟ್ಟೆ ಬಣ್ಣದ ರವಕೆ
ಚಮಕೀನ ಜುಮಕೀ ಕೊಡಿಸುವೆ ॥ ಕುಂಜ ॥

ಅಲ್ಯೋಗಾನ ಬಾರೆ ಇಲ್ಯೋಗಾನ ಬಾರೆ
ನೆಲ್ಲೀನ ಗದ್ದೆ ಹೊಡೆಬಾಳೆ ॥ ಕುಂಜ ॥

ನೆಲ್ಲೀನ ಗದ್ದೆ ಹೊಡೆಬಾಳೆ ಎದೆಮ್ಯಾಲೆ
ಗುಡುಗುಟ್ಟುತಾವೆ ಬೆಳವಗಳು ॥ ಕುಂಜ ॥

ಬೆಳವಗಳು ಆಡ್ಯಾವು ನವಿಲುಗಳು ಕುಣಿದಾವು
ಬೆಡಗಿ ಹೋಗೋಣ ನಮ್ಮ ಹೊಲದೆಡೆಗೆ ॥ ಕುಂಜ ॥

ಹೊಲದ ಅಂಚಿನ ಆಲ, ಅಡಿಯ ಹುಲ್ಲಿನ ಹಾಸು
ನೆರೆದ ಹುಡುಗೀಯ ತೊಡೆಮೇಲೆ ॥ ಕುಂಜ ॥

ನೆರೆದ ಹುಡುಗೀಯ ತೊಡೆಮೇಲೆ ಗೀಜುಗ
ಒರಗಿದನು ಹುಡುಗಾ ಕೊಡದಂತೆ ॥ ಕುಂಜ ॥

## ಹೋಗಿ ಬರುವೆನು !

'ಹೆಣ್ಣು ಹಡೆಯಲಿ ಬ್ಯಾಡ, ಹೆರವರಿಗೆ ಕೊಡಬ್ಯಾಡ
ಹೆಣ್ಣು ಹೋಹಾಗ ಅಳಬ್ಯಾಡ
ಹೆಣ್ಣು ಹೋಹಾಗ ಅಳಬ್ಯಾಡ । ತಾಯವ್ವ
ಸಿಟ್ಟತ್ತಿ ಶಿವನಾ ಬಯ್‌ಬ್ಯಾಡ ॥

ಹೆಣ್ಣು ಹುಟ್ಟಿದ ಮನೆಯ ಮೆಟ್ಟಿಲನ್ನಿಳಿದಾಗ
ಕರುಳು ಕಿತ್ತಂತಾಗೆ ಕಣ್ಣೀರ ಕೋಡಿ
ನೀನು ಹುಟ್ಟಿದ ಮನೆಗೆ ನೀನಿಂದು ಎರವಾದೆ
ನಿನ್ನೆಂತು ಮರೆಯುವೆವು ಹೇಳಿ ತಂಗಿ"

ಬಂಧುಗಳ ಬಾಂಧವರೇ ಮನೆಯ ತುಂಬಿಸಿಕೊಳ್ಳಿ
ಏನೊಂದನರಿಯದೀ ಮುಗುದೆ ನಿಮ್ಮವಳು
ಅಂಗಯ್ಯ ಹೂವಂತೆ ನೋಡಿಕೊಳಿ ಅಳಿಯರೇ
ಅಕ್ಕರೆಯ ಸಕ್ಕರೆಯ ನಿಡಿ ಬೆಳಸಿ !

ಅತ್ತ ಮಾವಂದಿರೇ ಹೆತ್ತ ತಾಯ್ ತಂದೆಗಳು
ಮತ್ತೆ ಪ್ರೇಮದ ಪತಿಯು ಹಿತದ ಜೊತೆಯು
ಮುತ್ತೈದೆಯಾಗಿ ನೀ ನೂರ್ಕಾಲ ಬಾಳವ್ವ
ಉತ್ತಮರ ಮಗಳೆಂಬ ಕೀರ್ತಿ ಸಲಿಸು

ನಯವಿರಲಿ ನುಡಿಯಲ್ಲಿ ಭಯವಿರಲಿ ನಡೆಯಲ್ಲಿ
ಒಲವಿರಲಿ ನಿನ್ನೊಲುವೆ ಬಳಗದಲ್ಲಿ
ಎರಡು ಮನೆ ಬೆಳಕಾಗಿ ಬೆಳಗಿ ಬಾಳೆಲೊ ಮಗಳೇ
ಹಸಿದ ಶಿಶುಗಳ ಬಾಯ ಬೆಣ್ಣೆಯಾಗು !

ಹೆತ್ತವರು ಹೊತ್ತವರು ಸಗ್ಗಕ್ಕಿಂತಲು ಮಿಗಿಲು
ಅದಕಿಂತಲೂ ಮಿಗಿಲು ನನ್ನ ಪತಿಯು
ಆದರೂ ನೆನೆಯುವೆನು ತೌರೂರ ಮಡಿಲನ್ನು
ಮರೆಯದಿರಿ ಹರಸಿರೀ ನಿಮ್ಮ ಮಗಳನ್ನು

ಹೋಗಿ ಬರುವೆನು ತಾಯಿ ಹೋಗಿ ಬರುವೆನು ತಂದೆ
ಬರಲೆ ಅಕ್ಕಾಜೀ ಅಣ್ಣಯ್ಯ ಗೆಳತಿಯರೇ
ಹೋಗಿ ಬರುವೆನು ನನ್ನ ಮಹಮನೆಯ ದೇವತೆಯೇ
ನಿಮ್ಮ ತಲೆಗೆಂದಿಗೂ ಹೂವ ತರುವೆ

## ಬನ್ನಿ ಬನ್ನಿ ಕನಸುಗಳೇ !

ಬನ್ನಿ ಬನ್ನಿ ಕನಸುಗಳೇ
ಬಂಗಾರದ ಬೆಳಸುಗಳೇ

ಬನ್ನಿ ಬನ್ನಿ ಬನ್ನಿ
ಮನಕೆ ಮುದವ ತನ್ನಿ ॥

ಕಾತರಿಸಿವೆ ಎದೆಗಳೆರಡು
ಬೇಗ ಕುಡಿ ನುಡಿವ ಹುರುಪು

ಕೈಯಿ ಕೈಯ ಕೂಡಿಸಿರೇ
ಮೈಗೆ ಮೈಯ ಸೋಕಿಸಿರೀ
ಎದೆಯೊಳೇನೋ ಸ್ಪಂದನ
ನೆನೆದರೆ ರೋಮಾಂಚನ
ಮನ ಮಯೂರ ನರ್ತನ
ಗರಿಗೆದರಿದ ರಿಂಗಣ ॥

ನಿಶ್ಚಿತಾರ್ಥಕೆಂದು ಬಂದು
ಸ್ವಚ್ಛ ಸೋಫಾ ಮೇಲೆ ಕುಳಿತು
ನನ್ನ ಕರೆಸಿ ನಿಲಿಸಿದಾಗ
ಮನದೊಳೇನೋ ಮುಲುಕಾಟ
ಎದೆಯೊಳೇನೋ ಬೆದಕುವಾಟ ॥

ಉಹುಹು ಹೇಳಲಾರೆನೊ
ನಾಚಿಕೆ ಮನ ಉಸುರೆನೋ
ನನ್ನ ಅವರ ಒಳಗಿನೊಳಗು
ಗುಟ್ಟಿನ ಗುಂಗಾನ ಜೇನು
ನೀಮಿದೇಕೆ ಕಾಡುತಿಹಿರಿ
ಮೂಡಿಸಿ ಹೊಸ ಮಂಜರೀ ॥

ಮೀಸಲು
ಶಿವಮೊಗ್ಗೆಯಲ್ಲಿ ಕ್ರೌರ್ಯಕ್ಕೆ ಬಲಿಯಾದ
ನನ್ನ ವಿದ್ಯಾರ್ಥಿಮಿತ್ರ, ಅನಿಮಿತ್ತ ಬಂಧು,
ಶ್ರೀ ಜಿ. ಗೋವಿಂದರಾಜುರವರ
ಪವಿತ್ರಾತ್ಮದ ಶಾಂತಿಗಾಗಿ –

# ಅನುಬಂಧ – ೧
# ಕೇಳುತಿದೆ ಕಲ್ಲಿನಾ ಸೊಲ್ಲು !

(ಶ್ರೀ ಸಾ.ಶಿ.ಮರುಳಯ್ಯನವರ ರಾಜ್ಯಪ್ರಶಸ್ತಿ ಪಡೆದ 'ಕೆಂಗನಕಲ್ಲು' ಎಂಬ ಕಥನ ಕವನದ ಗದ್ಯಾನುವಾದ)

ಕೋಳಿ ಉದಯರಾಗವನ್ನು ಹಾಡಿ ಜಗತ್ತನ್ನು ಎಚ್ಚರಿಸುವ ದೈನಂದಿನ ಕಾರ್ಯವನ್ನು ಮುಗಿಸಿತು. ಮೂಡಲ ಕನ್ಯೆಯ ಹಣೆಯ ಮೇಲೆ ಚೆಂಬೆಳಕು ರಂಜಿಸಿತು. ಯಾವ ಶಾಪವೊ ಏನು ತಾಪವೊ ದೇವಿಹಳ್ಳಿಗೆ ಮಾತ್ರ ಎಚ್ಚರವಿಲ್ಲ. ಮುಂಜಾನೆ ಎದ್ದು ಮೆಲುದನಿಯಲ್ಲಿ ಹಾಡುತ್ತ ರಂಗವಲ್ಲಿಯನ್ನು ಬಿಡಿಸುವ ಅಂಗನೆಯರಿಲ್ಲ, ಮುಖ ತೊಳೆದು ಹಣೆಗಿಟ್ಟು ಮುಂದಲೆಯನ್ನು ನೇವರಿಸುತ್ತ ನಲಿಸುವ ಸುಮಂಗಲಿಯರಿಲ್ಲ; ನೊಗ–ಹಗ್ಗ–ನೇಗಿಲುಗಳನ್ನು ಎತ್ತಿಕ್ಕಿ ಎತ್ತುಗಳನ್ನು ತೂರಿಸುವ ಗೌಡನಿಲ್ಲ; ಬೀಸುಗಲ್ಲಿನ ಶ್ರುತಿಯಲ್ಲಿ ಬಳೆಗಳ ಇಂಪಿನ ಜೊತೆಗೂಡಿ ಹಾಡುತ್ತ ಬೀಸುವ ಹೆಣ್ಣುಗಳಿಲ್ಲ – ಮೂರು ದಶಕಗಳ ಹಿಂದೆ ಸುಂದರ ಬನಗಳ ಮಧ್ಯೆ ಸೊಬಗಿನ ಹಳ್ಳಿಯಾಗಿ ಶೋಭಿಸುತ್ತಿದ್ದ ದೇವಿಹಳ್ಳಿ ಇಂದು ಪಾಳುಬಿದ್ದ ದೇಗುಲದಂತೆ ಹೆಸರಿಗೆ ಹಳ್ಳಿಯಾಗಿ ಕಾಣುತ್ತಿದೆ.

ಎಚ್ಚರಿಲ್ಲದ ದೇವಿಹಳ್ಳಿಯ ಮೂಲೆ ಮನೆಯಿಂದ ಹೆಣ್ಣಿನಾಕೃತಿಯೊಂದು ಎಚ್ಚರಾಗಿ ದೂರದಲ್ಲಿ ಕಾಣುವ ಬಿಳಿಯ ಕಲ್ಲಿನಲ್ಲಿ ಬೆಟ್ಟದತ್ತ ಅವಸರದ ಹೆಜ್ಜೆಗಳಿಕ್ಕುತ್ತ, ಹರಿವ ಝರಿಯನ್ನು ದಾಟಿ, ನಿಂತ ಮಡುವಿನೆಡೆ ಹಾದು ನೂರಾರು ಗೋರಿಗಳಿಂದ ತುಂಬಿದ್ದ ಮಸಣದೆಡೆಗೆ ಸರಿದು ಬಂತು. ಮಧ್ಯೆ ಇದ್ದ ಗೋರಿಯೆರಡರ ಬಳಿ ಬಂದು ಮಂಕಾದ ಹಣತೆಯನ್ನು ಹಚ್ಚಿ ಕೈ ಹಿಡಿದ ನಲ್ಲ ಮತ್ತು ಹಡೆದ ತಾಯಿಯರು ಹುಡಿಯಾದ ಸ್ಥಳದಲ್ಲಿ ಕೈ ಮುಗಿದು ಪ್ರಾರ್ಥನೆ ಸಲ್ಲಿಸಿ, ಕಲ್ಲಗೋರಿಯ ತಳದಲ್ಲಿ ತಲೆಯೂರಿತು ತನ್ನನ್ನು ತಾನು ಮರೆಯುವಂತೆ, ಹಣತೆ ಉರಿಯುತ್ತಿತ್ತು. ಮಂಜಿನ್ನೂ ಮಲಗಿತ್ತು ಅಮಲೇರಿ ಬಿದ್ದಿರುವ ಕುಡುಕನಂತೆ.

ಇದ್ದಕ್ಕಿದ್ದಂತೆಯೇ ಮೌನದ ಮುದ್ರೆಯನ್ನೊಡೆದು ಎದ್ದೋಡಿ ಬಂದುವು ನೂರಾರು ಭೂತಗಳು, ಗೋರಿಗಳೇ ಬಾಯ್ದೆರೆದಂತೆ, ಬಾನೊಡೆದು ಹುಡಿಯಾದಂತೆ ಮಿಂಚಿನ ಗೊಂಚಲು ಸಿಡಿದಂತೆ ಬೆಂಕಿ ಕಾರುತ್ತ ಚೀರುತ್ತ ಬಂದ ಆ ಬೆಂತರಗಳನ್ನು ಕಂಡು ನೋಡಲಾಗದೆ ಕಣ್ಮುಚ್ಚಿ ಓ ಅವ್ವಾ.. ಬೇಗ ಬಾರೆ ಬೇಗ ಬಾ.. ಎಂದು ಚೀರುತ್ತ ಉರುಳಿದಳು ಮಲ್ಲಿಗೆ.

"ಹ ಹ್ಹ ಹ್ಹ ಹ್ಹಾ ಇವಳಿಗೆ ಅವ್ವ ಬೇಕಂತೆ ! ಇವಳವ್ವ ಇವಳ ಗಂಡನಿಗೆ ಎದೆ ಉಣಿಸಹೋಗಿರಬೇಕು !"

"ಪಾಪ.. ಏ ಹೆಣ್ಣೇ ನಾನು ಬೇಡವೇನೆ ನಿನಗೆ?" ದೆವ್ವಗಳು ಆಕೆಯ ಮುಖಕ್ಕೆ ಮುಖ ತಂದು ಕಿರಿಚಿದುವು.

---

** ಇದನ್ನು ಶ್ರೀ ಗೋವಿಂದರಾಜು ಬರೆದು ಕನ್ನಡದ ಪ್ರಸಿದ್ಧ ಪತ್ರಿಕೆಯೊಂದರಲ್ಲಿ ಪ್ರಕಟಿಸಿದ್ದರು. ಸಕಾಲದಲ್ಲಿ ಅದನ್ನು ಒದಗಿಸಿದ ಶ್ರೀಮತಿ ಅಂಜನಾ ಗೋವಿಂದರಾಜುರವರನ್ನು ಕೃತಜ್ಞತೆಯನ್ನು ಸ್ಮರಿಸುವೆ

"ಮುಚ್ಚು ಬಾಯ್ ಪಾತಕಿಯೆ, ದೆವ್ವವಾದ ನೀನು ಬಲ್ಲೆಯಾ ಪತಿವ್ರತೆಯರ ಧರ್ಮ ? ಹೆಣ್ಣಿಗಾಗಿ ಕಾತರಿಸಿ ಮರಣ ಹೊಂದಿ ಮರುಳಾಗಿ ಅಲೆಯುತ್ತಿರಬೇಕು ನೀನು.. ಥೂ ಈಗಲಾದರೂ ನಿನ್ನ ಕರ್ಮ ಸವೆಸು" – ಧೈರ್ಯದಿಂದ ನುಡಿದಳು ಮಲ್ಲಿಗೆ.

"ಹಹ್ಹಹ್ಹಾ .. ಹೊ ಹೊಹ್ಹೊ ಹ್ಹೋ.. ನಿಂಗಣ್ಣ.. ರಂಗಣ್ಣ ನಾವಂತೆ ಮರುಳು ! ಬನ್ನಿ ಹೊಸ ಸುದ್ದಿ.. ಬರದ ಮಾರಿಗೆ ಸಿಕ್ಕಿ ಪ್ರಾಣಬಿಟ್ಟ ನಾವು ಮರುಳುಗಳಂತೆ ! ಹುಟ್ಟಿದೆರಡೇ ದಿನಕೆ ಹಡೆದವಳ ಕೊಂದು, ತಂದೆಯನ್ನು ದೇಶಾಂತರ ಕಳಿಸಿ ಮತ್ತೆ ಕೈ ಹಿಡಿದ ಗಂಡನನ್ನೂ ತಿಂದು ಬಾಳು ನಡೆಯುವ ಈಕೆ ಸಾಧ್ವೀ ಮಣಿಯಂತೆ.. ಕೇಳ ಬನ್ನಿ" ಒದರಿತು ಒಂದು ದೆವ್ವ–

ಒಡನೆ ನಿಂಗಣ್ಣ, ಕಾಳಕ್ಕ, ಕಾಟಣ್ಣ, ನೀಲಕ್ಕ, ರುದ್ರವ್ವ, ಚೆಂದೊಳ್ಳೆ– ಚೆನ್ನಿ ಎಲ್ಲರೂ ಮುತ್ತಿದರು. ರಣಗಹಳೆಯ ಧ್ವನಿ ಕೇಳಿ ನೆರೆಯುವ ಸೈನಿಕರಂತೆ. ಕರಡಿ ಮೈಗೂದಲು, ಕೆದರಿದ ಟಗರು ತಲೆ, ಉದ್ದನೆಯ ದಪ್ಪ ದಾಡೆ, ಹರಕು ಮುರುಕು ಗಡ್ಡ, ಹೆಣ್ಣಾದರೂ ಮೀಸೆ– ಇರುವ ದೆವ್ವಗಳೆಲ್ಲ ತಮ್ಮ ತಮ್ಮ ಗೋರಿಯ ನಾಟ್ಯವೇದಿಕೆಯ ಮೇಲೆ ರುದ್ರನಾಟ್ಯಗೈದುವು. ಕಣ್ಣುಗಳೋ ಕೆಂಡದುಂಡೆಗಳು ! ಒಂದು ಮಲ್ಲಿಗೆಯ ಮೇಲೆ ಕೊಳ್ಳಿಯನ್ನೆಸೆದು ಕೇಕೆ ಹಾಕಿದರೆ, ಮತ್ತೊಂದು ಕವೆಗೋಲಿನಿಂದ ಪಕ್ಕೆಯನ್ನು ತಿವಿದು ಬೊಬ್ಬಿಟ್ಟಿತು. ಒಂದು ಕಿಲಕಿಲನೆ ನಗುತ್ತಾ ಜಡೆಗೂದಲನ್ನು ಹಿಡಿದು ಗಿರಗಿರನೆ ತಿರುಗಿಸಿದರೆ ಮತ್ತೊಂದು ಉಗಿಯುತ್ತಾ ಬೋಗುಣಿ ಬಗ್ಗಡವನ್ನು ಮೇಲೆರಚಿತು. ಮತ್ತೆ ಕೆಲವು ಒಣಧೂಳನ್ನು ತಲೆಯ ಮೇಲೆ ಸುರಿದವು. ಕಂಗೆಟ್ಟ ಮಲ್ಲಿಗೆ "ಓ ಸ್ವಾಮೀ..ಅವ್ವಾ.. ಕಾಪಾಡ ಬನ್ನೀ.." ಎಂದು ಬೊಬ್ಬಿಟ್ಟಳು ಬೆಟ್ಟದ ಬಂಡೆಗಳು ಪ್ರತಿಧ್ವನಿಸುವಂತೆ.

"ಏಯ್.. ಆಕೆಯನ್ನು ಬಿಡಿ.. ಆಕೆ ನನ್ನ ಕಟ್ವಾಣಿ ..ಬಿಡಿ ಬಿಡಿ.." ಮಗಳ ಕರೆಗೆ ಓಗೊಟ್ಟು ಎಲ್ಲಿಂದಲೋ ಬಂದ ದೆವ್ವಿಣಿ ಆರ್ಭಟಿಸಿತು ಕಾಳಿಯಂತೆ. ಅದರ ಗರ್ಜನೆ ಕೇಳಿದೊಡನೆಯೆ ಬೆಚ್ಚಿ ದೆವ್ವಗಳೆಲ್ಲ ತಮ್ಮ ತಮ್ಮ ಗೋರಿಗಳ ಮೇಲೆ ಸರಿದು ಕುಳಿತವು. ಮತ್ತೆ ಕೆಲವು ಕೈಲಿದ್ದ ಕೊಳ್ಳಿಗಳನ್ನು ಮುರಿದು ಗಂಟಲಲ್ಲಿ ತುರುಕಿಕೊಳ್ಳುತ್ತ ಗೊಣಗಿಕೊಂಡವು.

"ಮುದ್ದಿನರಗಿಣಿ ಈ ನುಸುಕಿನಲ್ಲೇಕೆ ಬಂದೆ?" ದೆವ್ವಿಣಿ ಮಗಳನ್ನು ತಬ್ಬಿಕೊಂಡು ಮುದ್ದಿಸುತ್ತಾ ನುಡಿಯಿತು. ಬೆದರಿ ಬಾಯಾರಿ ಹೋಗಿದ್ದ ಮಲ್ಲಿಗೆ ತಾಯಿ ದೆವ್ವಿಣಿಯ ತೊಡೆಯ ಮೇಲೆ ಮುಖವಿಟ್ಟು "ಅವ್ವ.. ಅವ್ವ" ಎಂದು ಬಿಕ್ಕಿ ಬಿಕ್ಕಿ ಅತ್ತಳು.

"ಅಳಬೇಡ ಮಗಳೆ, ನೀನಿಲ್ಲಿಗೇಕೆ ಬಂದೆ? ನಿನ್ನಪ್ಪ ಮುನಿದರೆ? ಹೊರಗೆ ತಳ್ಳಿದರೆ?" ದೆವ್ವಿಣಿ ಕೇಳಿತು.

"ಛೆಛೆ.. ಅಪ್ಪನಿಗೆ ನಾನೆಂದರೆ ಪ್ರಾಣ. ಅವನು ತಳ್ಳುವನೇ ! ಅವ್ವ ರಾತ್ರಿಯೆಲ್ಲಾ ನಿನ್ನ ನೆನಪೇ ನೆನಪು. ಜೊತೆಗೆ ನನ್ನ ಮನದನ್ನನ ನೆನಪು ಕೂಡ. ಆ ನೆನಪೇ ನನ್ನನ್ನಿಲ್ಲಿಗೆ ಎಳೆತಂದಿತವ್ವ. ಆದರೆ ಇದೇನು ! ಈ ದೆವ್ವಗಳ ಅಸಂಬದ್ಧ ಮಾತು ! ನಾನಾವ ಹಡೆದವರನ್ನು ತಿಂದೆ. ಕೆಂಗಪ್ಪನಿಲ್ಲವೆ ? ನೀನಿಲ್ಲವೆ? ಯಾರ ಮನೆಯ ದೀಪವನ್ನು ನಾನು ನಂದಿಸಿದೆ? ಮಾತಾಡು ಅವ್ವಾ.. ಮಾತಾಡು" ಮಲ್ಲಿಗೆ ದೆವ್ವವಾಗಿದ್ದ ಕೆಂಗವ್ವನ ಮುಖ ಮೈಗಳನ್ನುಲುಸುತ್ತ ಗೋಳಾಡಿದಳು. ಕೆಂಗವ್ವ ದೆವ್ವ ಕಣ್ಣೀರ್ಗರೆಯುತ್ತ –

"ಬಾ ಮಗಳೆ.. ಕಂದಾ.. ಈಗ ಮೂವತ್ತು ವರ್ಷಗಳ ್ಹಂದಿನ ನೀನಿನ್ನೂ ಮೊಲೆಯುಂಬ ಹಸುಳೆಯಾಗಿದ್ದಾಗಿನ ದಿನದ ಕತೆಯನ್ನು ಹೇಳುವೆನು ಕೇಳು.. ನಿನ್ನ ಹೆತ್ತವರು ನಾವಲ್ಲ ಮಗಳೆ, ಸಲಹಿದವರು ಮಾತ್ರ. ಎಳೆಯ ಕಂದಮ್ಮನಾದ ನಿನ್ನನ್ನು ಹೆತ್ತವರು ನಮ್ಮ ಮಡಿಲಿಗಿತ್ತು. ಬರಗಾಲದ ಕರಾಳ ದವಡೆಗೆ ಸಿಕ್ಕಿ ಮಡಿದವರಮ್ಮ"

ನೆರೆ ಭೂತಗಳೆಲ್ಲ ಮೈಯೆಲ್ಲ ಕಿವಿಯಾಗಿ ಕತೆ ಕೇಳಲು ಮುಂದೆ ಮುಂದೆ ಸರಿದು ಸುತ್ತುವರಿದು ಕುಳಿತವು. ಮೂಡಲಲ್ಲಿ ಹುಟ್ಟಿ ಬಡಗಲಲ್ಲಿ ಹರಿದು ಪಡುಲೆಗೆ ಬೋರೆಂದು ನದಿ ನಡೆಯುತ್ತಿತ್ತು. ಮಲ್ಲಿಗೆ ಕರುಣ ಕತೆ ತಾಯಿ ದೆವ್ವಿಣಿಯ ಕಣ್ಣೀರಿನೊಂದಿಗೆ ಮುಂದೆ ಮುಂದೆ ಸಾಗುತ್ತಿತ್ತು –

"ಧಾತು ಈಶ್ವರ ಸಂವತ್ಸರದ ಕಾಲ, ಅಂದು ಬರಿಮಾರಿಯ ತಾಂಡವ! ಯುಗವಳಿದು ಯುಗ ಹುಟ್ಟಿ ಆಷಾಢ ತೆರಳಿದರೂ ಮಳೆಯ ಹನಿಯ ಸುಳಿವಿಲ್ಲ. ಸಸ್ಯಶ್ಯಾಮಲೆಯೆನಿಸಿದ್ದ ಭೂ ಮಾತೆ ನಗ್ನಳು. ಎಲ್ಲಿ ನೋಡಿದರೂ ನಗ್ನವೇ. ಕೆರೆಕಟ್ಟೆ, ಬಾವಿಗಳೆಲ್ಲ ಒಣಗಿ ಬಿರುಕು ಬಿಟ್ಟವು. ಮರಗಿಡದಲ್ಲಿ ಹಸುರಿನ ಹೆಸರಿಲ್ಲ; ನೊಂದು ಬೆಂದ ಭೂಮಾತೆ ಕೈಗಳೆತ್ತಿ ಬೇಡುತ್ತಿರುವಳೋ ಎಂಬಂತೆ ಬೋಳಾಗಿ ನಿಂತ ತೆಂಗಿನ ಮರಗಳು, ಭೂಗಳಂತೆದ್ದು ನಿಂತ ಬೋಳುಮರಗಳ ಸುತ್ತ ತರಗೆಲೆಯ ರಾಶಿ, ಬರಮಾರಿ ಬಿಸಿಲು ಕಾಯಿಸಲು ತನ್ನ ತಲೆಗೂದಲನ್ನು ಕೆದರಿಕೊಂಡಿರುವಳೋ ಬರ ಮಾರಿಯ ಕರಾಳ ಕೈಗೆ ಸಿಕ್ಕಿ, ತರಗೆಲೆಗಳಂತೆ ಗಿರಗಿರನೆ ಸುತ್ತಿ ಸತ್ತು ಬೀಳುತ್ತಿತ್ತು ಜನತೆ. ಬರಿಹೊಟ್ಟೆಯ ಕಂಗೆಟ್ಟ ಜನ ತರಗೆಲೆ ಮುಗಿಸಿದವರೆಷ್ಟೋ, ಹುಣಿಸೆ ಬೀಜಗಳನ್ನು ಹುರಿದು ಮುಕ್ಕಿದವರೆಷ್ಟೊ! ಈಚಲ ಮರದ ಗಿಣ್ಣು ತಿಂದವರೆಷ್ಟೊ, ಹುಳು ತಿಂದ ಮರದಿಂದ ಸುರಿಯುವ ಹಿಟ್ಟನ್ನು ಕೊಚ್ಚೆ ನೀರಲ್ಲಿ ಕುದಿಸಿ ಕುಡಿದವರೆಷ್ಟೋ, ನುಣ್ಣನೆಯ ಕೆಮ್ಮಣ್ಣನ್ನು ಹಸಿಹಿಟ್ಟಿನಲ್ಲಿ ಬೆರಸಿ ಮುದ್ದೆ ಮಾಡಿ ಕಿತ್ತು ತಿಂದವರೆಷ್ಟೋ...

ಆದರೇನು ಇದನ್ನೆಲ್ಲ ತಿಂದು ಜನ ಬದುಕಲುಂಟೆ ? ಎಲ್ಲೆಲ್ಲಿಯೂ ಹೆಣಗಳ ಬಣಬೆ. ಹೊತ್ತು ಹೂಳುವವರಿಲ್ಲ, ಸುಡುವವರಿಲ್ಲ, ಮಡದಿ ಮಗುವೆಲ್ಲೋ ಗಂಡನಾರ ದಿಕ್ಕೋ ದನಕರುಗಳ ಪಾಡೇನೋ. ಬಿರುಬಿಸಿಲಿನ ಬೇಗೆಗೆ ಬೆಂದ ಹೆಣಗಳು ಸೀದು ಸೀಕರಿಯಾಗಿ ಒಣತೊಗಟೆಗಳಾಗಿ ಬಿದ್ದುವು. ಹೆಣದ ರಾಶಿಯ ಮೇಲೆ ರಣಹದ್ದುಗಳು ಸಂತೆ ಸೇರಿ ನಲಿದಾಡಿದುವು. ಗಂಟಲ ತುದಿಯವರೆಗೆ ತಿಂದು ಕಕ್ಕಿದುವು. ಕಾಗೆಗಳು ಹೆಣಕ್ಕಾಗಿ ಹೋರಾಡಿ ರಣಹದ್ದುಗಳ ಪೆಟ್ಟಿಗೆ ರೆಕ್ಕೆ ಮುರಿದು ನೆಲಕ್ಕುರುಳಿದುವು. 'ನರಮಾಂಸ ನರರಕ್ತ ಬಯಸಿದರೆ ಸಿಕ್ಕಿತೆ ಮೆಲ್ಲನೆ ತಿನ್ನು' ಎಂದು ಕುಕ್ಕಿಕುಕ್ಕಿ ತಿಂದುವು ರಣಹದ್ದುಗಳು, ಕೆಂಗಿಡಿಯ ಕಣ್ಣುಗಳಿಂದ ಗುಡುಗುಟ್ಟುತ್ತ ನಾಯಿಗಳು ಎಲುಬನ್ನು ಕಟಕಟನೆ ಕಡಿದುವು. ಗುಳ್ಳೆ ನರಿಗಳು ಸಾಲಾಗಿ ಹೆಣಗಳನ್ನು ದರದರನೆ ಎಳೆದೊಯ್ದವು. ಉಬ್ಬರಿಸಿದ ಹೆಣಗಳ ಹೊಟ್ಟೆಯ ಮೇಲೆ ಡುಬಡುಬನೆ ಹೊಡೆದು ನರ್ತಿಸಿದುವು. ನೋಡಬಾರದ ನೋಟ, ಜೀವವಿದ್ದೂ ಹೆಣದಂತೆ ಬಿದ್ದಿರುವ ಒಬ್ಬನ ಕರುಳನ್ನು ರಣಹದ್ದೊಂದು ಕುಕ್ಕಿಕುಕ್ಕಿ ಹೊರಗೆಳೆಯುತ್ತಿದೆ. ಓಡಿಸಲು ಶಕ್ತಿಯಿಲ್ಲದೆ ಕೂಗಲೂ ಉಸಿರಿಲ್ಲದೆ ಬಡಕೈಗಳನ್ನು ಬೀಸಿ ಕರೆಯುತ್ತಿದ್ದಾನೆ ಅವನು, ಗಬ್ಬ ತುಂಬಿದ ಹಸುವೊಂದು ಕರುವನ್ನು ಪೂರ್ಣ ಇಳೆಗೆ ಕೆಡವಲೂ ಆಗದೆ ಹಾಗೆಯೇ ಕೊನೆಯುಸಿರೆಳೆದಿದೆ. ಅರ್ಧ ಹೊರಬಂದ ಕರು ಅರ್ಧದಲ್ಲಿಯೇ ನಾಲಿಗೆ ಹಿರಿದು ಪ್ರಾಣಬಿಟ್ಟಿದೆ. ಬತ್ತಿ ಬಾಡಿದ ನೇತಾಡುವ ತಾಯಿ ಮೊಲೆಯನ್ನು ಹಸುಳೆ ಕಚ್ಚಿ ಎಳೆಯುತ್ತಿರುವಂತೆಯೇ ತಾಯಿ ಪರಲೋಕ ಯಾತ್ರೆಗೈದಿದ್ದಾಳೆ. ಮಾತು ಬಾರದ, ಅಳಲೂ ಆಗದ ಮಗುವುದು ಪಿಳಪಿಳನೆ ಕಣ್ಣುಬಿಡುತ್ತಾ ಹಾಗೆಯೇ ಕಣ್ಮುಚ್ಚಿದೆ."

ಬಿಕ್ಕಿ ಬಿಕ್ಕಿ ಅಳುವ ಶಬ್ದವು ಕೆಂಗವ್ವ ಹೇಳುತ್ತಿದ್ದ ಕತೆ ಮುಂದುವರಿಯದಂತೆ ತಡೆಯಿತು. ಮಲ್ಲಿಗೆ ಅತ್ತ ತಿರುಗಿದಳು. ಅಲ್ಲೊಂದು ತಾಯಿ ದೆವ್ವ ಮರಿದೆವ್ವವನ್ನು ತಬ್ಬಿಕೊಂಡು ಅಳತೊಡಗಿತ್ತು.

"ಅದಾರು ಅವ್ವ?" ಮಲ್ಲಿಗೆ ಕೇಳಿದಳು.

"ಅವಳೆ? ಅಕೆ ತನ್ನ ಕಂದನಿಗೆ ಬತ್ತಿದೆದೆಯಿಂದ ಹಾಲುಣಿಸುವಾಗಲೇ ಮಡಿದವಳು. ಮಡಿದು ದೆವ್ವವಾದರೂ ಕರುಳಿನಾ ಮಮತೆ ಮಡಿದಿಲ್ಲ ಮಗಳೆ. ಅದೋ ನೋಡು ಅಲ್ಲಿ ನಿಂತಿರುವ ಆಕೆ ಗೌರಿ ತುಂಬು ಹರೆಯದ ತರುಣಿ. ಗಂಡನನ್ನೇ ಕಾಯುತ್ತ ಹಾಗೆ ಪ್ರಾಣಬಿಟ್ಟಳು." ಕೆಂಗವ್ವ ಒಬ್ಬೊಬ್ಬರನ್ನೇ ತೋರಿಸುತ್ತ ಅವರವರ ಗೋಳಿನ ಕತೆ ಹೇಳುತ್ತ ಮುಂದೊಂದು ದೆವ್ವದ ಕಡೆ ಬೆರಳು ತೋರಿ ಮಾತು ಹೊರಡದೆ ಹಾಗೆಯೇ ನಿಲ್ಲಿಸಿದಳು.

"ಅವಳಾರವ್ವ ಮುಡಿಗೆದರಿಕೊಂಡು ಬೊಂಬೆಯೊಂದು ತಬ್ಬಿಕೊಂಡು, ಉಗ್ರದಾಡೆಗಳಿಂದ ರಣಚಂಡಿಯಂತೆ ತೋರುತ್ತಿದ್ದಾಳೆ?" ಮಲ್ಲಿಗೆ ಕೇಳಿದಳು.

"ಅವಳ ಕತೆಯೆ? ಅದು ಬಲುದೂರ. ಆಕೆ ಬೀರನ ಮಡದಿ ಹೆಸರು ಮಾರವ್ವ. ಅದು ಬೊಂಬೆಯಲ್ಲ. ಬೇಡ ಬಿಡು, ಅದನ್ನು ಹೇಳಿದರೆ ನಿನಗೆ ಹಿತವಾಗುವುದಿಲ್ಲ" ಕೆಂಗಜ್ಜ ಅಷ್ಟಕ್ಕೇ ನಿಲ್ಲಿಸಿದಳು.

"ಇದೇನಮ್ಮಾ? ಇದುವರೆಗೆ ಹೇಳಿದ ಕತೆ ನನಗೆ ಹಿತವಾಯಿತೇ? ಇದೂ ಹಾಗೆಯೇ ಹೇಳವ್ವಾ" ಒತ್ತಾಯಿಸಿದಳು ಮಲ್ಲಿಗೆ.

"ಕಂದ, ಆಕೆ.. ಆಕೆ. ತನ್ನ ಕಂದನನ್ನೇ ಕೊಂದು ತಿಂದವಳು."

"ಸಾಕು ನಿಲ್ಲಿಸು ತಾಯಿ.. ನನಗೆ ಮೂರ್ಛೆ ಬರುತ್ತಿದೆ. ನನ್ನ ಕಥೆಯನ್ನು ಹೇಳು ಎಂದರೆ ಇಷ್ಟೆಲ್ಲ ಪೀಠಿಕೆ ಬೇಕೆ?" ಕಿವಿಯೊಂದಿಗೆ ಕಣ್ಣನ್ನೂ ಮುಚ್ಚಿಕೊಂಡಳು ಮಲ್ಲಿಗೆ. ಕೆಂಗವ್ವ ಕ್ಷಣಕಾಲ ನಿಟ್ಟುಸಿರಿಟ್ಟು ಮತ್ತೆ ಕತೆ ಮುಂದುವರಿಸಿದಳು.

"ಇಂತಹ ಭೀಕರ ಬರಗಾಲದಲ್ಲಿ ಬಿಳಿಯಕಲ್ಲು ಗುಡ್ಡದ ಬಳಿ ಮೈಸೂರು ಅರಸರು ಗಂಜಿ ಕೇಂದ್ರವನ್ನು ಸ್ಥಾಪಿಸಿದರು. ಬೊಕ್ಕಸದಲ್ಲಿದ್ದ ಹಣವೆಲ್ಲ ಬರಿದಾಗತೊಡಗಿತು. ಸಮುದ್ರದಂತೆ ಮೇರೆದಪ್ಪಿ ಬಂತ ಜನತೆಗೆ ಗಂಜಿ ಸಾಲದೆ ಬೂದಿ ಬೆರೆಸಿ ಕೊಟ್ಟರು ಭಟರು. ತಿಂದ ಜನ ಅಲ್ಲಲ್ಲೇ ಸುರುಟಿಕೊಂಡರು. ಅಂತರಂಗದ ಆಸೆ ಹಸಿಯಾಗಿದ್ದುದರಿಂದ ಸತ್ತು ಬೆಂತರಗಳಾದರು. ಗಂಜಿ ಕೇಂದ್ರ ಮುಚ್ಚಿತು.

ಊರ ಕೊನೆಗಿರುವ ಶ್ಯಾನುಭೋಗ ಮೂರ್ತಿರಾಯರ ಮನೆಯೆಡೆಗೆ ಸಾಗಿತು ಜನಸಮೂಹ. ತಮ್ಮಲ್ಲಿದ್ದುದೆಲ್ಲ ದಾನಗೈದ ರಾಯರು ಬರಿಗೈಯಾದರು. ತುಂಬು ಗರ್ಭಿಣಿಯಾಗಿದ್ದ ರಾಯರ ಹೆಂಡತಿ ಮಲ್ಲಿಗೆಗೆ ಜನ್ಮವಿತ್ತು, ಹಸಿವಿನಿಂದ ಕೆಲವೇ ದಿನಗಳಲ್ಲಿ ಕಣ್ಮುಚ್ಚಿದಳು. ದುಃಖತಪ್ತರಾದ ರಾಯರು ಶಿಶುವನ್ನು ಎತ್ತಿಕೊಂಡು ಹೊಲೆಯರಾಗಿದ್ದರೂ ತಮ್ಮ ನೆಚ್ಚಿನ ಸೇವಕರಾದ ಕೆಂಗ–ಕೆಂಗಿಯರ ಹೊಲೆಯರಾದರೇನು? ಅವರ ಹೃದಯ ಹೊಲೆಯೇ? ಕರುಳ ಕುಡಿಗಿಂತ ಮಿಗಿಲಾಗಿ ಸಾಕಿದರು ಮಲ್ಲಿಗೆಯನ್ನು ಮುಂದೆ...

ಅದು ಬಹುಧಾನ್ಯ ಸಂವತ್ಸರ. ಬರಮಾರಿಯ ಒಡಲು ತುಂಬಿತು. ಸಮೃದ್ಧ ಮಳೆ ಸುರಿಯಿತು. ಎಲ್ಲೆಲ್ಲಿ ನೋಡಿದರೂ ಹಸುರೋ ಹಸುರು. ಆದರೇನು, ಬೆಳೆ ಬೆಳೆವರಿಲ್ಲ, ಬೆಳೆದದ್ದನ್ನು ತಿನ್ನುವವರಿಲ್ಲ. ಸಂವತ್ಸರಗಳ ಮೇಲೆ ಸಂವತ್ಸರಗಳುರುಳಿದುವು...

ಕತೆ ಸಾಗುತ್ತಿದ್ದಂತೆಯೇ ರಾಮಣ್ಣ ದೆವ್ವ ಓಡುತ್ತ ಬಂದು "ಏಳಿ, ಏಳಿ, ಕೆಂಗಜ್ಜ ಬರುತ್ತಿದ್ದಾನೆ. ಮಲ್ಲಿಗೆಯನ್ನು ಹುಡುಕುತ್ತಿದ್ದಾರೆ. ಬೇಗ ಗೋರಿಗಳಲ್ಲಿ ಅಡಗಿಕೊಳ್ಳಿ" ಎಂದು ಬೊಬ್ಬಿಡುತ್ತ, ತಟಕ್ಕನೆ ಮಲ್ಲಿಗೆಯ ಬಳಿ ಸಾರಿ ಮುತ್ತೊಂದನಿತ್ತು "ಮನದನ್ನೆ ನನ್ನ ಮಲ್ಲೀ, ನಾಳೆ ಬಾ ಭೇಟಿಯಾಗೋಣ" ಎಂದು ಓಡಿತು. ಕೆಂಗವ್ವ ಮತ್ತು ಉಳಿದೆಲ್ಲ ದೆವ್ವಗಳು ಆಗಲೇ ಮರೆಯಾಗಿದ್ದವು. ತನ್ನ ಇನಿಯನನ್ನು ಕಂಡ ಮಲ್ಲಿಗೆ ಅವನ ಪಾದಗಳನ್ನು ತಬ್ಬಿಕೊಂಡು ಬಿದ್ದಳು.

ಮಲ್ಲಿಗೆಗೆ ಎಚ್ಚರಾದಾಗ ಕಂಡದ್ದು ರಾಮಣ್ಣನನ್ನಲ್ಲ. ತಬ್ಬಿದ್ದು ಅವನ ಪಾದಗಳನ್ನೆಲ್ಲ, ಕತ್ತೆತ್ತಿ ಕಂಡದ್ದು ಹನಿಗಣ್ಣಾಗಿ ನಿಂತಿದ್ದ ಕೆಂಗಜ್ಜನನ್ನು, ದುಃಖ ಉಕ್ಕಿ ಬಂತು ಮಲ್ಲಿಗೆಗೆ.

"ಅಪ್ಪಯ್ಯಾ, ನಿಮಗೆಲ್ಲ ಹೊರೆಯದೆ ಅವ್ವನನ್ನರಸಿ ಬಂದೆ. ಅವ್ವನೇ ಬಂದು ಮಾತಾಡಿದಳು. ತಾಯಿಯನ್ನು ತಿಂದು ತಂದೆಯನ್ನು ಪರದೇಸಿ ಮಾಡಿ, ನಿಮಗೆಲ್ಲ ಹೊರೆಯಾದೆ" ಮುಂದೆ ಮಾತು ಹೊರಡದಾಯಿತು. ಯಾವುದನ್ನು ಇಷ್ಟುದಿನ ಗುಟ್ಟಾಗಿಟ್ಟಿದ್ದೆನೋ ಆ ಗುಟ್ಟು ಬಯಲಾಯಿತಲ್ಲಾ ಎಂದು ಕೆಂಗಜ್ಜ ಕಣ್ಣೀರ್ಗರೆದ–

ಮನೆಗೆ ಕರೆತಂದ ಮಲ್ಲಿಗೆ ತನಗೆ ತಾನೇ ಮಾತನಾಡುವಳು. ಒಮ್ಮೊಮ್ಮೆ ನಗುವಳು, ಅಳುವಳು, ನಿಟ್ಟುಸಿರು ಬಿಡುವಳು. ಶೂನ್ಯವನ್ನು ದಿಟ್ಟಿಸುತ್ತ ನಿಲ್ಲುವಳು, ಕೆಂಗಜ್ಜನಿಗೆ ಭಯವಾಯಿತು. ಜೋಯಿಸರಲ್ಲಿ ಹೋಗಿ ಮಂತ್ರಿಸಿದ ತಾಯಿತವನ್ನು ಕಟ್ಟಿಸಿದ. ಹಲವು ದೇವರಿಗೆ ಹರಕೆ ಹೊತ್ತ, ಕೋಳಿಯನ್ನು ಬಲಿಗೊಟ್ಟು ನಿವಾಳಿ ತೆಗೆಸಿದ. ಆಕೆ ಅನ್ನವನ್ನು ತಿನ್ನದೆ ತಾನು ತಿನ್ನುವುದಿಲ್ಲವೆಂದು ಹಟ ತೊಟ್ಟ. ಮಲ್ಲಿಗೆ ಮುದುಕ ಕೆಂಗಜ್ಜನ ಮಾತಿನಂತೆ ನಡೆದಳು. ಬೇಗೆದ್ದು ಕೈಕಾಲು ತೊಳೆದಳು. ಮಾಡಿದ್ದನ್ನು ಉಂಡು ತಣಿದಳು. ಕೆಂಗಜ್ಜನಿಗೆ ಸಂತಸವಾಯಿತು. ಸಂಜೆಯಾಗಿ ಕತ್ತಲು ಕವಿದ ನಂತರ ತೆಂಗಿನನಾರ ತಡಿಯನ್ನು ಮೆತ್ತಗೆ ಹಾಸಿ ಬೆಚ್ಚಗೆ ಕಂಬಳಿ ಹೊದಿಸಿ ಮಲ್ಲಿಗೆಯ ಮುಂಗುರುಳ ತೀಡುತ್ತ ಮಲಗಿಸಿದ.

ರಾತ್ರಿ ಉರುಳುತ್ತಿತು. ಕೆಂಗಜ್ಜನೂ ಮಲಗಿದ್ದ ಹಸಿಗೂಸಿನಂತೆ, ನಟ್ಟ ನಡುರಾತ್ರಿ ಕೆಂಗಜ್ಜನ ಕಾಲ್ದೆಸೆಗೆ ಎದ್ದು ಬಂದ ಮಲ್ಲಿಗೆ ಶಿರಬಾಗಿ ಕೆಂಗಜ್ಜನ ಪಾದಧೂಳಿಯನ್ನು ಮುಂದಲೆಗೆ ಮುಡಿದಳು.

"ಮನ್ನಿಸು ಅಪ್ಪಯ್ಯ, ನಿನ್ನ ಕರುಣೆಯ ಕಂದ ನಾನಾಗಿ ನಿನಗೆ ಸ್ವಲ್ಪವೂ ಆನಂದ ತರಲಿಲ್ಲ. ತಬ್ಬಲಿ ಶಿಶುವೆಂದು ನನ್ನ ನೀವು ಬಿಸುಡಲಿಲ್ಲ. ಬರಗಾಲದಲ್ಲಿ ಬವಣೆಯಲ್ಲಿ ನನ್ನ ಸಾಕಿದಿರಿ. ದೇವತಾತ್ಮರು ನೀವು. ನಾನೋ ಹತಭಾಗ್ಯೆ ! ಸಾಕಿದ ಕೆಂಗವ್ವನಿಗೂ ಮೃತ್ಯುವಾದೆ. ನಿನಗೆ ತಲೆನೋವಾದೆ. ವರ್ಷದೊಳಗೆ ಕೈಹಿಡಿದ ಪತಿಯನ್ನೂ ತಿಂದೆ. ಮನೆ ಬೆಳಗುವ ಮತ್ತು ನಿಮ್ಮ ಮನ ಬೆಳಗುವ ಒಂದು ಕಂದನನ್ನೂ ಪಡೆಯಲಿಲ್ಲ. ಮೂರು ಮನೆಗಳ ದೀಪ ನಂದಿಸಿದ ಪಾಪಿ ನಾನು, ಓ ತಂದೆ, ಕ್ಷಮಿಸು ನನ್ನ. ನನ್ನ ಪತಿಯೂರಿಗೆ ಹೊರಟಿದ್ದೇನೆ. ಆದರೂ ತೌರನೆಂದಿಗೂ ಮರೆಯೆ. ಎಂದೆಂದಿಗೂ ನೀನೆ ನನ್ನ ತಂದೆ; ಕೆಂಗವ್ವನೇ ತಾಯಿ, ಸ್ವಾಮಿರಾಯರೇ ಪತಿ" ಮನೆಯ ದಿಕ್ಕುದಿಕ್ಕಿಗೂ ಶಿರಬಾಗಿ ನಮಿಸಿದಳು. ಮಲ್ಲಿಗೆ, ಕೊಟ್ಟಿಗೆಯಲ್ಲಿನ ಗೋವುಗಳನ್ನು ತಬ್ಬಿ ಗೋಳಾಡಿದಳು. ಕರುಗಳಿಗೆ ಮುತ್ತಿಕ್ಕಿದಳು. ಕವಿದಿದ್ದ ಕತ್ತಲೆಯಲ್ಲಿ ಕರಗಿಹೋದಳು.

ಕೆಂಗಜ್ಜ ನಿದ್ದೆಗಣ್ಣನು ತೆರೆದ. ಮಲ್ಲಿಗೆಯ ಕಾಣದೆ ಕುಸಿದುಬಿದ್ದ ಕಸದ ಬುಟ್ಟಿಯಂತೆ. ಕೆರೆ ಬಾವಿ ಹಳ್ಳಕೊಳ್ಳಗಳನ್ನೆಲ್ಲ ಸುತ್ತಿದ. ದಿನ ಮೂರು ಉರುಳಿದರೂ ಸುಳಿವಿಲ್ಲ. ಮತಿಗೆಟ್ಟ ಕೆಂಗಜ್ಜ ಮಸಣದತ್ತ ನಡೆದ. ಬೆಟ್ಟದ

ನೆತ್ತಿಯ ಮೇಲೆ ಏರಿ ನಿಂತ; ಸುತ್ತಲೂ ನೋಡಿದ, ಕಾಣಲಿಲ್ಲವೇನೂ. ಕೂಗಿದ ಮರುದನಿಯ ಸುಳಿವಿಲ್ಲ. ನಿಂತಿದ್ದ ಗೋರಿಗಳು ಪುಟಿದಿದ್ದ ಚಿಲುಮೆ, ಹರಿದಿದ್ದ ಝರಿಯನ್ನು ನಿಟ್ಟಿಸಿದ. ದೃಷ್ಟಿ ಹರಿಯಿತು ನಿಂತ ಮಡುವಿನೆಡೆಗೆ, ಏನೋ ತೇಲುತಿದೆ ಕಪ್ಪು ಛಾಯೆ, ನಿಟ್ಟಿಸಿದ ಕೆಂಗಜ್ಜ, ಹೌದು ಅವಳೆ ಅವಳೆ "ಮಲ್ಲಿ, ಬಾ ಮಗಳೇ" ಇದ್ದ ಶಕ್ತಿಯನೊಂದುಗೂಡಿಸಿ ಕಿರುಚಿದ ಮುದುಕ, ಒಂದೇ ಕ್ಷಣ, ಅವನ ದೇಹ ಉರುಳಿ ಬೆಟ್ಟದಡಿಯನ್ನು ಅಪ್ಪಿತ್ತು. ರಕ್ತ ಹರಿಯುತ್ತಿತ್ತು ಧಾರೆ ಧಾರೆ. ಕೆಂಗಜ್ಜ ಬಾರದ ದಾರಿಗೆ ನಡೆದಿದ್ದರೆ ಸಾಕು ಮಗಳನ್ನರಸುತ್ತ.

ಅನೇಕ ಸಂವತ್ಸಗಳುರುಳಿದರೂ ಈ ಗತಕಾಲದ ಇತಿಹಾಸವನ್ನು ಮರೆಯಲು ಇಂದಿಗೂ ನಿಂತಿದೆ. ಅ ಕೆಂಗನಕಲ್ಲು. ದೇವಿಹಳ್ಳಿಗೆ ಅನತಿ ದೂರದಲ್ಲಿ 'ಕೆಂಗಜ್ಜಾ' ಎಂದು ಕೂಗಿದರೆ, "ಮಲ್ಲಿ ಬಾ ಮಗಳೇ" ಎಂದು ಈಗಲೂ ಕೇಳುತಿದೆ ಕಲ್ಲಿನಾ ಸೊಲ್ಲು.

*   *   *   *   *

# ಅನುಬಂಧ – 2

## ಡಾ|| ಸಾ.ಶಿ.ಮರುಳಯ್ಯನವರ ಆತ್ಮೇತಿಹಾಸ ಅಥವಾ ಸ್ವವಿವರಗಳು

## (BIO-DATA OR CURRICULUM VATAE OF DR.S.S.MARULAIAH)

1. ಪ್ರಥಮೇತಿಹಾಸ :

ಹೆಸರು : ಸಾ.ಶಿ.ಮರುಳಯ್ಯ
ಜನನ : 20, ನವಂಬರು 1931
ಜನ್ಮಸ್ಥಳ : ಸಾಸಲು, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ
ತಂದೆ : ಶ್ರೀ ಶಿವರುದ್ರಯ್ಯನವರು, ಕೂಲಿ ಮಠದ ಓಚಯ್ಯಗಳು
ತಾಯಿ : ಶ್ರೀಮತಿ ಸಿದ್ದಮ್ಮನವರ
ಹೆಂಡತಿ : ಶ್ರೀಮತಿ ವೀಣಾ
ಮಕ್ಕಳು : ಎಂ. ಶಿವಪ್ರಸಾದ್ , ಎಂ.ಎ.,
ಎಂ. ರಾಗಿಣಿ ಸಂಗಮೇಶ್ವರ್, ಎಂ.ಎಸ್‌ಸಿ., (ಕ್ಯಾಲಿಫೋರ್ನಿಯಾ)
ಎಂ. ರವಿಪ್ರಸಾದ್, ಬಿ.ಎ., ಎಂ.ಎಸ್., (ಕ್ಯಾಲಿಫೋರ್ನಿಯಾ)

2. ಅಧ್ಯಯನ :

ಬಿ.ಎ. (ಆನರ್ಸ್)ಮೈಸೂರು ವಿಶ್ವವಿದ್ಯಾನಿಲಯ – 1955
ಎಂ.ಎ, ಮೈಸೂರು ವಿಶ್ವವಿದ್ಯಾನಿಲಯ – 1956
ಪಿಎಚ್.ಡಿ ಕರ್ನಾಟಕ ವಿಶ್ವವಿದ್ಯಾನಿಲಯ – 1971

3. ಅಧ್ಯಾಪನ :

ಕನ್ನಡ ಅಧ್ಯಾಪಕ – ಇಂಟರ್‌ಮೀಡಿಯೇಟ್ ಕಾಲೇಜು
--"-- – ಚಾಮರಾಜನಗರ, 1955–56
--"-- – ಪ್ರಥಮದರ್ಜೆ ಕಾಲೇಜು, ತುಮಕೂರು – 1956–57
--"-- – ಧ.ರಾ.ಮ. ಕಾಲೇಜು, ದಾವಣಗೆರೆ – 1957–61
--"-- – ಸಹ್ಯಾದ್ರಿ ಕಾಲೇಜು, ಶಿವಮೊಗ್ಗ – 1961–69
--"-- – ಸರ್ಕಾರಿ ಕಲಾ ಕಾಲೇಜು, ಬೆಂಗಳೂರು 1969–73

ಕನ್ನಡ ರೀಡರ್ : ಸರ್ಕಾರಿ ವಿಜ್ಞಾನ ಕಾಲೇಜು, ತುಮಕೂರು – 1976–79

ಪ್ರಾಂಶುಪಾಲರು : ಕುವೆಂಪು ವಿಶ್ವವಿದ್ಯಾನಿಲಯ, ಚನ್ನಪಟ್ಟಣ ; 1976–79

ಸಂಪಾದಕ : ವಿಶ್ವಕೋಶದ ಪ್ರಧಾನ ಸಂಪಾದಕ
ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು – 1979–83

ಕನ್ನಡ ಪ್ರಾಧ್ಯಾಪಕ : ಪ್ರಾಂಶುಪಾಲರು
ಸರ್ಕಾರಿ ಕಾಲೇಜು, ಮಂಗಳೂರು – 1983–84

ಸದಸ್ಯ : ರಾಜ್ಯಭಾಷಾ (ವಿಧಾಯೀ) ಆಯೋಗ
ಬೆಂಗಳೂರು – 1984 – 89

4. ನಿವೃತ್ತಿ : 28– ಜನವರಿ 1989

5. ಗುರು ಪರಂಪರೆ : ರಾಷ್ಟ್ರಕವಿ ಕುವೆಂಪು, ಡಾ ಡಿ.ಎಲ್. ನರಸಿಂಹಾಚಾರ್, ಪ್ರೊ. ದೇಜಗೌ, ಡಾ.ಎಸ್. ಶ್ರೀಕಂಠಶಾಸ್ತ್ರಿ, ಕಂ.ವೆಂ. ರಾಘವಾಚಾರ್, ತ.ಸು. ಶಾಮರಾಯ, ಪ್ರೊ. ಎಸ್.ವಿ. ಪರಮೇಶ್ವರಭಟ್ಟ, ಎಸ್.ವಿ. ರಂಗಣ್ಣ, ಡಾ.ಆರ್.ಸಿ. ಹಿರೇಮಠ – ಮೊದಲಾದವರು

6. ಸಾಹಿತ್ಯ ಸೃಷ್ಟಿ :

| | | | |
|---|---|---|---|
| 1. | ಶಿವತಾಂಡವ | ಕವನ ಸಂಕಲನ | 1954 |
| 2. | ಮರೀಬೇಡಿ | ಪ್ರಹಸನ | 1961 |
| 3. | ಕೆಂಗನಕಲ್ಲು (ರಾಜ್ಯ ಸರ್ಕಾರದ ಪ್ರಶಸ್ತಿ ಪಡೆದ ಕೃತಿ) | ಕವನ ಸಂಕಲನ | 1962 |
| 4. | ಭಾಸನ ಮಕ್ಕಳು (ದೇವಾಜ ಬಹದ್ದೂರು ಪ್ರಶಸ್ತಿ ಪಡೆದ ಕೃತಿ) | ವಿಮರ್ಶೆ | 1962 |
| 5. | ವಿಭೂತಿ ಪುರುಷರು | ಜೀವನ ಚಿತ್ರಣ | 1963 |
| 6. | ಭಾರತ ರತ್ನ | ಜೀವನ ಚಿತ್ರಣ | 965 |
| 7. | ಪುರುಷ ಸಿಂಹ | ಐತಿಹಾಸಿಕ ಕಾದಂಬರಿ | 1966 |
| 8. | ಹೇಮಕೂಟ | ಐತಿಹಾಸಿಕ ಕಾದಂಬರಿ | 1966 |
| 9. | ವಿಜಯವಾತಾಪಿ | ರಂಗನಾಟಕ | 1966 |
| 10. | ಶ್ರೀ ಮರುಳಸಿದ್ದೇಶ್ವರ ಮಹಾಪುರಾಣಂ | ಕಾವ್ಯ (ಸಂ.) | 1967 |
| 11. | ಹರಿಹರನ ಹತ್ತು ರಗಳೆಗಳು | ಕಾವ್ಯ (ಸಂ.) | 1972 |
| 12. | ವಿಪರ್ಯಾಸ | ಕವನ ಸಂಕಲನ | 1972 |
| 13. | ಘೋಷವತಿ | ಕವನ ಸಂಕಲನ | 1972 |
| 14. | ಸ್ವಪ್ನವಾಸವದತ್ತ (ನಾಟಕ) | (ಭಾಷಾಂತರ) | 1973 |
| 15. | ನೆಲದ ಸೊಗಡು | ಸಣ್ಣಕತೆಗಳ ಸಂಕಲನ | 1976 |
| 16. | ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ | ಪಿಎಚ್‌ಡಿ ಮಹಾಪ್ರಬಂಧ | 1979 |
| 17. | ಎರಡು ನಾಟಕಗಳು | ನಾಟಕ | 1979 |
| 18. | ಅವಸ್ಥಾ | ಸಾಹಿತ್ಯಿಕ ಲೇಖನಗಳು | 179 |
| 19. | ಆತ್ಮೀಯ | ವ್ಯಕ್ತಿಚಿತ್ರ | 1979 |
| 20. | ಭಾರತೀಯ ಜ್ಞಾನಪೀಠ ಮತ್ತು ವಿಜೇತ ಕನ್ನಡಿಗರು | ಜ್ಞಾನಪೀಠ ಪ್ರಶಸ್ತಿ ಕುರಿತ ಸಮಗ್ರ ಪರಿಚಯಾತ್ಮಕ ಹಾಗೂ ವಿಮರ್ಶಾತ್ಮಕ ಕೃತಿ | 1980 |
| 21. | ಕಾವ್ಯಾನಂದ | ಡಾ. ಸಿದ್ದಯ್ಯ ಪುರಾಣಿಕರ ಸಂಭಾವನಾಗ್ರಂಥ (ಸಂ.) | 1982 |
| 22. | ಜಾನಪದ ಕತೆಗಳು | ಜಾನಪದ | 1983 |
| 23. | ರೂಪಸಿ | ಕವನ ಸಂಕಲನ | 1985 |
| 24. | ಸಾಮರಸ್ಯದ ಶಿಲ್ಪಿ | ಆಧ್ಯಾತ್ಮಿಕ ಕಾದಂಬರಿ | 1985 |
| 25. | ಬಾರೋ ಮೈಲಾರಕೆ | ಭಕ್ತಿಗೀತ ಸಂಕಲನ | 1985 |
| 26. | ವೀರಶೈವ ವಿಚಾರ ಸಂಕಿರಣ | ತತ್ತ್ವದರ್ಶನ (ಸಂ.೦ | 1986 |
| 27. | ಮಳ್ಳಿಗೊಂದು ಒಳ್ಳೆ ಮಾತು | ಚಿಂತನಪರ ಲೇಖನಗಳು | 1987 |
| 28. | ಮಹಾಪ್ರಸಾದಿ | ಆಧ್ಯಾತ್ಮಿಕ ಕಾದಂಬರಿ | 1987 |
| 29. | ಸಾಹತ್ಯೋಪಾಸಕ | ಸಂಭಾವನಾ ಗ್ರಂಥ (ಸಂ.) | 1988 |
| 30. | ಶೂನ್ಯ ಸಂಪಾದನೆಗೊಂದು ಮುನ್ನುಡಿ | ಸಂಶೋಧನೆ | 1988 |
| 31. | ಶೂನ್ಯ ಸಂಪಾದನೆ: ಒಂದು ಅಧ್ಯಯನ | ತತ್ತ್ವದರ್ಶನ (ಸಂ.) | 1988 |
| 32. | ಶ್ರೀ ತೋಂಟದಾರ್ಯ ವಚನ ವ್ಯಾಖ್ಯೆ | ವ್ಯಾಖ್ಯಾನ (ಸಂ.) | 1990 |
| 33. | ಶ್ರೀ ಸಿದ್ದಲಿಂಗೇಶ್ವರ ಶತಕ | ಕಾವ್ಯ (ಸಂ.) | 1990 |
| 34. | ಅರುವಿನಾಗರದಲ್ಲಿ | ಕಾವ್ಯ (ಸಂ.) | 1990 |

| | | | |
|---|---|---|---|
| 35. | ಕನಕ ಸಂಪುಟ ೨ | ಕಾವ್ಯ (ಸಂ.) | 1990 |
| 36. | ಮಾಸ್ತಿ ಕಾವ್ಯ | ವಿಮರ್ಶೆ | 1991 |
| 37. | ಸುರಭಿ | ಹಾಡುಗಳು | 1992 |
| 38. | ಕನ್ನಡ ಭಾಷೆಯ ಚರಿತ್ರೆ | ಭಾಷಾ ಇತಿಹಾಸ | 1992 |
| 39. | ಅಕ್ಕನ ವಚನಗಳು | ವಚನ (ಸಂ.) | 1993 |
| 40. | ನೀಲಮ್ಮನ ವಚನಗಳು | ವಚನ (ಸಂ.) | 1993 |
| 41. | ಸಿದ್ಧಗಿರಿ | ಕ್ಷೇತ್ರ ಪರಿಚಯ | 1993 |

| | | | |
|---|---|---|---|
| 42. | ಮಾಸ್ತಿ ಕಾವ್ಯ : ಒಂದು ಸಮೀಕ್ಷೆ | ವಿಮರ್ಶೆ | 1994 |
| 43. | ಬದುಕು ಕ್ರೀಡಾರಂಗ | ಚಿಂತನ ಸಾಹಿತ್ಯ | 1995 |
| 44. | ಅನುಶೀಲನ | ವಿಮರ್ಶೆ | 1995 |
| 45. | ಕೇಶಿರಾಜನ ಗರಡಿಯಲ್ಲಿ | ವ್ಯಾಕರಣ ಪ್ರಬಂಧಗಳು | 1997 |
| 46. | ಮೈದುನ ರಾಮಣ್ಣನ ಕಥೆ | ಸಂಪಾದಿತ | 1997 |
| 47. | ಅಪರೂಪದವರು | ವ್ಯಕ್ತಿಚಿತ್ರ | 1997 |
| 48. | ಸ್ನೋವೈಟ್ ಮತ್ತು ಇತರ ನೃತ್ಯ ರೂಪಕಗಳು | ನೃತ್ಯರೂಪಕ | 1999 |
| 49. | ಕೇಳು ಅನಿತಾ | ನೇತಾಜಿ ಜೀವನ ಚರಿತ್ರೆ | 2000 |
| 50. | ಛಂದೋಪ್ರಬಂಧಗಳು | ಛಂದಸ್ಸು | 2000 |

ಸಾರ್ವಜನಿಕ ಸೇವೆಯಲ್ಲಿ
೧. ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ :
ಅ) ತರುಣ ಭಾರತೀ (ಕಲಾ ಸಂಸ್ಥೆ), ಸಾಸಲು ೧೯೬೦

೨. ಸಂಸ್ಥಾಪಕ ಅಧ್ಯಕ್ಷ :
ಅ) ರಾಗಿಣೀ ಶಿಕ್ಷಣ ಪ್ರತಿಷ್ಠಾನ : ವಿಜಯನಗರ ೨ನೇ ಹಂತ, ಬೆಂಗಳೂರು – ೪೦

೩. ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ
ಅ) ಬಳ್ಳಾರಿ ಸಾಹಿತ್ಯ ಸಮ್ಮೇಳನ , ಕವಿಗೋಷ್ಠಿಯಲ್ಲಿ ೧೯೫೮
ಆ) ಬೆಂಗಳೂರು ಸಾಹಿತ್ಯ ಸಮ್ಮೇಳನ, ೧೯೭೦
'ಅಂತರ ಭಾರತಿ' ಕನ್ನಡ ಭಾಷಾ ಪ್ರತಿನಿಧಿ
ಇ) ಶಿವಮೊಗ್ಗ ಸಾಹಿತ್ಯ ಸಮ್ಮೇಳನ, ೧೯೭೬
ಸಾಹಿತ್ಯ ಗೋಷ್ಠಿಯಲ್ಲಿ ಪ್ರಬಂಧ ಮಂಡನೆ
ಈ) ಚಿಕ್ಕಮಗಳೂರು ಸಾಹಿತ್ಯ, ೧೯೮೧ ಸಮ್ಮೇಳನದಲ್ಲಿ
ನಾಟಕ ಗೋಷ್ಠಿಯಲ್ಲಿ ಪ್ರಬಂಧ ಮಂಡನೆ

೪. ಅಧ್ಯಕ್ಷ:
ಅ) ತಿಪಟೂರಿನಲ್ಲಿ ನಡೆದ ತುಮಕೂರು ಜಿಲ್ಲಾ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ, ೧೯೮೦
ಆ) ತುಮಕೂರು ಜಿಲ್ಲಾ ಸಾಹಿತ್ಯ ಸಮ್ಮೇಳನಾಧ್ಯಕ್ಷ, ೧೯೮೯
ಇ) ರಂಗಭೂಮಿ ಕುರಿತ ವಿಚಾರ ಸಂಕಿರಣ, ಗುಲ್ಬರ್ಗ, ೧೯೮೭

೫. ಸಮಿತಿಗಳ ಅಧ್ಯಕ್ಷ:
ಅ) ತ್ರಿವಿಕ್ರಮ ಸನ್ಮಾನ ಸಮಿತಿ, ೧೯೮೮
ಆ) ಡಾ.ಎಂ. ಚಿದಾನಂದಮೂರ್ತಿ ಸನ್ಮಾನ ಸಮಿತಿ, ೧೯೯೧.

೬. ಪತ್ರಿಕಾ ಸಂಪಾದಕ :
ಅ) ವೀರಶೈವ ಸಮನ್ವಯ (ಮಾಸಪತ್ರಿಕೆ), ಬೆಂಗಳೂರು, ೧೯೮೭

೭. ಗೌರವ ಕಾರ್ಯದರ್ಶಿ:

ಅ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೯–೯೦

೮. ಅಧ್ಯಕ್ಷ :

ಅ) ಕನ್ನಡ ಸಾಹಿತ್ಯ ಪರಿಷತ್ತು ೧೯೯೬ ರಿಂದ ೧೯೯೮

೯. ಸನ್ಮಾನ:

ಅ) ೧೯೯೯ರ ಕನ್ನಡ ರಾಜ್ಯೋತ್ಸವ ಪ್ರಶಸ್ತಿ

ಆ) ೧೯೯೯ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ.